₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಭಾನುವಾರ 14.12.2025** **ಸಂಪುಟ:** 10 **ಸಂಚಿಕೆ:** 333 **ಪುಟಗಳು:** 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಇಂದು ಭಾರತ-ದ.ಆಫ್ರಿಕಾ 3ನೇ ಟಿ20 ಸೂರ್ಯಗೆ ಹೊಳೆವ ಅನಿವಾರ್ಯತೆ

ಹಿಮಾಚಲ ಪ್ರದೇಶದ ಧರ್ಮಶಾಲಾ ಮೈದಾನದಲ್ಲಿ ಇಂದು ಭಾರತ-ದ.ಆಫ್ರಿಕಾ 3ನೇ ಟಿ20 ಪಂದ್ಯ ನಡೆಯಲಿದೆ. 5 ಪಂದ್ಯಗಳ ಸರಣಿಯಲ್ಲಿ ಎರಡೂ ತಂಡಗಳೂ ಈಗ 1-1- ಅಂತರದಲ್ಲಿ ಸಮಬಲ ಸಾಧಿಸಿವೆ. ಭಾರತ ತಂಡದ ನಾಯಕ ಸೂರ್ಯ ಕುಮಾರ್ ಯಾದವ್ ಸತತ ಬ್ಯಾಟಿಂಗ್ ವೈಫಲ್ಯದಿಂದ ಬಳಲುತ್ತಿದ್ದು, ಇಂದಿನ ಪಂದ್ಯದ ಮೂಲಕ ಫಾರ್ಮ್ ಕಂಡುಕೊಳ್ಳುವ ಅನಿವಾರ್ಯತೆಯಲ್ಲಿದ್ದಾರೆ.

ಫುಟ್‌ಬಾಲ್ ದಂತಕಥೆಯನ್ನು ನೋಡಲಾಗದೇ ಕೆರಳಿದ ಅಭಿಮಾನಿಗಳು | ಕುರ್ಚಿ, ಬ್ಯಾನರ್‌ಗಳು ಪುಡಿ | ಸಂಘಟಕ ಬಂಧನ

20 ನಿಮಿಷಕ್ಕೆ ಹೊರನಡೆದ ಮೆಸ್ಸಿ, ಕೋಲ್ಕತಾ ಮೈದಾನ ರಣರಂಗ

ಕೋಲ್ಕತಾ: ಅರ್ಜೆಂಟೀನಾ ಫುಟ್‌ಬಾಲ್ ದಂತಕಥೆ, ವಿಶ್ವವಿಖ್ಯಾತ ಆಟಗಾರ ಲಯೋನೆಲ್ ಮೆಸ್ಸಿ ಶನಿವಾರ ಕೋಲ್ಕತಾದ ಸಾಲ್ಟ್ ಲೇಕ್ ಮೈದಾನದಲ್ಲಿ ಅಭಿಮಾನಿಗಳಿಗೆ ದರ್ಶನವನ್ನೇನೋ ನೀಡಿದರು. ಆದರೆ ಅವರು 20 ನಿಮಿಷ ಮಾತ್ರ ಇದ್ದು, ಮೈದಾನ ತೊರೆದಿದ್ದು ಅಭಿಮಾನಿಗಳನ್ನು ರೊಚ್ಚಿಗೆಬ್ಬಿಸಿದೆ. ಶುಕ್ರವಾರ ರಾತ್ರಿಯೇ ಬಂದು ಕಾಯ್ದುಕೊಂಡಿದ್ದ ಅಭಿಮಾನಿಗಳು ಮೆಸ್ಸಿ ಜಾಸ್ತಿ ಹೊತ್ತು ಇರಲಿಲ್ಲ, ಅವರನ್ನು ಸನಿಹದಿಂದ ನೋಡಲಾಗಲಿಲ್ಲವೆಂದು ಕೆರಳಿ ಕೆಂಡವಾಗಿದ್ದಾರೆ. ಕ್ರೀಡಾಂಗಣ ಅಕ್ಷರಶಃ ರಣರಂಗದಂತೆ ಆಗಿತ್ತು. ಗೋಟ್ ಇಂಡಿಯಾ ಟೂರ್ ಸಂಘಟಕ ಶತದ್ರು ದತ್ತ ಅವರ ಬಂಧನವೂ ಆಗಿದೆ. ಟಿಕೆಟ್ ಹಣ ಮರುಪಾವತಿಯೂ ಆಗಿದೆ.

ಮೆಸ್ಸಿಯನ್ನು ನೋಡಲು ಭಾರಿ ಮೊತ್ತ ಪಾವತಿಸಿ ಟಿಕೆಟ್ ಖರೀದಿಸಿ ಬಂದಿದ್ದ ಪ್ರೇಕ್ಷಕರು, ಆಟಗಾರನನ್ನು ಮೈದಾನದಲ್ಲಿ ನೋಡಲು ಸಾಧ್ಯವಾಗದಿದ್ದಾಗ ಆಕ್ರೋಶಗೊಂಡು ಮೈದಾನಕ್ಕೆ ಏಕಾಏಕಿ ನುಗ್ಗಿ ಕುರ್ಚಿಗಳಿಂದ ಹಿಡಿದು ಕೈಗೆ ಸಿಕ್ಕ ವಸ್ತುಗಳನ್ನು ಎಸೆದು ಪುಡಿಮಾಡಿದ್ದಾರೆ. ಒಂದು ಟಿಕೆಟ್‌ಗೆ 5000 ರು.ಗಳಿಂದ 25000 ರು.ಗಳವರೆಗೆ ಅಭಿಮಾನಿಗಳು ಪಾವತಿ ಮಾಡಿದ್ದರು. → 4

ಏನಾಯ್ತು?

- ವರ್ತಮಾನ ಕಾಲದಲ್ಲಿ ಫುಟ್‌ಬಾಲ್ ದೇವರು ಎಂದೇ ಕರೆಸಿಕೊಂಡಿರುವ ಮೆಸ್ಸಿ ಶನಿವಾರ 11.30ಕ್ಕೆ ಕೋಲ್ಕತಾದ ಸಾಲ್ಟ್‌ಲೇಕ್ ಮೈದಾನಕ್ಕೆ ಆಗಮನ
- ಬರೀ 20 ನಿಮಿಷಕ್ಕೆ ಮೈದಾನದಿಂದ ಹೊರಕ್ಕೆ. ದಿಗ್ಗಜನನ್ನು ಸರಿಯಾಗಿ ನೋಡಲಾಗದೇ ಇದ್ದರಿಂದ ಬ್ಯಾರಿಕೇಡ್ ಮುರಿದು ಮೈದಾನಕ್ಕೆ ನುಗ್ಗಿದ ಅಭಿಮಾನಿಗಳು



- ಫ್ಲೆಕ್ಸ್, ಬ್ಯಾನರ್, ಕುರ್ಚಿಗಳು ಪುಡಿಪುಡಿ, ತಪ್ಪಿದ ಅನಾಹುತ, ಆಯೋಜಕ ಶತದ್ರು ದತ್ತ ಬಂಧನ, ಅಭಿಮಾನಿಗಳ ಟಿಕೆಟ್ ಹಣ ಮರಳಿಸಲು ಸಂಘಟಕರಿಗೆ ಸೂಚನೆ

ಮಧ್ಯರಾತ್ರಿಯಿಂದಲೇ ಕಾದಿದ್ದ ಅಭಿಮಾನಿಗಳು

ಭಾರತದ ನಾಲ್ಕು ನಗರಗಳ ಮೂರು ದಿನಗಳ ಗೋಟ್ ಇಂಡಿಯಾ ಟೂರ್-2025 ಕಾರ್ಯಕ್ರಮದಲ್ಲಿ ಭಾಗಿಯಾ ಗಲು ಶುಕ್ರವಾರ ತಡರಾತ್ರಿ ಕೋಲ್ಕತಾಗೆ ಆಗಮಿಸಿದ್ದ ಮೆಸ್ಸಿ ಅವರನ್ನು ಸ್ವಾಗತಿಸಲು, ಡಿಸೆಂಬರ್ ತಿಂಗಳ ಈ ಕೊರೆಯುವ ಚಳಿಯನ್ನು ಲೆಕ್ಕಿಸದೆ ಸಾವಿರಾರು ಫುಟ್‌ಬಾಲ್ ಅಭಿಮಾನಿ ಗಳು ಮಧ್ಯರಾತ್ರಿಯಿಂದ ಕಾದುಕುಳಿತಿದ್ದರು. ಲೂಯಿಸ್ ಸ್ವಾರೆಜ್ ಮತ್ತು ರೊಡ್ರಿಗೋ ಡಿ ಪಾಲ್ ಅವರೊಂದಿಗೆ ಸೇರಿಕೊಂಡ ಮೆಸ್ಸಿಯ ಪ್ರವೇಶಕ್ಕೆ ಘೋಷಣೆಗಳು, ಧ್ವಜಗಳನ್ನು ಬೀಸುವ ಮೂಲಕ ಅಭಿಮಾನಿಗಳು ಕಣ್ಣೀರು ಹಾಕಿ ಸ್ವಾಗತಿಸಿದರು.

ಇಂದು ರಾಹುಲ್ ನೇತೃತ್ವದಲ್ಲಿ ಕಾಂಗ್ರೆಸ್‌ನಿಂದ ವೋಟ್ ಚೋರಿ ರ್‍ಯಾಲಿ ರ್‍ಯಾಲಿ ಹೊತ್ತಲ್ಲೇ ತಮ್ಮ ಪರ ಶಾಸಕರ ಲೆಕ್ಕ ನೀಡಲು ಸಿದ್ದು, ಡಿಕೆಶಿ ಸಜ್ಜು?

ದಿಲ್ಲಿಯಲ್ಲಿ ಬಲ ನಿರ್ಣಯ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ರಾಜ್ಯ ಸರಕಾರದ ಮುಖ್ಯಮಂತ್ರಿ ಪಟ್ಟದ ವಿಚಾರದಲ್ಲಿ ಕಾಂಗ್ರೆಸ್‌ನಲ್ಲಿ ಎದ್ದಿರುವ ಗೊಂದಲಕ್ಕೆ ದೆಹಲಿಯಲ್ಲಿ ಪರಿಹಾರ ಕಂಡುಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ ಮುಂದಾಗಿದೆ. ಇಬ್ಬರೂ ದೆಹಲಿಯಲ್ಲಿ ಭಾನುವಾರ ನಡೆಯಲಿರುವ ಕಾಂಗ್ರೆಸ್‌ನ ಮತಚೋರಿ ರ್‍ಯಾಲಿಯಲ್ಲಿ ಭಾಗವಹಿಸಲಿ ದ್ದಾರೆ. ಈ ವೇಳೆ ತಮ್ಮ ತಮ್ಮ ಬೆಂಬಲಿಗರ ಮೂಲಕ ಬಲ ಪ್ರದರ್ಶನ ಮಾಡಲು ಸಿದ್ಧವಾಗಿದ್ದಾರೆ.

ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕದನ ವಿರಾಮ ಘೋಷಿಸಿಕೊಂಡಿದ್ದರು. ಅದಾದ ಬಳಿಕ ಬೆಳಗಾವಿಯಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರು ನೀಡಿದ ಪೂರ್ಣಾವಧಿ ಮುಖ್ಯಮಂತ್ರಿ ಎನ್ನುವ ಹೇಳಿಕೆಯಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಬಹುದೊಡ್ಡ ಕಂದಕ ಶುರುವಾಗಿದೆ. ಈ ಗೊಂದಲದ ನಡುವೆಯೇ, ದೆಹಲಿಗೆ ಪ್ರಯಾಣಿಸಿರುವ ರಾಜ್ಯ ನಾಯಕರು ರಾಷ್ಟ್ರೀಯ ನಾಯಕರ ಮುಂದೆ ತಮ್ಮ ತಮ್ಮ ಬೆಂಬಲಿಗರ ಸಂಖ್ಯೆಯನ್ನು ಪರೋಕ್ಷವಾಗಿ ಕೊಡುವ ಸಾಧ್ಯತೆಯಿದೆ.

ದೆಹಲಿಯಲ್ಲಿ ನಡೆಯುತ್ತಿರುವ ಮತ ಚೋರಿ ಪ್ರತಿಭಟನೆಯಲ್ಲಿ ಕರ್ನಾಟಕದಿಂದ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುತ್ತಿದ್ದು, ಅದರಲ್ಲಿ ನೂರಕ್ಕೂ ಹೆಚ್ಚು ಶಾಸಕರು, ವಿಧಾನಪರಿಷತ್ ಸದಸ್ಯರು, ಸಚಿವರು ಭಾಗವಹಿಸಲು ತೆರಳಲಿದ್ದಾರೆ. ಈ ವೇಳೆ ನಾಯಕತ್ವ ಗೊಂದಲ ಬಗ್ಗೆ ಯಾವುದೇ ಚರ್ಚೆ ನಡೆಯಲಿದ್ದರೂ, ಕಾಂಗ್ರೆಸ್‌ನಲ್ಲಿ ಉದ್ಭವಿಸಿರುವ ಈ ಗೊಂದಲದ ಸ್ಪಷ್ಟನೆ ನಾಯಕರಿಗೆ ಸಿಗುವ ಸಾಧ್ಯತೆಯಿದೆ. ಆದರೆ ಸೋಮವಾರದಿಂದ ಬೆಳಗಾವಿಯಲ್ಲಿ ಅಧಿವೇಶನ ಮುಂದುವರಿಯುವ ಕಾರಣ, ಈ ಯಾವುದೇ ವಿಷಯವನ್ನು ಚರ್ಚಿಸುವ ಸಾಧ್ಯತೆಯಿಲ್ಲ. ಬದಲಿಗೆ ಯಾವಾಗ ಪುನಃ ದೆಹಲಿಗೆ ಬರಬೇಕು ಎನ್ನುವ ದಿನಾಂಕ ನಿಗದಿಪಡಿಸುವ ಸಾಧ್ಯತೆಯಿದೆ

ಜ.6ಕ್ಕೆ ಡಿಕೆ ಸಿಎಂ: ಈ ಗೊಂದಲದ ನಡುವೆ ಡಿ.ಕೆ ಶಿವಕುಮಾರ್ ಆಪ್ತ ಶಾಸಕ ಇಕ್ಬಾಲ್ ಹುಸೇನ್, ಯಾರು, ಏನೇ ಹೇಳಿದರೂ ಡಿ.ಕೆ.ಶಿವಕುಮಾರ್ ಅವರು ಜನವರಿ 6ರಂದು ಮುಖ್ಯಮಂತ್ರಿಯಾಗುತ್ತಾರೆ. ಜನವರಿ 6ರಂದು ಶೇ.99ರಷ್ಟು ಡಿ.ಕೆ. ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಸಿಗಲಿದೆ. ಎಲ್ಲರೂ ಹೇಳುವಂತೆ 6 ಮತ್ತು 9 ಡಿ.ಕೆ.ಶಿವಕುಮಾರ್ ಅವರ ಅದೃಷ್ಟ ಸಂಖ್ಯೆಯಾಗಿದೆ. ಕಾಂಗ್ರೆಸ್‌ನಲ್ಲಿ ಯಾವುದೇ ಬಣ ಇಲ್ಲ, ನಾವೆಲ್ಲರೂ ಒಂದೇ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಮ್ಮ ಆಸ್ತಿ. ಇಬ್ಬರೂ ನಮ್ಮ ನಾಯಕರು. ಶಿವಕುಮಾರ್ ಹೋರಾಟ, ಶ್ರಮ, ಸಂಘಟನೆಗೆ ಫಲ ಸಿಗಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ ಎಂದರು. → 4

ನಾನು ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ. ಪಕ್ಷದ ಹೈಕಮಾಂಡ್ ಏನೇ ನಿರ್ಧಾರ ಮಾಡಿದರೂ ಅದನ್ನು ಒಪ್ಪಿಕೊಳ್ಳುತ್ತೇನೆ. ಪಕ್ಷದ ಒಳಗಿನ ಯಾವುದೇ ಗೊಂದಲಕ್ಕೂ ತಾವು ಕಾರಣರಲ್ಲ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಡಿಸೆಂಬರ್‌ನಲ್ಲಿ ಶಿವಕುಮಾರ್ ಅವರು ಸಿಎಂ ಆಗುತ್ತಾರೆ ಎಂಬ ಹೇಳಿಕೆ ನೀಡಿರುವ ಇಕ್ಬಾಲ್ ಹುಸೇನ್ ಅವರ ಹೇಳಿಕೆಯನ್ನು ಯಾರೂ ಗಂಭೀರವಾಗಿ ಪರಿಗಣಿಸುವುದು ಬೇಡ. ಆತ ಚಟಕ್ಕೆ ಮಾತನಾಡುತ್ತಾನೆ.
-ಶಿವಕುಮಾರ್, ಉಪಮುಖ್ಯಮಂತ್ರಿ

ಇದುವರೆಗೆ ಆಗಿದ್ದು

1. ಶನಿವಾರ ರಾತ್ರಿ ಉಪಮುಖ್ಯಮಂತ್ರಿ ಶಿವಕುಮಾರ್ ದೆಹಲಿಗೆ. ಬೆಳಗ್ಗೆಯೇ ದೆಹಲಿಗೆ ತೆರಳಿದ್ದ ಆಪ್ತ ಶಾಸಕರು
2. ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಭಾನುವಾರ ಬೆಳಗ್ಗೆ ದೆಹಲಿಗೆ ತೆರಳಲಿರುವ ಆಪ್ತ ಶಾಸಕರು
3. ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲೇ ತಮಗಿರುವ ಶಾಸಕರ ಸಂಖ್ಯಾಬಲವನ್ನು ತಿಳಿಸಲೂ ಇಬ್ಬರೂ ನಾಯಕರು ಸಜ್ಜು
4. ಸೋನಿಯಾ ಭೇಟಿಗೆ ಶಿವಕುಮಾರ್ ಯತ್ನ, ಅವಕಾಶ ಸಿಗುತ್ತದೆಯೋ, ಇಲ್ಲವೋ ಎಂಬ ಬಗ್ಗೆ ಸ್ಪಷ್ಟನೆ ಇಲ್ಲ
5. ಸಿದ್ದರಾಮಯ್ಯ ಆಪ್ತ ಶಾಸಕರು ಶನಿವಾರವೇ ದೆಹಲಿಗೆ ತೆರಳದ ಬಗ್ಗೆ ಕುತೂಹಲ, ಇಂದು ಉತ್ತರದ ನಿರೀಕ್ಷೆ

ಸೋನಿಯಾ ಜತೆ ಚರ್ಚೆಗೆ ಯತ್ನ

ಮತಚೋರಿ ರ್‍ಯಾಲಿಯಲ್ಲಿ ಭಾಗವಹಿಸುವ ನೆಪದಲ್ಲಿ ದೆಹಲಿಗೆ ತೆರಳಿರುವ ಕಾಂಗ್ರೆಸ್ ನಾಯಕರು, ಇದೀಗ ತಮ್ಮ ತಮ್ಮ ನಾಯಕರ ಪರವಾಗಿ ಬ್ಯಾಟ್ ಬೀಸಲು ದೆಹಲಿ ಮಟ್ಟದಲ್ಲಿ ಪ್ರಯತ್ನಿಸಲು ಮುಂದಾಗಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋನಿಯಾ ಗಾಂಧಿ ಅವರ ಭೇಟಿಗೆ ಪ್ರಯತ್ನಿಸುವ ಸಾಧ್ಯತೆಯಿದೆ. ಆದರೆ ಸದನ ಮುಗಿಯುವ ತನಕ ರಾಜ್ಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಯಾವುದೇ ಚರ್ಚೆ ಬೇಡ ಎನ್ನುವ ಸ್ಪಷ್ಟನೆ ಇರುವುದರಿಂದ ಅವಕಾಶ ನೀಡುವರೋ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟನೆಯಿಲ್ಲ.

ಮೊದಲ ಬಾರಿ ತಿರುವನಂತಪುರಂ ಗೆದ್ದ ಬಿಜೆಪಿ 45 ವರ್ಷಗಳ ಎಲ್‌ಡಿಎಫ್ ಆಡಳಿತ ಅಂತ್ಯ

ಕೇರಳದಲ್ಲಿ ಬಿಜೆಪಿ ಐತಿಹಾಸಿಕ ಸಾಧನೆ

ತಿರುವನಂತಪುರಂ: ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶ ಶನಿವಾರ ಪ್ರಕಟಗೊಂಡಿದೆ. ರಾಜಧಾನಿ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಐತಿಹಾಸಿಕ ಸಾಧನೆ ಮಾಡಿದೆ. 101 ವಾರ್ಡ್‌ಗಳಲ್ಲಿ 50ರಲ್ಲಿ ಬಿಜೆಪಿ ಜಯಗಳಿಸಿದ್ದು, ಇದೇ ಮೊದಲ ಬಾರಿಗೆ ಬಹುಮತಕ್ಕೆ ಸನಿಹವಾಗಿದೆ. ಬಹುಮತಕ್ಕೆ 51 ಸ್ಥಾನ ಬೇಕಿದ್ದು, ಇನ್ನುಳಿದ ಒಂದು ಸ್ಥಾನಕ್ಕಾಗಿ ಸ್ವತಂತ್ರ ಅಭ್ಯರ್ಥಿಗಳಾಗಿ ಜಯ ಸಾಧಿಸಿರುವ ಇಬ್ಬರೊಂದಿಗೆ ಬಿಜೆಪಿ ಮಾತುಕತೆ ನಡೆಸಿದೆ. ಈ ಗೆಲುವಿನ ಮೂಲಕ ತಿರುವನಂತಪುರಂನಲ್ಲಿ ಎಲ್‌ಡಿಎಫ್ (ಲೆಫ್ಟ್ ಡೆಮೋಕ್ರಾಟಿಕ್ ಫ್ರಂಟ್)ನ 45 ವರ್ಷಗಳ ಆಡಳಿತ ಕೊನೆಗೊಂಡಿದೆ.

ಕೇರಳ ಹಾಗೂ ತಿರುವನಂತಪುರಂನಲ್ಲಿ ಆಡಳಿತದಲ್ಲಿರುವ ಸಿಪಿಎಂ ನೇತೃತ್ವದ ಎಲ್‌ಡಿಎಫ್ 29 ವಾರ್ಡ್‌ಗಳಲ್ಲಿ ಜಯಗಳಿಸಿದರೆ, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ 19 ವಾರ್ಡ್‌ಗಳಲ್ಲಿ ಮಾತ್ರ ಜಯ ಸಾಧಿಸಿದೆ. ಎರಡು ಕ್ಷೇತ್ರವನ್ನು ಇತರರು ಗೆದ್ದಿದ್ದಾರೆ. 2020ರ ಚುನಾವಣೆಯಲ್ಲಿ ಎಲ್‌ಡಿಎಫ್ 51, ಯುಡಿಎಫ್ 10, ಎನ್‌ಡಿಎ 34, ಇತರರು 5 ಕ್ಷೇತ್ರಗಳಲ್ಲಿ ಜಯಗಳಿಸಿದ್ದರು. ಕೇರಳದಲ್ಲಿ ಬಿಜೆಪಿಗೆ ಸರಿಯಾದ ನೆಲೆಯೇ ಇಲ್ಲ. ಇಂತಹ ಹೊತ್ತಿನಲ್ಲಿ ತಿರುವನಂತಪುರಂ ಮಹಾನಗರ ಪಾಲಿಕೆ ಚುನಾವಣೆಯಲ್ಲೇ ಗೆದ್ದಿರುವುದು ಮಹತ್ವದ ಸಂಗತಿಯಾಗಿದೆ. ಮುಂದಿನ ಏಪ್ರಿಲ್‌ನಲ್ಲಿ ಕೇರಳ ವಿಧಾನಸಭಾ ಚುನಾವಣೆಯಿದೆ. ಅದರ ನಡುವೆ ಪ್ರಸ್ತುತ ಗೆಲುವು ಬಿಜೆಪಿಗೆ ಟಾನಿಕ್‌ನಂತೆ ಕೆಲಸ ಮಾಡಲಿದೆ. ಒಟ್ಟಾರೆ ಇಡೀ ರಾಜ್ಯದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಭರ್ಜರಿ ಸಾಧಿಸಿದ್ದರೆ, ಎಲ್‌ಡಿಎಫ್ ಸೋತುಹೋಗಿದೆ. → 4

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕಿದ ಎಲ್ಲ ಕೇರಳ ಮತದಾರರಿಗೆ ಧನ್ಯವಾದ. ಯುಡಿಎಫ್, ಎಲ್‌ಡಿಎಫ್‌ಗಳ ಬಗ್ಗೆ ಕೇರಳದಲ್ಲಿ ಬೇಸರವಿದೆ. ಅಲ್ಲಿನ ಜನ ಉತ್ತಮ ಆಡಳಿತಕ್ಕಾಗಿ ಎನ್‌ಡಿಎಯನ್ನು ಭರವಸೆಯಿಂದ ನೋಡುತ್ತಿದ್ದಾರೆ.
-ನರೇಂದ್ರ ಮೋದಿ, ಪ್ರಧಾನಮಂತ್ರಿ

ಬಿಜೆಪಿಗೆ ನೆರವಾದ ತರೂರ್?

ಕೇರಳದಲ್ಲಿ ಬಿಜೆಪಿಗೆ ಬಲವಾದ ನೆಲೆಯಿಲ್ಲ. ಈ ರಾಜ್ಯದಲ್ಲಿ ಇದುವರೆಗೆ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿಲ್ಲ. ತಿರುವನಂತಪುರಂನ ಕಾಂಗ್ರೆಸ್ ಸಂಸದ ಶಶಿ ತರೂರ್ ಇತ್ತೀಚೆಗೆ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಂಡಿದ್ದಾರೆ. ಪರೋಕ್ಷವಾಗಿ ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ ಎಂಬ ಸುದ್ದಿಗಳಿವೆ. ತಿರುವನಂತಪುರಂನಲ್ಲಿ ಬಿಜೆಪಿ ಗೆಲ್ಲಲು ಈ ಅಂಶ ಬಲವಾದ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಸೊಂಪಾದ ಪುಟಗಳು



ಸಿಡ್ನಿ-ಲಂಡನ್ ಇಪ್ಪತ್ತೆರಡು ಗಂಟೆಗಳ ನೇರ ವಿಮಾನ ಹಾರಾಟ ಹೇಗಿರಬಹುದು?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಬಹುಬಲಧಾರಿಣೀಂ ರಿಪುದಲವಾರಿಣೀಂ ಮಾತರಂ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ನಮ್ಮ ಶಕ್ತಿಯನ್ನು ಅರಿತುಕೊಳ್ಳಬೇಕು, ಅದನ್ನು ಬಳಸಿಕೊಳ್ಳಲು ಮಾರ್ಗವನ್ನು ಹುಡುಕಬೇಕು. ಸಣ್ಣಸಣ್ಣ ಗುರಿಗಳೊಂದಿಗೆ ದೊಡ್ಡದಾದ ಯಶಸ್ಸಿನತ್ತ ನಿರಂತರ ಹೆಜ್ಜೆ ಹಾಕುತ್ತ ಹೋಗಬೇಕು.

ವಕ್ರತುಂಡೋಕ್ತಿ



ಭಯದಲ್ಲಿ ಯಾವ ಮಾತುಕತೆಯನ್ನೂ ಮಾಡಬಾರದು. ಹಾಗಂತ ಮಾತುಕತೆ ಮಾಡಲು ಭಯಪಡಬಾರದು.

ಆರ್‌ಜೆಡಿ ಆಂತರಿಕ ಕಲಹ: 18 ಶಾಸಕರು ಎನ್‌ಡಿಎಗೆ?

ಪಟನಾ: ತಿಂಗಳ ಹಿಂದಷ್ಟೇ ನಡೆದ ಬಿಹಾರ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ-ಜೆಡಿಯು ಪಕ್ಷಗಳ ಜಂಟಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 202 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಿದೆ. ಆರ್‌ಜೆಡಿ ಪಕ್ಷದೊಳಗೆ ಸೋದರ- ಸೋದರಿ ಕದನದ ಜತೆಗೇ ಪಕ್ಷದಲ್ಲಿ ಆಂತರಿಕ ಕಲಹ ನಡೆದಿದೆ. ಇದೆಲ್ಲದರಿಂದ ಬೇಸರಗೊಂಡಿರುವ ಆರ್‌ಜೆಡಿ ಶಾಸಕರಲ್ಲಿ 17-18 ಮಂದಿ 'ಎನ್‌ಡಿಎ' ಮೈತ್ರಿಕೂಟ ದತ್ತ ಮುಖ ಮಾಡಿದ್ದಾರೆ ಎನ್ನಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕೋಲ್ಕತಾದಲ್ಲಿ ಸ್ಟೇಡಿಯಂನಿಂದ ಮೆಸ್ಸಿ ಬೇಗ ನಿರ್ಗಮನ, ಮತಿಮೀರಿದ ಅಭಿಮಾನಿಗಳ ದಾಂಧಲೆ

ಇನ್ನೂ ಐದು ದಿನಗಳು ರಾಜ್ಯಾದ್ಯಂತ ತೀವ್ರ ಚಳಿ

ಬೆಂಗಳೂರು: ರಾಜ್ಯಾದ್ಯಂತ ದಿನದಿಂದ ದಿನಕ್ಕೆ ಚಳಿಯ ತೀವ್ರತೆ ಹೆಚ್ಚುತ್ತಿದ್ದು, ಜನರು ಬೆಚ್ಚನೆಯ ಬಟ್ಟೆ ಧರಿಸಿದರೂ ನಡುಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಹವಾಮಾನ ಇಲಾಖೆ ಮಾಹಿತಿ ಪ್ರಕಾರ, ಮುಂದಿನ 5 ದಿನಗಳವರೆಗೆ ರಾಜ್ಯದಲ್ಲಿ ಶೀತ ವಾತಾವರಣ ಮುಂದುವರಿಯಲಿದೆ. ದಕ್ಷಿಣ ಒಳನಾಡಿನಲ್ಲೂ ಶೀತ ಗಾಳಿ ಬೀಸುವ ಸಾಧ್ಯತೆ ಇದೆ. ಕೊಪ್ಪಳ, ಬಳ್ಳಾರಿ, ವಿಜಯ ನಗರ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿಕ್ಕಬಳ್ಳಾಪುರ ಮತ್ತು ಕೋಲಾರದಂತಹ ಜಿಲ್ಲೆಗಳಲ್ಲಿಯೂ ಶೀತಗಾಳಿ ಬೀಸಲಿದೆ.

ಗೃಹ ಸಚಿವರ ತವರಲ್ಲೇ ಗರಿಷ್ಠ ಅಬಕಾರಿ ಅಕ್ರಮ

ಬೆಳಗಾವಿ: ರಾಜ್ಯದ ಕಾನೂನು ಸುವ್ಯವಸ್ಥೆ ಜವಾಬ್ದಾರಿ ಹೊತ್ತ ಗೃಹ ಸಚಿವರ ತವರಿನಲ್ಲೇ ಅಬಕಾರಿ ಅಕ್ರಮ ತಾರಕಕ್ಕೇರಿದೆ. ಈ ಅಕ್ರಮದಲ್ಲಿ ತುಮಕೂರು ಅಗ್ರಸ್ಥಾನದಲ್ಲಿದೆ. ನಂತರದಲ್ಲಿ ಶಿವಮೊಗ್ಗ, ಕೋಲಾರ ಸ್ಥಾನದಲ್ಲಿವೆ. ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್ ಅವರು ಅಬಕಾರಿ ಅಕ್ರಮ ಕುರಿತು ಕೇಳಲಾದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅಬಕಾರಿ ಸಚಿವರು, 3 ವರ್ಷಗಳಲ್ಲಿ ರಾಜ್ಯದಲ್ಲಿ ಅಬಕಾರಿ ಅಕ್ರಮ ತಡೆಯಲು 281489 ದಾಳಿ ನಡೆದಿವೆ ಎಂದಿದ್ದಾರೆ.

ದೆಹಲಿ ವಿಮಾನದಲ್ಲಿ ನಿತ್ರಾಣಗೊಂಡಿದ್ದ ಯುವತಿಗೆ ಮಾಜಿ ಶಾಸಕಿ ನೆರವು

ಅಮೆರಿಕ ಯುವತಿ ಪ್ರಾಣ ಉಳಿಸಿದ ನಿಂಬಾಳ್ಕರ್

ಪಣಜಿ: ಮೂಲತಃ ವೈದ್ಯೆಯೂ ಆಗಿರುವ ಖಾನಾಪುರದ ಮಾಜಿ ಶಾಸಕಿ ಡಾ. ಅಂಜಲಿ ನಿಂಬಾಳ್ಕರ್ ಶನಿವಾರ ವಿಮಾನದಲ್ಲೇ ಅಮೆರಿಕ ಯುವತಿಯೊಬ್ಬರ ಜೀವ ಉಳಿಸಿದ್ದಾರೆ. ಗೋವಾದಿಂದ ದೆಹಲಿಗೆ ಹೊರಟಿದ್ದ ವಿಮಾನದಲ್ಲಿ ಅಂಜಲಿಯೂ ಪ್ರಯಾಣಿಸಿದ್ದರು. ಇದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಅಮೆರಿಕ ಮೂಲದ ಯುವತಿಗೆ ಇದ್ದಕ್ಕಿದ್ದಂತೆ ಕೈ-ಕಾಲುಗಳಲ್ಲಿ ನಡುಕ ಉಂಟಾಗಿತ್ತು, ಕೆಲವೇ ಕ್ಷಣದಲ್ಲಿ ಆಕೆ ಮೂರ್ಛೆ ಹೋದರು. ಸನ್ನಿವೇಶ ಗಮನಿಸಿದ ಅಂಜಲಿ ಕೂಡಲೇ ಯುವತಿಯ ಹೃದಯದ ಮೇಲೆ ಕೈಯಿಟ್ಟು ಒತ್ತಿ ಸಿಪಿಆರ್ ನಡೆಸಿದರು. ಬಳಿಕ ಆಕೆ ಉಸಿರಾಡಿದರು. ಇದಾದ ಅರ್ಧ ಗಂಟೆಯಲ್ಲೇ ಯುವತಿ ಮತ್ತೆ ಕುಸಿದುಬಿದ್ದಳು. ರಾಜ್ಯ ಕಾಂಗ್ರೆಸ್ ನಾಯಕಿ ನಿಂಬಾಳ್ಕರ್ ಪ್ರಯತ್ನದಿಂದಾಗಿ ಮತ್ತೆ ಜೀವ ಉಳಿಯಿತು.





ಆಳಂದ ಮತಗಳ್ಳತನ: 7 ಮಂದಿ ವಿರುದ್ಧ ವರದಿ

ಬಿಜೆಪಿ ನಾಯಕ ಸುಭಾಷ್ ವಿರುದ್ಧ ಚಾರ್ಜ್‌ಶೀಟ್

ಬೆಂಗಳೂರು: ಕರ್ನಾಟಕದ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂಬ ಆರೋಪ ರಾಷ್ಟ್ರ ರಾಜ್ಯಕಾರಣದಲ್ಲಿ ಭಾರೀ ಸದ್ದು ಮಾಡಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ನಡೆಸಿದ್ದು, ಇದೀಗ ಪ್ರಭಾವಿ ನಾಯಕನ ಪಾತ್ರ ಎಸ್‌ಐಟಿ ತನಿಖೆಯಲ್ಲಿ ಸಾಬೀತಾಗಿದೆ ಎನ್ನಲಾಗಿದೆ. ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ, ಎಸ್‌ಐಟಿ ತಂಡ ಬೆಂಗಳೂರು ನಗರದ ಎಸಿಎಂಎಂ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ. ಬಿಜೆಪಿಯ ಮಾಜಿ ಶಾಸಕ ಸುಭಾಷ್ ಗುತ್ತೇದಾರ್, ಅವರ ಪುತ್ರ ಹರ್ಷಾನಂದ ಸೇರಿದಂತೆ ಒಟ್ಟು 7 ಜನರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನಡೆದಿದೆ ಎನ್ನಲಾಗಿದ್ದ ಮತಗಳ್ಳತನದ ಹಿನ್ನೆಲೆಯಲ್ಲಿ ಈ ಬೆಳವಣಿಗೆಯಾಗಿದೆ. ಪ್ರಕರಣದ ಹಿನ್ನೆಲೆ: 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಆಳಂದ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಆರೋಪಿಸಿದ್ದರು. ತನಿಖೆಯ ವೇಳೆ ಆಳಂದದಲ್ಲಿ 5,994 ಮತದಾರರ ಹೆಸರು ಅಳಿಸಲಾಗಿದೆ ಎಂಬುದು ಪತ್ತೆಯಾಗಿತ್ತು.

ಶೇ.50 ತೆರಿಗೆ ವಿರುದ್ಧ ಅಮೆರಿಕ ಸಂಸತ್ತಲ್ಲಿ ಆಗ್ರಹ

ಭಾರತಕ್ಕೆ ದುಬಾರಿ ತೆರಿಗೆ: ಟ್ರಂಪ್ ವಿರುದ್ಧ ನಿರ್ಣಯ

ವಾಷಿಂಗ್ಟನ್: ಭಾರತದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ 50% ಸುಂಕ ಹೇರಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಮಕ್ಕೆ ಆ ದೇಶದಲ್ಲೇ ತೀವ್ರ ವಿರೋಧ ವ್ಯಕ್ತವಾಗಿದೆ. ಟ್ರಂಪ್ ನಡೆಯನ್ನು ವಿರೋಧಿಸಿ ಅಮೆರಿಕದ ಸಂಸತ್ತಿನಲ್ಲಿ ನಿರ್ಣಯವನ್ನು ಮಂಡಿಸಲಾಗಿದೆ. ಕೆಳಮನೆಯಲ್ಲಿ (ಹೌಸ್ ಆಫ್ ರೆಪ್ರೆಸೆಂಟೇಟಿವ್) ಮೂವರು ಸದಸ್ಯರು 50% ಸುಂಕ ವಿಧಿಸಿದ ಡೊನಾಲ್ಡ್ ಟ್ರಂಪ್ ಕ್ರಮವನ್ನು ವಿರೋಧಿಸಿದರು. ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಿ, ಆ ಮೂಲಕ ಟ್ರಂಪ್ ತೆರಿಗೆ ಹೇರಿದ್ದರು. ಅದನ್ನು ತೆಗೆದುಹಾಕಬೇಕೆಂದು ಆಗ್ರಹಿಸಲಾಗಿದೆ.

ಭಾರತ ಪ್ರಮುಖ ಪಾಲುದಾರ ದೇಶವಾಗಿದೆ. ಈ ಕ್ರಮಗಳು ಕಾನೂನುಬಾಹಿರ ಮತ್ತು ಅಮೇರಿಕನ್ ಕಾರ್ಮಿಕರು, ಗ್ರಾಹಕರು ಮತ್ತು ದ್ವಿಪಕ್ಷೀಯ ಸಂಬಂಧಗಳಿಗೆ ಹಾನಿಕಾರಕ ಎಂದು ಕರೆದಿದ್ದಾರೆ. ಪ್ರತಿನಿಧಿಗಳಾದ ಡೆಬೊರಾ ರಾಸ್, ಮಾರ್ಕ್ ವೀಸಿ ಮತ್ತು ರಾಜಾ ಕೃಷ್ಣಮೂರ್ತಿ ಅವರು ಭಾರತ, ಬ್ರೆಜಿಲ್ ಮೇಲಿನ ಹೇರಿರುವ ನಿರ್ಣಯವನ್ನು ಕೊನೆಗೊಳಿಸಬೇಕೆಂದು ಆಗ್ರಹಿಸಿದ್ದಾರೆ.

ಪ್ರಶ್ನೆಪತ್ರಿಕೆಗಳ ಕನ್ನಡ ಅನುವಾದದಲ್ಲಿ ಎಡವಟ್ಟು | ಆಕ್ರೋಶದ ನಡುವೆ ಕ್ರಮ ಅಸಾಧ್ಯ ಎಂದ ಸರಕಾರ

ಕೆಪಿಎಸ್‌ಸಿ ವಿವಾದ: ಅಧಿಕಾರಿಗಳ ವಿರುದ್ಧ ಕ್ರಮವಿಲ್ಲ!

ವಿಶ್ವವಾಣಿ ವಿಶೇಷ ಬೆಳಗಾವಿ

ಕಳೆದ ವರ್ಷ ನಡೆದಿದ್ದ ಕೆಪಿಎಸ್‌ಸಿ ಪರೀಕ್ಷೆ ಯಲ್ಲಿ ಭಾರಿ ವಿವಾದಕ್ಕೆ ಕಾರಣ ವಾಗಿದ್ದ ಪ್ರಶ್ನೆಪತ್ರಿಕೆ ತರ್ಜುಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಯಾವುದೇ ಕ್ರಮವಹಿಸಿಲ್ಲ ಎನ್ನುವ ಅಚ್ಚರಿಯ ವಿಷಯ ಬಹಿರಂಗವಾಗಿದೆ. ಕಳೆದ ವರ್ಷ ನಡೆದಿದ್ದ ಕೆಪಿಎಸ್‌ಸಿ ಪರೀಕ್ಷೆ ಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಪ್ರಶ್ನೆಪತ್ರಿಕೆ ತರ್ಜುಮೆಯಾಗುವಾಗ ಎಡವಟ್ಟಾಗಿತ್ತು. ಈ ಕಾರಣಕ್ಕೆ ಭಾರಿ ವಿವಾದವಾಗಿದ್ದರಿಂದ, ಮರು ಪರೀಕ್ಷೆ ನಡೆಸಲಾಗಿತ್ತು. ಮರು ಪರೀಕ್ಷೆಯಲ್ಲಿಯೂ ತರ್ಜುಮೆಯ ಬಗ್ಗೆ ಭಾರೀ ಆಕ್ಷೇಪಗಳು ಕೇಳಿಬಂದಿದ್ದವು. ಆದರೆ ಇದೀಗ ಈ ಎಡವಟ್ಟು ಮಾಡಿದ ಭಾಷಾಂತ ರಕಾರರ ವಿರುದ್ಧ ಕ್ರಮವಹಿಸಲು ಸಾಧ್ಯವಿಲ್ಲ ಎನ್ನುವ ಅಚ್ಚರಿಯ ಉತ್ತರ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದಲೇ ಬಂದಿದೆ.

ವಿಧಾನಪರಿಷತ್ ಸದಸ್ಯ ಶಶೀಲ್ ನಮೋಶಿ ಅವರ ಪ್ರಶ್ನೆಗೆ ಉತ್ತರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಲೇಜು / ವಿಶ್ವ ವಿದ್ಯಾಲಯಗಳಲ್ಲಿ ತಾಂತ್ರಿಕ ಮತ್ತು ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಬೋಧನೆ ಮಾಡದಿರುವುದರಿಂದ ಹಾಗೂ ಕನ್ನಡದಲ್ಲಿ ಹೆಚ್ಚಿನ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಪುಸ್ತಕಗಳು ಲಭ್ಯವಿಲ್ಲದಿರುವುದರಿಂದ ವಿಷಯ ತಜ್ಞರು ಇಂಗ್ಲೀಷ್ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿದ್ದಾರೆ. → 4

ಕನ್ನಡದ ಅಭ್ಯರ್ಥಿಗಳಿಗೆ ಅನ್ಯಾಯವಾಗಿಲ್ಲ: ಸಿಎಂ

384 ಗೆಜೆಟೆಡ್ ಪ್ರೊಬೆಷನರ್‌ಗಳ ಪೂರ್ವಭಾವಿ ಪ್ರಶ್ನೆಪತ್ರಿಕೆಯ ಭಾಷಾಂತರವನ್ನು ಪರಿಶೀಲಿಸಲು ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣಿತಿ ಹೊಂದಿರುವಂತಹ ಮೂವರು ವಿಷಯ ತಜ್ಞರನ್ನೊಳಗೊಂಡ 12 ವಿಷಯಗಳ ತಜ್ಞರ ಸಮಿತಿ ರಚಿಸಿ ಅಭಿಪ್ರಾಯ ಪಡೆಯಲಾಗಿದೆ. ಕೆಲವು ಪ್ರಶ್ನೆಗಳಲ್ಲಿ ಯಾವುದೇ ಭಾಷಾಂತರ ವ್ಯತ್ಯಾಸ ಇರುವುದಿಲ್ಲವೆಂದು, ಕೆಲವು ಪ್ರಶ್ನೆಗಳಲ್ಲಿ ಕಾಗುಣಿತಾಕ್ಷರಗಳ ದೋಷ ಇತ್ತು, ಕೆಲವು ಪ್ರಶ್ನೆಗಳಲ್ಲಿ ವ್ಯತ್ಯಾಸವಿದ್ದರೂ ಅರ್ಥೈಸಿಕೊಂಡು ಕೀ ಉತ್ತರವನ್ನು ಗುರುತಿಸಬಹುದಾಗಿದೆ. ತಾಂತ್ರಿಕ ದೋಷದಿಂದ 5 ಪ್ರಶ್ನೆಗಳಿಗೆ ಕೃಪಾಂಕ ನೀಡಲು ನಿರ್ಧರಿಸಲಾಗಿದೆ. ಕನ್ನಡ ಅಭ್ಯರ್ಥಿಗಳಿಗೆ ಅನ್ಯಾಯವಾಗಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಬಾರ್‌ನಲ್ಲಿ ಯುವಕ ಅನುಮಾನಸ್ಪದ ಸಾವು

ಬೆಂಗಳೂರು: ಬಾರ್‌ಗೆ ಹೋಗಿದ್ದ ಯುವಕ ಅನುಮಾನಸ್ಪದವಾಗಿ ಸಾವನ್ನಪ್ಪಿರುವ ಘಟನೆ ಬೆಂಗಳೂರಿನ ಜೀವನ್ ಭೀಮಾನಗರದಲ್ಲಿ ನಡೆದಿದೆ. 27 ವರ್ಷದ ಮದನ್ ಅನುಮಾನಸ್ಪದವಾಗಿ ಮೃತಪಟ್ಟ ಯುವಕ. ಮದನ್ ಸ್ನೇಹಿತರ ಜತೆ ಬಾರ್‌ಗೆ ಹೋಗಿದ್ದ. ಆದರೆ ಸ್ಟೇರ್ ಕೇಸ್‌ನಿಂದ ಬಿದ್ದು ಪ್ರಜ್ಞೆ ತಪ್ಪಿದ್ದ ಮದನ್‌ನನ್ನ ಕುಟುಂಬಸ್ಥರು ಮನೆಗೆ ಕರೆದುಕೊಂಡು ಬಂದಿದ್ದರು. ಆದ್ರೆ ಮಧ್ಯರಾತ್ರಿ ಎದ್ದೇಳಿಸಲು ಹೋದಾಗ ಆತ ಮಾತಾಡಿಲ್ಲ, ಆತನ ಮರ್ಮಾಂಗ ಊದಿಕೊಂಡು, ಯೂರಿನ್ ಬ್ಲಾಕ್ ಆಗಿತ್ತು. ತಕ್ಷಣ ಮದನ್‌ನನ್ನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆದರೆ ಆಸ್ಪತ್ರೆ ತಲುಪುವ ಮೊದಲೇ ಮದನ್ ಮೃತಪಟ್ಟಿದ್ದಾನೆ. ಮಗನ ಸಾವಿನ ಬಗ್ಗೆ ತನಿಖೆ ನಡೆಸಬೇಕೆಂದು ತಾಯಿ ದೂರು ನೀಡಿದ್ದು, ಸದ್ಯ ಯುಐಡಿ ದಾಖಲಿಸಿ ಜೀವನ್ ಭೀಮಾ ನಗರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನವವಿವಾಹಿತೆ ಆತ್ಮಹತ್ಯೆ

ಬೆಂಗಳೂರು: ತಂಗಿಯ ಬರ್ತಡೇ ಪಾರ್ಟಿಗೆ ಕರೆದುಕೊಂಡು ಹೋಗದ್ದಕ್ಕೆ ನೊಂದು ನವವಿವಾಹಿತೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶ್ಯಾಮಭಟ್ಟರಪಾಳ್ಯದಲ್ಲಿ ನಡೆದಿದೆ. ತಿಪಟೂರು ಮೂಲದ ಐಶ್ವರ್ಯ(22) ಮೃತ ಮಹಿಳೆ. ಕಳೆದ 6 ತಿಂಗಳ ಹಿಂದೆಯಷ್ಟೇ ಲಕ್ಷ್ಮಿನಾರಾಯಣ ಎಂಬುವವರನ್ನು ಪ್ರೀತಿಸಿ ಮದುವೆಯಾಗಿದ್ದಳು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಸೀಲಿಂಗ್ ಹುಕ್‌ಗೆ ಹಗ್ಗದ ಮೂಲಕ ನೇಣು ಬಿಗಿದು ಆತ್ಮಹತ್ಯೆಗೆ ಮಾಡಿಕೊಂಡಿದ್ದಾರೆ. ತಂಗಿಯ ಹುಟ್ಟು ಹಬ್ಬದ ಪಾರ್ಟಿಗೆ ಕರೆದುಕೊಂಡು ಹೋಗಲಿಲ್ಲ ಎಂಬ ಕಾರಣಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಂಡಿ ರುವ ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ಮಾದನಾಯ ಕನಹಳ್ಳಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ವಾಹನ ಸಂಚಾರ ಹೆಚ್ಚಳ | 2 ವರ್ಷದಲ್ಲಿ 15000 ಕೇಸ್

ಫುಟ್‌ಪಾತ್ ಪಾರ್ಕಿಂಗ್ ಹೆಚ್ಚಳ

ಅಪರ್ಣಾ ಎ.ಎಸ್. ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ವಾಹನ ಸಂಖ್ಯೆ ಹೆಚ್ಚುತ್ತಿರುವುದರಿಂದ ವಾಹನ ನಿಲ್ದಾಣದ್ದೇ ಬಹುದೊಡ್ಡ ತಲೆನೋವಾಗಿದೆ. ಪಾರ್ಕಿಂಗ್‌ಗೆ ಜಾಗ ಸಿಗದೇ, ಪಾದಚಾರಿ ಮಾರ್ಗದಲ್ಲಿಯೇ ವಾಹನ ನಿಲ್ದಾಣ ಮಾಡುತ್ತಿರುವವರ ವಿರುದ್ಧ ಕಳೆದ ಎರಡು ವರ್ಷದಲ್ಲಿ ಲಕ್ಷಕ್ಕೂ ಅಧಿಕ ಪ್ರಕರಣ ದಾಖಲಾಗಿರುವುದು ಇದೀಗ ಬಹಿರಂಗವಾಗಿದೆ.

ಸಾರ್ವಜನಿಕರು ನಡೆದುಕೊಂಡು ಹೋಗಲು ಅನುಕೂಲವಾಗಲು ಪಾದಚಾರಿ ಮಾರ್ಗವನ್ನು ಮೀಸಲಿಡಲಾಗಿದೆ. ಆದರೆ ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಂಡು ಹೋಗಲು ಹಾಗೂ ಪಾರ್ಕಿಂಗ್ ಜಾಗ ಸಿಗದೇ ಪಾದಚಾರಿ ಮಾರ್ಗದ ಮೇಲೆಯೇ ವಾಹನ ಓಡಿಸುವುದು ಪಾದಚಾರಿಗಳಿಗೆ ಸಮಸ್ಯೆಯಾಗುತ್ತದೆ. ಇದರೊಂದಿಗೆ ಹಲವು ಬಾರಿ ಇದರಿಂದಲೇ ಅಪಘಾತಗಳು ಸಂಭವಿಸಿರುವ ಘಟನೆಗಳಿವೆ. ಆದ್ದರಿಂದ ಕಳೆದ ಎರಡು ವರ್ಷದಲ್ಲಿ ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿರುವವರಿಗೆ ಬಿಎನ್‌ಎಸ್ ಕಾಯಿದೆಯಲ್ಲಿ 2 ಲಕ್ಷಕ್ಕೂ ಹೆಚ್ಚು ಕೇಸ್‌ಗಳನ್ನು ದಾಖಲಿಸಿದ್ದರೆ, ವಾಹನ ಸಂಚರಿಸಿರುವ ವಿರುದ್ಧ 31 ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಿಸಲಾಗಿದೆ.

ವಾಹನ ನಿಲುಗಡೆಗೆ ಸಾವಿರ ರು.ದಂಡ: ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿದರೆ ಸಾವಿರ ರುಪಾಯಿ ದಂಡ ವಿಧಿಸಲು ಅವಕಾಶವಿದೆ. ಇದೇ ರೀತಿ ಮುಂದುವರೆದರೆ ವಾಹನವನ್ನು ಟೋಯಿಂಗ್ ಮಾಡುವುದಕ್ಕೂ ಅವಕಾಶ ನೀಡಲಾಗಿದೆ. ಇನ್ನು ವಾಹನವನ್ನು ಸಂಚರಿಸಿದರೆ, ಸಾವಿರ ರುಪಾಯಿ ದಂಡದೊಂದಿಗೆ, ಪುನಾರವರ್ತಿತನೆ ಮಾಡಿದರೆ ನ್ಯಾಯಾಲಯದ ಮೂಲಕ ಡ್ರೈವಿಂಗ್ ಲೈಸೆನ್ಸ್ ಅನ್ನು ರದ್ದು ಮಾಡುವುದಕ್ಕೂ ಅವಕಾಶ ನೀಡಲಾಗಿದೆ. ವರ್ಷದಿಂದ ವರ್ಷಕ್ಕೆ ವಾಹನ ಸಂಚಾರ ಹಾಗೂ ನಿಲುಗಡೆ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಅನೇಕರು ಆತಂಕ ವ್ಯಕ್ತಪಡಿಸಿದ್ದಾರೆ.

ವರ್ಷ	ಅಪಘಾತ ಸಂಖ್ಯೆ	ಮೃತ ಪಟ್ಟವರು	ಪಾದ ಚಾರಿಗಳು
2024	4769	894	246
2025 (ಅ.31ರ ಅಂತ್ಯಕ್ಕೆ)	3985	715	203

ವಾಹನ ನಿಲುಗಡೆ

ವರ್ಷ	ಬಿಎನ್‌ಸಿ ಕಾಯಿದೆಯಲ್ಲಿ	ಮೋಟಾರು ವಾಹನ ಕಾಯಿದೆಯಲ್ಲಿ
2024	183	117416
2025	175	83138

ವಾಹನ ಸಂಚಾರ

ವರ್ಷ	ಬಿಎನ್‌ಎಸ್ ಕಾಯಿದೆಯಲ್ಲಿ	ಮೋಟಾರು ವಾಹನ ಕಾಯಿದೆಯಲ್ಲಿ
2024	13	17214
2025	39	14719

ಅಪಘಾತ ನಿಯಂತ್ರಣ ಕ್ರಮ

ಈ ನಡುವೆ ಪಾದಚಾರಿಗಳ ಅನುಕೂಲಕ್ಕೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಹಲವು ಕ್ರಮಕೈಗೊಂಡರೂ, ಅಪಘಾತಗಳ ಸಂಖ್ಯೆ ಕಡಿಮೆಯಾಗದಿರುವುದು ಆತಂಕಕ್ಕೆ ಕಾರಣವಾಗಿದೆ. ಈಗಾಗಲೇ ಪಾದಚಾರಿಗಳು ಏಕಾಏಕಿ ರಸ್ತೆ ನುಗ್ಗಬಾರದು ಎಂದು ರಸ್ತೆಗಳ ಮಧ್ಯೆ ಎತ್ತರಿಸಿದ ಕಬ್ಬಿಣದ ಗ್ರೀಲ್‌ಗಳನ್ನು ಅಳವಡಿಸಲು ಹಾಗೂ ಪಾದಚಾರಿಗಳ ಸುರಕ್ಷತಾ ದೃಷ್ಟಿಯಿಂದ ಅವಶ್ಯಕತೆ ಇರುವ ಲೇನ್ ಮಾರ್ಕಿಂಗ್-216, ಜೀಬ್ರಾ ಕ್ರಾಸಿಂಗ್- 363, ಗ್ರಿಲ್ ಬ್ಯಾರಿಕೇಡ್-112 ಹಾಗೂ ಪೆಲಿಕಾನ್ ಸಿಗ್ನಲ್-45 ಸ್ಥಳಗಳಲ್ಲಿ ಮಾಡುವಂತೆ ಗೃಹ ಇಲಾಖೆ ಬಿಬಿಎಂಪಿಗೆ ಪತ್ರ ಬರೆದಿದೆ. ಇದರೊಂದಿಗೆ 101 ಜಾಗದಲ್ಲಿ ಸ್ಕೈವಾಕ್ ಸಿದ್ಧಪಡಿಸುವಂತೆಯೂ ಸಲಹೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ಒಂದೂವರೆ ಸಾವಿರಕ್ಕೂ ಹೆಚ್ಚು ಮಂದಿ ಮೃತ

ರಾಜಧಾನಿ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷದಲ್ಲಿ 1609 ಮಂದಿ ಮೃತಪಟ್ಟಿದ್ದಾರೆ. ಈ 1609 ಮಂದಿ ಪೈಕಿ 400ಕ್ಕೂ ಹೆಚ್ಚು ಪಾದಚಾರಿಗಳೇ ಇರುವುದು ಬಹಿರಂಗವಾಗಿದೆ. ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ಹೋಗುವಾಗಲೂ, ಅನೇಕ ಸಮಯದಲ್ಲಿ ವಾಹನ ಚಾಲಕರ ನಿರ್ಲಕ್ಷ್ಯದಿಂದ ಅಪಘಾತಗಳು ಸಂಭವಿಸಿದೆ ಎನ್ನುವುದು ಬಹಿರಂಗವಾಗಿದೆ. ಎರಡು ವರ್ಷದ ಅವಧಿಯಲ್ಲಿ ನಡೆದಿರುವ 8754 ಅಪಘಾತ ಪ್ರಕರಣಗಳ ಪೈಕಿ 249 ಮಂದಿ ಪಾದಚಾರಿಗಳೇ ಮೃತಪಟ್ಟಿರುವುದು ಆತಂಕಕ್ಕೆ ಕಾರಣವಾಗಿದೆ. ಇನ್ನುಳಿದಂತೆ 1609 ಮಂದಿ ಮೃತಪಟ್ಟದ್ದರೆ, 4928 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಇನ್ನುಳಿದಂತೆ 2574 ಮಂದಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ.

ಗೂಂಡಾ ಕಾಯಿದೆ ಮಾರ್ಗಸೂಚಿಗಳ ಪಾಲಿಸದ ಪೊಲೀಸ್ ವಿರುದ್ಧ ಹೈ ಗರಂ

ಬೆಂಗಳೂರು: ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪಿಗಳನ್ನು ಗೂಂಡಾ ಕಾಯಿದೆಯಡಿ ಮುಂಜಾಗ್ರತಾ ಕ್ರಮವಾಗಿ ಬಂಧಿಸುವ ಸಂಬಂಧ ಹೊರಡಿಸುವ ಆದೇಶಗಳ ಕುರಿತಂತೆ ಆಗುತ್ತಿದ್ದ ಸಣ್ಣ-ಪುಟ್ಟ ತಪ್ಪು ಮರುಕಳಿಸದಂತೆ ಮಾರ್ಗಸೂಚಿ ಹೊರಡಿಸಿದರೂ, ಅಧಿಕಾರಿಗಳು ತಪ್ಪುಗಳನ್ನು ಮತ್ತೆ ಮುಂದುವರಿಸುತ್ತಿರುವ ಕ್ರಮಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಹೈಕೋರ್ಟ್ ಸುದ್ದಿ

ಅಲ್ಲದೆ, ಅಧಿಕಾರಿಗಳು ಮಾಡುವ ಈ ಸಣ್ಣ-ಪುಟ್ಟ ತಪ್ಪುಗಳ ಪರಿಣಾಮ ಎದುರಾಗುವ ತಾಂತ್ರಿಕ ಕಾರಣಗಳಿಂದ ಗೂಂಡಾ ಕಾಯಿದೆಯಡಿ ಬಂಧನವಾಗುವಂತಹ ಆರೋಪಿಗಳನ್ನು ಬಿಡುಗಡೆಗೆ ಆದೇಶ ಮಾಡಬೇಕಾಗುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಹುಬ್ಬಳ್ಳಿಯ ದಾವೂದ್ ನದಾಫ್ ಎಂಬುವರನ್ನು 2025ರ ಜೂನ್ 3ರಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರು ಮುಂಜಾಗ್ರತಾ ಕ್ರಮವಾಗಿ ಬಂಧಿಸಿದ್ದ ಕ್ರಮ ಪ್ರಶ್ನಿಸಿ, ಆತನ ಪತ್ನಿ ಪ್ರತಿಭಾ ತಲಪಾಟಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ಮತ್ತು ನ್ಯಾಯಮೂರ್ತಿ ಬಿ.ಮುರಳೀಧರ ಪೈ ಅವರಿದ್ದ ನ್ಯಾಯಪೀಠ, ಪೊಲೀಸ್ ಇಲಾಖೆಯ ಅಧಿಕಾರಿಗಳ ಕ್ರಮಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿದೆ.

ಅಲ್ಲದೆ, ಗೂಂಡಾ ಕಾಯಿದೆಯಡಿ ಬಂಧಿಸುವ ಸಂಬಂಧ ಹೈಕೋರ್ಟ್ 2019ರಲ್ಲಿ ಹೊರಡಿಸಿದ 13 ಅಂಶಗಳ ಮಾರ್ಗಸೂಚಿಗಳಿರುವ ಆದೇಶದ ಪ್ರತಿ ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗಳು, ಕಾನೂನು ಮತ್ತು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರು(ಡಿಜಿ, ಐಜಿ), ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಮತ್ತು ಎಲ್ಲಾ ಪೊಲೀಸ್ ಆಯುಕ್ತರು, ಪ್ರತಿ ಜಿಲ್ಲೆಯ ಉಪ ಆಯುಕ್ತರು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ರವಾನಿಸಲು ಸೂಚನೆಯಿದ್ದರೂ, ದುರಾದೃಷ್ಟವಶಾತ್ ಏನೂ ಬದಲಾವಣೆ ಆಗುತ್ತಿಲ್ಲ ಎಂದು ಪೀಠ ಹೇಳಿದೆ.

ಅರ್ಜಿದಾರರ ಪತಿಯನ್ನು ಮುಂಜಾಗ್ರತಾ ಕ್ರಮವಾಗಿ ಬಂಧನ ಮಾಡುವ ಸಂಬಂಧ ಅಧಿಕಾರಿಗಳು ಹೊರಡಿಸಿರುವ ಆದೇಶಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲೆಗಳು ಅಸ್ಪಷ್ಟವಾಗಿವೆ. ಮುಂಜಾಗ್ರತಾ ಕ್ರಮವಾಗಿ ಬಂಧಿಸುವ ಸಂಬಂಧ ಹೈಕೋರ್ಟ್‌ನ ಹೊರಡಿಸಿದ್ದ ಮಾರ್ಗಸೂಚಿಗಳಲ್ಲಿ, ಬಂಧಿತರಿಗೆ ಬಂಧನಕ್ಕೆ ಕಾರಣವನ್ನು ಸ್ಪಷ್ಟವಾಗಿ ತಿಳಿಸಲು, ಅವರಿಗೆ ಅರ್ಥವಾಗುವ ಭಾಷೆಯಲ್ಲಿರಬೇಕು ಎಂಬುದಾಗಿ ತಿಳಿಸಿದೆ. ಆದರೂ, ಅಧಿಕಾರಿಗಳು ಮಾರ್ಗಸೂಚಿಗಳನ್ನು ಅನುಸರಿಸುತ್ತಿಲ್ಲ. ಅಧಿಕಾರಿಗಳ ಲೋಪದಿಂದ ಮುಂಜಾಗ್ರತಾ ಕ್ರಮವಾಗಿ ಬಂಧಿಸುವವರನ್ನು ಬಿಡುಗಡೆಗೆ ಆದೇಶ ಮಾಡಲಾಗುತ್ತಿದೆ ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರರ ಪತಿ ದಾವುದ್ ನದಾಫ್ ಎಂಬುವರನ್ನು 2025ರ ಜೂನ್ 3ರಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರು ಗೂಂಡಾ ಕಾಯಿದೆಯಡಿ ಬಂಧಿಸಿದ್ದರು. ಇದನ್ನು ಪ್ರಶ್ನಿಸಿದ್ದ ಅರ್ಜಿದಾರರು ತನ್ನ ಪತಿಯನ್ನು ಬಂಧಿಸಿರುವುದು ಕಾನೂನುಬಾಹಿರವಾಗಿದ್ದು, ತಕ್ಷಣ ಬಿಡುಗಡೆಗೆ ಆದೇಶ ನೀಡಬೇಕು ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

IN THE COURT OF THE CITY CIVIL AND SESSIONS JUDGE, AT BENGALURU, CCH-39
O.S. No. 15/2025
BETWEEN : STATE BANK OF INDIA,
Retail Assets Central Processing Centre (RACPC), Address at No.5/1, Prestige Star Building,1st Floor, Ring Road, Near Mother Dairy, Yelahanka New Town, BENGALURU-560065, Represented by its Authorized Officer / Manager Mr.Amarendra Kumar Singh. ...PLAINTIFF
And : Mr. NAVEEN KUMAR. G.R, ...DEFENDANT
Notice to the Defendant Under Order V Rule 20(1-A) Of CPC:
To : Mr. NAVEEN KUMAR. G.R, S/o Mr. G.A.RAMASWAMY Aged about 34 years, Residing at No.1130, 17th Main, 11th Cross, Opp. Government School, Srinagara, Bengaluru South, BENGALURU-560 050. Mobile No. 94489 29494 / 9591104777. Mail ID: naveenkumar@gmail.com
The plaintiff has instituted the above suit against you for the recovery of a total Sum of Rs.13,26,681/- (Rupees Thirteen Lakhs Twenty Six Thousand Six Hundred and Eighty One Only) on 29.09.2023 along with court costs and future interest at the rate of Rs.24% p.a. on outstanding overdue amount from the date of suit to till the realization. Therefore, you are all hereby summoned to appear before this Hon'ble Court either in person or through a duly instructed advocate on **28th January 2025 at 11.A.M.** to answer the claim of the plaintiff. On your failure to appear before the Hon ble Court on the aforesaid date the case will be decided EXPARTE. Given under my hand and seal of the court on 05-12-2025, Bengaluru.
By Order of the Court
Sd/- Senior Sheristedar
City Civil Court, Bangalore
Advocate for Plaintiff : Mr. S. M. Rudraswamy, Office at No.27, Akshya Complex, 2nd Cross, First Floor, Nagappa Street Palace, Guttahalli, Bengaluru - 560 003. Phone : 9986833635

ದುರಾಡಳಿತದ ಮುಕ್ತಿಗೆ ಹೊಸ ಪಕ್ಷ: ಕೋಡಿಹಳ್ಳಿ

ಬೆಂಗಳೂರು: ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ಗಳ ಲೂಟಿಕೋರ ದುರಾಡಳಿತದಿಂದ ರಾಜ್ಯವನ್ನು ವಿಮೋಚನೆಗೊಳಿಸುವ ಉದ್ದೇಶದೊಂದಿಗೆ ಹೊಸ ಪ್ರಾದೇಶಿಕ ರಾಜಕೀಯ ಪಕ್ಷವನ್ನು ಸ್ಥಾಪಿಸಲಾಗುತ್ತಿದೆ ಎಂದು ನವ ಕರ್ನಾಟಕ ನಿರ್ಮಾಣ ಆಂದೋಲನದ ಕಾರ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಹುಸಂಖ್ಯಾತ ಕನ್ನಡಿಗರ ಅಪೇಕ್ಷೆಯಂತೆ ವಿವಿಧ ಚಳವಳಿಗಾರರು ಒಂದಾಗಿ ಈ ಪ್ರಾದೇಶಿಕ ಪಕ್ಷವನ್ನು ಸ್ಥಾಪಿಸಿದ್ದಾರೆ. ರಾಜ್ಯದಲ್ಲಿ ಹಿಂದೆ ಹಾಗೂ ಪ್ರಸ್ತುತ ಅಧಿಕಾರದಲ್ಲಿರುವ ರಾಷ್ಟ್ರೀಯ ಪಕ್ಷಗಳ ನೇತೃತ್ವದ ಸರಕಾರಗಳ ಜನವಿರೋಧಿ ಹಾಗೂ ಕೆಟ್ಟ ನೀತಿಗಳ ಪರಿಣಾಮವಾಗಿ ರಾಜ್ಯದ ಜನರು ಬೇಸತ್ತಿದ್ದಾರೆ. ಸಮೃದ್ಧವಾಗಿರುವ ಕರ್ನಾಟಕವನ್ನು ಜಾತೀವಾದಿ, ಕೋಮುವಾದಿ, ರೈತ-ದಲಿತ-ಕಾರ್ಮಿಕ ವಿರೋಧಿ ಆಡಳಿತದಿಂದ ಮುಕ್ತಗೊಳಿಸಬೇಕಾದರೆ, ರಾಜ್ಯದ ಹಿತಾಸಕ್ತಿಗೆ ಸಂಪೂರ್ಣವಾಗಿ ಬದ್ಧವಾಗಿರುವ ನಮ್ಮದೇ ಆದ ಪ್ರಾದೇಶಿಕ ಪಕ್ಷ ಅಗತ್ಯವಾ ಗಿದೆ. ಅದೇ ಕಾರಣದಿಂದ ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಅವರ ನೇತೃತ್ವದಲ್ಲಿ ಈ ಹೊಸ ಪಕ್ಷವನ್ನು ಸ್ಥಾಪಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಪಕ್ಷದ ಜನತಾ ಪ್ರಣಾಳಿಕೆ ಬಿಡುಗಡೆಗೊಳಿಸಿದರು. ಈ ವೇಳೆ ಎಂ.ಗೋಪಿನಾಥ, ಮಾರಸಂದ್ರ ಮುನಿಯಪ್ಪ, ಡಾ.ದಸ್ತಗಿರಿ ಮುಲ್ಲಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ಕಲಬುರಗಿ, ಬೆಳಗಾವಿ, ಮೈಸೂರು, ಬಾಗಲಕೋಟೆ ಹಾಗೂ ಬೆಂಗಳೂರುಗಳಲ್ಲಿ ಸಭೆ ನಡೆಸಿದ ನಂತರ ಅಂತಿಮಗೊಳಿಸಲಾಗುವುದು. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನಲ್ಲಿರುವ ಅನೇಕರು ನನ್ನ ಸಂಪರ್ಕದಲ್ಲಿದ್ದು, ಪಕ್ಷದ ಹೆಸರು ಮತ್ತು ಚಿಹ್ನೆ ಘೋಷಿಸಿದರೆ ಹೊಸ ಪಕ್ಷಕ್ಕೆ ಬೆಂಬಲ ನೀಡಲು ಸಿದ್ಧರಾಗಿದ್ದಾರೆ.

-ಸಿ.ಎಂ. ಇಬ್ರಾಹಿಂ, ಕೇಂದ್ರದ ಮಾಜಿ ಸಚಿವ

ಗಂಡ, 12 ವರ್ಷದ ಕಂದನ ಬಿಟ್ಟು ಹೊಸ ಪ್ರೇಮಿ ಪೊಲೀಸಪ್ಪನ ಜತೆ ಮಹಿಳೆ ಪರಾರಿ

ಮೊದಲ ಪತಿಗೆ ಸುಣ್ಣ, ಎರಡನೇ ಪತಿಗೆ ಗುನ್ನಾ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಟ್ಟಿಕೊಂಡು ಗಂಡನ ಬಿಟ್ಟು, ಪ್ರೀತಿಸಿದವರ ಮದುವೆಯಾಗಿ ಕೊನೆಗೆ ಅವನೂ ಬೇಡವೆಂದು ತನ್ನ 12 ವರ್ಷದ ಕಂದಮ್ಮನ ಅನಾಥ ಮಾಡಿ ಪೊಲೀಸಪ್ಪನ ಜತೆ ನಾರಿಯೋರ್ವಳು ಪರಾರಿ ಆಗಿದ್ದಾಳೆ!

ಅಪರಾಧ ಸುದ್ದಿಗಳು

ಹೌದು, ಈ ಪ್ರಕರಣ ನಡೆದಿರುವುದು ಬೆಂಗಳೂರಿನ ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದಲ್ಲಿ ಮೋನಿಕಾ ಎಂಬುವವರು ಇಂತಹ ಕೃತ್ಯ ನಡೆಸಿದ್ದಾರೆ. ಆಕೆ ಮೂಲತಃ ಮೈಸೂರಿನ ರೀಲ್ಸ್ ರಾಣಿ. ಮೈತುಂಬಾ ಮೇಕಪ್ ಹಾಕಿಕೊಂಡು ರೀಲ್ಸ್ ಮಾಡುವುದೇ ಆಕೆಯ ಕಾಯಕ. ಮೊದಲನೇ ಪತಿಗೆ ಗುಡ್‌ಬೈ ಹೇಳಿದ್ದ ಈಕೆ, 15 ವರ್ಷಗಳ ಹಿಂದೆ ಪ್ರೀತಿಸಿದ ಪ್ರಿಯಕರನ ಕೈಹಿಡಿದ್ದಳು. ಸಾಕ್ಷಿ ಎನ್ನುವಂತೆ 12 ವರ್ಷದ ಮಗನಿದ್ದಾನೆ. ಈಗ ಮಗ ಹಾಗೂ ಗಂಡನ ಬಿಟ್ಟು, 'ಕನಸೋ ಇದು, ನನಸೋ ಇದು' ಎಂದಿದ್ದಾಳೆ.

ಇನ್ನು ಪೊಲೀಸನ ಹೆಸರು ರಾಘವೇಂದ್ರ. ಮೂಲತಃ ಉತ್ತರ ಕರ್ನಾಟಕದವನು. ಬೆಂಗಳೂರಿನ ಎಚ್‌ಎಸ್‌ಆರ್‌ಲೇಔಟ್ ಠಾಣೆಯ ಹೊಯ್ಸಳ ಚಾಲಕ. ಈತನಿಗೂ ಮದುವೆಯಾಗಿ ಮಗು ಇದೆ. ರೀಲ್ಸ್ ಮಾಡುತ್ತಿದ್ದ ಮೋನಿಕಾ, ಕಳೆದ ಜೂನ್‌ನಲ್ಲಿ ಇನ್‌ಸ್ಟಾಗ್ರಾಮ್ ಮೂಲಕ ಪರಿಚಯ ಮಾಡಿಕೊಂಡಿದ್ದಾಳೆ. ಪರಿಚಯ ಸ್ನೇಹಕ್ಕೆ ತಿರುಗಿ, ಪ್ರೀತಿಯೂ ಆಗಿದೆ. ಕಳೆದ ಎರಡ್ಮೂರು ತಿಂಗಳಿನಿಂದ ಪ್ರೀತಿ-ಪ್ರೇಮದಲ್ಲಿ ತೇಲಾಡಿದ್ದಾಳೆ. ನೀನೇ ಎಲ್ಲಾ, ನೀನಿಲ್ಲದೇ ಏನೂ ಇಲ್ಲ' ಎಂದು ಪೊಲೀಸಪ್ಪನಿಗೆ ಪೋಸ್ಟ್ ಮಾಡಿದ್ದಾಳೆ. ಇದಕ್ಕೆ ಮನಸೋತ ಪೊಲೀಸಪ್ಪ ಕೂಡ ಆಕೆಯ ಕೈ ಹಿಡಿದು ತಿರುಗಾಡಿದ್ದ.

ಇಬ್ಬರ ಮಧ್ಯೆ ಪ್ರೀತಿ ಚಿಗುರುತ್ತಿದ್ದಂತೆಯೇ ಅಂದರೆ ಮೂರು ತಿಂಗಳ ಹಿಂದೆ ಮೋನಿಕಾ, ಠಾಣೆ ಮೆಟ್ಟಿಲೇರಿದ್ದಾಳೆ. ಪ್ರಿಯಕರ ರಾಘವೇಂದ್ರ ಮಾಡಿದ ಪ್ಲಾನ್‌ನಂತೆ, ಚಂದ್ರಲೇಔಟ್ ಠಾಣೆಗೆ ಬಂದು ಗಂಡನ ವಿರುದ್ಧ ದೂರು ಕೊಟ್ಟಿದ್ದಾಳೆ. ನನ್ನ ಜೀವನ ರೂಪಿಸಿಕೊಳ್ಳಲು ನಾನು ಹೋಗುತ್ತಿದ್ದೇನೆ, ನನ್ನ ಗಂಡನಿಗೆ ಕರೆಸಿ ಬುದ್ಧಿ ಹೇಳಿ ಎಂದು ದೂರಿದ್ದಾಳೆ. ದೂರಿನ ಬೆನ್ನಲ್ಲೇ ಚಂದ್ರಲೇಔಟ್ ಪೊಲೀಸರು ಗಂಡನಿಗೆ ಕರೆ ಮಾಡಿ ಕರೆಸಿದ್ದಾರೆ. ಇನ್ನೊಂದು ವಿಚಾರ ಅಂದರೆ ಪೊಲೀಸರಿಗೆ ದೂರು ನೀಡುವವರೆಗೂ ಮೋನಿಕಾಳ ಕಳ್ಳಾಟ ಪತಿಗೆ ಗೊತ್ತೇ ಇರಲಿಲ್ಲ. ಇತ್ತ ಗಂಡ ಠಾಣೆಗೆ ಬರುತ್ತಿದ್ದಂತೆಯೇ ಮನೆಗೆ ಬಂದಾಕೆ, 160 ಗ್ರಾಂ ಚಿನ್ನಾಭರಣ, 1.80 ಲಕ್ಷ ಹಣದೊಂದಿಗೆ ಮನೆಬಿಟ್ಟಿದ್ದಾಳೆ.

ಮಗನ ಕೊಲ್ಲುವುದಾಗಿ ಬೆದರಿಕೆ

ಪೊಲೀಸರ ತನಿಖೆ ಎದುರಿಸಿ ಮೋನಿಕಾಳ ಗಂಡ ಮನೆಗೆ ಬಂದ. ಮನೆಯಲ್ಲಿ ಮೋನಿಕಾ ಇರಲಿಲ್ಲ. ಮೊಬೈಲ್ ಕಾಲ್ ಮಾಡಿದರೆ ಎತ್ತಲಿಲ್ಲ. ಕೊನೆಗೆ ಮೋನಿಕಾಳ ಇನ್‌ಸ್ಟಾಗ್ರಾಮ್ ಓಪನ್ ಮಾಡಿದಾಗ ರಾಘವೇಂದ್ರ ಜತೆ ಮಾತನ್ನಾಡಿರುವ ಚಾಟ್‌ನ ಮಾಹಿತಿ ಸಿಕ್ಕಿದೆ. ಅಸಲಿ ಸತ್ಯ ತಿಳಿದ ಮೋನಿಕಾಳ ಪತಿ ಕೂಡಲೇ ಚಂದ್ರಲೇಔಟ್ ಪೊಲೀಸ್ ಠಾಣೆಗೆ ಬಂದು ದೂರಿದ್ದಾರೆ. ಈ ವಿಚಾರ ಹಿರಿಯ ಅಧಿಕಾರಿಗಳಿಗೆ ಗೊತ್ತಾಗ್ತಿದ್ದಂತೆ ಪೊಲೀಸ್ ರಾಘವೇಂದ್ರನನ್ನು ಅಮಾನತು ಮಾಡಿ ಆದೇಶ ನೀಡಿದ್ದಾರೆ. ಅಮಾನತಾದರೂ ಬುದ್ಧಿ ಕಲಿಯದ ರಾಘವೇಂದ್ರ, ಮೂರ್ನಾಲ್ಕು ತಿಂಗಳ ನಂತರ ಮತ್ತೆ ಕರ್ತವ್ಯಕ್ಕೆ ಹಾಜರಾಗುತ್ತೇನೆ ಎಂದು ಧಿಮಾಕು ತೋರಿಸಿದ್ದಾನೆ. ಅಲ್ಲದೇ, ಮೋನಿಕಾಳ ಪತಿಗೆ ಕೊಲೆ ಬೆದರಿಕೆ ಹಾಕಿದ್ದಾನೆ. ಅಲ್ಲದೇ ಮನೆಯಲ್ಲಿರುವ 12 ವರ್ಷದ ಮಗನನ್ನು ಸಾಯಿಸುವುದಾಗಿ ಹೆದರಿಸಿದ್ದ ಎನ್ನಲಾಗಿದೆ.

ಮುಖ್ಯ ಪೇದೆಯಿಂದ ₹ 25 ಕೋಟಿ ಮೌಲ್ಯದ ಭೂ ಕಬಳಿಕೆ: ಎಫ್‌ಐಆರ್

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿದ್ದುಕೊಂಡೇ ನೆಲಮಂಗಲ ಠಾಣೆ ಹೆಡ್ ಕಾನ್ಸ್‌ಟೇಬಲ್ ಗಿರಿಜೇಶ್ ಕೋಟ್ಯಂತರ ರು. ಮೌಲ್ಯದ ಜಮೀನು ಕಬಳಿಸಿರುವ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗಿದೆ.

ನೆಲಮಂಗಲ ಗ್ರಾಮಾಂತರ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಗಿರಿಜೇಶ್ ವಂಚನೆಗಿಳಿದಿದ್ದು, ನಕಲಿ ದಾಖಲೆಗಳನ್ನು ಸೃಷ್ಟಿಸಿ ಬರೋಬ್ಬರಿ 25 ಕೋಟಿ ರು. ಮೌಲ್ಯದ ಜಮೀನು ಕಬಳಿಸಿರುವುದು ಬಯಲಾಗಿದೆ. ಗಿರಿಜೇಶ್ ವಿರುದ್ಧ ನಕಲಿ ದಾಖಲೆ ತಯಾರಿಸಿ ಜಮೀನು ನೋಂದಣಿ ಮಾಡಿಸಿಕೊಂಡ ಆರೋಪ ಕೇಳಿಬಂದಿದ್ದು, 3 ರಿಂದ 4 ವಂಚಕರು ಸೇರಿ ಒಟ್ಟು 8 ಎಕರೆ ಭೂಮಿ ನೋಂದಣಿ ಮಾಡಿಸಿರುವ ಆಪಾದನೆ ಇದೆ. ಈ ಗ್ಯಾಂಗ್ ಮೂಲ ಮಾಲೀಕನಿಗೆ ಗೊತ್ತಿಲ್ಲದೇ 8 ಎಕರೆ ಭೂಮಿ ಲಪಟಾಯಿಸಿದೆ. ನೆಲಮಂಗಲದ ಹೆಡ್ ಕಾನ್ಸ್‌ಟೇಬಲ್ ಗಿರಿಜೇಶ್ ವಂಚನೆಯ ಮಾಸ್ಟರ್ ಮೈಂಡ್ ಆಗಿದ್ದಾನೆ.

ಹೆಡ್ ಕಾನ್ಸ್‌ಟೇಬಲ್ ಗಿರಿಜೇಶ್ ನಕಲಿ ದಾಖಲೆಗಳನ್ನು ಸೃಷ್ಟಿಸಿ 25 ಕೋಟಿ ರು. ಮೌಲ್ಯದ ಭೂಮಿ ಪರಭಾರೆ ಮಾಡಿಕೊಂಡಿದ್ದಾನೆ. ಈ ಹಿಂದೆ ಗಿರಿಜೇಶ್ ಹಲವು ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಈತನ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದವು. ಅಮಾನತಾಗಿ ಮನೆಯಲ್ಲಿದ್ದರೂ ಬುದ್ಧಿ ಕಲಿಯದೇ ಮತ್ತೆ ಮತ್ತೆ ಅದೇ ಕೆಲಸ ಮಾಡುತ್ತಿದ್ದಾನೆ. ಪೊಲೀಸ್ ಗ್ಯಾಂಗ್ ಮೂಲ ಮಾಲೀಕನಿಗೆ ಗೊತ್ತಿಲ್ಲದೇ 8 ಎಕರೆ ಲಪಟಾಯಿಸಿದ್ದಾರೆ. ಥಾಂಪಿ ಮ್ಯಾಥ್ಯೂ ಎಂಬುವವರು ಡಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ನೆಲಮಂಗಲ ಗ್ರಾಮಾಂತರ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಗಿರಿಜೇಶ್ ಮತ್ತು ಮನೋಜ್, ರೋಹಿಣಿ ಸೇರಿದಂತೆ ಹಲವರ ಮೇಲೆ ಎಫ್‌ಐಆರ್ ಪ್ರಕರಣ ದಾಖಲಾಗಿದೆ.

ಏನಿದು ಪ್ರಕರಣ?

ಥ್ಯಾಂಪಿ ಮ್ಯಾಥ್ಯೂ ಹೆಸರಿನಲ್ಲಿ ನೆಲಮಂಗಲ ತಾಲೂಕಿನ ಸೋಂಪುರ ಹೋಬಳಿ, ಮಾಚನಹಳ್ಳಿ ಗ್ರಾಮದಲ್ಲಿ 8 ಎಕರೆ ಜಮೀನು ಇತ್ತು. ಸದ್ಯ ಈ 8 ಎಕರೆ ಜಮೀನು ಕೆಐಎಡಿಬಿ ವಶಪಡಿ ಸಿಕೊಂಡಿದೆ. ಕೆಐಎಡಿಬಿ ಪರಿಹಾರ ಹಣ ಲಪಟಾಯಿಸಲು ಪೊಲೀಸ್ ಗಿರಿ ಜೇಶ್ ಪ್ಲ್ಯಾನ್ ಮಾಡಿದ್ದ. ರಿಜಿಸ್ಟರ್ ಮಾಡಿಕೊ ಡದೇ ಇದ್ದರೂ ಪಹಣಿ ಯಲ್ಲಿ ಗಿರಿಜೇಶ್ ಹಾಗೂ ಇನ್ನಿಬ್ಬರ ಹೆಸರು ಇತ್ತು. ಪಹಣಿ ಯಲ್ಲಿ ಇಬ್ಬರ ಹೆಸರು ಬಂದ ಹಿನ್ನೆಲೆ ಡಾಬಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಬ್‌ನಲ್ಲಿ ಗಲಾಟೆ, ಸಿಬ್ಬಂದಿ ಮೇಲೆ ಉದ್ಯಮಿ ಹಲ್ಲೆ

ಬೆಂಗಳೂರು: ಬೆಂಗಳೂರು ನಗರದ ಲ್ಯಾಂಗ್ಫೋರ್ಡ್ ರಸ್ತೆಯಲ್ಲಿರುವ ನಟಿ ಶಿಲ್ಪಾಶೆಟ್ಟಿ ಒಡೆತನದ ಬ್ಯಾಸ್ಟಿಯನ್ ಪಬ್‌ನಲ್ಲಿ ಗಲಾಟೆ ನಡೆದಿದೆ.

ಗುರುವಾರ ರಾತ್ರಿ 1.30 ಸುಮಾರಿಗೆ ಈ ಘಟನೆ ನಡೆದಿದೆ. ಪಬ್‌ನಲ್ಲಿ ಸರ್ವಿಸ್ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಿದೆ. ಈ ವೇಳೆ ಸಿಬ್ಬಂದಿ ಹಾಗೂ ಉದ್ಯಮಿ ಸತ್ಯ ನಾಯ್ಡು ನಡುವೆ ವಾಗ್ವಾದ ನಡೆದು, ಪಬ್ ಸಿಬ್ಬಂದಿಯ ಮೇಲೆ ಹಲ್ಲೆ ಮಾಡಿದ್ದಾರೆ. ಇನ್ನು ಗಲಾಟೆಯ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ. ಇದೀಗ ಪೊಲೀಸರು ಸ್ವತಃ ಪಬ್‌ಗೆ ಬಂದು ಮಾಹಿತಿ ಕಲೆಹಾಕಿದ್ದಾರೆ. ಕಬ್ಬನ್ ಪಾರ್ಕ್ ಠಾಣೆ ಪೊಲೀಸರಿಗೆ ಈ ಗಲಾಟೆ ಬಗ್ಗೆ ವಿಡಿಯೋವೊಂದು ಸಿಕ್ಕಿದೆ, ಅದರ ಆಧಾರ ಮೇಲೆ ತನಿಖೆ ನಡೆಸಿದ್ದಾರೆ. ಇನ್ನು ಉದ್ಯಮಿ ಸತ್ಯ ನಾಯ್ಡು ಅವರನ್ನು ಮಾಜಿ ಬಿಗ್‌ಬಾಸ್ ಸ್ಪರ್ಧಿ ಮತ್ತು ನಿರೂಪಕಿಯ ಮಾಜಿ ಪತಿ ಎಂದು ಹೇಳಲಾಗಿದೆ. ಪಬ್ ಮುಚ್ಚುವ ಸಮಯದಲ್ಲಿ ಈ ಗಲಾಟೆ ನಡೆದಿದೆ. ಪಬ್‌ನಲ್ಲಿ ಸರ್ವಿಸ್ ನೀಡುವ ವಿಚಾರಕ್ಕೆ ಸತ್ಯ ನಾಯ್ಡು ಸಿಬ್ಬಂದಿಗಳ ಮೇಲೆ ಸಿಟ್ಟಾಗಿದ್ದಾರೆ. ಈ ವೇಳೆ ಸಿಬ್ಬಂದಿಗಳು ತುಂಬಾ ತಾಳ್ಮೆಯಿಂದ, ಅವರನ್ನು ಸಮಾಧಾನ ಮಾಡಲು ಮುಂದಾಗಿದ್ದಾರೆ. ಆದರೆ ಸತ್ಯ ನಾಯ್ಡು ಮಾತು ಕೇಳದೆ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದಾರೆ.

ಈ ಘಟನೆಯ ವೇಳೆ ಸತ್ಯ ನಾಯ್ಡು ಅತಿಯಾಗಿ ಮದ್ಯಪಾನ ಮಾಡಿದ್ದರು ಎಂದು ಹೇಳಲಾಗಿದೆ. ಸಿಬ್ಬಂದಿ ಮೇಲೆ ಹಲ್ಲೆ ಮಾಡು ವುದನ್ನು ತಡೆಯಲು ಪಬ್‌ನ ಬೌನ್ಸರ್‌ಗಳು ಪ್ರಯತ್ನಿಸಿದ್ದಾರೆ. ಇನ್ನು ಈ ಬಗ್ಗೆ ಪೊಲೀಸರು ಯಾವುದೇ ದೂರು ದಾಖಲಿಸಿ ಕೊಂಡಿಲ್ಲ ಎಂದು ಹೇಳಲಾಗಿದೆ. ಇದೀಗ ಈ ಪ್ರಕರಣಕ್ಕೆ ಸಂಬಂಧಿ ಸಿದಂತೆ ಪೊಲೀಸರು ಸ್ಥಳಕ್ಕೆ ಧಾವಿಸಿ ವಿಚಾರಣೆ ನಡೆಸಿದ್ದಾರೆ. ಇನ್ನು ಈ ಗಲಾಟೆಯ ಬಗ್ಗೆ ವಿಡಿಯೋವೊಂದು ಸಿಕ್ಕಿದೆ. ಅದರ ಆಧಾರ ಮೇಲೆ ತನಿಖೆ ನಡೆಸಲು ಮುಂದಾಗಿದ್ದಾರೆ.

केनरा बैंक Canara Bank
(A Government Of India Undertaking)
Head Office: Bangalore

ಕೆನರಾ ಬ್ಯಾಂಕ್
ಪ್ರಾದೇಶಿಕ ಕಚೇರಿ: ಬೆಂಗಳೂರು ದಕ್ಷಿಣ, ಮೊದಲ ಮಹಡಿ, 19 ಸೌತ್ ಎಂಡ್ ರಸ್ತೆ, ಬಸವನಗುಡಿ, ಬೆಂಗಳೂರು - 560004. ಇಮೇಲ್- recblrr02@canarabank.com

ವಾಹನದ ಹರಾಜು ಮಾರಾಟದ ಸೂಚನೆ

ಕೆನರಾ ಬ್ಯಾಂಕ್, ಬೆಂಗಳೂರು ಇವರಿಂದ ಹರಾಜು ಮಾಡಲು ಕೆಳಗೆ ನಮೂದಿಸಿದ ವಾಹನಗಳ ಖರೀದಿಗಾಗಿ ಸಾರ್ವಜನಿಕರಿಗೆ ಆಹ್ವಾನಿಸಲಾಗಿದೆ. ಕೆನರಾ ಬ್ಯಾಂಕ್‌ನ ಬೆಂಗಳೂರು ಇವರು ಈ ಮೂಲಕ ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಜಾಮೀನುದಾರರಿಗೆ ಈ ಕೆಳಗೆ ವಿವರಿಸಿದ ಚರ ಆಸ್ತಿ/ಗಳು ಸುರಕ್ಷಿತರ ಸಾಲಗಾರರಿಂದ ಹೈಪೋಥೆಕೇಟ್ ಮಾಡಲಾಗಿದ್ದು, ಅದರ ಭೌತಿಕ ಸ್ವಾಧೀನವನ್ನು ಅಧಿಕೃತ ಅಧಿಕಾರಿಯವರಿಗೆ ನೀಡಲಾಗಿದೆ. ಈ ಕೆಳಗೆ ನಮೂದಿಸಿರುವ ಬಾಕಿಗಳ ವಸೂಲಾತಿಗಾಗಿ ದಿನಾಂಕ: 30/12/2025ರಂದು **"ಎಲ್ಲಿ ಯಾವ ಸ್ಥಿತಿಯಲ್ಲಿದೆಯೋ ಹಾಗೆ", "ಏನಿದೆಯೋ ಹಾಗೆ"** ಮತ್ತು **"ಯಾವ ರೀತಿಯಲ್ಲೆ ಇರಲಿ"** ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರ ಹೆಸರು, ವಿಳಾಸ ಮತ್ತು ಶಾಖೆಯ ಹೆಸರು	ಬಡ್ಡಿಯೊಂದಿಗೆ ಹೊಣೆಗಾರಿಕೆ	ವಾಹನದ ವಿವರಣೆ	ವಾಹನಗಳ ಮಾದರಿ	ನೊಂದಣಿ ಸಂಖ್ಯೆ	ಮೀಸಲು ಬೆಲೆ	ಇಎಂಡಿ ಮೊತ್ತ
1	**ಅಶ್ವಥ್ ಕುಮಾರ್ ಕೆ.ವಿ. ಬಿನ್ ವಾಸುದೇವ ಮೂರ್ತಿ ಕೆ.ಎಸ್.**, ನಂ.22, ಭೆಲ್ ಲೇಔಟ್ ಉತ್ತರ ಪಟ್ಟಣಗೆರೆ ರಾಜರಾಜೇಶ್ವರಿ ನಗರ ಬೆಂಗಳೂರು ಕರ್ನಾಟಕ 560098. **ಬೆಂಗಳೂರು ಆರ್ ಆರ್ ನಗರ ಬೆಮ್ಲ್ ಲೇಔಟ್ (10655)**	**11.12.2025** Rs. 18,49,335.87	HYUNDAI CRETA S+SE	DIESEL/ 2023	KA41 ME1821	Rs. 12,42,000/-	Rs. 1,24,200/-
2	**ಅಶೋಕ್ ದೇವಲಾಪುರ ಪುರುಷೋತ್ತಮ್** #1, 1ನೇ ಮೇನ್, 4ನೇ ಕ್ರಾಸ್, ದೃನಿಧಿ ಲೇಔಟ್, ಜೆ.ಪಿ. ನಗರ 7ನೇ ಹಂತ ಬೆಂಗಳೂರು ಕರ್ನಾಟಕ 560062. **ಬೆಂಗಳೂರು ಜೆಪಿ ನಗರ [10484]**	**11.12.2025** Rs. 8,57,747.90	MARUTI SUZUKI INDIA LTD SWIFT VXI	PETROL/ 2023	KA05 NG8797	Rs. 4,64,000/-	Rs. 46,400/-
3	**ಭಾನುನಂದನ್ ಸಿ.**, 296, 2ನೇ ಮೈನ್, 3ನೇ ಕ್ರಾಸ್, ಗಂಗಾನದಿರಸ್ತೆ, ಶ್ರೀನಗರ, ಬೆಂಗಳೂರು. ಕರ್ನಾಟಕ-560050. **ಬೆಂಗಳೂರು ಬಸವನಗುಡಿ [00403]**	**11.12.2025** Rs. 4,74,183.07	FORCE TRAVELLER D1 HR BSMI L 12 D	DIESEL/ 2016	KA41 C0075	Rs. 4,50,000/-	Rs. 45,000/-
4	**ಡಾ ಅರುಣ್ ಕುಮಾರ್ ಕೆ.ಎಸ್.** ನಂ.12, ಸುಬ್ರಹ್ಮಣ್ಯ ನಿಲಯ, 5ನೇ ಎ ಮುಖ್ಯ ರಸ್ತೆ ಓಬಳಪ್ಪ ಗಾರ್ಡನ್ ಬೆಂಗಳೂರು. ಕರ್ನಾಟಕ-560070 **ಬೆಂಗಳೂರು ಯಡಿಯೂರು [00884]**	**11.12.2025** Rs. 5,32,963.93	MARUTI SUZUKI INDIA LTD SWIFT	DIESEL/ 2018	KA05 MZ5908	Rs. 3,42,000/-	Rs. 34,200/-
5	**ಪ್ರಮೋದ್ ಕುಮಾರ್ ಎಸ್.**, ನಂ.36/37, ಕೆ. ಕೃಷ್ಣಪ್ಪ ರಸ್ತೆ, ಪಟಾಲಮ್ಮ ದೇವಸ್ಥಾನದ ಹತ್ತಿರ, ಕೆಂಚಿಗಯ್ಯನ ದೊಡ್ಡಿ ಬನ್ನೇರುಘಟ್ಟ ಬೆಂಗಳೂರು. ಕರ್ನಾಟಕ-560083 **ಬೆಂಗಳೂರು ಲಾಲ್‌ಬಾಗ್ ಪಶ್ಚಿಮ [00684]**	**11.12.2025** Rs. 3,47,099.39	MAHINDRA VERITO D 401BS4	DIESEL/ 2016	KA51 D8521	Rs. 35,100/-	Rs. 3,510/-

ಇ-ಹರಾಜು ದಿನಾಂಕ: 30/12/2025

1. ಮೇಲೆ ತಿಳಿಸಲಾದ ಅರ್ನೆಸ್ಟ್ ಹಣದ ಠೇವಣಿಯನ್ನು **29/12/2025 ರ ಸಂಜೆ 5:00 ಗಂಟೆ** ಅಥವಾ ಅದಕ್ಕಿಂತ ಮೊದಲು ಠೇವಣಿ ಮಾಡಬೇಕು. ಇಎಂಡಿ ಮೊತ್ತವನ್ನು **ಕೆನರಾ ಬ್ಯಾಂಕ್, ಬೆಂಗಳೂರು** ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ (DD) ಮೂಲಕ ಅಥವಾ ಆನ್‌ಲೈನ್ ಮೂಲಕ (RTGS/ NEFT) **ಜಿಎಲ್ ಖಾತೆ ಸಂ. 209272434, ಶಾಖೆ: ಸೌತ್ ಎಂಡ್ ರೋಡ್, ಐಎಫ್‌ಎಸ್‌ಸಿ ಕೋಡ್: CNRB0001173** ಗೆ ಪಾವತಿಸಬೇಕು.
2. **ದಿನಾಂಕ: 30.12.2025 ರಂದು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯೊಳಗೆ** ವಾಹನಗಳ ಇ-ಹರಾಜು ನಡೆಯಲಿದ್ದು ಹೆಚ್ಚಿನ ವಿವರಗಳಿಗಾಗಿ ಸೇವಾ ಪೂರೈಕೆದಾರರ ವೆಬ್‌ಸೈಟ್ **M/s PSBAllianance(eBkray)**ರ ಮೂಲಕ ಮಾಹಿತಿ ತಿಳಿಯಬಹುದು. ಹೆಚ್ಚುವರಿ ಮೌಲ್ಯ **ರೂ.5,000/-** ಆಗಿರುತ್ತದೆ.
3. ಆಸಕ್ತ ಬಿಡ್ಡುದಾರರು ಬಿಡ್ ಸಲ್ಲಿಸುವ ಮೊದಲು ವಾಹನಗಳನ್ನು ಪರಿಶೀಲಿಸುವುದು ಮತ್ತು ತೃಪ್ತಿಪಡಿಸುವುದು ಅವರ ಜವಾಬ್ದಾರಿಯಾಗಿದೆ.
4. ಉದ್ದೇಶಿತ ಬಿಡ್ಡುದಾರರು ಬಿಡ್ ಅರ್ಜಿಯೊಂದಿಗೆ KYC ದಾಖಲೆಗಳನ್ನು ಸಲ್ಲಿಸಬೇಕು.
5. ಯಶಸ್ವಿ ಬಿಡ್ಡುದಾರರು ಇ-ಹರಾಜಿನ ದಿನಾಂಕದಿಂದ 3 ದಿನಗಳೊಳಗೆ ಬಾಕಿ ಮೊತ್ತವನ್ನು ರವಾನೆ ಮಾಡಬೇಕು. ಇಲ್ಲದಿದ್ದರೆ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಯಾವುದೇ ಸಂದರ್ಭದಲ್ಲೂ ಮರುಪಾವತಿ ಮಾಡಲಾಗುವುದಿಲ್ಲ.
6. ಯಾವುದೇ ಕಾರಣವನ್ನು ನೀಡದೆ ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದುಗೊಳಿಸುವ ಅಥವಾ ಬದಲಾಯಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ..
7. ಹೆಚ್ಚಿನ ವಿವರಗಳಿಗಾಗಿ, **ಬ್ರಿಜೇಶ್ ಕುಮಾರ್ ಪಾಠಕ್ (ಅಧಿಕೃತ ಅಧಿಕಾರಿ ಮತ್ತು ಅವರ ತಂಡದ CO/RO/ಶಾಖೆ, ದೂರವಾಣಿ ಸಂಖ್ಯೆ. ಮೊಬೈಲ್ (8334999471/7483935007/7004591142) ಅವರನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸೇವಾ ಪೂರೈಕೆದಾರ Baanknet (M/s ಪಿಎಸ್‌ಬಿ ಅಲೈಯನ್ಸ್ ಪ್ರೈ. ಲಿಮಿಟೆಡ್), (ಸಂಪರ್ಕ ಸಂಖ್ಯೆ. 7046612345/6354910172/ 8291220220/9892219848/ 8160205051, ಇಮೇಲ್: support.BAANKNET@psballiance.com./ support.ebkray@procure247.com).**

ಸ್ಥಳ: ಬೆಂಗಳೂರು
ದಿನಾಂಕ: 12.12.2025

ಸಹಿ/- ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್
ಪ್ರಾದೇಶಿಕ ಕಚೇರಿ ದಕ್ಷಿಣ, ಬೆಂಗಳೂರು.

ಉದ್ಯಮಿಗೆ ಫೈರಿಂಗ್: ಆರೋಪಿ ಸೆರೆ

ಬೆಂಗಳೂರು: ಉದ್ಯಮಿಯ ಮೇಲೆ ಏರ್‌ಗನ್‌ನಿಂದ ಫೈರಿಂಗ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವನಗುಡಿ ಪೊಲೀಸರು ಆರೋಪಿಯನ್ನು ಬಂಧಿಸಲಾಗಿದೆ.

ಅಫ್ಜಲ್ ಬಂಧಿತ ಆರೋಪಿ. ಪೊಲೀಸರು ಈಗ ಅಫ್ಜಲ್‌ನನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಡಿ. 10ರ ರಾತ್ರಿ 8:30ರ ಸುಮಾರಿಗೆ ಕೃಷ್ಣರಾವ್ ಪಾರ್ಕ್‌ನಲ್ಲಿ ವಾಕಿಂಗ್ ಮಾಡುತ್ತಿದ್ದ ರಾಜ್ ಗೋಪಾಲ್ ಅವರ ಮೇಲೆ ಫೈರಿಂಗ್ ನಡೆದಿತ್ತು. ತನಿಖೆಗೆ ಇಳಿದ ಪೊಲೀಸರಿಗೆ ನರ್ತಕಿ ಹಾಗೂ ಕಾರ್ಗಿಲ್ ಬಾರ್ ಮಾಲೀಕ ರಾಜಗೋಪಾಲ್ ಅವರಿಗೆ ಯಾವುದೇ ಬೆದರಿಕೆ ಇಲ್ಲದ ವಿಚಾರ ಗೊತ್ತಾಗಿದೆ. ಬೆದರಿಕೆ ಇಲ್ಲದೇ ಇದ್ದರೂ ಏರ್‌ಗನ್‌ನಿಂದ ಶೂಟ್ ಹೇಗಾಯಿತು.? ಯಾರಾದರೂ ಹತ್ಯೆಗೆ ಸಂಚು ರೂಪಿಸಿದರಾ? ಟಾರ್ಗೆಟ್ ಮಾಡಿ ಹೊಡೆಯಲು ಯಾರಾದರೂ ಮುಂದಾದರಾ ಎಂಬ ಪ್ರಶ್ನೆ ಎದ್ದಿತ್ತು. ಈ ಎಲ್ಲ ಆಯಮಗಳ ತನಿಖೆಗೆ ಇಳಿದರೂ ಯಾವುದೇ ಖಚಿತತೆ ಇರಲಿಲ್ಲ. ಹೀಗಾಗಿ ಬುಲೆಟ್ ಎಲ್ಲಿಂದ ಹಾರಿ ಬಂದಿದೆ ಎಂಬುದರ ಜಾಡು ಹಿಡಿದು ಪೊಲೀಸರು ತನಿಖೆ ಆರಂಭಿಸಿದರು. ಈ ವೇಳೆ ಹೊರಗಿನಿಂದ ಗುಂಡು ಬಂದಿರಬಹುದು ಎಂಬ ಅನುಮಾನದ ಹಿನ್ನೆಲೆಯಲ್ಲಿ ಗುಂಡು ಬಂದ ಕಡೆಯ ಫ್ಲ್ಯಾಟ್‌ಗಳ ಪರಿಶೀಲನೆಗೆ ಮುಂದಾದರು. ಪರಿಶೀಲನೆ ವೇಳೆ ಅಫ್ಜಲ್ ಇರುವ ಫ್ಲ್ಯಾಟ್‌ನಿಂದ ಫೈರ್ ಆಗಿರುವುದು ಪತ್ತೆಯಾಗಿದೆ. ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಾನು ಕಾನೂನು ಪದವಿ ಓದುತ್ತಿದ್ದೇನೆ. ಮನೆಯಲ್ಲಿ ಏರ್‌ಗನ್‌ನಿಂದ ಶೂಟಿಂಗ್ ಅಭ್ಯಾಸ ಮಾಡುತ್ತಿದ್ದೇನೆ. ಅಭ್ಯಾಸ ಮಾಡುತ್ತಿದ್ದಾಗ ಗುರಿ ತಪ್ಪಿ ಕಿಟಕಿಯಿಂದ ಹೊರ ಹೋಗಿದೆ ಎಂದು ಅಫ್ಜಲ್ ಹೇಳಿದ್ದಾನೆ. ರಾಜ್‌ಗೋಪಾಲ್ ಅವರು ಸ್ನೇಹಿತರನ್ನು ಭೇಟಿಯಾಗಲು ಪಾರ್ಕ್‌ಗೆ ಬಂದು ವಾಕಿಂಗ್ ಮಾಡುತ್ತಿದ್ದರು. ಗುಂಡೇಟಿನಿಂದ ಗಾಯವಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಗ್ರ್ಯಾಮಿ ಪ್ರಶಸ್ತಿ ವಿಜೇತ ರಿಕಿ ಕೇಜ್ ಮನೆಯಲ್ಲಿ ಕಳ್ಳತನ: ವಿಡಿಯೊ ಸೆರೆ

ಬೆಂಗಳೂರು: ಗ್ರ್ಯಾಮಿ ಪ್ರಶಸ್ತಿ ವಿಜೇತ, ಸಂಗೀತಗಾರ ರಿಕಿ ಕೇಜ್ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಝುಮಾಟೊ ಡೆಲಿವರಿ ಬಾಯ್ ಈ ಕೃತ್ಯವನ್ನು ಎಸಗಿದ್ದಾರೆ ಎಂದು ಹೇಳಿದ್ದಾರೆ.

ಈ ಬಗ್ಗೆ ರಿಕಿ ಕೇಜ್ ತಮ್ಮ ಮನೆಯ ಸಿಸಿಟಿವಿಯಲ್ಲಿ ಸೆರೆ ಯಾದ ವಿಡಿಯೋವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಜತೆಗೆ ಈ ಪೋಸ್ಟ್ ಅನ್ನು ಬೆಂಗಳೂರು ಪೊಲೀಸರಿಗೆ ಟ್ಯಾಗ್ ಮಾಡಿದ್ದಾರೆ.

ಮನೆಯ ಹೊರಗಡೆ ಇರುವ ಸಂಪ್ ಕವರ್ ಕಳ್ಳತನ ಮಾಡಲಾಗಿದೆ ಎಂದು ಟ್ವಿಟರ್‌ನಲ್ಲಿ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ. ಈ ಬಗ್ಗೆ ಸಿಟಿ ಪೊಲೀಸರಿಗೂ ದೂರು ನೀಡಿದ್ದಾರೆ. ರಿಕಿ ಕೇಜ್ ಅವರು ಈ ಪೋಸ್ಟ್‌ನಲ್ಲಿ ತಮ್ಮ ನಿವಾಸದ ಸಿಸಿಟಿವಿ ದೃಶ್ಯಾವಳಿ ಜತೆಗೆ ಬೆಂಗಳೂರಿನಲ್ಲಿ ನಡೆಯುವ ಕಳ್ಳತನದ ಬಗ್ಗೆಯೂ ಹೇಳಿದ್ದಾರೆ. ಇನ್ನು ರಿಕಿ ಕೇಜ್ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ ಕಳ್ಳರನ್ನು ಮತ್ತೆ ಮಾಡಲು ಸಹಾಯ ಮಾಡಿ ಎಂದು ಮನವಿ ಮಾಡಿದ್ದಾರೆ. ಇದರ ಜತೆಗೆ ಜನರಿಗೂ ಎಚ್ಚರದಿಂದ ಇರುವಂತೆ ಹೇಳಿದ್ದಾರೆ. ಬೆಂಗಳೂರಿನಲ್ಲಿ ಇಂತಹ ಘಟನೆಗಳು ಹೆಚ್ಚು ನಡೆಯುತ್ತಿದೆ, ಜಾಗರೂಕರಾಗಿರಿ ಎಂದು ಹೇಳಿದ್ದಾರೆ. ಈ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ. ನೆಟ್ಟಿಗರು ಕೂಡ ಈ ಕೃತ್ಯ ಮಾಡಿದವರನ್ನು ತಕ್ಷಣವೇ ಪತ್ತೆ ಮಾಡುವಂತೆ ಒತ್ತಾಯ ಮಾಡಿದ್ದಾರೆ.

ಸಮಾಚಾರ ಸಣ್ಣದಲ್ಲ

ರಾಜ್ಯಾದ್ಯಂತ ಶೀತಗಾಳಿ, ಚಳಿ ಇನ್ನಷ್ಟು ಹೆಚ್ಚಳ

ಬೆಂಗಳೂರು: ರಾಜ್ಯಾದ್ಯಂತ ದಿನದಿಂದ ದಿನಕ್ಕೆ ಚಳಿಯ ತೀವ್ರತೆ ಹೆಚ್ಚುತ್ತಿದ್ದು, ಜನರು ಬೆಚ್ಚನೆಯ ಬಟ್ಟೆ ಧರಿಸಿದರೂ ನಡುಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಹವಾಮಾನ ಇಲಾಖೆ ಮಾಹಿತಿ ಪ್ರಕಾರ, ಈ ಚಳಿಯ ಸ್ಥಿತಿ ಮುಂದುವರಿಯುವ ಸಾಧ್ಯತೆಯಿದ್ದು, ಕರ್ನಾಟಕದ ದಕ್ಷಿಣ ಒಳನಾಡಿನ ಭಾಗಗಳಲ್ಲಿಯೂ ಸಹ ಶೀತಗಾಳಿ ಬೀಸುವ ಸಾಧ್ಯತೆ ಇದೆ. ಚಳಿಗಾಲ ಮುಂದುವರೆದಂತೆ ಬೆಂಗಳೂರಿನಲ್ಲಿ ತಾಪಮಾನ ಕಡಿಮೆಯಾಗುವ ನಿರೀಕ್ಷೆಯಿದೆ. ಉತ್ತರ ಒಳನಾಡಿನ ಹಲವಾರು ಜಿಲ್ಲೆಗಳಾದ ಬೀದರ್, ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಕಲಬುರಗಿ, ರಾಯಚೂರು, ವಿಜಯಪುರ ಮತ್ತು ಯಾದಗಿರಿಗಳಲ್ಲಿ ಮುಂದಿನ ಕೆಲವು ದಿನಗಳವರೆಗೆ ತೀವ್ರ ಶೀತಗಾಳಿ ಬೀಸಲಿದೆ ಎಂದು ಎಚ್ಚರಿಕೆ ನೀಡಿದೆ. ಕೊಪ್ಪಳ, ಬಳ್ಳಾರಿ, ವಿಜಯನಗರ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿಕ್ಕಬಳ್ಳಾಪುರ ಮತ್ತು ಕೋಲಾರದಂತಹ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿಯೂ ಶೀತಗಾಳಿ ಬೀಸಲಿದೆ. ಮುಂದಿನ 5 ದಿನಗಳವರೆಗೆ ರಾಜ್ಯದಲ್ಲಿ ಶೀತ ವಾತಾವರಣ ಮುಂದುವರಿಯಲಿದ್ದು, ಬೆಂಗಳೂರಿನಲ್ಲಿ 12.9 ಸೆಲ್ಸಿಯಸ್ ತಾಪಮಾನವಿದ್ದು ಚಳಿ ಹೆಚ್ಚಾಗಲಿದೆ. ಮುಂದಿನ ಐದು ದಿನಗಳವರೆಗೆ ಶೀತ ಹವಾಮಾನ ಮುಂದುವರಿಯುವ ನಿರೀಕ್ಷೆಯಿದೆ, ಉತ್ತರ ಒಳನಾಡಿನ ಕರ್ನಾಟಕದ ಹಲವಾರು ಜಿಲ್ಲೆಗಳು ಶೀತ ಅಲೆಯಂತಹ ಪರಿಸ್ಥಿತಿಯನ್ನು ಅನುಭವಿಸುವ ಸಾಧ್ಯತೆಯಿದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಬಳ್ಳಾರಿ ಮತ್ತು ಧಾರವಾಡ ಅತ್ಯಂತ ಶೀತ ವಾತಾವರಣವಾಗಿ ಉಳಿಯಲಿದ್ದು, ತಾಪಮಾನವು ಸಾಮಾನ್ಯಕ್ಕಿಂತ ಗಮನಾರ್ಹವಾಗಿ ಇಳಿಯಲಿದೆ ಶೀತ ಅಲೆ ಯಾವಾಗ ಘೋಷಿಸಲಾಗುತ್ತದೆ ಎಂದು ಬೆಂಗಳೂರಿನ ಐಎಂಡಿಯ ಹಿರಿಯ ವಿಜ್ಞಾನಿ ಸಿ. ಎಸ್. ಪಾಟೀಲ್ ಮಾಹಿತಿ ನೀಡಿದ್ದಾರೆ.

ಪ್ರಾಜೆಕ್ಟ್ ವಾಕಲೂರು 6ನೇ ಆವೃತ್ತಿ ನಡಿಗೆ

ಬೆಂಗಳೂರು: ಪ್ರಾಜೆಕ್ಟ್ ವಾಕಲೂರು ಅಭಿಯಾನದ ನಿಮಿತ್ತ ಶನಿವಾರ ಯಲಹಂಕದಲ್ಲಿ 6ನೇ ಆವೃತ್ತಿಯ ನಡಿಗೆ ಅಭಿಯಾನ ನಡೆದ ಶಾಸಕ ಎಸ್.ಆರ್ ವಿಶ್ವನಾಥ್ ಚಾಲನೆ ನೀಡಿದರು. ಅಭಿಯಾನದಲ್ಲಿ 100 ಕ್ಕೂ ಹೆಚ್ಚು ನಡಿಗೆದಾರರು ಶ್ಲಾಘಿಸಿ, ನಮ್ಮ ಫುಟ್‌ಪಾತ್‌ಗಳು ಬೆಂಗಳೂರಿನಲ್ಲಿಯೇ ಅತ್ಯುತ್ತಮ ಎಂದು ವರ್ಣಿಸಿದರು. 10 ಕಿ.ಮೀ ಫುಟ್‌ಪಾತ್ ವಾಕ್‌ಗೆ ಯಲಹಂಕ ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅವರು ಹೆಚ್ಚುವರಿ ಆಯುಕ್ತ ಮೊಹಮ್ಮದ್ ನಯೀಮ್ ಮೋಮಿನ್, ಜಂಟಿ ಆಯುಕ್ತೆ ಪಲ್ಲವಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಇನ್ನು ಈ ವಾಕ್ ನಲ್ಲಿ ಸ್ಥಳೀಯ ನಿವಾಸಿಗಳು, ಪಾಲಿಕೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ನಗರದ ವಿವಿಧ ಭಾಗಗಳಿಂದ ಬಂದಿದ್ದ ವಿವಿಧ ವಯೋಮಾನದ 100 ಕ್ಕೂ ಹೆಚ್ಚು ನಡಿಗೆದಾರರು ಬಂದಿದ್ದು ವಿಶೇಷವಾಗಿತ್ತು. ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಮಾತನಾಡಿ, ನಾಗರಿಕರು, ದಿ ಅಗ್ಲಿ ಇಂಡಿಯನ್ ತಂಡ, ನಗರ ಪಾಲಿಕೆ ಸಿಬ್ಬಂದಿ ಜಂಟಿ ಪ್ರಯತ್ನ ಮೆಚ್ಚುವಂತದ್ದಾಗಿದೆ. ಇಂತಹ ಸಹಕಾರಿ ಕಾರ್ಯಗಳು ಹೆಚ್ಚು ಜನಪರ ಕಾಳಜಿಯನ್ನು ಪ್ರಚುರಪಡಿಸಿ ಸ್ವಚ್ಛ ಬೆಂಗಳೂರನ್ನು ನಿರ್ಮಿಸಲು ಸಹಕಾರಿಯಾಗಲಿದೆ ಎಂದರು.

ನೂತನ ಉತ್ಪನ್ನ ಬಿಡುಗಡೆ

ಬೆಂಗಳೂರು: ಸ್ವಿಟ್ಜರ್‌ಲ್ಯಾಂಡ್‌ನ 3ಎ ಕಾಂಪೊಸಿಟ್ಸ್ ಸಂಸ್ಥೆ ಉನ್ನತ ಗುಣಮಟ್ಟದ ಅಲ್ಯೂಮಿನಿಯಂ ಕಾಂಪೊಸಿಟ್ ವಸ್ತುಗಳ ಪ್ರಮುಖ ಜಾಗತಿಕ ತಯಾರಕ ಹಾಗೂ ನವೀನತೆಯ ಮುಂಚೂಣಿಯಲ್ಲಿದೆ. ತನ್ನ ಪ್ರಸಿದ್ಧ ಬ್ರಾಂಡ್ ಅಲುಕೊಬಾಂಡ್ ಅಡಿಯಲ್ಲಿ ಮೂರು ದಶಕಗಳ ಕಾಲ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯಾಗಿರುವ ಮುಂದಿನ ತಲೆಮಾರಿನ ಕಾಂಪೊಸಿಟ್ ವಸ್ತು ಅಲುಕೊಬಾಂಡ್ ಉತ್ಪನ್ನವನ್ನು ಭಾರತೀಯ ವಾಸ್ತುಶಿಲ್ಪ ಕ್ಷೇತ್ರದಲ್ಲಿ ವಿಸ್ತರಿಸುವುದಾಗಿ ಘೋಷಿಸಿದೆ. ಎರಡು ಅಲ್ಯೂಮಿನಿಯಂ ಶೀಟ್‌ಗಳ ಮಧ್ಯೆ ಅಲ್ಯೂಮಿನಿಯಂ ಹನಿಕಾಂಬ್ ಕೋರ್ ಇರುತ್ತದೆ, ಇದು ಅದನ್ನು ಬಹಳ ಬಲಿಷ್ಠ ಮತ್ತು ತೂಕದಲ್ಲಿ ಹಗುರವಾಗಿಸುತ್ತದೆ. ಎರಡೂ ಮಾದರಿಗಳು ಭಾರತೀಯ ವಾಸ್ತುಶಿಲ್ಪಿಗಳ ಬದಲಾಗುತ್ತಿರುವ ಅಗತ್ಯಗಳನ್ನು ಗಮನದಲ್ಲಿಟ್ಟು ಅಭಿವೃದ್ಧಿಪಡಿಸಲ್ಪಟ್ಟಿವೆ, ಅದರಿಂದ ಅವರು ಉನ್ನತ ವಿನ್ಯಾಸ, ಸೌಂದರ್ಯ ಮತ್ತು ದೀರ್ಘಕಾಲೀನ ದೃಢತೆ ಹೊಂದಿದ ಆಧುನಿಕ ನಿರ್ಮಾಣಗಳನ್ನು ರಚಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಎರಡು ಕಡೆ ಪ್ಲಾಸ್ಟಿಕ್ ಪಾರ್ಕ್: ಎಂಬಿಪಾ

ಬೆಂಗಳೂರು: ಪ್ಲಾಸ್ಟಿಕ್ ಉದ್ಯಮ ವಲಯದ ಬೆಳವಣಿಗೆಯನ್ನು ಉತ್ತೇಜಿಸಲು ರಾಜ್ಯ ಸರಕಾರ ಮಂಗಳೂರು ಮತ್ತು ವಿಜಯಪುರ ಜಿಲ್ಲೆಯ ಮುಳವಾಡ ಕೈಗಾರಿಕಾ ಪ್ರದೇಶದಲ್ಲಿ 200 ಎಕರೆಯಲ್ಲಿ ಸುಸಜ್ಜಿತ 'ಪ್ಲಾಸ್ಟಿಕ್ ಪಾರ್ಕ್' ಸ್ಥಾಪಿಸಲಿದೆ. ಉದ್ಯಮಿಗಳು ತಮಗೆ ಎಲ್ಲಿ ಬೇಕೋ ಅಲ್ಲಿ ಅರ್ಜಿ ಹಾಕಿಕೊಳ್ಳಬಹುದು. ಸರಕಾರ ತ್ವರಿತವಾಗಿ ಭೂಮಿ ಕೊಡುತ್ತದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಶನಿವಾರ ನಡೆದ ಪ್ಲಾಸ್ಟ್ ಇಂಡಿಯಾ-2026 ಪ್ರದರ್ಶನ ಮೇಳದ ಪೂರ್ವಭಾವಿ ಉದ್ಘಾಟನಾ ಸಮಾವೇಶದಲ್ಲಿ ಮಾತನಾಡಿದ ಅವರು, 12ನೇ ವರ್ಷದ ಅಂತಾರಾಷ್ಟ್ರೀಯ ಸಮಾವೇಶ ಮುಂದಿನ ವರ್ಷ ಫೆ.5ರಿಂದ 10ರವರೆಗೆ ದೆಹಲಿಯ ಭಾರತ ಮಂಟಪದಲ್ಲಿ ನಡೆಯಲಿದೆ. ಈ ವಲಯಕ್ಕೆ ಬೇಕಾದ ಪ್ರತಿಭಾವಂತ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಂಶೋಧನೆಗಾಗಿ ಕೇಂದ್ರೀಯ ಪೆಟ್ರೊಕೆಮಿಕಲ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯು (ಸಿಐಪಿಇಟಿ) ಇಲ್ಲಿ ತನ್ನ ಕ್ಯಾಂಪಸ್ ತೆರೆಯಲಿದೆ.ದ ೇಶದಲ್ಲಿ ಪ್ಲಾಸ್ಟಿಕ್ ಉದ್ಯಮವು 40 ಲಕ್ಷ ಜನರಿಗೆ ಉದ್ಯೋಗ ನೀಡಿದೆ. 15 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ ಎಂದರು.

ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಪ್ರತಿನಿಧಿಗಳೊಂದಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂವಾದ ಕಾರ್ಯಕ್ರಮ

ಸರಕಾರ ಅಪಾರ್ಟ್‌ಮೆಂಟ್ ನಿವಾಸಿಗಳ ಪರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರತಿದಿನ ಬೆಂಗಳೂರಿನಲ್ಲಿ ಸುಮಾರು ಒಂದು ಕೋಟಿ 30 ಲಕ್ಷ ವಾಹನಗಳು ಓಡಾಡುತ್ತಿವೆ. ಇದರಲ್ಲಿ ಶೇ.90 ರಷ್ಟು ವಾಹನಗಳು ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರದ್ದೇ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ 2025 ಕುರಿತು ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳೊಂದಿಗೆ ಶನಿವಾರ ಸಂವಾದ ನಡೆಸಿದ ಅವರು, ದೇಶದ ವಿವಿಧ ಭಾಗಗಳಿಂದ ಜನರು ಉದ್ಯೋಗ, ಶಿಕ್ಷಣ ಹಾಗೂ ಜೀವನಮಟ್ಟದ ಕಾರಣದಿಂದ ಬೆಂಗಳೂರಿಗೆ ಬಂದು ನೆಲೆಸುತ್ತಿದ್ದಾರೆ. ಬೆಂಗಳೂರು ಉತ್ತಮ ಹವಾಮಾನ, ಉತ್ತಮ ಸಂಸ್ಕೃತಿ ಇರುವ ನಗರ. ಸುಮಾರು 2000 ಎನ್‌ಆರ್‌ಐಗಳು ಇಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿ 13 ಸಾವಿರ ಐಟಿ ಉದ್ಯಮಿಗಳು ಇದ್ದರೆ, ಬೆಂಗಳೂರಿನಲ್ಲಿ ಸುಮಾರು 25 ಸಾವಿರ ಐಟಿ ಉದ್ಯಮಿಗಳು ಇದ್ದಾರೆ. ಅವರಲ್ಲಿ ಹೆಚ್ಚಿನವರು ನಿಮ್ಮ ಅಪಾರ್ಟ್‌ಮೆಂಟ್‌ಗಳಲ್ಲೇ ವಾಸಿಸುತ್ತಿದ್ದಾರೆ ಎಂದರು.

ಈ ಸರಕಾರ ಅಪಾರ್ಟ್‌ಮೆಂಟ್ ನಿವಾಸಿಗಳು ಹಾಗೂ ಮನೆ ಖರೀದಿದಾರರ ಪರವಾಗಿ ನಿಲ್ಲುತ್ತದೆ. ಈ ಕಾರಣಕ್ಕೆ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣೆ ವಿಧೇಯಕ 2025ಕ್ಕೆ ಸಂಬಂಧಿಸಿದಂತೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ ಎಂದು ಹೇಳಿದರು.

ಶಾಶ್ವತ ಹೆಜ್ಜೆಗುರುತು ಬಿಡಬೇಕಿದೆ: ಬಹಳ ಉತ್ಸಾಹದಿಂದ ಬೆಂಗಳೂರು ನಗರದ ಇಲಾಖೆ ಜವಾಬ್ದಾರಿ ವಹಿಸಿಕೊಂಡೆ. ಬೆಂಗಳೂರಿನಲ್ಲಿ ಬದಲಾವಣೆ ತರಬೇಕು, ನನ್ನ ಕೆಲಸಗಳ ಮೂಲಕ ನನ್ನ ಹೆಸರು ಶಾಶ್ವತವಾಗಿ ಉಳಿಯಬೇಕು, ಶಾಶ್ವತ ಹೆಜ್ಜೆ ಗುರುತು ಬಿಟ್ಟು ಹೋಗುವ ಆಸೆ ನನಗೆ ಇದೆ. ಬೆಂಗಳೂರಿನ ಸಮಸ್ಯೆ ನಿವಾರಿಸಿ, ನಗರದ ಸ್ವರೂಪ ಬದಲಿಸಲು, ಅನೇಕ ಯೋಜನೆ ಕೈಗೊಂಡಿದ್ದೇವೆ. ಬಹಳ ಅಧ್ಯಯನ ಮಾಡಿ 2 ಟನಲ್ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದೇನೆ. 130 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ ಅನ್ನು 26 ಸಾವಿರ ಕೋಟಿ ರು. ವೆಚ್ಚದಲ್ಲಿ ನಿರ್ಮಿಸುತ್ತಿದ್ದೇವೆ. ಯಾರು ಏನೇ ಟೀಕೆ ಮಾಡಿದರೂ ನಾವು ಈ ಯೋಜನೆ ಮಾಡೇ ಮಾಡುತ್ತೇವೆ. ಪ್ರಧಾನಮಂತ್ರಿಗಳು ಹಾಗೂ ಕೇಂದ್ರ ಸಚಿವ ನಿತೀನ್ ಗಡ್ಕರಿ ಅವರು ಈ ಯೋಜನೆ ಮುಂದುವರಿಸುವಂತೆ ನನಗೆ ತಿಳಿಸಿದ್ದಾರೆ ಎಂದರು.

ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ನಾನು ಸಾಕಷ್ಟು ಅಧ್ಯಯನ ನಡೆಸಿದ ನಂತರ ಟನಲ್ ರಸ್ತೆ ಉತ್ತಮ ಆಯ್ಕೆಯಾಗಿದೆ. ರಸ್ತೆ ಅಗಲೀಕರಣಕ್ಕೆ ನಾವು ಯಾವುದೇ ಕಟ್ಟಡ ಕೆಡವಲು ಆಗುವುದಿಲ್ಲ, 2013ರ ಕಾಯಿದೆಯನುಸಾರ ಆಸ್ತಿ ಮೌಲ್ಯದ ದುಪ್ಪಟ್ಟು ಪರಿಹಾರ ನೀಡಬೇಕು. ಈಗ ಬೆಂಗಳೂರಿನ ಆಸ್ತಿ ಮೌಲ್ಯ ಹೆಚ್ಚಾಗಿದೆ ಎಂದರು. ಟನಲ್ ಯೋಜನೆ ಜತೆಗೆ 40 ಕಿ.ಮೀ ಡಬಲ್ ಡೆಕ್ಕರ್ ಮೇಲ್ಸೇತುವೆ, ಭಾರತದಲ್ಲಿ ಅತಿ ದೊಡ್ಡ ಡಬಲ್ ಡೆಕ್ಕರ್ ಆಗಲಿದೆ. 117 ಕಿ.ಮೀ ಹೊಸ ಮೇಲ್ಸೇತುವೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. 300 ಕಿ.ಮೀ ನಷ್ಟು ಬಫರ್ ರಸ್ತೆ ನಿರ್ಮಾಣ ಮಾಡು ತ್ತಿದ್ದೇವೆ. 5080 ವಿಸ್ತೀರ್ಣದ ವರೆಗಿನ ನಿವೇಶನದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವವರಿಗೆ ಕಟ್ಟಡ ನಕ್ಷೆ ಸುಲಭವಾಗಿ ಅನುಮತಿ ಸಿಗುವಂತೆ ಮಾಡಲು ನಂಬಿಕೆ ನಕ್ಷೆ ಯೋಜನೆ ಜಾರಿಗೆ ತಂದಿ ದ್ದೇವೆ. ಪ್ರೀಮಿಯಮ್ ಎಫ್ಎಆರ್ ಜಾರಿಗೆ ತರಲಾಗಿದೆ. ಇ ಖಾತಾ ವ್ಯವಸ್ಥೆ ಅನುಷ್ಠಾನಗೊಳಿಸಲಾಗಿದೆ. ಹೀಗೆ ಬೆಂಗಳೂರಿನ ಪ್ರಗತಿಗೆ ಅನೇಕ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದಕ್ಕೆ ಸಮಯದ ಅಗತ್ಯವಿದೆ. ಒಂದೇ ದಿನದಲ್ಲಿ ಮ್ಯಾಜಿಕ್ ಮಾಡಲು ಆಗುವುದಿಲ್ಲ. ಇದಕ್ಕೆ ನಿರಂತರ ಪರಿಶ್ರಮ, ಬದ್ಧತೆ, ತಾಳ್ಮೆ ಇರಬೇಕು ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಸಿಗೆ ನೀರೆರೆಯುವ ಮೂಲಕ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಯಾರೆಲ್ಲಾ ಈ ಸಂವಾದ ಕಾರ್ಯಕ್ರಮದಲ್ಲಿ ನಿಮ್ಮ ಸಲಹೆ ನೀಡಲು ಸಾಧ್ಯವಾಗಿಲ್ಲವೋ ಅವರುಗಳು gbuggeiongmil.comಗೆ ನಿಮ್ಮ ಮೇಲ್ ಮಾಡಬಹುದಾಗಿದೆ. 10 ದಿನಗಳಲ್ಲಿ ನಿಮ್ಮ ಸಲಹೆ ಕಳುಹಿಸಿ. ನಾನು ಎಲ್ಲವನ್ನು ಪರಿಶೀಲಿಸುತ್ತೇನೆ. ನಿಮ್ಮ ಸಲಹೆ, ಸಮಸ್ಯೆಗಳನ್ನು ನಾನು ಆಲಿಸಿದ್ದೇನೆ. ನಿಮ್ಮ ಸಲಹೆಗಳು ಅತ್ಯುತ್ತಮವಾಗಿವೆ. ನಿಮ್ಮ ಸಮಸ್ಯೆಗಳ ಬಗ್ಗೆ ಅರಿವಿದೆ. ನಾನೂ ಅಪಾರ್ಟ್‌ಮೆಂಟ್‌ಗಳನ್ನು ಹೊಂದಿದ್ದೇನೆ. ನಿಮ್ಮ ಜತೆ ನಿಂತು, ಸಮಸ್ಯೆ ಪರಿಹರಿಸಲು ಬದ್ಧನಾಗಿದ್ದೇನೆ. ಈ ಸರಕಾರ ನನ್ನದಲ್ಲ, ನಿಮ್ಮದು.

-ಡಿ.ಕೆ.ಶಿವಕುಮಾರ್, ಡಿಸಿಎಂ

ಸರಕಾರಕ್ಕೆ ಎಚ್ಚರಿಕೆ ನೀಡಬೇಡಿ

ಕಿರಣ್ ಹೆಬ್ಬಾರ್ ಎಂಬಾತ ತಾನು ಅಪಾರ್ಟ್‌ಮೆಂಟ್ ಮಾಲೀಕ ಎಂದು ಪತ್ರ ಬರೆದಿದ್ದು, ನಮಗೆ ಬೆದರಿಕೆ ಹಾಕಲು ಮುಂದಾಗಿದ್ದಾನೆ. ನಮ್ಮಲ್ಲಿ ಬಹು ದೊಡ್ಡ ಮತದಾರರ ಸಮೂಹವಿದ್ದು, ಬೆಂಗಳೂರಿನ 1.30 ಕೋಟಿ ಮತದಾರರ ಮೇಲೆ ಪರಿಣಾಮ ಬೀರಬಲ್ಲೆವು. ಸರಕಾರಗಳು ನಮ್ಮನ್ನು ನಿರ್ಲಕ್ಷಿಸಿದ್ದು, ಆಡಳಿತ ಪಕ್ಷ ನಮ್ಮ ಮನವಿ ನಿರ್ಲಕ್ಷಿಸಿದರೆ ಸದ್ಯದಲ್ಲೇ ಜಿಬಿಎ ಚುನಾವಣೆ ಬರುತ್ತಿದೆ ಎಂದು ಪತ್ರದಲ್ಲಿ ಎಚ್ಚರಿಕೆ ನೀಡಿದ್ದಾನೆ. ಈ ದೇಶದ ಪ್ರಧಾನಮಂತ್ರಿ, ಗೃಹ ಸಚಿವರಿಗೆ ಹೆದರದೇ ಜೈಲಿಗೆ ಹೋಗಿ ಬಂದಿರುವವನು ನಾನು. ಅವನ್ಯಾರೋ ಹೆಬ್ಬಾರ್ ಎಂಬುವವನಿಗೆ ಹೆದರುತ್ತೇನೆಯೇ? ಯಾರಿಗೂ ಹೆದರುವ, ಜಗ್ಗುವ ಮಾತೇ ಇಲ್ಲ. ಯಾರೇ ಆಗಲಿ ಯಾರ ಜತೆ ಮಾತನಾಡುತ್ತಿದ್ದೇವೆ ಎಂಬುದರ ಬಗ್ಗೆ ಕನಿಷ್ಠ ಪರಿಜ್ಞಾನ ಇಟ್ಟುಕೊಳ್ಳಬೇಕು ಎಂದು ಕಿಡಿಕಾರಿದರು.

ನಾನು ಇರುವುದು ನಿಮಗಾಗಿ. ನಾನು ನಿಮ್ಮನ್ನು ಕರೆದು ಅಭಿಪ್ರಾಯ ಪಡೆಯುವ ಅಗತ್ಯವಿರಲಿಲ್ಲ. ನಾವು ನಿಮ್ಮ ಮೇಲೆ ಪ್ರೀತಿ ವಿಶ್ವಾಸವಿಟ್ಟು ಕರೆದಿದ್ದೇವೆ. ಗಾಂಧೀಜಿ ಒಂದು ಮಾತು ಹೇಳಿದ್ದಾರೆ. ನಿಮ್ಮನ್ನು ನೀವು ನಿಯಂತ್ರಿಸಬೇಕಾದರೆ ನಿಮ್ಮ ಮೆದುಳನ್ನು ಪ್ರಯೋಗಿಸಿ, ಬೇರೆಯವರನ್ನು ನಿಯಂತ್ರಿಸಬೇಕಾದರೆ ನಿಮ್ಮ ಹೃದಯವನ್ನು ಪ್ರಯೋಗಿಸಿ ಎಂದು. ನಾನು ನನ್ನ ಹೃದಯದಿಂದ ಜನರ ಮನಸ್ಸು ಗೆದ್ದಿದ್ದೇನೆ. ನಾನು ಸತತವಾಗಿ 8 ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದೇನೆ. ಕಳೆದ ಚುನಾವಣೆಯಲ್ಲಿ ನಾನು ಪ್ರಚಾರಕ್ಕೆ ಹೋಗಲಿಲ್ಲ. ವಿರೋಧ ಪಕ್ಷದ ನಾಯಕ ಅಶೋಕ ನನ್ನ ವಿರುದ್ಧ ಸ್ಪರ್ಧಿಸಿದ್ದರೂ ಜನ ನನಗೆ 1.23 ಲಕ್ಷ ಮತಗಳ ಅಂತರದಲ್ಲಿ ಗೆಲ್ಲಿಸಿದ್ದಾರೆ. ಇದು ರಾಜ್ಯದ ಇತಿಹಾಸದಲ್ಲೇ ಅತಿ ದೊಡ್ಡ ಅಂತರದ ಗೆಲುವು ಎಂದು ತಿಳಿಸಿದರು

18.21 ಕೋಟಿ ರು. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಯಲಹಂಕ: ಯಲಹಂಕ ಉಪನಗರ ನಗರ ವ್ಯಾಪ್ತಿಯ ಅಲ್ಲಾಳಸಂದ್ರ, ಮುಖ್ಯ ರಸ್ತೆಯ ಪಾದಚಾರಿ ಮಾರ್ಗ, ಒಳಚರಂಡಿ, ವೈಟ್ ಟ್ಯಾಪಿಂಗ್ ಸೇರಿದಂತೆ 18.21 ಕೋಟಿ ರು. ಅಂದಾಜು ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು ಬೃಹತ್ ಕಾಮಗಾರಿ ನಿರ್ವಹಣೆ ಅನುದಾನದ ಅಡಿಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ಉಪನಗರದ ಅಲ್ಲಾಳಸಂದ್ರದ 13ನೇ 'ಎ' ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ, ಒಳಚರಂಡಿ ಮತ್ತು ವೈಟ್ ಟ್ಯಾಪಿಂಗ್ ಹಾಗೂ ಅಲ್ಲಾಳಸಂದ್ರ ಆರ್.ಓ.ಬಿ. ಯಿಂದ ಅಲ್ಲಾಳಸಂದ್ರ ಕೆರೆ ಮಾರ್ಗವಾಗಿ, 13ನೇ 'ಎ' ಮುಖ್ಯರಸ್ತೆಯಿಂದ 3ನೇ ಅಡ್ಡರಸ್ತೆಯವರೆಗೆ ಪಾದಚಾರಿ ಮಾರ್ಗ, ಒಳಚರಂಡಿ ಮತ್ತು ವೈಟ್ ಟ್ಯಾಪಿಂಗ್ ಸೇರಿದಂತೆ ಸುಮಾರು 18.21ಕೋಟಿ ರು.ಅಂದಾಜು ವೆಚ್ಚದ ಬೃಹತ್ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿ ಸಲಾಗಿದ್ದು, ಯಲಹಂಕ ನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯ ಅನುದಾನ ನೀಡಿ ಸಹಕರಿಸಿರುವ ಸರಕಾರದ ನಡೆಗೆ ಧನ್ಯವಾದ ತಿಳಿಸಿದರು.

ಈ ಸಂದರ್ಭದಲ್ಲಿ ಯಲಹಂಕ ನಗರ ಮಂಡಲ ಬಿಜೆಪಿಯ ವಿ.ಪವನ್, ಮುನಿರಾಜು, ಮಧುಸೂದನ್, ರಾಜಣ್ಣ, ನಾರಾಯಣಸ್ವಾಮಿ, ಚೊಕ್ಕನಹಳ್ಳಿ ವೆಂಕಟೇಶ್, ರಮೇಶ್, ವೈ.ಜಿ.ವಸಂತ್, ಗೌತಮ್, ಚಂದ್ರೇಗೌಡ, ಓಂ ರವೀಂದ್ರ, ಮೋಹನ್, ಎಚ್.ಎಸ್.ಕಿರಣ್, ಯಲಹಂಕ ಜಯಣ್ಣ, ದಾಮೋದರ್, ವೀರಭದ್ರೇಗೌಡ, ಗುತ್ತಿಗೆದಾರ ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ರಾಮಸಂಜೀವಯ್ಯ, ವಿನಾಯಕ ಸೇರಿದಂತೆ ಇನ್ನಿತರರಿದ್ದರು.

18.21 ಕೋಟಿ ರು. ಅಂದಾಜು ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ಪೋಸ್ಟರ್ ಅಂಟಿಸುವವರ ವಿರುದ್ಧ ಕ್ರಮಕೈಗೊಳ್ಳಿ

ನಗರದ ಮೇಲ್ಸೇತುವೆ, ಸರಕಾರಿ ಕಟ್ಟಡಗಳು ಮತ್ತು ಇನ್ನಿತರ ಜಾಗಗಳಲ್ಲಿ ಜನ್ಮದಿನ, ಖಾಸಗಿ ಕಾರ್ಯಕ್ರಮ ಗಳ ಪೋಸ್ಟರ್, ಬಿತ್ತಿಪತ್ರಗಳನ್ನು ಅಂಟಿಸಿ ನಗರದ ಅಂದಗೆಡಿಸುವವರು ಯಾವುದೇ ಪಕ್ಷದವರಿರಲಿ, ಎಂತಹ ಪ್ರಭಾವಶಾಲಿಗಳೇ ಇರಲಿ ಅವರ ವಿರುದ್ಧ ಅಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳಬೇಕು, ಇವರಿಗೆ ಪೋಸ್ಟರ್ ಅಂಟಿಸುವುದು ಮಾತ್ರ ಗೊತ್ತು, ಕಾಲಮಿತಿ ಮುಗಿದ ಮೇಲೆ ಅವುಗಳನ್ನು ತೆರವುಗೊಳಿಸುವುದು ಗೊತ್ತಿರುವುದಿಲ್ಲ. ಇವರು ಅಂಟಿಸುವ ಪೋಸ್ಟರ್, ಬಿತ್ತಿಪತ್ರಗಳನ್ನು ನಾವು ಕಿಲ್ ಬಿಲ್ ಅಭಿಯಾನದ ಮೂಲಕ ಪ್ರತಿ ತಿಂಗಳು ಸ್ವಚ್ಛಗೊಳಿಸುವ ಕೆಲಸ ಮಾಡುತ್ತಿದ್ದೇವೆ. ಎಷ್ಟೇ ಸ್ವಚ್ಛ ಮಾಡಿದರೂ, ಪೋಸ್ಟರ್‌ಗಳ ನಿಶಾನೆ ಸಂಪೂರ್ಣವಾಗಿ ತೆಗೆದು ಹಾಕಲು ಸಾಧ್ಯವಾಗುವುದಿಲ್ಲ.

ಜನರ ಅನುಕೂಲಕ್ಕಾಗಿ ನೂತನ ತೆರಿಗೆ ನೀತಿ ಜಾರಿ

ಬೆಂಗಳೂರು: ಹೊಸ ತೆರಿಗೆ ಕಾಯಿದೆ ಜಾರಿಯಾಗಲಿದ್ದು, ಕಾರ್ಯಕ್ಷಮತೆ ತಂತ್ರಜ್ಞಾನ ಆಧಾರಿತ ಯೋಜನೆಗಳನ್ನು ಪರಿಚಯಿಸಲಾಗಿರುವುದರಿಂದ ಸಾಮಾನ್ಯ ಜನರಿಗೆ ಬಹಳ ಅನುಕೂಲವಾಗಲಿದೆ ಎಂದು ಸುಪ್ರೀಂಕೋರ್ಟ್ ನ್ಯಾಯಾಧೀಶ ಉಜ್ವಲ್ ಭೂಯಾನ್ ಹೇಳಿದರು.

ಅರಮನೆ ಮೈದಾನದಲ್ಲಿ ಆಯೋಜಿಸಿದ್ದ 28ನೇ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಆದಾಯ ತೆರಿಗೆ ಕಾಯಿದೆ, 1961ನ್ನು ಆರು ದಶಕಗಳ ನಂತರ ರದ್ದುಪಡಿಸಲಾಗಿದ್ದು, ಅದರ ಬದಲಿಗೆ ಆದಾಯ ತೆರಿಗೆ ಕಾಯಿದೆ. 2025 ಜಾರಿಗೆ ಬರುತ್ತದೆ. ಇದು ಮುಂದಿನ ಏಪ್ರಿಲ್ ನಿಂದ ಜಾರಿಗೆ ಬರಲಿದೆ. ಅನುಸರಣೆ ಸರಳೀಕರಣ, ಡಿಜಿಟಲ್ ಪರಿವರ್ತನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಮಾನವ ಪರವಾದ ಪಕ್ಷಪಾತವನ್ನು ಕಡಿಮೆ ಮಾಡಲು ಆದ್ಯತೆ ನೀಡಲಾಗುತ್ತಿದೆ. ಪಾರದರ್ಶಕತೆ ಮತ್ತು ಕಾರ್ಯಕ್ಷಮತೆಗಾಗಿ ತಂತ್ರಜ್ಞಾನ ಆಧಾರಿತ ಯೋಜನೆಗಳನ್ನು ಪರಿಚಯಿಸಲಾಗಿದೆ ಎಂದರು. ಇದೇ ವೇಳೆ ಆಲ್ ಇಂಡಿಯಾ ಫೆಡರೇಶನ್ ಆಫ್ ಪ್ರಾಕ್ಟಿಸ್‌ನರ್ ನಿಯೋಜಿತ ಅಧ್ಯಕ್ಷರಾದ ಸಿ.ಎಸ್. ವೆಂಕಟರಮಣಿ ಅಧಿಕಾರ ಸ್ವೀಕಾರ ಮಾಡಿದರು. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಸಮೀರ್ ಎಸ್ ಜೆನ್ನಿ, ಸಿ. ಎ. ಶಿವಪ್ರಕಾಶ್ ವಿರಕ್ತಮಠ, ಸಿಎ ಮಂಜುನಾಥ, ಎಫ್‌ಆರ್. ಸಿಂಘ್ವಿ ಇದ್ದರು.

ಪತ್ರಿಕಾ ವೃತ್ತಿಗೆ ವಿಶ್ವಾಸಾರ್ಹತೆ ತಂದ ಅ.ಚ.ಶಿವಣ್ಣ: ತಗಡೂರು

ಬೆಂಗಳೂರು: ಸುದ್ದಿ ಮನೆಯಲ್ಲಿ ಸುಧೀರ್ಘ ಅವಧಿಗೆ ಸೇವೆ ಸಲ್ಲಿಸಿ, ಸಂಜೆ ಪತ್ರಿಕೆಗೆ ಸುದ್ದಿ ಮೆರಗು ನೀಡಿದ ಅ.ಚ.ಶಿವಣ್ಣ ಅವರು, ಪತ್ರಕರ್ತರ ವೃತ್ತಿಗೂ ವಿಶ್ವಾಸರ್ಹತೆ ತಂದವರು ಎಂದು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸ್ಮರಿಸಿದರು.

ಜಯನಗರದಲ್ಲಿ ಏರ್ಪಡಿಸಿದ್ದ ಶ್ರದ್ದಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, 1980 ದಶಕದಲ್ಲಿ ಮೊಬೈಲ್ ಗಳು ಇಲ್ಲದ ಸಂದರ್ಭದಲ್ಲಿ ಪೊಲೀಸ ಇಲಾಖೆ ಮಾತ್ರ ಬಳಸುತ್ತಿದ್ದ ವಾಕೀಟಾಕಿಯನ್ನು ಸರಕಾರದೊಂದಿಗೆ ಹೋರಾಟ ಮಾಡಿ ಅನುಮತಿ ಪಡೆದು, ಸುದ್ದಿ ನೀಡಲು ಬಳಸಿದ ಹೆಗ್ಗಳಿಕೆ ಶಿವಣ್ಣ ಅವರದು ಎಂದರು.

ಮನೆಯಂಗಳದಲ್ಲಿ ಸನ್ಮಾನ ಕಾರ್ಯಕ್ರಮಕ್ಕಾಗಿ ಅವರ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಹಬ್ಬದ ವಾತಾವರಣವನ್ನ ನಿರ್ಮಾಣ ಮಾಡಿದ್ದನ್ನು ಮರೆಯುವಂತಿಲ್ಲ. ಕೆಯುಡಬ್ಲ್ಯೂಜೆ ಪ್ರಶಸ್ತಿ ನೀಡಿದ್ದಾಗಲೂ ಸಂಭ್ರಮಿಸಿದ್ದರು. ಮಾಧ್ಯಮ ಅಕಾಡೆಮಿಯಿಂದ ಜೀವಮಾನದ ಸಾಧನೆಗಾಗಿ ವಿಶೇಷ ಪ್ರಶಸ್ತಿ ನೀಡಿದ್ದಾಗ ಅಭಿಮಾನದಿಂದ ಹಿಗ್ಗಿದ್ದರು ಎಂದರು.

ಕೆಎಸ್‌ಆರ್‌ಪಿ ಆಯುಕ್ತ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ್ ಮಾತನಾಡಿ, ಅ ಚ ಶಿವಣ್ಣ ಅವರು ಮುಂಗೋಪಿಯಾದರೂ, ಅವರ ಮನಸ್ಸು ತುಂಬಾ ಮೃದು. ಯಾರನ್ನೇ ಜೋರಾಗಿ ಮಾತನಾಡಿಸಿದರೆ ನಂತರ ಅವರೊಡನೆ ಸಮಾಧಾನವಾಗಿ ಮಾತನಾಡುವ ಹವ್ಯಾಸ ರೂಢಿಸಿಕೊಂಡಿದ್ದರು ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಈಶ್ವರ ದೈ ತೋಟ ಮಾತನಾಡಿ, ಸಾಕಷ್ಟು ಕಿರಿಯ ಪತ್ರಕರ್ತರುಗಳಿಗೆ ಶಿವಣ್ಣ ದಾರಿ ದೀಪವಾಗಿದ್ದು ತಮ್ಮೊಡನೆ ಇತರರನ್ನು ಬೆಳೆಸಿದ ಕೀರ್ತಿಯೂ ಅವರದ್ದಾಗಿದೆ ಎಂದರು.

ಸಂಜೆವಾಣಿ ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರ್ ಬಿಟಿ ಅಮುಧನ್, ಹಿರಿಯ ಪತ್ರಕರ್ತರಾದ ಕೆ.ಶೇಷಚಂದ್ರಿಕಾ, ಬಿ.ಪಿ. ಮಲ್ಲಪ್ಪ, ರು. ಬಸಪ್ಪ, ಸುನಂದ, ರಾಜಕುಮಾರ್, ಮಾಜಿ ಮೇಯರ್ ಮಂಜುನಾಥ್ ರೆಡ್ಡಿ, ಬಿಟಿಎಂ ರೆಸಿಡೆನ್ಷಿಯಲ್ ಅಸೋಸಿಯೇಷನ್ ಕೃಷ್ಣಾರೆಡ್ಡಿ ಮಲ್ಲಿಕಾರ್ಜುನ್, ಎಸ್ ವಿಎನ್‌ವಿ ಎಂ.ಎಸ್.ಕೃಷ್ಣಮೂರ್ತಿ, ಮಧು, ಚೈತ್ರ, ಸ್ವರ್ಣ ಗೌರಿ, ಮಹದೇವ್ ಸೇರಿದಂತೆ ನೂರಾರು ಮಂದಿ ನುಡಿ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಿವಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕುಟುಂಬ ವರ್ಗದವರಾದ ಇಂದಿರಾ ಶಿವಣ್ಣ, ಡಾ. ದೀಪಕ್ ಮತ್ತಿತರರು ಭಾಗವಹಿಸಿದ್ದರು.



ಜಯನಗರದಲ್ಲಿ ಏರ್ಪಡಿಸಿದ್ದ ಶ್ರದ್ದಾಂಜಲಿ ಸಭೆಯಲ್ಲಿ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿದರು.

ದೆಹಲಿ ವಿಮಾನ ಪ್ರಯಾಣದ ವೇಳೆ ದಿಢೀರ್ ಅಸ್ವಸ್ಥಗೊಂಡ ವಿದೇಶಿ ಯುವತಿ

ಸಹ ಪ್ರಯಾಣಿಗೆ ಅಂಜಲಿ ಸಂಜೀವಿನಿ

ಬೆಂಗಳೂರು: ಗೋವಾ-ನವದೆಹಲಿ ನಡುವಿನ ವಿಮಾನ ಪ್ರಯಾಣದ ವೇಳೆ ಖಾನಾಪುರದ ಮಾಜಿ ಶಾಸಕಿ ಹಾಗೂ ಎಐಸಿಸಿ ಗೋವಾ ಪ್ರಭಾರಿ ಕಾರ್ಯದರ್ಶಿಯಾಗಿರುವ ಡಾ.ಅಂಜಲಿ ನಿಂಬಾಳ್ಕರ್ ಅವರು ತುರ್ತು ವೈದ್ಯಕೀಯ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿ ಯುವ ಅಮೆರಿಕನ್ ಮಹಿಳೆಯೊಬ್ಬರ ಪ್ರಾಣವನ್ನು ಉಳಿಸಿದ್ದಾರೆ.

ಗೋವಾದಿಂದ ನವದೆಹಲಿಗೆ ಹೊರಟ ವಿಮಾನ ಆಗಸಕ್ಕೆ ನೆಗೆದ ವೇಳೆ ಅಮೆಕನ್ ಯುವತಿ ತೀವ್ರವಾಗಿ ನಡುಗತೊಡಗಿ ಅಚೇತನಗೊಂಡಿದ್ದು, ನಾಡಿ ಕೂಡ ನಿಲ್ಲುವ ಹಂತಕ್ಕೆ ತಲುಪಿತ್ತು. ಈ ಸಂದರ್ಭದಲ್ಲಿ ತಕ್ಷಣ ಸ್ಪಂದಿಸಿದ ಡಾ.ಅಂಜಲಿ ಅವರು ಕಾರ್ಡಿಯೋಪಲ್ಮನರಿ ರಿಸಸ್ಸಿಟೇಶನ್ (ಸಿಪಿಆರ್) ನಡೆಸಿ ಯುವತಿಗೆ ಜೀವ ತುಂಬಿದರು.

ಸುಮಾರು ಅರ್ಧ ಗಂಟೆಯ ನಂತರ ಯುವತಿ ಮತ್ತೊಮ್ಮೆ ಕುಸಿದುಬಿದ್ದಾಗ ಮತ್ತೆ ನಾಡಿ ನಿಲ್ಲುವ ಪರಿಸ್ಥಿತಿ ಎದುರಾದರೂ, ಡಾ. ಅಂಜಲಿ ಅವರ ನಿರಂತರ ಪ್ರಯತ್ನಗಳಿಂದ ಆಕೆಯ ನಾಡಿ ಪುನಃ ಚೇತರಿಸಿಕೊಂಡಿತು. ಡಾ.ಅಂಜಲಿ ನಿಂಬಾಳ್ಕರ್ ಅವರು ವಿಮಾನದ ಉಳಿದ ಪ್ರಯಾಣಾವಧಿಯಲ್ಲೆಲ್ಲಾ ರೋಗಿಯ ಪಕ್ಕದಲ್ಲೇ ನಿಂತು ಆಕೆಯ ಸ್ಥಿತಿಯನ್ನು ನಿಕಟವಾಗಿ ಗಮನಿಸಿದರು. ವಿಮಾನ ಇಳಿಯುವಾಗ ರನ್‌ವೇಯಲ್ಲಿ ಆಂಬ್ಯುಲೆನ್ಸ್ ಸಿದ್ಧವಾಗಿರುವಂತೆ ವಿಮಾನ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸಿದರು. ನವದೆಹಲಿಗೆ ವಿಮಾನ ಇಳಿದ ತಕ್ಷಣವೇ ರೋಗಿಯನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯುವಂತೆ ವ್ಯವಸ್ಥೆ ಮಾಡಿದರು. 30 ಸಾವಿರ ಅಡಿ ಎತ್ತರದಲ್ಲಿ ಅಮೂಲ್ಯ ಜೀವವನ್ನು ಉಳಿಸಿದ ಡಾ.ಅಂಜಲಿ ನಿಂಬಾಳ್ಕರ್ ಅವರ ಸಮಯೋಚಿತ ಕ್ರಮ ಹಾಗೂ ಮಾನವೀಯ ಸೇವೆಯನ್ನು ವಿಮಾನದ ಪೈಲಟ್, ಸಿಬ್ಬಂದಿ ಹಾಗೂ ಸಹ ಪ್ರಯಾಣಿಕರು ಮನಃಪೂರ್ವಕವಾಗಿ ಪ್ರಶಂಸಿಸಿದರು.

ಆಗಿದ್ದೇನು?

- ಗೋವಾದಿಂದ ದೆಹಲಿಗೆ ಹೊರಟ್ಟಿದ್ದ ವಿಮಾನ
- 30 ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿದ್ದ ವಿಮಾನ
- ಅಮೆರಿಕನ್ ಯುವತಿ ದಿಢೀರ್ ಅಸ್ವಸ್ಥ
- ಉಸಿರಾಟದ ತೊಂದರೆ, ನಾಡಿ ಮಿಡಿತ ಸಮಸ್ಯೆ
- ತುರ್ತು ವೈದ್ಯಕೀಯ ಚಿಕಿತ್ಸೆ ನೀಡಿದ ಅದೇ ವಿಮಾನದಲ್ಲಿ
- ಪ್ರಯಾಣಿಸುತ್ತಿದ್ದ ಮಾಜಿ ಶಾಸಕಿ ಡಾ. ಅಂಜಲಿ ನಿಂಬಾಳ್ಕರ್
- ನಿರಂತರ ಸಿಪಿಆರ್ ನಿಂದ ಚೇತರಿಸಿಕೊಂಡ ಯುವತಿ
- ಅಂಜಲಿ ನಿಂಬಾಳ್ಕರ್ ಕಾರ್ಯಕ್ಕೆ ವಿಮಾನ ಸಂಸ್ಥೆ ಮೆಚ್ಚುಗೆ

ಅಪಘಾತ ಹಾಗೂ ಅವಘಡ ಉಂಟಾದ ಸಂದರ್ಭದಲ್ಲಿ ತುರ್ತು ಸ್ಪಂದಿಸಲು ನೆರವಾಗಲು ಅಪಘಾತ ತುರ್ತು ಸ್ಪಂದನ ವಾಹನಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಚಾಲನೆ ನೀಡಿದರು. ಶಾಸಕ ರಾಜು ಕಾಗೆ, ಕರಾರಸಾ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಶಿವಕುಮಾರ್ ಸೇರಿದಂತೆ ಮತ್ತಿತರಿದ್ದರು.

ಹಳದಿ ಬೋರ್ಡ್ ಕಾರುಗಳಿಗೆ ನಿರ್ಬಂಧ

ಬೆಂಗಳೂರು: ಕೆಐಎ ಟರ್ಮಿನಲ್ 1ಕ್ಕೆ ಹಳದಿ ಬೋರ್ಡ್ ಕಾರುಗಳ ಪ್ರವೇಶ ನಿರ್ಬಂಧಿಸಲಾಗಿದೆ. ಪಿ3 ಮತ್ತು ಪಿ4ನ ಪಾರ್ಕಿಂಗ್‌ನ್ನು ಬಳಸಬೇಕಾಗಿದ್ದು, ವೈಟ್ ಬೋರ್ಡ್ ವಾಹನಗಳಿಗೆ 8 ನಿಮಿಷ ಉಚಿತ ಪ್ರವೇಶವಿದ್ದು, ಪ್ರತಿ 5 ನಿಮಿಷಕ್ಕೆ 150 ರು. ದಂಡ ವಿಧಿಸಲಾಗುವುದು.

5 ತಿಂಗಳಲ್ಲಿ ಸರಕಾರಕ್ಕೆ ಕಾರ್ಯಸಾಧ್ಯತಾ ಸಮಗ್ರ ತಾಂತ್ರಿಕ ವರದಿ ನೀಡಲು ಸೂಚನೆ: ಸಚಿವ ಎಂ.ಬಿ.ಪಾಟೀಲ್ | ಅರ್ಜಿ ಸಲ್ಲಿಕೆಗೆ ಜನವರಿ 12 ಕೊನೆ ದಿನ

2ನೇ ವಿಮಾನ ನಿಲ್ದಾಣ: ಕಾರ್ಯಸಾಧ್ಯತಾ ವರದಿಗೆ ಟೆಂಡರ್

ಬೆಂಗಳೂರು: ರಾಜಧಾನಿಯ ಸಮೀಪ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಸಂಬಂಧ ಸ್ಥಳದ ಅನುಕೂಲ ಮತ್ತು ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಪರಿಣತ ಸಲಹಾ ಸಂಸ್ಥೆಯ ಆಯ್ಕೆಗಾಗಿ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು (ಕೆಎಸ್‌ಐಐಡಿಸಿ) ಟೆಂಡರ್ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು 2026ರ ಜನವರಿ 12 ಕೊನೆಯ ದಿನವಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಅವರು, 2ನೇ ವಿಮಾನ ನಿಲ್ದಾಣಕ್ಕಾಗಿ ರಾಜ್ಯ ಸರಕಾರವು ಕನಕಪುರ ರಸ್ತೆಯಲ್ಲಿರುವ ಚೂಡಹಳ್ಳಿ, ಸೋಮನಹಳ್ಳಿ ಮತ್ತು ನೆಲಮಂಗಲದ ಬಳಿ ಸ್ಥಳಗಳನ್ನು ಗುರುತಿಸಿದೆ. ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರದ ಉನ್ನತ ಮಟ್ಟದ ತಂಡವು ಇವುಗಳ ಪರಿಶೀಲನೆ ನಡೆಸಿ ಪ್ರಾಥಮಿಕ ವರದಿ ನೀಡಿದೆ.

ಈಗ ಟೆಂಡರಿನಲ್ಲಿ ಆಯ್ಕೆಯಾಗುವ ಸಲಹಾ ಸಂಸ್ಥೆಯು 5 ತಿಂಗಳಲ್ಲಿ ಸರಕಾರಕ್ಕೆ ತನ್ನ ಸಮಗ್ರ ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಾಧ್ಯತಾ ವರದಿ ಕೊಡಬೇಕಾಗು ತ್ತದೆ ಎಂದಿದ್ದಾರೆ.

ಉದ್ದೇಶಿತ 2ನೇ ವಿಮಾನ ನಿಲ್ದಾಣ ಅಭಿವೃದ್ಧಿಗೆ ತಗುಲುವ ವೆಚ್ಚ, ಅಗತ್ಯ ಇರುವ ಭೂಮಿ, ರಕ್ಷಣಾ ಸಚಿವಾಲಯ ಮತ್ತು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಸೇರಿದಂತೆ ಹಲವು ಕಡೆಗಳಿಂದ ಪಡೆಯಬೇಕಾಗುವ ಅನುಮೋದನೆಗಳ ವಿವರಗಳು ಮುಂತಾದವನ್ನೂ ಈ ಕಾರ್ಯಸಾಧ್ಯತಾ ವರದಿಯಲ್ಲಿ ನೀಡಬೇಕಾಗುತ್ತದೆ. ಮತ್ತೊಂದು ವಿಮಾನ ನಿಲ್ದಾಣ ನಿರ್ಮಾಣದಿಂದ ಇಲ್ಲಿನ ಕೈಗಾರಿಕೆ, ಪ್ರವಾಸೋದ್ಯಮ, ಜನರ ಓಡಾಟ ಇತ್ಯಾದಿ ಅಂಶಗಳನ್ನೂ ವಿವರಿಸಲಿದೆ.

-ಎಂ.ಬಿ.ಪಾಟೀಲ್, ಸಚಿವ

ಕಳೆದ 5 ವರ್ಷಗಳಲ್ಲಿ ವಾರ್ಷಿಕವಾಗಿ 250 ಕೋಟಿ ರೂ. ಮೊತ್ತದ ಕೆಲಸಗಳನ್ನು ನಿರ್ವಹಿಸಿರುವಂಥ ಮತ್ತು ಸದರಿ ಕ್ಷೇತ್ರದಲ್ಲಿ ಕನಿಷ್ಠ ಪಕ್ಷ ಐದು ಯೋಜನೆಗಳನ್ನಾದರೂ ನಿರ್ವಹಿಸಿರುವ/ಸಲಹಾ ವರದಿ ನೀಡಿರುವಂತಹ ಸಂಸ್ಥೆಗಳು ಟೆಂಡರ್ ನಲ್ಲಿ ಭಾಗವಹಿಸಬಹುದು.

ಟೆಂಡರ್‌ನಲ್ಲಿ ಆಯ್ಕೆಯಾಗುವ ಸಂಸ್ಥೆಯು ನಾವು ಸೂಚಿಸುತ್ತಿರುವ ಮೂರೂ ಸ್ಥಳಗಳ ಮಳೆ ಪ್ರಮಾಣ, ಭೂಲಕ್ಷಣ, ವಿದ್ಯುತ್, ನೀರು, ಒಳಚರಂಡಿ, ತ್ಯಾಜ್ಯ ನಿರ್ವಹಣೆಯಂಥ ಮೂಲ ಸೌಕರ್ಯಗಳು, ಸುತ್ತಮುತ್ತಲಿನ ಜನ ಸಂಖ್ಯೆ, ಅಭಿವೃದ್ಧಿ, ಶಬ್ದ ಮತ್ತು ವಿಮಾನ ನಿಲ್ದಾಣ ದಿಂದ ಉಂಟಾಗುವ ಮಾಲಿನ್ಯ ಇತ್ಯಾದಿಗಳತ್ತ ಗಮನ ಹರಿಸಲಿದೆ ಎಂದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಈಗ ದಟ್ಟಣೆಯಲ್ಲಿ ದೇಶದಲ್ಲೇ 2ನೇ ಸ್ಥಾನದಲ್ಲಿದೆ. 2033ರ ಹೊತ್ತಿಗೆ ನಾವು ಮತ್ತೊಂದು ವಿಮಾನ ನಿಲ್ದಾಣ ಹೊಂದಬೇಕಾಗಿದೆ. ಮುಂದಾಲೋಚನೆ ಇಟ್ಟುಕೊಂಡು ಈಗಿನಿಂದಲೇ ಪ್ರಯತ್ನಗಳನ್ನು ಆರಂಭಿಸಲಾಗಿದೆ. ಈಗಾಗಲೇ ಹೊಸದೆಹಲಿ ಮತ್ತು ಮುಂಬೈ ನಗರಗಳು ಎರಡೆರಡು ವಿಮಾನ ನಿಲ್ದಾಣ ಹೊಂದಿವೆ. ಕಾರ್ಯಸಾಧ್ಯತಾ ವರದಿ ಬಂದ ನಂತರ ಮುಂದಿನ ಹೆಜ್ಜೆ ಏನಿರಬೇಕೆಂದು ನಿರ್ಧರಿಸಲಾಗುವುದು ಎಂದರು.

ಕರಾವಳಿಗೆ ಸಂಬಂಧಿಸಿದಂತೆ ಖಾಸಗಿ ವಿಧೇಯಕ ಮಂಡನೆ?

ಸಮಗ್ರ ಕರ್ನಾಟಕ ದೃಷ್ಟಿಯಿಂದ ಕಾಯಿದೆ ರೂಪಿಸಿದರೆ, ಕರಾವಳಿಗೆ ಸಂಕಷ್ಟ | 3 ಜಿಲ್ಲೆಗಳಿಗೆ ಪ್ರತ್ಯೇಕ ಕಾಯಿದೆ ರೂಪಿಸಬೇಕೆಂಬ ಬೇಡಿಕೆ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ಹಲವು ವಿಷಯದಲ್ಲಿ ಭಿನ್ನವಾಗಿರುವ ಕರಾವಳಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಖಾಸಗಿ ವಿಧೇಯಕ ಮಂಡಿಸುವ ಸಾಧ್ಯತೆಯಿದೆ.

ಕರ್ನಾಟಕದ ಹಲವು ಜಿಲ್ಲೆಗಳಿಗೆ ಹೋಲಿಸಿದರೆ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪ್ರಾಕೃತಿಕ ಸವಾಲುಗಳು ಭಿನ್ನವಾಗಿದೆ. ಆದರೆ ಈ ಸವಾಲುಗಳನ್ನು ಅರಿಯದೇ, ರಾಜ್ಯ ಸರಕಾರಗಳು ರೂಪಿಸುವ ಕಾನೂನುಗಳು ಈ ಜಿಲ್ಲೆಗಳ ಅಭಿವೃದ್ಧಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ರಾಜ್ಯ ಸರಕಾರ ಯಾವುದೇ ನಿಯಮ ರೂಪಿಸಿದರೂ, ಆ ನಿಯಮಗಳು ಈ ಜಿಲ್ಲೆಗಳಲ್ಲಿ ಅಳವಡಿಸಲು ಸಾಧ್ಯವೇ ಎನ್ನುವುದನ್ನು ಗಮನಿಸಿ, ಪ್ರತ್ಯೇಕ ಕಾನೂನುಗಳ ಅಗತ್ಯವಿದ್ದರೆ ಅದನ್ನು ಸಿದ್ಧಪಡಿಸಬೇಕಿದೆ ಎನ್ನುವ ಖಾಸಗಿ ಬಿಲ್ ಮಂಡಿಸಲು ಬಿಜೆಪಿ ಶಾಸಕ ಗುರುರಾಜ್ ಗಂಟಿಹೊಳೆ ಸಜ್ಜಾಗಿದ್ದಾರೆ.

ಪ್ರಮುಖವಾಗಿ ರಾಜ್ಯಾದ್ಯಂತ ಮಾಡುವ ನಿಯಮಗಳು ಕರಾವಳಿ ಭಾಗದ ಜಿಲ್ಲೆಗಳಿಗೆ ಅಳವಡಿಸಲು ಸಾಧ್ಯವಿಲ್ಲ. ಸಿಆರ್‌ಝೆಡ್‌ನಲ್ಲಿರುವ ಕೆಲ ನಿಯಮಗಳಿಂದ ಬೈಂದೂರಿನಲ್ಲಿರುವ ಬಂದರನ್ನು ವಿಸ್ತರಣೆ ಮಾಡಲು ವಿಳಂಬವಾಗಿದೆ. ಇದೇ ರೀತಿ ಹಲವು ಅಭಿವೃದ್ಧಿ ಕಾರ್ಯಗಳಿಗೆ, ನೂತನ ಕೈಗಾರಿಕಾ ಸ್ಥಾಪನೆಗೆ ಈಗಿರುವ ಕಾನೂನುಗಳು ತೊಡಕಾಗಿವೆ. ಆದ್ದರಿಂದ ಇವುಗಳನ್ನು ನಿವಾರಿಸಲು ಕೆಲವೊಂದಷ್ಟು ಕಾನೂನು ತಿದ್ದುಪಡಿಗಳಾಗಬೇಕು ಎನ್ನುವುದು ಖಾಸಗಿ ಬಿಲ್‌ನ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿದುಬಂದಿದೆ.

ಪ್ರತ್ಯೇಕತೆಯ ಕೂಗಲ್ಲ: ಕರಾವಳಿಗೆ ಈ ರೀತಿಯ ಪ್ರತ್ಯೇಕ ನೀತಿ ಮಾಡಿದರೆ, ರಾಜ್ಯದ ಇನ್ನುಳಿದ ಪ್ರಾಂತ್ಯದಿಂಲೂ ಪ್ರತ್ಯೇಕತೆಯ ಕೂಗು ಕೇಳಿಬರುವ ಸಾಧ್ಯತೆಯಿದೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ಗಂಟಿಹೊಳೆ ಅವರು, ನಾವು ಪ್ರತ್ಯೇಕತೆಯ ಕೂಗನ್ನು ಎತ್ತುತ್ತಿಲ್ಲ. ಬದಲಿಗೆ, ಸರಕಾರಗಳು ರೂಪಿಸುವ ಕಾನೂನುಗಳನ್ನು ನಿಭಾಯಿಸಲು ಸಾಧ್ಯವಿಲ್ಲ. ಇದರೊಂದಿಗೆ ಅಭಿವೃದ್ಧಿ ದೃಷ್ಟಿಯಿಂದ ಕೆಲವೊಂದಷ್ಟು ತೀರ್ಮಾನ ಅಗತ್ಯ. ಅದಕ್ಕೆ ಪೂರಕವಾಗಿ ಈ ಖಾಸಗಿ ವಿಧೇಯಕ ಮಂಡಿಸಲು ಮುಂದಾಗಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ.

ಸಿಆರ್‌ಝೆಡ್ ಸಮಸ್ಯೆ: ಕರ್ನಾಟಕದಲ್ಲಿ ಈ ಮೂರು ಜಿಲ್ಲೆಗಳು ಮಾತ್ರ ಸಮುದ್ರವನ್ನು ಹೊಂದಿಕೊಂಡಿರುವುದರಿಂದ, ಈ ಜಿಲ್ಲೆಗಳಿಗೆ ಸಿಆರ್‌ಝೆಡ್ ತೊಡಕಾಗುತ್ತದೆ. ಸಿಆರ್‌ಝೆಡ್‌ನಲ್ಲಿರುವ ಕೆಲ ನಿರ್ಬಂಧಗಳಿಂದ ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಅಭಿವೃದ್ಧಿ ಕುಂಠಿತವಾಗುತ್ತಿದೆ. ಆದ್ದರಿಂದ ಸಿಆರ್‌ಝೆಡ್‌ನಲ್ಲಿ ಕೆಲವೊಂದಷ್ಟು ವಿನಾಯಿತಿ ನೀಡುವ ನಿಟ್ಟಿನಲ್ಲಿ ಸರಕಾರ ಚಿಂತನೆ ನಡೆಸಬೇಕಿದೆ. ಇದರೊಂದಿಗೆ ಕರಾವಳಿ ಜಿಲ್ಲೆಗಳ ಗ್ರಾಮಗಳ ಸ್ವರೂಪ, ವ್ಯಾಪ್ತಿಗಳನ್ನು ಗಮನದಲ್ಲಿರಿಸಿ ಕೊಂಡು ಕೆಲ ಬದಲಾವಣೆ ಅಗತ್ಯವಿದೆ. ಅವುಗಳನ್ನು ಮಾಡಲು ಪ್ರತ್ಯೇಕ ಕಾಯಿದೆಯ ಅಗತ್ಯವಿದೆ ಎನ್ನುವ ಅಭಿಪ್ರಾಯಗಳನ್ನು ಈ ಖಾಸಗಿ ವಿಧೇಯಕದಲ್ಲಿ ಮಂಡಿಸಲಾಗಿದೆ.

ಆಚಾರ್ಯ ಅವಧಿಯಲ್ಲಿದ್ದ ಪರಿಪಾಠ

ಈ ಹಿಂದೆ ವಿ.ಎಸ್. ಆಚಾರ್ಯ ಅವರು ಸಚಿವರಾಗಿದ್ದ ಅವಧಿಯಲ್ಲಿ ತೀರ್ಮಾನ ಕೈಗೊಳ್ಳುವ ಮೊದಲು ಕರಾವಳಿ ಜಿಲ್ಲೆಗಳ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ನಿರ್ಧಾರ ಕೈಗೊಳ್ಳಲಾಗುತ್ತಿತ್ತು. ಇಲ್ಲವೇ, ಕರಾವಳಿ ಭಾಗ ಜಿಲ್ಲೆಗಳನ್ನು ಹೊರಗಿಟ್ಟು ಆದೇಶ ಹೊರಡಿಸಲಾಗುತ್ತಿತ್ತು. ಆದರೀಗ ಈ ಪರಿಪಾಠ ನಿಂತಿದೆ. ಉದಾರಹಣೆಗೆ, ಶಾಲಾ ಮಟ್ಟದ ಕ್ರೀಡೋತ್ಸವವನ್ನು ಆ.15ರೊಳಗೆ ಮುಗಿಸಬೇಕು ಎನ್ನುವ ಸುತ್ತೋಲೆ ಹೊರಡಿಸಲಾಗುತ್ತದೆ. ಆದರೆ, ಈ ಸಮಯದಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಭಾರಿ ಪ್ರಮಾಣದ ಮಳೆಯಿರುತ್ತದೆ. ಇದರಿಂದ ಆ ಭಾಗದಲ್ಲಿ ಕ್ರೀಡೋತ್ಸವಗಳನ್ನು ಆಯೋಜಿಸುವುದೇ ಬಹುದೊಡ್ಡ ಸವಾಲು. ಇದೇ ರೀತಿ ಪ್ರತಿ ವಿಷಯದಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ, ಕರಾವಳಿ ಜಿಲ್ಲೆಗಳು ಭಿನ್ನವಾಗಿದೆ. ಆದ್ದರಿಂದ ನೀತಿಗಳನ್ನು ರೂಪಿಸುವಾಗ ಕರಾವಳಿ ಜಿಲ್ಲೆಯ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ತೀರ್ಮಾನ ತಗೆದುಕೊಳ್ಳಬೇಕು ಎನ್ನುವ ಅಂಶಗಳನ್ನು ಖಾಸಗಿ ವಿಧೇಯಕದಲ್ಲಿ ಸೇರ್ಪಡಿಸಲಾಗಿದೆ.

ಮುಂದಿನ ವಾರ ಮಂಡನೆಗೆ ಅವಕಾಶ

ಕಲಾಪದಲ್ಲಿ ಮಂಡನೆಯಾಗುವ ಖಾಸಗಿ ವಿಧೇಯಕಗಳನ್ನು ಸರಕಾರ ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವ ಉದಾಹರಣೆ ವಿರಳ. ಅದರಲ್ಲಿಯೂ ಪ್ರತಿಪಕ್ಷದ ಶಾಸಕರು ಮಂಡಿಸುವ ಖಾಸಗಿ ವಿಧೇಯಕಗಳು ತಾರ್ಕಿಕ ಅಂತ್ಯ ಕಾಣುವುದಿಲ್ಲ. ಆದರೆ ಕರಾವಳಿ ಭಾಗದ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ ಆಲೋಚನೆ ಮಾಡಿರುವ ರಾಜ್ಯ ಸರಕಾರ, ಈ ಖಾಸಗಿ ಬಿಲ್ನಲ್ಲಿರುವ ಅಂಶಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆಯಿದೆ. ಮುಂದಿನ ವಾರದ ಅಧಿವೇಶನದಲ್ಲಿ ಖಾಸಗಿ ವಿಧೇಯಕ ಮಂಡಿಸಲು ಅವಕಾಶ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ.

ರಾಜ್ಯಕ್ಕೆ ರೂಪಿಸಿರುವ ಕಾನೂನು ಕರಾವಳಿ ಭಾಗದಲ್ಲಿ ಅಳವಡಿಸಿಕೊಳ್ಳಲು ಕಷ್ಟವಾಗುತ್ತದೆ. ಇದರಿಂದ ಈ ಭಾಗದ ಅಭಿವೃದ್ಧಿಯೂ ಕುಂಠಿತವಾಗುತ್ತದೆ. ಆದ್ದರಿಂದ ಸರಕಾರ ಕರಾವಳಿ ಭಾಗ ಹೊರತುಪಡಿಸಿ, ತೀರ್ಮಾನ ಕೈಗೊಳ್ಳಬೇಕು. ಕರಾವಳಿ ಭಾಗಕ್ಕೆ ಅನ್ವಯವಾಗುವಂತೆ ಪ್ರತ್ಯೇಕ ನೀತಿ ರೂಪಿಸಲು ಅವಕಾಶ ಕಲ್ಪಿಸಬೇಕು.

-ಗುರುರಾಜ್ ಗಂಟಿಹೊಳೆ ಬೈದೂರು ಶಾಸಕ

...ಅಧಿಕಾರಿಗಳ ವಿರುದ್ಧ ಕ್ರಮವಿಲ್ಲ!

ಮೊದಲಪುಟದಿಂದ

ಪ್ರಶ್ನೆಗಳನ್ನು ನುರಿತ ಭಾಷಾಂತರ ಕಾರರನ್ನು ನಿಯೋಜಿಸಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಲಾಗಿರುತ್ತದೆ. ಇದು ಅತ್ಯಂತ ಗೋಪ್ಯವಾಗಿ ನಡೆಯುವುದರಿಂದ ಭಾಷಾಂತರ ಮಾಡಿರುವವರನ್ನು ಹಾಗೂ ಪ್ರಶ್ನೆಗಳ ಗೋಪ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಪ್ರಶ್ನೆಗಳ ಭಾಷಾಂತರವನ್ನು ಮತ್ತೊಮ್ಮೆ ಪರಿಶೀಲಿಸಲಾಗುವುದಿಲ್ಲ. ಆದ್ದರಿಂದ ಇದರಲ್ಲಿ ಕೆಪಿಎಸ್‌ಸಿ ಪಾತ್ರ ಇರುವುದಿಲ್ಲ ಎಂದಿದ್ದಾರೆ!

ಹೆಚ್ಚುವರಿ ಸಮಯ ನೀಡುವ ಚಿಂತನೆ ಇಲ್ಲ: ಈ ಹಿಂದೆ ಕನ್ನಡದಲ್ಲಿ ಪರೀಕ್ಷೆ ಬರೆಯುವಾಗ ಓದಿ ಅರ್ಥೈಸಿಕೊಳ್ಳುವುದಕ್ಕೆ ಹೆಚ್ಚುವರಿ ಸಮಯದ ಅಗತ್ಯವಿದೆ ಎನ್ನುವ ಅಭಿಪ್ರಾಯಗಳು ಕೇಳಿಬಂದಿತ್ತು. ಹೆಚ್ಚುವರಿ 20 ನಿಮಿಷ ಅವಕಾಶ ನೀಡಿದರೆ, ಕನ್ನಡ ಮಾಧ್ಯಮದಲ್ಲಿ ಬರೆಯುವ ಅಭ್ಯರ್ಥಿಗಳಿಗೆ ಅನುಕೂಲವಾಗಲಿದೆ ಹಾಗೂ ಅಭ್ಯರ್ಥಿಗಳ ಸಂಖ್ಯೆಯೂ ಹೆಚ್ಚಾಗಬಹುದು ಎನ್ನುವ ಲೆಕ್ಕಾಚಾರಗಳಿದ್ದವು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ ಅವರು, ಕನ್ನಡದಲ್ಲಿ ಕೆಪಿಎಸ್ಸಿ ಪರೀಕ್ಷೆ ಬರೆಯುವವರಿಗೆ ಹೆಚ್ಚುವರಿ 20 ನಿಮಿಷಗಳ ಅವಕಾಶ ನೀಡುವ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಕೇಳಿರುವ ಪ್ರಶ್ನೆಗೆ ಈ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ. ಇದೇ ರೀತಿ ಕನ್ನಡ ಮಾಧ್ಯಮ ಪರೀಕ್ಷೆ ಹಾಗೂ ಮೌಲ್ಯಮಾಪನ ಪದ್ಧತಿಯ ಬಗ್ಗೆ ಅಪಸ್ವರವಿದೆ. ಈ ಬಗ್ಗೆ ಕ್ರಮವಹಿಸುವ ಸಂಬಂಧ ಪ್ರಶ್ನಿಸಲಾಗಿದ್ದು, ಈ ರೀತಿಯ ಯಾವುದೇ ಪ್ರಸ್ತಾವನೆ ಸರಕಾರದ ಮುಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಕೇರಳದಲ್ಲಿ ಬಿಜೆಪಿ ಐತಿಹಾಸಿಕ ಸಾಧನೆ

ಮೊದಲಪುಟದಿಂದ

ಮೊದಲ ಮಹಿಳಾ ಅಧಿಕಾರಿ ಮೇಯರ್: ಕೇರಳದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ ಆರ್.ಶ್ರೀಲೇಖಾ ಅವರು ತಿರುವನಂತಪುರಂನ ಶಾಸ್ತಮಂಗಲಂ ವಿಭಾಗದಿಂದ ಗೆದ್ದಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಏರಿದರೆ ಶ್ರೀಲೇಖಾ ಅವರು ಮೇಯರ್ ಆಗಿ ಆಯ್ಕೆಯಾಗುವ ಸಾಧ್ಯತೆಯಿದೆ.

ಕಾಂಗ್ರೆಸ್ ಪರಾಕ್ರಮ, ನೆಲಕಚ್ಚಿದ ಎಲ್‌ಡಿಎಫ್: 2026ರಲ್ಲಿ ಕೇರಳ ವಿಧಾನಸಭಾ ಚುನಾವಣೆ ನಡೆಯಲಿರುವ ನಡುವೆಯೇ ಆಡಳಿತಾರೂಢ ಎಲ್‌ಡಿಎಫ್‌ಗೆ ಪ್ರಸ್ತುತ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾರೀ ಹಿನ್ನಡೆಯಾಗಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹೆಚ್ಚಿನ ಸ್ಥಾನಗಳನ್ನು ಗಳಿಸಿದೆ. ಕೇರಳದಲ್ಲಿ ಒಟ್ಟು 941 ಗ್ರಾಮ ಪಂಚಾಯಿತಿಗಳು, 152 ಬ್ಲಾಕ್ ಪಂಚಾಯಿತಿಗಳು, 14 ಜಿಲ್ಲಾ ಪಂಚಾಯಿತಿಗಳು, 87 ಪುರಸಭೆಗಳು, 6 ಮಹಾನಗರ ಪಾಲಿಕೆಗಳಿವೆ. 6ರ ಪೈಕಿ 4 ಮಹಾನಗರಪಾಲಿಕೆಗಳಲ್ಲಿ ಯುಡಿಎಫ್ ಗೆದ್ದಿದ್ದರೆ, ಇನ್ನೊಂದು ಬಿಜೆಪಿಗೆ ಒಲಿದಿದೆ. ಪುರಸಭೆಗಳ ಪೈಕಿ 54ರಲ್ಲಿ, 500ಕ್ಕೂ ಅಧಿಕ ಗ್ರಾಮ ಪಂಚಾಯಿತಿಗಳಲ್ಲಿ ಯುಡಿಎಫ್ ಗೆಲುವು ಸಾಧಿಸಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಬಂಕಾಪುರ, ಹಾವೇರಿ
- **ಸಮಸ್ಯೆ ಯೇನು?:** ಬಂಕಾಪುರದ ಕೆ.ಎಚ್.ಬಿ. ಕಾಲೋನಿಯಲ್ಲಿ ಮೌಲಸೌಕರ್ಯ ಕಲ್ಪಿಸುವ ಕುರಿತು.
- **ಪರಿಹಾರ:** ಹಾವೇರಿ ಜಿಲ್ಲೆ ಬಂಕಾಪುರ ಪಟ್ಟಣದ ಕೆ.ಎಚ್.ಬಿ ಕಾಲೋನಿಯಲ್ಲಿ ಬೀದಿ ದೀಪ, ರಸ್ತೆ ಪಕ್ಕದ ಚರಂಡಿ, ತ್ಯಾಜ್ಯ ವಿಲೇವಾರಿ ಸೇರಿ ಹಲವು ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ಸ್ಥಳೀಯರೊಬ್ಬರು ದೂರು ಸಲ್ಲಿಸಿದ್ದರು. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿರುವ ಪುರಸಭೆ ಅಧಿಕಾರಿಗಳು ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ.



ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸ್ಪೀಕರ್ ಯು.ಟಿ.ಖಾದರ್ ಸೇರಿ ಹಲವರಿದ್ದರು.

ಇನ್ನೂ 3 ವರ್ಷ ಹೊರಟ್ಟಿ ಸಭಾಪತಿ

ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸನ್ಮಾನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಹುಬ್ಬಳ್ಳಿ: ಮುಂದಿನ ಮೂರು ವರ್ಷಗಳ ಕಾಲ ಬಸವರಾಜ ಹೊರಟ್ಟಿಯವರೇ ಸಭಾಪತಿಯಾಗಿ ಮುಂದುವರಿಯಲಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಇಲ್ಲಿನ ನೆಹರೂ ಮೈದಾನದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಂದಿನ ಬಾರಿಯೂ ಹೊರಟ್ಟಿ ಅವರು ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗುವ ಅವರ ದಾಖಲೆ ಯಾರಿಂದಲೂ ಮುರಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ಹೊರಟ್ಟಿ ಅವರು ನೇರ, ದಿಟ್ಟ ನುಡಿಯ ವ್ಯಕ್ತಿತ್ವದ ರಾಜಕಾರಣಿ, ಸ್ನೇಹ ಜೀವಿ. ಆಡಂಬರ, ಅಧಿಕಾರದ ಗರ್ವ ಅವರಿಗಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಿಷ್ಪಕ್ಷಪಾತವಾಗಿ ಸಭಾಪತಿ ಸ್ಥಾನ ನಿರ್ವಹಿಸುತ್ತಿದ್ದು, ಸದನಕ್ಕೆ ಅವರ ಮಾರ್ಗದರ್ಶನ ಬಹಳ ಅವಶ್ಯಕತೆ ಇದೆ ಎಂದು ತಿಳಿಸಿದರು.

ಸಭಾಪತಿ ಸ್ಥಾನದ ಗೌರವ ಬಸವರಾಜ ಹೊರಟ್ಟಿ ಅವರಿಂದ ಹೆಚ್ಚಾಗಿದೆ. ಹೊರಟ್ಟಿ ಯಾರೊಂದಿಗೂ ಅಹಂಕಾರದಿಂದ ಹಾಗೂ ಹಿರಿತನವಿದೆ ಎಂಬ ಭಾವನೆ ತೋರಿಸಿಲ್ಲ. ಅಂತಹ ಮುಖ ಭಾವ ನಾವೂ ಅವರಲ್ಲಿ ಎಂದೂ ನೋಡಿಲ್ಲ. ಸದನದಲ್ಲಿ ಎಲ್ಲರನ್ನು ಪಕ್ಷಾತೀತವಾಗಿ ಕಾಣುತ್ತಾರೆ. ಎಲ್ಲರಿಗೂ ಮಾರ್ಗದರ್ಶನ ಮಾಡುತ್ತಾರೆ. ನನ್ನೊಂದಿಗೆ ಉತ್ತಮ ಸ್ನೇಹವಿದ್ದರೂ, ನನ್ನ ಮೇಲೆ ಯಾವುದೇ ಒತ್ತಡವನ್ನು ತಂದಿಲ್ಲ. ಸ್ನೇಹವೇ ಬೇರೆ, ರಾಜಕಾರಣವೇ ಬೇರೆ ಎಂಬುದನ್ನು ಅವರನ್ನು ನೋಡಿ ಕಲಿಯಬೇಕು ಎಂದರು.

ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಮಾತನಾಡಿ, ಬಸವರಾಜ ಹೊರಟ್ಟಿ ಅವರೊಂದಿಗೆ ಕೆಲಸ ಮಾಡುತ್ತಿರುವುದು ದೇವರು ಕೊಟ್ಟಿರುವ ವರ. ಸಾಮಾಜಿಕ ನ್ಯಾಯದೊಂದಿಗೆ ಹೇಗೆ ಆಡಳಿತ ನಡೆಸಬೇಕು ಎಂಬುವುದು ಅವರಿಂದ ಕಲಿಯುತ್ತಿದ್ದೇವೆ. ಯುವ ರಾಜಕಾರಣಿಗಳಿಗೆ, ಜನಪ್ರತಿನಿಧಿಗಳಿಗೆ ಅವರ ಮಾರ್ಗದರ್ಶನ ಅವಶ್ಯವಿದೆ ಎಂದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ಪ್ರಜಾಪ್ರಭುತ್ವದ ನಮ್ಮ ದೇಶದಲ್ಲಿ ಜನರಿಂದ ಚುನಾಯಿತಗೊಂಡು ಸಂಸದರಾಗಿ, ಶಾಸಕರಾಗಿ ಹಲವು ಬಾರಿ ಆಯ್ಕೆಯಾದ ರಾಜಕಾರಣಿಗಳು ಇದ್ದಾರೆ. ಆದರೆ ಪ್ರಜ್ಞಾವಂತ ಶಿಕ್ಷಕರ ಮತಗಳನ್ನು ಪಡೆದು 8 ಬಾರಿ ಗೆಲುವನ್ನು ಪಡೆದು ದಾಖಲೆ ನಿರ್ಮಿಸಿರುವುದು ಬಸವರಾಜ ಹೊರಟ್ಟಿಯವರು ಮಾತ್ರ ಎಂದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಹಾಂಡಸಮ್ ಟೀಚರ್ ಆಂಡ್ ಇಂಟಲಿಜೆಂಟ್ ಪೊಲಿಟಿಷಿಯನ್ ಮತ್ತು ಸಿನ್ಸಿಯರ್ ಫೈಟರ್ ಬಸವರಾಜ ಹೊರಟ್ಟಿ ಅವರು ಉತ್ತರ ಕರ್ನಾಟಕದ ಪ್ರಧಿನಿಯಾಗಿ ಸದಾಕಾಲ ಕೆಲಸ ಮಾಡಿದ್ದಾರೆ. ಅವರು ಮುಂದೆ ಇದ್ದರೆ ನಾವೆಲ್ಲ ಅವರ ಜತೆ ಹೆಜ್ಜೆಗೆ ಹೆಜ್ಜೆ ಇಟ್ಟು ಕರ್ನಾಟಕವನ್ನು ವಿಶೇಷವಾಗಿ ಉತ್ತರ ಕರ್ನಾಟಕವನ್ನು ಎಲ್ಲ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ಸಂಕಲ್ಪ ಮಾಡೋಣ ಎಂದರು.

ಸನ್ಮಾನ ಸಮಿತಿ ಅಧ್ಯಕ್ಷ ಶಂಕರಣ್ಣ ಮುನವಳ್ಳಿ ಅವರು ಸಭಾಪತಿ ಬಸವರಾಜ ಹೊರಟ್ಟಿ ಬಗ್ಗೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಬಸವರಾಜ ಹೊರಟ್ಟಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ವೇಳೆ ಸಂಸದ ಜಗದೀಶ ಶೆಟ್ಟರ, ಸಚಿವ ಎಚ್.ಕೆ.ಪಾಟೀಲ್, ಸಚಿವ ಸಂತೋಷ ಲಾಡ್, ಶಾಸಕರಾದ ಅರವಿಂದ ಬೆಲ್ಲದ, ಕೋನರೆಡ್ಡಿ, ಮಹೇಶ್ ಟೆಂಗಿನಕಾಯಿ, ಎಂ.ಆರ್ .ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಸಲೀಂ ಅಹ್ಮದ್, ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ವಸಂತ ಹೊರಟ್ಟಿ, ರಾಜಣ್ಣ ಕೊರವಿ, ಮೋಹನ ಲಿಂಬಿಕಾಯಿ, ಲಿಂಗರಾಜ ಪಾಟೀಲ, ವೀರೇಶ ಸಂಗಳದ ಸೇರಿದಂತೆ ಹಲವರು ಇದ್ದರು.

> ನನಗಿಂತ ಮೂರು ವರ್ಷ ಮೊದಲು ಹೊರಟ್ಟಿ ಅವರು ರಾಜಕಾರಣಕ್ಕೆ ಬಂದಿದ್ದರು. 1980 ರಿಂದ ಇವತ್ತಿನ ವರೆಗೂ ನಾಲ್ಕು ದಶಕಕ್ಕೂ ಹೆಚ್ಚುಕಾಲ ನನ್ನ ಅವರ ಸ್ನೇಹವಿದೆ. ಶಿಕ್ಷಕರ ಕ್ಷೇತ್ರದಿಂದ ನಿರಂತರ 8 ಬಾರಿ ಆಯ್ಕೆಯಾಗುವುದು ಸಾಮಾನ್ಯ ವಿಷಯವಲ್ಲ. ಶಿಕ್ಷಕರು ಹಾಗೂ ಜನರ ಸಮಸ್ಯೆಗಳನ್ನು ಪರಿಹರಿಸುತ್ತಾ ಬಂದಿದ್ದಾರೆ.
>
> -ಸಿದ್ದರಾಮಯ್ಯ ಮುಖಮಂತ್ರಿ

> ನನ್ನ ಮೇಲೆ ಇರುವ ಪ್ರೀತಿ, ವಿಶ್ವಾಸಕ್ಕೆ ಋಣಿಯಾಗಿರುತ್ತೇನೆ. ಯಾರಿಗೂ ದ್ರೋಹ ಮಾಡದೇ ಪ್ರತಿಯೊಬ್ಬರಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತೇನೆ. ಇದು ನನ್ನ ಜೀವನ ಅಪರೂಪದ ಕ್ಷಣವಾಗಿದೆ. ಶಂಕರಣ್ಣ ಮುನವಳ್ಳಿ ಸಂಗಡಿಗರು ದೊಡ್ಡ ಸಮಾರಂಭ ಮಾಡಿದ್ದಾರೆ. ಕರ್ನಾಟಕದ ಎಲ್ಲ ಜಿಲ್ಲೆಯಿಂದ ಜನ ಸಮಾರಂಭಕ್ಕೆ ಬಂದಿದ್ದು, ಕೃತಜ್ಞತೆ ಸಲ್ಲಿಸುತ್ತೇನೆ.
>
> -ಬಸವರಾಜ ಹೊರಟ್ಟಿ ಪರಿಷತ್ ಸಭಾಪತಿ

ಯತ್ನಾಳ ವಿರುದ್ಧ ಮಾನನಷ್ಟ ಮೊಕದ್ದಮೆಗೆ ಚಿಂತನೆ

ಶಿವಮೊಗ್ಗ: ಶಾಸಕ ಬಸನಗೌಡ ಪಾಟೀಲ ಯತ್ನಾಳ ನನ್ನ ವಿರುದ್ಧ ಪದೇ ಪದೆ ಸುಳ್ಳು ಆರೋಪಗಳ ಮಾಡುತ್ತಿದ್ದಾರೆ. ಅವರ ವಿರುದ್ಧ ₹1 ಇಲ್ಲವೇ ₹1 ಕೋಟಿ ಪರಿಹಾರ ಕೋರಿ ಮಾನನಷ್ಟ ಮೊಕದ್ದಮೆ ಹೂಡಲು ಚಿಂತನೆ ನಡೆಸಿದ್ದೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಡಿ.ಕೆ.ಶಿವಕುಮಾರ್ ಸಿಎಂ ಹಾಗೂ ವಿಜಯೇಂದ್ರ ಡಿಸಿಎಂ ಆಗಲು ಯೋಜನೆ ನಡೆದಿದ್ದು, ಡಿ.ಕೆ.ಶಿವಕುಮಾರ್ ಅವರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಳಿಗೆ ವಿಜಯೇಂದ್ರ ಕರೆದೊಯ್ದು ಚರ್ಚೆ ನಡೆಸಿದ್ದಾರೆ' ಎಂಬ ಬಸನಗೌಡ ಪಾಟೀಲ ಯತ್ನಾಳ ಆರೋಪ ಕುರಿತ ಪ್ರಶ್ನೆಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಯತ್ನಾಳ ಅವರಿಗೆ ನನ್ನ ಬಗ್ಗೆ ಮಾತನಾಡದಿದ್ದರೆ ಊಟ ಸೇರುವುದಿಲ್ಲ. ನನ್ನ ತಾಳ್ಮೆಗೂ ಮಿತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕುರ್ಚಿ ಗದ್ದಲದಲ್ಲಿ ಅಭಿವೃದ್ಧಿ ಕಾರ್ಯ ಹಾಗೂ ರೈತರ ಹಿತ ಕಡೆಗಣಿಸಲ್ಪಟ್ಟಿದೆ. ಯತೀಂದ್ರ ಸಿದ್ದರಾಮಯ್ಯ ಅವರೇ ಕಾಂಗ್ರೆಸ್‌ನ ಹೈಕಮಾಂಡ್ ಸಿದ್ಧರಾಮಯ್ಯನವರೇ ಇರಬಹುದೇ ಎಂಬ ಸಂದೇಹ ಕಾಡುತ್ತಿದೆ. ಹೈಕಮಾಂಡ್ ರೀತಿ ವರ್ತಿಸುತ್ತಾ ಯತೀಂದ್ರ ಸಿಎಂ ಸ್ಥಾನದ ಬಗ್ಗೆ ಹೇಳಿಕೆ ನೀಡುತ್ತಿದ್ದಾರೆ. ಖಾಸಗಿಯಾಗಿ ಮಾತಾಡುವಾಗ ಸ್ವತಃ ಕಾಂಗ್ರೆಸ್ ಶಾಸಕರೇ ಯತೀಂದ್ರ ಅವರನ್ನು ಪಕ್ಷದ ಹೈಕಮಾಂಡ್ ಎಂದು ಕಾಲೆಳೆಯುತ್ತಾರೆ ಎಂದರು.

ರಾಜ್ಯದಲ್ಲಿ ಗಾಂಜಾ ಸೇರಿದಂತೆ ಡ್ರಗ್ಸ್ ಹಾವಳಿ ಮಿತಿಮೀರಿದೆ. ನೂರಾರು ಕೋಟಿ ಮೊತ್ತದ ಡ್ರಗ್ಸ್ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಸರಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಈ ಡ್ರಗ್ಸ್ ಜಾಲದ ಬುಡಕ್ಕೆ ಹೋಗಿ, ಅದರ ಹಿಂದೆ ಇರುವ ಪ್ರಭಾವಿ ಶಕ್ತಿಗಳನ್ನು ಮಟ್ಟಹಾಕುವ ಕೆಲಸ ಮಾಡಬೇಕು.

- ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಇಂದು ಲೇಖಕಿಯರ ಸಂಘದ ಚುನಾವಣೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಲೇಖಕಿಯರಾದ ಆರ್. ಸುನಂದಮ್ಮ ಮತ್ತು ನಿರ್ಮಲಾ ಸಿ. ಎಲಿಗಾರ್ ಸ್ಪರ್ಧಿಸಿದ್ದು, ಶಂಕರಪುರದಲ್ಲಿರುವ ಅಶೋಕ ಶಿಶುವಿಹಾರದಲ್ಲಿ ಭಾನುವಾರ ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ರಾಜ್ಯಾದ್ಯಂತ 1,600 ಮತದಾರರಿದ್ದಾರೆ. ಇವರಲ್ಲಿ ಬೆಂಗಳೂರು ಹೊರತುಪಡಿಸಿ, ಇತರೆ ಜಿಲ್ಲೆಗಳಿಂದ ಅಂಚೆ ಮೂಲಕ ಮತ ದಾನ ನಡೆದಿದೆ. ಬೆಂಗಳೂರಿನಲ್ಲಿ 700 ಮತದಾರರಿದ್ದು, ಭಾನುವಾರ ಮತದಾನ ನಡೆಯಲಿದೆ. ಸಂಜೆ ಫಲಿತಾಂಶ ಪ್ರಕಟಗೊಳ್ಳಲಿದೆ ಎಂದು ಚುನಾವಣಾಧಿಕಾರಿ ಪ್ರತಿಭಾ ತಿಳಿಸಿದ್ದಾರೆ.

... ಬಲ ನಿರ್ಣಯ

ಮೊದಲಪುಟದಿಂದ

ಡಿಕೆಶಿ ಅವರನ್ನು ಬಿಜೆಪಿಗೆ ಕರೆತರುವ ಯತ್ನದ ಬಗ್ಗೆ ಯತ್ನಾಳ್ ಹೇಳಿಕೆ ಕುರಿತಂತೆ, ಅವರು ಪ್ರತಿಪಕ್ಷದವರು. ನಮ್ಮನ್ನು ಟೀಕೆ, ವಿರೋಧ ಮಾಡುವುದೇ ಅವರ ಕೆಲಸ. ರಾಜಕೀಯವಾಗಿ ಅವರು ಏನಾದರೂ ಹೇಳಬಹುದು. ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿ, ಹಿಂದೆ ಕೂರಿಸಿದ್ದಾರೆ ಎಂದು ಇಕ್ಬಾಲ್ ಹುಸೇನ್ ಹೇಳಿದರು.

ಇಂದು ಬೆಳಗ್ಗೆ ಆಪ್ತರೊಂದಿಗೆ ದೆಹಲಿಗೆ ಸಿಎಂ: ಶನಿವಾರ ರಾತ್ರಿ ಡಿ.ಕೆ.ಶಿವಕುಮಾರ್ ದೆಹಲಿ ತಲುಪಿದ್ದರೆ, ಅವರು ಡಿಕೆಶಿ ಆಪ್ತ ಶಾಸಕರು ಶನಿವಾರ ಬೆಳಗ್ಗೆಯೇ ದೆಹಲಿಗೆ ಹೋಗಿದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರಲ್ಲಿ ಕೆಲವರು ಮಾತ್ರ ದೆಹಲಿಗೆ ಹೋಗಿದ್ದು, ಭಾನುವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಆಪ್ತರು ಹೋಗುವ ಸಾಧ್ಯತೆಯಿದೆ. ಶಿವಕುಮಾರ್ ಆಪ್ತರು ಒಂದು ದಿನ ಮೊದಲೇ ತೆರಳಿದ್ದರೂ, ಸಿದ್ದರಾಮಯ್ಯ ಆಪ್ತರು ಏಕೆ ತೆರಳಿಲ್ಲ ಎನ್ನುವ ಬಗ್ಗೆ ಸ್ಪಷ್ಟನೆ ಇಲ್ಲ.

20 ನಿಮಿಷಕ್ಕೆ ಹೊರನಡೆದ ಮೆಸ್ಸಿ, ಕೋಲ್ಕತಾ ಮೈದಾನ ರಣರಂಗ

ಮೊದಲಪುಟದಿಂದ

ಆಗಿದ್ದೇನು?: ಮೆಸ್ಸಿ ಶನಿವಾರ ಬೆಳಗ್ಗೆ 11.30ರ ಸುಮಾರಿಗೆ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣಕ್ಕೆ ಸ್ಟ್ರೈಕರ್ ಲೂಯಿಸ್ ಸ್ವಾರೆಜ್ ಮತ್ತು ಅರ್ಜೆಂಟೀನಾ ತಂಡದ ಸಹ ಆಟಗಾರ ರೊಡ್ರಿಗೋ ಡಿ ಪಾಲ್ ಅವರೊಂದಿಗೆ ಆಗಮಿಸಿದರು, ಮೊದಲು ಮೈದಾನಕ್ಕೆ ಇಳಿದರು. ಅಲ್ಲಿ ಸ್ವಲ್ಪ ಸಮಯ ಓಡಾಡಿ ಜನಸಮೂಹದತ್ತ ಕೈ ಬೀಸಿದರು. ಮೆಸ್ಸಿ ಉದ್ದಕ್ಕೂ ನಿಂತಿದ್ದ ವಿಐಪಿಗಳು, ಸಂಘಟಕರು ಮತ್ತು ಭದ್ರತಾ ಸಿಬ್ಬಂದಿಯಿಂದ ಸುತ್ತುವರಿದಿದ್ದರು, ಗ್ಯಾಲರಿಗಳಿಂದ ಪ್ರೇಕ್ಷಕರ ಮೆಸ್ಸಿಯನ್ನು ನೋಡಲು ಸಾಧ್ಯವಾಗಲೇ ಇಲ್ಲ. ಅಭಿಮಾನಿಗಳು ರೊಚ್ಚಿಗೆದ್ದರು.

ನಮಗೆ ಮೆಸ್ಸಿ ಬೇಕು ಎಂಬ ಘೋಷಣೆ ಗಳು ಗ್ಯಾಲರಿಯಿಂದ ಕೇಳಿಬರುತ್ತಲೇ ಇತ್ತು, ಸ್ವಲ್ಪ ಹೊತ್ತು ಕಾದರು. ಹಲವಾರು ಆಹ್ವಾನಿತ ಗಣ್ಯರು ಬರುವ ಮೊದಲೇ, ಕೆಲವೇ ನಿಮಿಷಗಳಲ್ಲಿ ಅರ್ಜೆಂಟೀನಾದ ತಾರೆ ಮೆಸ್ಸಿಯನ್ನು ಕ್ರೀಡಾಂಗಣದಿಂದ ಹೊರಗೆ ಕರೆದೊಯ್ದಾಗ ಅಭಿಮಾನಿಗಳ ಆಕ್ರೋಶ, ಕೋಪದ ಕಟ್ಟೆಯೊಡೆಯಿತು. ನಿರಾಶೆಗೊಂಡ ಬೆಂಬಲಿಗರು ಮೈದಾನಕ್ಕೆ ನುಗ್ಗಿ ಬಾಟಲಿಗಳನ್ನು ಎಸೆದು, ಗ್ಯಾಲರಿಗಳಲ್ಲಿದ್ದ ಬ್ಯಾನರ್‌ಗಳು, ಪ್ಲಾಸ್ಟಿಕ್ ಕುರ್ಚಿಗಳನ್ನು ಹಾನಿಗೊಳಿಸಿ ದರು. ಕೆಲವು ಪ್ರೇಕ್ಷಕರು ಗ್ಯಾಲರಿಯ ಬ್ಯಾರಿಕೇಡ್‌ಗಳನ್ನು ಹರಿದು ಮೈದಾನ ದೊಳಗೆ ನುಗ್ಗಿದರು. ಪೊಲೀಸರು ಅವರನ್ನು ನಿಯಂತ್ರಿಸಲು ಹರಸಾಹಸಪಟ್ಟರು. ಮೆಸ್ಸಿಯನ್ನು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಹೊರಗೆ ಕರೆದೊಯ್ದು ಹೆಚ್ಚುವರಿ ಭದ್ರತೆಯನ್ನು ನಿಯೋಜಿಸಲಾಗಿ ದ್ದರಿಂದ ಪರಿಸ್ಥಿತಿ ಸಂಪೂರ್ಣವಾಗಿ ನಿಯಂತ್ರಣ ತಪ್ಪಲಿಲ್ಲ. ಆದರೆ ಇಂದಿನ ಘಟನೆ ಜಾಗತಿಕ ಫುಟ್‌ಬಾಲ್ ಐಕಾನ್ ಲಿಯೋನೆಲ್ ಮೆಸ್ಸಿ ಭಾರತಕ್ಕೆ ಬಂದಾಗ ಒಂದು ಕಪ್ಪುಚುಕ್ಕೆಯಾಗಿ ಶಾಶ್ವತವಾಗಿ ಉಳಿಯುವಂತಾಯಿತು.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ|| ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು–560029.
ಫೋನ್: 25536567/26096832/910/854 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಸಂಖ್ಯೆ: ಕಹಾಮ/ಖರೀದಿ/ಟೆಂಡರ್–852/2025–26 ದಿನಾಂಕ: 12.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ / KPP Portal ಮುಖಾಂತರ)

ಕರ್ನಾಟಕ ಹಾಲು ಮಹಾಮಂಡಳ, ಬೆಂಗಳೂರು ವತಿಯಿಂದ ಕಹಾಮದ **ನಂದಿನಿ ಐಸ್ ಕ್ರೀಂ ಪ್ಲಾಂಟ್, ಬಳ್ಳಾರಿ ಘಟಕಕ್ಕೆ ಅವಶ್ಯಕವಿರುವ ವಿವಿಧ ಪ್ಯಾಕಿಂಗ್ ಸಾಮಗ್ರಿಗಳು/ದಿನಬಳಕೆ ವಸ್ತುಗಳನ್ನು ಖರೀದಿಸಲು** ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ **https://kppp.karnataka.gov.in**ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, **ಸಹಾಯವಾಣಿ ಸಂ.8046010000/ 8068948777.**

ಟೆಂಡರ್ ಶುರುವಾಗುವ ದಿನಾಂಕ : **12.12.2025,** ಪೂರ್ವಭಾವಿ ಸಭೆ : **16.12.2025 ಬೆಳಿಗ್ಗೆ 11.00 ಗಂಟೆಗೆ,** ಟೆಂಡರ್ ಅಪ್‌ಲೋಡಿಂಗ್ ಮಾಡಲು ಕಡೆಯ ದಿನಾಂಕ : **26.12.2025 ಸಂಜೆ 5.00 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **29.12.2025 ಬೆಳಿಗ್ಗೆ 11.00 ಗಂಟೆಗೆ,** ವಾಣಿಜ್ಯ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ.**

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಗೃಹ ಸಚಿವರ ತವರಲ್ಲೇ ತಾರಕಕ್ಕೇರಿದ ಅಬಕಾರಿ ಅಕ್ರಮ

ಕೆ.ಜಿ.ಲೋಕೇಶ್ ಬಾಬು ಬೆಳಗಾವಿ

ರಾಜ್ಯದ ಕಾನೂನು ಸುವ್ಯವಸ್ಥೆ ಜವಾಬ್ದಾರಿ ಹೊತ್ತ ಗೃಹ ಸಚಿವರ ತವರಿನಲ್ಲೇ ಅಬಕಾರಿ ಅಕ್ರಮ ತಾರಕಕ್ಕೇರಿದೆ.

ತುಮಕೂರು ಜಿಲ್ಲೆ ಮೊದಲ ಸ್ಥಾನದಲ್ಲಿದ್ದರೆ, ನಂತರದಲ್ಲಿ ಶಿವಮೊಗ್ಗ, ಕೋಲಾರ



ಈ ಅಕ್ರಮದಲ್ಲಿ ಮೊದಲ ಮೂರು ಸ್ಥಾನಗಳ ಪೈಕಿ ತುಮಕೂರು ಜಿಲ್ಲೆ ಮೊದಲ ಸ್ಥಾನದಲ್ಲಿದ್ದರೆ, ನಂತರದಲ್ಲಿ ಶಿವಮೊಗ್ಗ, ಕೋಲಾರ ಸ್ಥಾನದಲ್ಲಿವೆ. ಬೆಂಗಳೂರು ನಗರ ಜಿಲ್ಲೆ (04) ಕೊನೆಯ ಸ್ಥಾನದಲ್ಲಿರುವುದನ್ನು ಸರಕಾರದ ಅಧೀಕೃತ ಅಂಕಿಅಂಶಗಳು ದೃಢೀಕರಿಸಿವೆ. ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಅವರು ಅಬಕಾರಿ ಅಕ್ರಮ ಕುರಿತು ಕೇಳಲಾದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅಬಕಾರಿ ಸಚಿವರು, ಕಳೆದ ಮೂರು ವರ್ಷಗಳ ಅವಧಿ ಯಲ್ಲಿ ರಾಜ್ಯದಲ್ಲಿ ಅಬಕಾರಿ ಅಕ್ರಮ ಕುರಿತು 281489 ದಾಳಿ ನಡೆದಿದೆ. ಆ ಪೈಕಿ 14992 ಘೋರ ಪ್ರಕರಣ ಗಳಾಗಿದ್ದರೆ, 142960 ಕಲಂ 15ಎ ಅಡಿ ದಾಖಲಾಗಿವೆ. ಒಟ್ಟಾರೆ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ 157952 ಪ್ರಕರಣ ದಾಖಲಾಗಿವೆ.

ಜಿಲ್ಲಾವಾರು ದಾಖಲಾದ ಪ್ರಕರಣ: ಘೋರ ಹಾಗೂ ಕಲಂ 15ಎ ಪ್ರಕಾರ ಜಿಲ್ಲಾವಾರು ಪೈಕಿ ತುಮಕೂರು 8202 ಪ್ರಕರಣ, ಶಿವಮೊಗ್ಗ 6908, ಕೋಲಾರ 5786, ಹಾಸನ 5306, ಹಾವೇರಿ 5257, ಮಂಡ್ಯ 5085, ಕಲಬುರಗಿ 4991, ಬಳ್ಳಾರಿ 4915, ದಾವಣಗೆರೆ 4907, ದಕ್ಷಿಣ ಕನ್ನಡ 4701, ಉತ್ತರ ಕನ್ನಡ 4472, ಚಿತ್ರದುರ್ಗ 4433, ಬೆಂಗಳೂರು ನಗರ ಜಿಲ್ಲೆ (06) 4277, ವಿಜಾಪುರ 4228, ಬೆಳಗಾವಿ ಉತ್ತರ 4171, ಬೀದರ್ 4163, ಬೆಂಗಳೂರು ನಗರ ಜಿಲ್ಲೆ (08) 4133, ಬೆಳಗಾವಿ ದಕ್ಷಿಣ 3896, ಬಾಗಲಕೋಟೆ 3893, ಮೈಸೂರು ಗ್ರಾಮಾಂತರ 3834, ಧಾರವಾಡ 3805, ಚಿಕ್ಕಬಳ್ಳಾಪುರ 3749, ಬೆಂಗಳೂರು ನಗರ ಜಿಲ್ಲೆ (02) 3724, ಗದಗ 3714, ರಾಯಚೂರು 3691, ಚಿಕ್ಕಮಗಳೂರು 3614, ಬೆಂಗಳೂರು ನಗರ ಜಿಲ್ಲೆ (03) 3517, ಬೆಂಗಳೂರು ದಕ್ಷಿಣ 3260, ಯಾದಗಿರಿ 3088, ಕೊಪ್ಪಳ 2888, ಬೆಂಗಳೂರು ನಗರ ಜಿಲ್ಲೆ(01) 2863, ಚಾಮರಾಜನಗರ 2836, ಬೆಂಗಳೂರು ಗ್ರಾಮಾಂತರ 2821, ಉಡುಪಿ 2677, ಬೆಂಗಳೂರು ನಗರ ಜಿಲ್ಲೆ (07) 2623, ಮೈಸೂರು 2610, ಬೆಂಗಳೂರು ನಗರ ಜಿಲ್ಲೆ(05) 2511, ಕೊಡಗು 2361, ವಿಜಯನಗರ 2035 ಹಾಗೂ ಬೆಂಗಳೂರು ನಗರ ಜಿಲ್ಲೆ (04) 2007 ಪ್ರಕರಣ ದಾಖಲಾಗಿವೆ.

ನಿರಂತರ ಮದ್ಯಸಾರ ಕಳ್ಳತನ: ನಕಲಿ ಮದ್ಯ ತಯಾರಿಸಲು ಬಳಸುವ ಸ್ಪಿರಿಟ್ ಮತ್ತು ಕಚ್ಚಾ ವಸ್ತುಗಳು ರಾಜ್ಯಕ್ಕೆ ನುಸುಳುತ್ತಿರುವ ಪ್ರಕರಣಗಳನ್ನು ಗುರುತಿಸಲಾಗಿದೆ. ಮಾತ್ರವಲ್ಲ, ಅಕ್ರಮವಾಗಿ ತಯಾರಿಸಲಾಗುವ ಮದ್ಯಕ್ಕೆ ಬೇಕಾಗುವ ಮದ್ಯಸಾರ(ಸ್ಪಿರಿಟ್)ವನ್ನು ಮಧ್ಯಪ್ರದೇಶ, ಉತ್ತರಪ್ರದೇಶ, ಮಹಾರಾಷ್ಟ್ರ ಹಾಗೂ ಪಂಜಾಬ್ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಹಾಗೂ ರಾಜ್ಯದ ಮೂಲಕ ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಅಧಿಕೃತವಾಗಿ ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ಮದ್ಯಸಾರವನ್ನು ಸಾಗಣೆ ಮಾಡುವ ವಾಹನಗಳಿಂದ ಕಳ್ಳತನ ಮಾಡುತ್ತಿರುವುದನ್ನು ಪತ್ತೆ ಮಾಡಲಾಗಿದೆ.

ನಕಲಿ ಮದ್ಯ ತಯಾರಿಸಲು ಬೇಕಾದ ಇತರೆ ಪರಿಕರಗಳಾದ ಲೇಬಲ್, ಎಸೆನ್ಸ್, ಕ್ಯಾರಾಮಲ್, ಖಾಲಿ ಬಾಟಲ್‌ಗಳು ಇತ್ಯಾದಿಗಳನ್ನು ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಿಂದ ಬರುತ್ತಿರುವುದನ್ನು ಪತ್ತೆಹಚ್ಚಲಾಗಿದೆ. ಅಕ್ರಮ ಮದ್ಯ ತಯಾರಿಸಲು ಬೇಕಾದ ಪರಿಕರಗಳನ್ನು ಹೆಚ್ಚಾಗಿ ಕೊರಿಯರ್ ಮೂಲಕ ಸರಬರಾಜು ಮಾಡುತ್ತಿರುವುದು ಕಂಡುಬಂದಿದೆ.

ನೈಜತೆಯ ಪರೀಕ್ಷೆ

ಮದ್ಯದ ಬಾಟಲ್‌ಗಳಿಗೆ ಅಂಟಿಸುವ ಅಬಕಾರಿ ಭದ್ರತಾ ಚೀಟಿಗಳ ಮೇಲೆ ಮುದ್ರಿತವಾದ ಕ್ಯೂಆರ್ ಕೋಡ್ ಅನ್ನು ಬಳಸಿ ಇಲಾಖಾಧಿಕಾರಿಗಳು ಸನ್ನದು ಮಳಿಗೆಗಳಲ್ಲಿ ಅಥವಾ ಅನಧಿಕೃತ ಸ್ಥಳಗಳಲ್ಲಿ K-SEAL-EO App ಮೂಲಕ ಮದ್ಯದ ಬಾಟಲುಗಳ ನೈಜತೆಯನ್ನು ತಿಳಿಯುವ ಕಾರ್ಯ ನಡೆಯುತ್ತಿದೆ. ನಕಲಿ ಎಂದು ಪತ್ತೆಯಾದಲ್ಲಿ ಅದನ್ನು ಖಾತ್ರಿಪಡಿಸಿಕೊಳ್ಳಲಾಗುವ ತಾಂತ್ರಿಕ ವ್ಯವಸ್ಥೆಯು ಜಾರಿಯಲ್ಲಿದೆ. ಬೆಂಗಳೂರಿನಲ್ಲಿ ಕೇಂದ್ರ, ಮುಖ್ಯ ರಾಸಾಯನಿಕ ಪ್ರಯೋಗಾಲಯ ಇದೆ. ಅಲ್ಲದೆ, ಎಫ್‌ಎಸ್‌ಎಸ್‌ಐನ ಪ್ರಾದೇಶಿಕ ಪ್ರಯೋಗಾಲಯಗಳಾದ ರಾಯಚೂರು, ಧಾರವಾಡ ಮತ್ತು ಚಿತ್ರದುರ್ಗ ಸಹ ಮದ್ಯವನ್ನು ಪರೀಕ್ಷಿಸಲಾಗುತ್ತದೆ.

ಘೋರ ಪ್ರಕರಣಗಳು

(ಜುಲೈಯಿಂದ ಜೂನ್‌ವರೆಗೆ)

- 2022-23ರಲ್ಲಿ 6678
- 2023-24ರಲ್ಲಿ 5529
- 2024-25ರಲ್ಲಿ 2785

ಕಲಂ 15ಎ ಪ್ರಕಾರ

(ಜುಲೈಯಿಂದ ಜೂನ್‌ವರೆಗೆ)

- 2022-23ರಲ್ಲಿ 59220
- 2023-24ರಲ್ಲಿ 56274
- 2024-25ರಲ್ಲಿ 27466

ನಡೆಸಲಾದ ದಾಳಿ

(ಜುಲೈಯಿಂದ ಜೂನ್‌ವರೆಗೆ)

- 2022-23ರಲ್ಲಿ 118770
- 2023-24ರಲ್ಲಿ 109599
- 2024-25ರಲ್ಲಿ 53120

ಸಮಾಚಾರ ಸಣ್ಣದಲ್ಲ

ವಿ.ಸೋಮಣ್ಣಗೆ ಸಿಎಂ ಆಗುವ ಅರ್ಹತೆ ಇದೆ

ತುಮಕೂರು: ಪ್ರಧಾನಿ ನರೇಂದ್ರ ಮೋದಿಯವರಿಗಿಂತಲೂ ವೇಗವಾಗಿ ಕೆಲಸ ಮಾಡುವ ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ಸಿಎಂ ಆಗುವ ಎಲ್ಲ ಅರ್ಹತೆ ಇದೆ ಎಂದು ಶಾಸಕ ಸುರೇಶ್ ಗೌಡ ಹೇಳಿದರು. ರೈಲ್ವೆ ಮೇಲ್ಸೆತುವೆ ಕಾಮಗಾರಿ ಶಂಕುಸ್ಥಾಪನೆ ಬಳಿಕ ಶಾಸಕ ಸುರೇಶ್ ಗೌಡ ತಮ್ಮ ಭಾಷಣದಲ್ಲಿ, ವಿ.ಸೋಮಣ್ಣ ಅವರು ಮಾಡುವ ಕೆಲಸಗಳನ್ನು ಪ್ರಧಾನಿಯಿಂದಲೂ ಮಾಡಲು ಸಾಧ್ಯವಿಲ್ಲ ಎಂದು ಹಾಡಿ ಹೊಗಳಿದ್ದಾರೆ. ವಿ.ಸೋಮಣ್ಣ ಬಹಳ ಛಲ ಇಟ್ಟುಕೊಂಡು ಅಭಿವೃದ್ಧಿಗೆ ವೇಗ ಕೊಟ್ಟಿದ್ದಾರೆ. ಒಂದು ವರ್ಷದಲ್ಲಿ ಬಹಳ ಕೆಲಸ ಮಾಡಿದ್ದಾರೆ. ಅವರು ಸಚಿವರಾದಾಗ ನಾನೇ ಸಚಿವ ಆದಷ್ಟು ಖುಷಿಪಟ್ಟೆ. ಒಂದು ವರ್ಷದಲ್ಲಿ 20 ರೈಲ್ವೆ ಓವರ್ ಹಾಗೂ ಅಂಡರ್ ಬ್ರಿಡ್ಜ್‌ಗಳನ್ನು ಮಾಡಿದ್ದಾರೆ. ತುಮಕೂರು-ರಾಯದುರ್ಗ, ತುಮಕೂರು- ದಾವಣಗೆರೆ ರೇಲ್ವೆ ಮಾರ್ಗ 30 ವರ್ಷದಿಂದ ನನೆ ಗುದಿಗೆ ಬಿದ್ದಿತ್ತು. ಸೋಮಣ್ಣ ಬಂದು ಅದಕ್ಕೆಲ್ಲ ಮುಕ್ತಿ ಕೊಟ್ಟಿದ್ದಾರೆ ಎಂದು ಹೊಗಳಿದರು.

ಟೂರಿಂಗ್ ಟಾಕೀಸ್ ಆದ ಅಧಿವೇಶನ

ಹುಕ್ಕೇರಿ: ಬೆಳಗಾವಿ ಅಧಿವೇಶನ ಎಂಬುದು ಟೂರಿಂಗ್ ಟಾಕೀಸ್ ಎಂಬ ಹಣೆಪಟ್ಟಿ ಪಡೆದುಕೊಂಡಿದೆ ಎಂದು ಮಾಜಿ ಸಂಸದ ರಮೇಶ ಕತ್ತಿ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ 2006ರಿಂದ ಇಲ್ಲಿವರೆಗೆ 13 ಅಧಿವೇಶನಗಳು ನಡೆದಿವೆ. ಈಗ 14ನೇ ಅಧಿವೇಶನವೂ ಅರ್ಧದಷ್ಟು ಪೂರ್ಣಗೊಂಡಿದ್ದು, ಸರಕಾರಗಳು ಬೆಳಗಾವಿಯಲ್ಲಿ ನಡೆಸಿದ ಅಧಿವೇಶನಗಳು ಉತ್ತರ ಕರ್ನಾಟಕಕ್ಕೆ ಏನು ಅನುಕೂಲ ಒದಗಿಸಿವೆ ಎಂಬುದು ಜನರಿಗೆ ಗೊತ್ತಾಗಬೇಕು ಎಂದು ಆಗ್ರಹಿಸಿದರು. ಬೆಂಗಳೂರಿ ನಿಂದ ಬೆಳಗಾವಿಗೆ ಬರುವ ಸಚಿವ ಸಂಪುಟದ ಸಹೋದ್ಯೋಗಿಗಳು ಹಾಗೂ ಹಿರಿಯ ಅಧಿಕಾರಿ ಗಳು ಸುತ್ತಲಿನ ಜಿಲ್ಲೆಗಳಲ್ಲಿರುವ ಪರಿಸ್ಥಿತಿ ಅವ ಲೋಕಿಸಿ ಸರಕಾರಕ್ಕೆ ವರದಿ ಒಪ್ಪಿಸುವ ಕೆಲಸ ಪ್ರಾಮಾಣಿಕವಾಗಿ ಮಾಡಿದಲ್ಲಿ ಇಲ್ಲಿನ ಜನರ ಬದು ಕಿನಲ್ಲಿ ಬದಲಾವಣೆ ತರಬಹುದು ಎಂದರು. ಉತ್ತರ ಕರ್ನಾಟಕದ ಅಭಿವೃದ್ಧಿ ಬಗೆಗೆ ವಾದಿಸುವ ಜನ ಪ್ರತಿನಿಧಿಗಳನ್ನು ವೈರಿಗಳಂತೆ ಕಾಣುವ ಎಲ್ಲ ಪಕ್ಷಗಳ ಹಾಗೂ ನಾಯಕರ ಧೋರಣೆ ಬದಲಾಗಬೇಕು ಎಂದರು.

ದಲಿತ ಹಣ ದುರ್ಬಳಕೆ ಮಾಡಿದ್ದೇ ಸಿಎಂ ಸಾಧನೆ

ಬೆಂಗಳೂರು: ದಲಿತರ ಹಣ ದುರ್ಬಳಕೆ ಮಾಡಿದ್ದೇ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರಕಾರದ ಸಾಧನೆ ಎಂದು ವಿಧಾನ ಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದಲಿತ ಸಮುದಾಯದ ನಾಯಕರ ಬೆನ್ನಿಗೆ ಚೂರಿ ಹಾಕಿ ಎರಡು ಬಾರಿ ಅಧಿಕಾರಕ್ಕೇರಿರುವ ಸಿಎಂ ಸಿದ್ದರಾಮಯ್ಯನವರ ದಲಿತ ವಿರೋಧಿ ನೀತಿಗಳು ಅಲ್ಲಿಗೇ ನಿಂತಿಲ್ಲ. ದಲಿತರ ಅಭ್ಯುದಯಕ್ಕಾಗಿ ವಿನಿಯೋಗವಾಗ ಬೇಕಾಗಿದ್ದ 25,000 ಕೋಟಿ ರುಪಾಯಿ ಎಸ್‌ಸಿಪಿ/ಟಿಎಸ್‌ಪಿ ಹಣವನ್ನು ಗ್ಯಾರಂಟಿ ಹೆಸರಿನಲ್ಲಿ ಕಬಳಿಸಿ ದಲಿತರಿಗೆ ವಂಚನೆ ಮಾಡುತ್ತಿದ್ದೀರಲ್ಲ ಸಿಎಂ ಸಿದ್ದರಾಮಯ್ಯನವರೇ ಇದೇನಾ ನಿಮ ಸಾಮಾಜಿಕ ನ್ಯಾಯ? ಇದೇನಾ ದಲಿತರ ಬಗ್ಗೆ ನಿಮಗಿರುವ ಬದ್ಧತೆ? ಎಂದು ಪ್ರಶ್ನಿಸಿದ್ದಾರೆ. ಗ್ಯಾರಂಟಿ ಯೋಜ ನೆಗಳ ಹೆಸರಿನಲ್ಲಿ ಕನ್ನಡಿಗರ ಖಜಾನೆ ಲೂಟಿ ಮಾಡಿ ರಾಜ್ಯವನ್ನು ಅಭಿವೃದ್ಧಿಶೂನ್ಯ ಮಾಡಿರುವ ಕಾಂಗ್ರೆಸ್ ಸರಕಾರ ನಾಡಿನ ಬಡವರು, ರೈತರು, ಮಹಿಳೆಯರು ಹಾಗೂ ಯುವಕರಿಗೆ ಮೋಸ ಮಾಡುತ್ತಿದೆ ದಲಿತ ವಿರೋಧಿ ಕಾಂಗ್ರೆಸ್ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಎನ್‌ಆರ್ ರಾವ್ ಈ ದೇಶ ಕಂಡ ಅಪರೂಪದ ವಿಜ್ಞಾನಿ

ವೈಜ್ಞಾನಿಕ ಮನೋಭಾವ, ವೈಚಾರಿಕತೆ ಅಳವಡಿಸಿಕೊಳ್ಳುವುದೇ ಶಿಕ್ಷಣದ ಉದ್ದೇಶ: ಸಿಎಂ

ಗದಗ: ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ಅಳವಡಿಸಿಕೊಳ್ಳುವುದೇ ಶಿಕ್ಷಣದ ಉದ್ದೇಶ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಚಂದನ ಎಜುಕೇಶನ್ ಸೊಸೈಟಿ ಲಕ್ಷ್ಮೇಶ್ವರ ವತಿಯಿಂದ ಆಯೋಜಿಸಲಾಗಿದ್ದ ಭಾರತ ರತ್ನ ಪ್ರೊ. ಸಿಎನ್‌ಆರ್ ರಾವ್ 10ನೇ ವರ್ಷದ ವಿಜ್ಞಾನ ವಿಸ್ಮೃತ ಕಾರ್ಯಕ್ರಮ-2025 ಹಾಗೂ ಶ್ರೀ ಬಿ.ಎಸ್.ಪಾಟೀಲ ಅವರಿಗೆ 2025ನೇ ಸಾಲಿನ ಪ್ರತಿಷ್ಠಿತ ಚಂದನ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಿಎನ್‌ಆರ್ ರಾವ್ ಅವರು ಎಸ್‌ಎಸ್‌ಎಲ್‌ಸಿವರೆಗೆ ಕನ್ನಡ ಮಾಧ್ಯಮದಲ್ಲಿಯೇ ಕಲಿತವರು. ಪಾಟೀಲರು ಆಂಗ್ಲ ಮಾಧ್ಯಮ ಕಲಿತವರು. ಸಿಎನ್‌ಆರ್ ವಿಜ್ಞಾನದಲ್ಲಿ ಅತ್ಯಂತ ಎತ್ತರಕ್ಕೆ ಬೆಳೆದವರು. ಸಂಶೋಧನೆಯನ್ನು ಜೀವನವಾಗಿಸಿಕೊಂಡಿದ್ದ ಅವರಿಗೆ ಅವರ ಧರ್ಮಪತ್ನಿ ಒತ್ತಾಸೆಯಾಗಿದ್ದರು ಎಂದರು.

ಚಂದನ ಶ್ರೀ ವಿದ್ಯಾಲಯದಲ್ಲಿ ವಿಜ್ಞಾನಕ್ಕೆ, ವೈಚಾರಿಕತೆಗೆ ಹೆಚ್ಚು ಒತ್ತು ನೀಡಿರುವುದು ಉತ್ತಮ ಬೆಳವಣಿಗೆ. ಪ್ರತಿಯೊಬ್ಬ ಭಾರತೀಯ ವಿದ್ಯಾರ್ಥಿ ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ದೇಶ ಅನೇಕ ಜಾತಿ, ಧರ್ಮಗಳಿಂದ ಕೂಡಿದ್ದು, ಜಾತ್ಯತೀತ ಸಮಾಜ, ಸಮ ಸಮಾಜ ನಿರ್ಮಾಣ ಮಾಡಬೇಕು. ಅಸಮಾನತೆ ಹೋಗದೆ ಹೋದರೆ, ಕಲಿತವರು ಕಂದಾಚಾರ ಬಿಡದೇ ಹೋದರೆ ಮನುಷ್ಯ ಸಮಾಜ ಕಟ್ಟಲು ಸಾಧ್ಯವಿಲ್ಲ ಎಂದರು.

ಮೌಢ್ಯ ಹಾಗೂ ಕಂದಾಚಾರಗಳನ್ನು ಕೊನೆಗಾಣಿಸಬೇಕು. ಮೌಢ್ಯ ವಿರೋಧಿ ಕಾಯ್ದೆಯನ್ನು ಜಾರಿಗೆ ತಂದೆವು. ಬಸವಣ್ಣನವರ ನಾಡಿನಲ್ಲಿ ಹುಟ್ಟಿದ ನಾವು ಇಂದಿಗೂ ಮೌಢ್ಯಗಳನ್ನು ಆಚರಿಸಲಾಗುತ್ತಿರುವುದು ದುರ್ದೈವದ ಸಂಗತಿ. ಭ್ರಾತೃತ್ವ, ಸ್ವಾತಂತ್ರ್ಯ, ಸಮಾನತೆಗಳನ್ನು ಸಂವಿಧಾನ ತಿಳಿಸಿದ್ದು, ಇದು ಅಕ್ಷರಶಃ ಜಾರಿಯಾಗದೇ, ಜಾತಿ ವ್ಯವಸ್ಥೆಯಾಗಲಿ, ಅಸಮಾನತೆ ಯಾಗಲಿ ಹೋಗುವುದಿಲ್ಲ. ಮಾನವರಾಗಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಶಿಕ್ಷಣ ಅಗತ್ಯ ಎಂದರು.

ಎಲ್ಲ ಧರ್ಮಗಳೂ ಮಾನವೀಯತೆಯನ್ನು ಬೋಧಿಸುತ್ತವೆ. ಪಟ್ಟಭದ್ರ ಹಿತಾಸಕ್ತಿಗಳು ಧರ್ಮವನ್ನು ತಪ್ಪಾಗಿ ಅರ್ಥೈಸುತ್ತಿದ್ದಾರೆ. ಕಷ್ಟದಲ್ಲಿದ್ದಾಗ ತನ್ನ ಹಣೆಬರಹವೆಂದು ಸುಮ್ಮನಿರದೇ, ಇಚ್ಛಾಶಕ್ತಿಯಿಂದ ಶ್ರಮಿಸಿದರೆ, ಯಾವುದೇ ವರ್ಗದವರೂ ಸಾಧನೆಗಳನ್ನು ಮಾಡಬಹುದಾಗಿದೆ. ಶಿಕ್ಷಣವೆಂಬುದು ಒಂದು ವರ್ಗಕ್ಕೆ ಸೀಮಿತವಾದುದಲ್ಲ. ಪ್ರಾಮಾಣಿಕ ಪ್ರಯತ್ನ ಮತ್ತು ಅವಕಾಶಗಳನ್ನು ಸದುಪಯೋಗ ಪಡೆದು, ಉನ್ನತ ಸ್ಥಾನಕ್ಕೆ ತಲುಪಬಹುದು. ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ಅಳವಡಿಸಿಕೊಳ್ಳುವುದೇ ವಿಜ್ಞಾನದ ಉದ್ದೇಶ ಎಂದರು.

ಶ್ರೀ ಬಿ.ಎಸ್.ಪಾಟೀಲ ಅವರಿಗೆ 2025ನೇ ಸಾಲಿನ ಪ್ರತಿಷ್ಠಿತ ಚಂದನ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಸಚಿವ ಎಚ್.ಕೆ.ಪಾಟೀಲ್ ಮತ್ತಿತರರು ಭಾಗವಹಿಸಿದ್ದರು.

ಸುಶಿಕ್ಷಿತರಲ್ಲೇ ಜಾತೀಯತೆ ಹೆಚ್ಚು

ಬಸವಣ್ಣ ಇವನ್ಯಾರವ ಎನ್ನದಿರಿ ಎಂದು 850 ವರ್ಷಗಳ ಹಿಂದೆಯೇ ಹೇಳಿದ್ದರು. ಸ್ವಾತಂತ್ರ್ಯ ಬಂದು 79 ವರ್ಷಗಳಾದರೂ 76% ನಾವು ಸಾಕ್ಷರತೆ ಸಾಧಿಸಿದ್ದರೂ ಜಾತೀಯತೆ ಹೋಗಿಲ್ಲ. ಸುಶಿಕ್ಷಿತರಲ್ಲೇ ಜಾತೀಯತೆಯನ್ನು ಹೆಚ್ಚಾಗಿ ಕಾಣುತ್ತಿದ್ದು ಇದು ಹೋಗಬೇಕಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಪರಮೇಶ್ವರ್ ರಾಜ್ಯದ ಮುಖ್ಯಮಂತ್ರಿ ಆಗಲಿ

ತುಮಕೂರು: ಗೃಹ ಸಚಿವ ಜಿ.ಪರಮೇಶ್ವರ್ ಈ ರಾಜ್ಯದ ಮುಖ್ಯಮಂತ್ರಿ ಆಗಲಿ ಅನ್ನುವ ವೈಯಕ್ತಿಕ ಆಸೆ ನನಗಿದೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಅಭಿಪ್ರಾಯಪಟ್ಟಿದ್ದಾರೆ.

ತುಮಕೂರಿನ ಹೆಗ್ಗೆರೆಯಲ್ಲಿ ರೈಲ್ವೆ ಮೇಲ್ಸೆತುವೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ವೇದಿಕೆ ಭಾಷಣ ವೇಳೆ ಕೇಂದ್ರ ಸಚಿವ ವಿ.ಸೋಮಣ್ಣ ತಮ್ಮ ಇಂಗಿತ ಹೊರಹಾಕಿದರು. ಪರಮೇಶ್ವರ್ ಅದೃಷ್ಟದ ಗೃಹ ಮಂತ್ರಿಯಾಗಿದ್ದಾರೆ. ಎಲ್ಲೋ ಒಂದು ಕಡೆ ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಲಿ ಅನ್ನೋ ಆಸೆ ಇದೆ ಎಂದು ಹೇಳಿದರಲ್ಲದೇ ಇದನ್ನು ನಾನೊಬ್ಬನೇ ಹೇಳುತ್ತಿಲ್ಲ ತುಮಕೂರಿನ ಮಹಾಜನತೆಯ ಅಭಿಪ್ರಾಯ ಎಂದು ಹೇಳಿದರು.

ಈ ವೇಳೆ ಮಧ್ಯ ಪ್ರವೇಶ ಮಾಡಿದ ಶಾಸಕ ಸುರೇಶ್ ಗೌಡ, ಡಿಕೆಶಿ ಕೂಡ ಇದ್ದಾರೆ ಎಂದರು. ಇದೇ ವೇಳೆ ತುಮಕೂರಿನಲ್ಲಿ ತಮ್ಮ ಗೆಲುವಿಗೆ ಕಾಂಗ್ರೆಸ್ ನಾಯಕರೂ ಸಹಕರಿಸಿದ್ದಾರೆ ಎಂಬ ಸ್ಫೋಟಕ ಮಾಹಿತಿ ಹಂಚಿಕೊಂಡರು. ಬಿಜೆಪಿ-ಜೆಡಿಎಸ್ ನಾಯಕರು ನನ್ನ ಗೆಲುವಿಗೆ ಎಷ್ಟು ಸಹಕರಿಸಿದ್ದಾರೋ ಹಾಗೆಯೇ ಕಾಂಗ್ರೆಸ್‌ನ ಬಹುಕಾಲ ನಾಯಕರು ಸಾಥ್ ನೀಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಮುದ್ದಹನುಮೇಗೌಡರ ಸೋಲಿಗೆ ಪರೋಕ್ಷವಾಗಿ ಕಾಂಗ್ರೆಸ್ ನಾಯಕರೇ ಕಾರಣ ಅನ್ನೋದನ್ನು ಜಿ.ಪರಮೇಶ್ವರ್ ಇರುವ ವೇದಿಕೆಯಲ್ಲೇ ಸೋಮಣ್ಣ ಬಹಿರಂಗಪಡಿಸಿದರು.

ಮೆಟ್ರೋಗೆ ಕಾಂಗ್ರೆಸ್ ವಿರೋಧ

ಬೆಂಗಳೂರು-ತುಮಕೂರು ಮೆಟ್ರೊ ಯೋಜನೆಗೆ ಕಾಂಗ್ರೆಸ್ ನಾಯಕರು ವಿರೋಧ ಮಾಡುತಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಆರೋಪ ಮಾಡಿದ್ದಾರೆ. ತುಮಕೂರಿನ ಪಂಡಿತನಹಳ್ಳಿಯಲ್ಲಿ ರೈಲ್ವೆ ಮೇಲ್ಸೆತುವೆ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿ ಮಾತನಾಡಿದ ಅವರು, ನಿನ್ನೆ ಒಬ್ಬ ಕಾಂಗ್ರೆಸ್ ನಾಯಕರು ನನ್ನ ಬಳಿ ಬಂದು ತುಮಕೂರು ಮೆಟ್ರೋಗೆ ವಿರೋಧ ವ್ಯಕ್ತಪಡಿಸಿದರು. ಪರಮೇಶ್ವರ್ ಯಾಕೆ ತುಮಕೂರಿಗೆ ಮೆಟ್ರೋ ತೆಗೆದುಕೊಂಡು ಹೋಗುತ್ತಾರೆ ಎಂದು ಕೇಳಿದರು. ಅದಕ್ಕೆ ನಾನು ಇಲ್ಲ ಇಲ್ಲ. ಪರಮೇಶ್ವರ್ ಒಳ್ಳೆ ಕೆಲಸ ಮಾಡುತಿದ್ದಾರೆ. ನಾನು ಅದಕ್ಕೆ ಸಹಕಾರ ಕೊಡುತ್ತೇನೆ ಎಂದೆ. ಅದಕ್ಕೆ ಆ ಕಾಂಗ್ರೆಸ್ ನಾಯಕ ಸುಮ್ಮನಾದರು. ನಾನು ಸಚಿವನಾದ ಬಳಿಕ ತುಮಕೂರು, ರಾಯದುರ್ಗ, ದಾವಣಗೆರೆ ರೈಲು ಮಾರ್ಗ ಕಾಮಗಾರಿಗೆ ಚಾಲನೆ ಕೊಟ್ಟಿದ್ದೆನೆ. 20ಕ್ಕೂ ಹೆಚ್ಚು ಮೇಲ್ಸೆತುವೆ ಮಾಡಿದ್ದೇನೆ ಎಂದರು.

ಜ.6ಕ್ಕೆ ಡಿಕೆಶಿಗೆ ಪಟ್ಟಾಭಿಷೇಕ

ರಾಮನಗರ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕೆಂಬ ಬೇಡಿಕೆಗೆ ಪಕ್ಷದ ಹೈಕಮಾಂಡ್ ಸ್ಪಂದಿಸುತ್ತಿದೆ. ಜ.6ರಂದು ನಮ್ಮ ನಾಯಕನಿಗೆ ಸಿಎಂ ಪಟ್ಟಾಭಿಷೇಕವಾಗುವ ವಿಶ್ವಾಸವಿದೆ. ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಬಿಟ್ಟು ಕೊಡಬೇಕು. ನಮ್ಮ ಬೇಡಿಕೆ ಮತ್ತು ಡಿಕೆಶಿ ಅವರ ಹೋರಾಟಕ್ಕೆ, ಶ್ರಮಕ್ಕೆ ಪ್ರತಿಫಲ ಸಿಗಬೇಕು ಎಂದು ಡಿಕೆಶಿ ಅವರ ಆಪ್ತ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಹುಶಃ ಜ.6ರಂದು ಅವರಿಗೆ ಸಿಎಂ ಸ್ಥಾನ ಶೇ.99ರಷ್ಟು ಸಿಗುವ ವಿಶ್ವಾಸವಿದೆ. ಜ.6 ಮತ್ತು ಜ.9 ಅವರ ಅದೃಷ್ಟ ಸಂಖ್ಯೆಯಾಗಿದ್ದು, 6ರಂದೇ ಅವರಿಗೆ ಹುದ್ದೆ ಸಿಗಲಿದೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರೂ ರಾಜ್ಯದ ಆಸ್ತಿ ಎಂದು ತಿಳಿಸಿದರು. ಯತೀಂದ್ರ ಸಿದ್ದರಾಮಯ್ಯ ಅವರು ನಾಯಕತ್ವ ಬದಲಾವಣೆ ಇಲ್ಲ ಎಂಬ ಹೇಳಿಕೆ ಕುರಿತ ಪ್ರಶ್ನೆಗೆ, ಯಾರು ಏನೇ ಹೇಳಿಕೊಳ್ಳಲಿ. ರಾಜ್ಯದ ಜನ ಹಾಗೂ ಈ ಭಾಗದ ಶಾಸಕರು ಡಿಕೆಶಿಗೆ ಅವಕಾಶ ಕೊಡಿ ಅಂತ ಕೇಳಿದ್ದೇವೆ. ಶಿವಕುಮಾರ್ ಸಿಎಂ ಆಗೋದು ಖಚಿತ. ಕಾಂಗ್ರೆಸ್ ಶಿಸ್ತಿನ ಪಕ್ಷ. ವರಿಷ್ಠರ ತೀರ್ಮಾನಕ್ಕೆ ಎಲ್ಲರೂ ಬದ್ಧ ಎಂದರು.

ನನ್ನ ಹಾಗೂ ಅಮ್ಮನ ಮಧ್ಯೆ ಯಾವುದೇ ಗೊಂದಲ ಇಲ್ಲ

ಮೈಸೂರು: ಯುನಿಟಿ ಮಾಲ್ ತೆರೆಯಲು ನಮ್ಮ ವಿರೋಧ ಇಲ್ಲ. ಆದರೆ ಸರಕಾರ ಗೊಂದಲವಿಲ್ಲದ ಸ್ಥಳ ನೀಡದೆ ದಿಕ್ಕು ತಪ್ಪಿಸುವ ಕೆಲಸ ಮಾಡಿದೆ ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಯುನಿಟಿ ಮಾಲ್ ವಿಚಾರದಲ್ಲಿ ಸರಕಾರದಿಂದ ದಿಕ್ಕು ತಪ್ಪಿಸುವ ಕೆಲಸ: ಯದುವೀರ್

ಮೈಸೂರು ಯುನಿಟಿ ಮಾಲ್ ನಿರ್ಮಾಣಕ್ಕೆ ಹೈಕೋರ್ಟ್ ತಡೆ ನೀಡಿರುವ ಕುರಿತು ಮಾತನಾಡಿದ ಅವರು, ಯುನಿಟಿ ಮಾಲ್ ಸ್ಥಳ ನಾನು ಉದ್ಘಾಟಿಸಿರಲಿಲ್ಲ. ಆ ಸ್ಥಳಕ್ಕೆ ನಾನು ಗುದ್ದಲಿ ಪೂಜೆಯನ್ನೂ ಮಾಡಿರಲಿಲ್ಲ. ನಾನು ಆ ಸ್ಥಳದ ಕಾಮಗಾರಿ ಪರಿಶೀಲನೆ ಮಾಡಿದ್ದೇನೆ ಅಷ್ಟೆ. ಕೇಂದ್ರದ ಯೋಜನೆಗೆ ರಾಜ್ಯ ಸರಕಾರ ಯಾವುದೇ ಗೊಂದಲವಿಲ್ಲದ ಸ್ಥಳ ನೀಡಬೇಕು. ಆದರೆ, ಸರಕಾರ ದಿಕ್ಕು ತಪ್ಪಿಸುವ ಕೆಲಸ ಮಾಡಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಮೋದಾದೇವಿ ಒಡೆಯರ್ ಅವರು ಸ್ಪಷ್ಟಪಡಿಸಿದ್ದಾರೆ. ಈ ವಿಚಾರ ಸದ್ಯ ನ್ಯಾಯಾಲಯದಲ್ಲಿದೆ. ಈ ಹಂತದಲ್ಲಿ ಇದರ ಬಗ್ಗೆ ಹೆಚ್ಚು ಮಾತನಾಡಲ್ಲ ಎಂದರು.

ಸರಕಾರ ಹಣದ ಪರಿಹಾರ ನೀಡಿ ಬಿಕ್ಕಟ್ಟು ನಿವಾರಿಸಿದರೆ ಒಪ್ಪಿಗೆ ಇದೆಯಾ? ಎಂಬ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್, ಈ ಕುರಿತು ಜನಪ್ರತಿನಿಧಿಯಾಗಿ ಪ್ರಮೋದಾದೇವಿ ಅವರ ಜತೆ ಮಾತನಾಡಿರುವೆ. ಮುಂದಿನ ಹಂತದಲ್ಲಿ ಇದರ ಬಗ್ಗೆ ಮತ್ತಷ್ಟು ಚರ್ಚಿಸಿ ಕ್ರಮಕೈಗೊಳ್ಳಲಾಗುವುದು. ಯುನಿಟಿ ಮಾಲ್ ತೆರೆಯಲು ನಮ್ಮ ವಿರೋಧ ಇಲ್ಲ. ಆದರೆ, ಸೂಕ್ತ ಸ್ಥಳ ನೀಡದೆ ಗೊಂದಲ ಮಾಡಿರುವದನ್ನು ಪ್ರಶ್ನಿಸುವೆ. ಈ ರೀತಿ ಸರಕಾರದ ಯೋಜನೆಗೆ ಖಾಸಗಿ ಜಮೀನು ನೀಡಲೇಬಾರದು. ನಮ್ಮ ಹಾಗೂ ಅಮ್ಮನ ನಡುವೆ ಗೊಂದಲ ಎಂಬುದೇ ಅಪ್ರಸ್ತುತ ಎಂದು ತಿಳಿಸಿದರು.

ಆಳಂದ ಮತಗಳವು: ಕೋರ್ಟ್‌ಗೆ ಚಾರ್ಜ್‌ಶೀಟ್

ಹರ್ಷಾನಂದ ಗುತ್ತೇದಾರ್, ಸುಭಾಷ್ ಗುತ್ತೇದಾರ್ ಸೇರಿ 7 ಜನರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ಕಲಬುರಗಿ: ಕಳೆದ 2023ರ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದ ಮತಗಳವು ಯತ್ನ ಪ್ರಕರಣಕ್ಕೆ (ವೋಟ್ ಚೋರಿ) ಸಂಬಂಧಿಸಿದಂತೆ ವಿಶೇಷ ತನಿಖಾ ದಳ (ಎಸ್‌ಐಟಿ) ಬೆಂಗಳೂರಿನ ಎಸಿಎಂಎಂ ನ್ಯಾಯಾಲಯಕ್ಕೆ ಬೃಹತ್ ಚಾರ್ಜ್‌ಶೀಟ್ ಸಲ್ಲಿಸಿದೆ.

ಎಸ್‌ಐಟಿ ಒಟ್ಟು 22 ಸಾವಿರ ಪುಟಗಳ ಚಾರ್ಜ್‌ಶೀಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಇದರಲ್ಲಿ ಬಿಜೆಪಿ ಮಾಜಿ ಶಾಸಕ ಸುಭಾಷ್ ಗುತ್ತೇದಾರ್, ಅವರ ಪುತ್ರ ಹರ್ಷಾನಂದ ಗುತ್ತೇದಾರ್ ಸೇರಿದಂತೆ ಒಟ್ಟು ಏಳು ಜನರನ್ನು ಆರೋಪಿಗಳೆಂದು ಉಲ್ಲೇಖಿಸಲಾಗಿದೆ. ಸುಭಾಷ್ ಗುತ್ತೇದಾರ್ ಮತ್ತು ಹರ್ಷಾನಂದ್ ಗುತ್ತೇದಾರ್ ಈಗಾಗಲೇ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ.

ಈ ಬೆಳವಣಿಗೆಯ ಬೆನ್ನಲ್ಲೇ ಕಲಬುರಗಿಯಲ್ಲಿ ಪ್ರತಿಕ್ರಿಯೆ ನೀಡಿರುವ ಹರ್ಷಾನಂದ ಗುತ್ತೇದಾರ್, ಇದು ರಾಜಕೀಯ ಪ್ರೇರಿತ ಪ್ರಕರಣ ಎಂದು ಆರೋಪಿಸಿದ್ದಾರೆ. ನಮಗೆ ಇನ್ನೂ ಚಾರ್ಜ್‌ಶೀಟ್‌ನ ಮಾಹಿತಿ ಲಭ್ಯವಾಗಿಲ್ಲ. ಸೋಮವಾರ ನೋಟಿಸ್ ನೀಡಿ ಹೇಳಿಕೆ ಪಡೆದಿದ್ದರು. ಈ ಪ್ರಕರಣದಲ್ಲಿ ನಮ್ಮ ಪಾತ್ರವೇನೂ ಇಲ್ಲ ಎಂದು ಸ್ಪಷ್ಟಪಡಿಸಿದ್ದೆವು ಎಂದು ಹೇಳಿದ್ದಾರೆ.

ಸಚಿವನಾಗಲು ಸುಳ್ಳು ಆರೋಪ: ಚುನಾವಣೆಯಲ್ಲಿ ಬಿ.ಆರ್.ಪಾಟೀಲ್ ಗೆದ್ದ ನಂತರ ಎರಡು ವರ್ಷ ಈ ಪ್ರಕರಣದಲ್ಲಿ ಯಾವುದೇ ಬೆಳವಣಿಗೆ ಇರಲಿಲ್ಲ. ಆದರೆ, ಸರಕಾರ ತಮ್ಮದೇ ಇರುವುದರಿಂದ ಅಧಿಕಾರಿಗಳನ್ನು ಬಳಸಿಕೊಂಡು ತಮ್ಮ ತಂದೆ ಮತ್ತು ತಮ್ಮ ಹೆಸರನ್ನು ಸೇರಿಸಲಾಗಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ವೋಟ್ ಚೋರಿ' ಕುರಿತು ಪ್ರಸ್ತಾಪಿಸಿದ ನಂತರ, ಬಿ.ಆರ್.ಪಾಟೀಲ್ ಅವರು ಸಚಿವರಾಗಲು ಈ ವಿಷಯವನ್ನು ಬಳಸಿಕೊಂಡಿದ್ದಾರೆ ಎಂದು ಹರ್ಷಾನಂದ್ ಆರೋಪಿಸಿದರು.

ವೋಟ್ ಚೋರಿ ಕುರಿತು ನ್ಯಾಯಾಲಯದಲ್ಲಿ ಸಾಬೀತಾಗಲಿ. ನಮ್ಮ ಮನೆಯಲ್ಲಿ ಯಾವುದೇ ಲ್ಯಾಪ್‌ಟಾಪ್ ಸಿಕ್ಕಿಲ್ಲ. ಚಾರ್ಜ್ ಶೀಟ್‌ನಲ್ಲಿರುವ ಅಂಶಗಳ ಬಗ್ಗೆ ವಕೀಲರ ಮೂಲಕ ಪರಿಶೀಲಿಸುತ್ತೇವೆ. ನಮಗೆ ನ್ಯಾಯಾಲಯದ ಮೇಲೆ ಸಂಪೂರ್ಣ ವಿಶ್ವಾಸವಿದೆ. ದೆಹಲಿಯಲ್ಲಿ ರಾಹುಲ್ ಗಾಂಧಿ ನಡೆಸಲಿರುವ ವೋಟ್ ಚೋರಿ ಸಮಾವೇಶದ ಸಂದರ್ಭದಲ್ಲಿ ಬಿಜೆಪಿ ನಾಯಕರ ಹೆಸರನ್ನು ಉಲ್ಲೇಖಿಸಲು ಮತ್ತು ದೇಶಕ್ಕೆ ಸಂದೇಶ ನೀಡಲು ಈ ಚಾರ್ಜ್ ಶೀಟ್ ಅನ್ನು ತರಾತುರಿಯಲ್ಲಿ ಸಲ್ಲಿಸಲಾಗಿದೆ.

-ಹರ್ಷಾನಂದ್ ಗುತ್ತೇದಾರ್ ಬಿಜೆಪಿ ಮುಖಂಡ

ಆಳಂದ ಕ್ಷೇತ್ರದಲ್ಲಿ ಮತ ಕಳ್ಳತನ ನಡೆದಿರುವುದು ಸತ್ಯ

ಬಿಜೆಪಿ ಮುಖಂಡರ ವಿರುದ್ಧ ಚಾರ್ಜ್‌ಶೀಟ್ ಇದಕ್ಕೊಂದು ಪುರಾವೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಬೆಂಗಳೂರು: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತ ಕಳ್ಳತನ ನಡೆದಿರುವುದು ಸತ್ಯ. ಹೀಗಾಗಿ ಬಿಜೆಪಿ ಮಾಜಿ ಶಾಸಕ ಗುತ್ತೇದಾರ್ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ ಮಾಡುವ ಮೂಲಕ ಮತ ಕಳ್ಳತನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆಳಂದ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಅಕ್ರಮ ನಡೆದಿರುವುದು ಸತ್ಯ. ಗಂಭೀರವಾದ ತನಿಖೆ ನಡೆಸಿ ಚಾರ್ಜ್‌ಶೀಟ್ ಹಾಕಿದ್ದಾರೆ. ಈ ವಿಚಾರದ ಬಗ್ಗೆ ನಮ್ಮ ಶಾಸಕರು ಮಂಗಳವಾರದಂದು ಸದನದಲ್ಲಿ ದನಿ ಎತ್ತಲಿದ್ದಾರೆ. ಇದು ಕೇವಲ ಕರ್ನಾಟಕದ ದನಿಯಲ್ಲ. ಇಡೀ ಭಾರತದ ದನಿ. ಜನರ ಕೃಪೆಯಿಂದ ನಾವು ಇಲ್ಲಿ ಅಧಿಕಾರಕ್ಕೆ ಬಂದಿದ್ದೇವೆ ಎಂದರು.

ತನಿಖೆ ನಡೆಸಿ ಕ್ರಮ ತೆಗದುಕೊಂಡಿದ್ದಾರೆ. ಫೋನ್‌ನಲ್ಲಿ ದಾಖಲೆಗಳು ಡಿಲೀಟ್ ಆಗಿವೆ ಎಂದು ಇದೆ. ಇದರ ಬಗ್ಗೆ ವರದಿ ತರಿಸಿಕೊಂಡು ನೋಡಿ ಆನಂತರ ಮಾತನಾಡುತ್ತೇನೆ. ರಾಹುಲ್ ಗಾಂಧಿ ಅವರ ಸಲಹೆಯಂತೆ ಲೀಗಲ್ ಬ್ಯಾಂಕ್ ಅನ್ನು ಪ್ರತಿ ಕ್ಷೇತ್ರದಲ್ಲೂ ಪ್ರಾರಂಭ ಮಾಡಬೇಕು. ಈ ವಿಚಾರದ ಬಗ್ಗೆ ನಾವು ಹೋರಾಟ ಮಾಡುತ್ತೇವೆ ಎಂದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ನೋಟೀಸ್ ಬಂದಿದ್ದು ಅದಕ್ಕೆ ನಾನು ಉತ್ತರ ನೀಡಬೇಕಿದೆ. ಎಲ್ಲಾ ದಾಖಲೆ ತೆಗೆದುಕೊಂಡು ಹೋಗಿ ಅವರಿಗೆ ಉತ್ತರ ನೀಡುತ್ತೇನೆ.

- ಡಿ.ಕೆ.ಶಿವಕುಮಾರ್ ಡಿಸಿಎಂ

ಮತದಾರರ ಹಕ್ಕಿನ ರಕ್ಷಣೆಗೆ ಹೋರಾಟ ಆರಂಭ: ದೆಹಲಿಯಲ್ಲಿ ಮತ ಕಳ್ಳತನ ವಿರುದ್ಧದ ಹೋರಾಟ ಆರಂಭಿಸಿದ್ದೇವೆ. ಮತ ಕಳ್ಳತನ ವಿರುದ್ಧದ ಹೋರಾಟ ನಮ್ಮ ರಾಜ್ಯದಿಂದಲೇ ಆರಂಭವಾಗಿದ್ದು, ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ. ನಮ್ಮ ರಾಜ್ಯದಲ್ಲಿ ಚಿಲುಮೆ ಸಂಸ್ಥೆ ಮೂಲಕ ಈ ಹಿಂದೆ ಸಾವಿರಾರು ಬಿಎಲ್‌ಒಗಳನ್ನು ನೇಮಕ ಮಾಡಿ ಅಕ್ರಮ ಎಸಗಲಾಗಿತ್ತು. ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನ ಬದ್ಧವಾಗಿ ನಡೆದುಕೊಂಡು ಬಂದಿದೆ. ಈಗಾಗಲೇ ನಮ್ಮ ರಾಜ್ಯದ ಎಲ್ಲಾ ಮೂಲೆಗಳಿಂದ ಸಾವಿರಾರು ಕಾರ್ಯಕರ್ತರು, ಮುಖಂಡರು ದೆಹಲಿಗೆ ರೈಲು ಹಾಗೂ ಇತರೆ ಸಾರಿಗೆ ವ್ಯವಸ್ಥೆ ಮೂಲಕ ತೆರಳಿದ್ದಾರೆ. ಈ ಪ್ರತಿಭಟನೆಯಲ್ಲಿ 100ಕ್ಕೂ ಹೆಚ್ಚು ಶಾಸಕರು ಹಾಗೂ ಪರಿಷತ್ ಸದಸ್ಯರು ಭಾಗವಹಿಸುತ್ತಿದ್ದಾರೆ ಎಂದರು.

ನ್ಯಾಯಮೂರ್ತಿಗಳ ವಿರುದ್ಧ ವಾಗ್ದಂಡನೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಕ್ರೋಶ

ಇಂಡಿಯಾ ಒಕ್ಕೂಟದಿಂದ ನ್ಯಾಯಾಂಗಕ್ಕೆ ಧಮಕಿ

ಹುಬ್ಬಳ್ಳಿ: ತಮಿಳುನಾಡಿನ ತಿರುಪಕುಂದ್ರಂ ಬೆಟ್ಟದಲ್ಲಿರುವ ದೀಪಸ್ತಂಭದಲ್ಲಿ ದೀಪ ಹಚ್ಚುವ ಕುರಿತು ತೀರ್ಪು ನೀಡಿರುವ ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ವಿರುದ್ಧ ಪ್ರತಿಪಕ್ಷಗಳ ಇಂಡಿಯಾ ಒಕ್ಕೂಟ ವಾಗ್ದಂಡನೆ ಮತ್ತು ಪದಚ್ಯುತಿಗೆ ನಿರ್ಣಯ ಕೈಗೊಂಡಿರುವುದು ನ್ಯಾಯಾಂಗ ವ್ಯವಸ್ಥೆಗೆ ಧಮಕಿ ಹಾಕಿದಂತೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭ್ರಷ್ಟಾಚಾರ ಆರೋಪ, ಹುದ್ದೆಯ ದುರುಪಯೋಗ ಮಾಡಿಕೊಂಡರೆ ಮಾತ್ರ ನ್ಯಾಯಮೂರ್ತಿಯನ್ನು ವಾಗ್ದಂಡನೆ ಅಥವಾ ಪದಚ್ಯುತಿಗೊಳಿಸಬಹುದು. ಆದರೆ, ತಮ್ಮ ತುಷ್ಟೀಕರಣದ ವಿರುದ್ಧ ತೀರ್ಪು ನೀಡಿದ್ದಾರೆ ಎಂದು ನ್ಯಾಯಮೂರ್ತಿಯನ್ನು ಶಿಕ್ಷೆಗೆ ಒಳಪಡಿಸುವ ನಿರ್ಣಯ ಸಂವಿಧಾನ ವಿರೋಧಿಯಾಗಿದೆ. ಇದು ದೇಶದ ಇತಿಹಾಸದಲ್ಲಿಯೇ ಮೊದಲನೆಯದಾಗಿದ್ದು, ಕಾಂಗ್ರೆಸ್ ನಡೆ ಖಂಡನೀಯವಾಗಿದೆ ಎಂದು ಹರಿಹಾಯ್ದರು.

ತಮಿಳುನಾಡಿನಲ್ಲಿ ಡಿಎಂಕೆ ಸರಕಾರವಿದ್ದು, ಕಾಂಗ್ರೆಸ್ ಜತೆ ಸೇರಿಕೊಂಡಿದೆ. ಬಹುಮತವಿದೆಯೆಂದು ಸಂವಿಧಾನ ವಿರೋಧಿ ಕೃತ್ಯ ಎಸಗಲು ಸಾಧ್ಯವಿಲ್ಲ. ಕೈಯಲ್ಲಿ ಸಂವಿಧಾನ ಇಟ್ಟುಕೊಂಡು ಓಡಾಡುವವರು, ಅದರ ಮೂಲ ಉದ್ದೇಶವನ್ನೇ ಗಾಳಿಗೆ ತೂರುತ್ತಿದ್ದಾರೆ. ಈಗಾಗಲೇ ಜನರು ಕಾಂಗ್ರೆಸ್ ಮುಕ್ತ ಭಾರತ ಮಾಡಲು ಹೊರಟಿದ್ದಾರೆ. ಹೀಗಿದ್ದಾಗಲೂ ಅದು ತನ್ನ ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳದಿರುವುದು ದುರ್ದೈವದ ಸಂಗತಿ ಎಂದರು.

ಅವರ ಪರ ತೀರ್ಪು ಬಂದರೆ ನ್ಯಾಯಮೂರ್ತಿ, ನ್ಯಾಯಾಧೀಶರು ಹಾಗೂ ನ್ಯಾಯಾಲಯ ಉತ್ತಮವಾಗಿ ಕೆಲಸ ಮಾಡುತ್ತಿದೆ ಎನ್ನುತ್ತಾರೆ. ಸಂವಿಧಾನಬದ್ಧವಾಗಿ ನ್ಯಾಯಸಮ್ಮತ ತೀರ್ಪು ಬಂದರೆ ಅವರಿಗೆ ಅರಗಿಸಿಕೊಳ್ಳಲು ಆಗುವುದಿಲ್ಲ. ಅಯೋಧ್ಯ ರಾಮಮಂದಿರ ತೀರ್ಪು ಬಂದಾಗಲೂ ನ್ಯಾಯಾಂಗವನ್ನು ಟೀಕೆ ಮಾಡಿದ್ದರು. ತಾವು ಹೇಳಿದಂತೆ ಕೇಳುವ, ತುಷ್ಟೀಕರಣದ ಪರವಾಗಿ ತೀರ್ಪು ನೀಡುವ ನ್ಯಾಯಮೂರ್ತಿಗಳು ಅವರಿಗೆ ಬೇಕು ಎಂದು ಕಿಡಿಕಾರಿದರು.

ಒಂದೇ ಒಂದು ಹುದ್ದೆ ಭರ್ತಿಯಾಗಿಲ್ಲ: ಕಾಂಗ್ರೆಸ್ ರಾಜ್ಯದಲ್ಲಿ ಆಡಳಿತಕ್ಕೆ ಬಂದು ಎರಡು ವರ್ಷ ಕಳೆದಿದ್ದು, ಸುಮಾರು 2.50 ಲಕ್ಷ ಸರಕಾರಿ ಹುದ್ದೆಗಳು ಖಾಲಿ ಇವೆ. ಸರಕಾರ ದಿವಾಳಿ ಎದ್ದಿರುವುದರಿಂದ ಖಜಾನೆ ಖಾಲಿಯಾಗಿದೆ. ಹೀಗಾಗಿ ಒಂದೇ ಒಂದು ಹುದ್ದೆ ಭರ್ತಿ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರಕಾರ ಪ್ರತಿ ತಿಂಗಳು 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಿದೆ. ನಿವೃತ್ತಿ ಅಥವಾ ಇನ್ನಿತರ ಕಾರಣಗಳಿಂದ ತೆರವಾದ ಜಾಗವನ್ನು ಸಹ ತಕ್ಷಣ ಭರ್ತಿ ಮಾಡಿಕೊಳ್ಳುತ್ತಿದೆ. ಯಾವ ಇಲಾಖೆಯಲ್ಲೂ ಹುದ್ದೆ ಖಾಲಿಯಿಲ್ಲ. ಸಂಸತ್ ಅಧಿವೇಶನ ಮುಗಿತ ತಕ್ಷಣ ರೋಜಗಾರ ಮೇಳ ಆಯೋಜಿಸಿ, ಮತ್ತಷ್ಟು ಹುದ್ದೆ ಭರ್ತಿ ಮಾಡಿಕೊಳ್ಳಲಾಗುವುದು ಎಂದರು.

ಕಾಂಗ್ರೆಸ್‌ನಲ್ಲಿ ಎಸ್‌ಐಆರ್ ಆಗಬೇಕು: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಗಳವು ಆರೋಪದ ಪ್ರಕರಣದ ಕುರಿತು ಈಗಾಗಲೇ ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ. ದೋಷಾರೋಪ ಪಟ್ಟಿಯಲ್ಲಿ ಏನಿದೆ ಎನ್ನುವುದು ತಿಳಿದಿಲ್ಲ. ಆ ಕುರಿತು ಕೋರ್ಟ್ ತೀರ್ಪು ಸಹ ನೀಡಿಲ್ಲ. ರಾಹುಲ್ ಗಾಂಧಿ ಅವರನ್ನು ಸಂತೃಪ್ತಿಪಡಿಸಲು ಕಾಂಗ್ರೆಸ್ ಮಾಡುತ್ತಿರುವ ಸಾಹಸ ಜನತೆಗೆ ಗೊತ್ತಿದೆ. ರಾಜಕೀಯದ ಗಂಭೀರತೆಯಿಲ್ಲದ ರಾಹುಲ್, ಅಧಿವೇಶನ ಮತ್ತು ಚುನಾವಣೆ ಸಂದರ್ಭದಲ್ಲಿ ವಿದೇಶ ಸುತ್ತುತ್ತ ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ. ಉತ್ತಮ ಆಡಳಿತಕ್ಕೆ ಸಮರ್ಥ ವಿರೋಧ ಪಕ್ಷವೂ ಬೇಕಾಗುತ್ತದೆ. ಹೀಗಾಗಿ, ಮೊದಲು ಕಾಂಗ್ರೆಸ್‌ನಲ್ಲಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆಗಬೇಕು ಎಂದು ಹೇಳಿದರು.

'ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕು' ಎನ್ನುವ ಶಾಸಕ ರಾಜು ಕಾಗೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಜೋಶಿ, ರಾಜ್ಯ ಇಬ್ಭಾಗವಾಗಬೇಕು ಎನ್ನುವುದು ಬಿಜೆಪಿಯ ನಿಲುವಲ್ಲ. ಆ ಕುರಿತು ನಮ್ಮಲ್ಲಿ ಯಾವ ಯೋಚನೆಯೂ ಇಲ್ಲ. ಆದರೆ, ಅಭಿವೃದ್ಧಿ ದೃಷ್ಟಿಯಲ್ಲಿ ಈ ಭಾಗಕ್ಕೆ ತೀರಾ ಅನ್ಯಾಯವಾಗಿದೆ ಎಂದರು.

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಮತೋಷ ಲಾಡ್ ಅವರಿಗೆ ಟ್ರಂಪ್, ಮೋದಿ, ಪುಟಿನ್ ಬಿಟ್ಟು ಬೇರೆ ಏನೂ ಗೊತ್ತಿಲ್ಲ. ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾಹಿತಿಯೇ ಇಲ್ಲವಾಗಿದೆ. ಹು-ಧಾ ಮಹಾನಗರ ಪಾಲಿಕೆಗೆ ಬರಬೇಕಾದ ಅನುದಾನ ಸಹ ಸರಕಾರದಿಂದ ಬರುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರಕಾರಕ್ಕೆ ಕಪಾಳಮೋಕ್ಷ

ಜನೌಷಧಿ ಕೇಂದ್ರ ರದ್ದುಪಡಿಸಿದ ಆದೇಶದ ಕುರಿತು ರಾಜ್ಯ ಸರಕಾರಕ್ಕೆ ಹೈಕೋರ್ಟ್ ಕಪಾಳಮೋಕ್ಷ ಮಾಡಿದ್ದು, ಅಲ್ಲಿಯ ನ್ಯಾಯಮೂರ್ತಿಗಳನ್ನು ಸಹ ಕಾಂಗ್ರೆಸ್ ವಾಗ್ದಂಡನೆಗೆ ಗುರಿ ಮಾಡಿಸಬಹುದು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು. ಬಹುಮತವಿದೆ ಎಂದು ಕಾಂಗ್ರೆಸ್ ಏನೂ ಬೇಕಾದರೂ ಮಾಡುತ್ತದೆ. ತಮಿಳುನಾಡಿನಲ್ಲಿ ನ್ಯಾಯಮೂರ್ತಿ ವಿರುದ್ಧ ವಾಗ್ದಂಡನೆ ನಿರ್ಣಯ ಕೈಗೊಂಡಂತೆ, ಇಲ್ಲಿಯೂ ಕಾಂಗ್ರೆಸ್ ಮುಖಂಡರು ಸೋನಿಯಾ ಗಾಂಧಿ ಅವರಿಗೆ ಹೇಳಿ ನಿರ್ಣಯ ಕೈಗೊಳ್ಳಬಹುದು ಎಂದರು.

ತೀರ್ಪು ವ್ಯತಿರಿಕ್ತ ಎಂದೆನಿಸಿದರೆ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿ. ಅದನ್ನು ಬಿಟ್ಟು ದೇಶದಲ್ಲಿ ವಿಶ್ವಾಸ ಇಟ್ಟುಕೊಂಡಿರುವ ನ್ಯಾಯಾಂಗ ವ್ಯವಸ್ಥೆಯನ್ನು ಟೀಕಿಸುವುದು ಸರಿಯಲ್ಲ.

- ಪ್ರಲ್ಹಾದ ಜೋಶಿ ಕೇಂದ್ರ ಸಚಿವ

ಡಿಕೆಶಿ ಒಡೆತನದ ಜೆಮ್ ಸಕ್ಕರೆ ಕಾರ್ಖಾನೆಗೆ ಡಿಕೆಸು ಭೇಟಿ

ಮಾಜಿ ಸಂಸದ ಡಿ.ಕೆ.ಸುರೇಶ್ ಕುಂದರಗಿ ಜೆಮ್ ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೀಳಗಿ (ಬಾಗಲಕೋಟೆ): ತಾಲೂಕಿನ ಕುಂದರಗಿ ಗ್ರಾಮದಲ್ಲಿ ವೀರಮಣಿ ಒಡೆತನದ ಜೆಮ್ ಸಕ್ಕರೆ ಕಾರ್ಖಾನೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಶೇ.80 ಮಾಲೀಕತ್ವ ಹೊಂದಿದ್ದಾರೆ. ಈ ಹಿನ್ನೆಲೆ ಕುಂದರಗಿ ಜೆಮ್ ಸಕ್ಕರೆ ಕಾರ್ಖಾನೆಗೆ ಮೊದಲ ಬಾರಿಗೆ ಡಿಕೆಶಿ ಸಹೋದರ ಮಾಜಿ ಸಂಸದ ಡಿ.ಕೆ. ಸುರೇಶ ಶನಿವಾರ ಭೇಟಿ ನೀಡಿ ಆಡಳಿತ ಮಂಡಳಿ ಜತೆ ಚರ್ಚೆ ನಡೆಸಿದರು. ನಂತರ ಕಾರ್ಖಾನೆ ಉದ್ಯೋಗಿಗಳ ಜತೆ ಕೇಕ್ ಕಟ್ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಕಬ್ಬು ಬೆಳೆಗಾರರಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಅವರೊಂದಿಗೆ ಗೌರವದೊಂದಿಗೆ ನಡೆದುಕೊಳ್ಳಿ. ಕಬ್ಬು ಕಳಿಸಿದ ರೈತರಿಗೆ ಮಾತು ಕೊಟ್ಟಂತೆ ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸಿ ಅವರಿಗೆ ಅನುಕೂಲ ಮಾಡಲು ಸೂಚಿಸಿದ್ದಾರೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ದೊಡ್ಡನಗೌಡರ, ಮೇಲ್ವಿಚಾರಣಾ ಸಮಿತಿ ನಿರ್ದೇಶಕ ರಾಮನಗೌಡ ಜಕ್ಕನಗೌಡರ ಇದ್ದರು.

ಸಿಡ್ನಿ-ಲಂಡನ್ ಇಪ್ಪತ್ತೆರಡು ಗಂಟೆಗಳ ನೇರ ವಿಮಾನ ಹಾರಾಟ ಹೇಗಿರಬಹುದು?

ಈ ಹಿಂದೆ 1940ರ ದಶಕದಲ್ಲಿ ಕ್ವಾಂಟಾಸ್ ಸಂಸ್ಥೆಯು ಆಸ್ಟ್ರೇಲಿಯಾದಿಂದ ಲಂಡನ್‌ಗೆ ವಿಮಾನ ಹಾರಾಟ ನಡೆಸುತ್ತಿತ್ತು. ಅಂದು ಈ ಪ್ರಯಾಣಕ್ಕೆ ಹಲವಾರು ದಿನಗಳು ಬೇಕಾಗುತ್ತಿದ್ದವು ಮತ್ತು ಮಧ್ಯದಲ್ಲಿ ಇಂಧನ ತುಂಬಿಸಲು ಹಾಗೂ ಪ್ರಯಾಣಿಕರ ವಿಶ್ರಾಂತಿಗಾಗಿ ವಿಮಾನ ಹಲವೆಡೆ ನಿಲ್ಲುತ್ತಿತ್ತು. ಆ ಸಮಯದಲ್ಲಿ ಪ್ರಯಾಣಿಕರು ಎರಡು ಕಡೆ ಸೂರ್ಯೋದಯವನ್ನು ಕಾಣುತ್ತಿದ್ದರು. ಹೀಗಾಗಿಯೇ ಈ ಆಧುನಿಕ ಯೋಜನೆಗೆ 'ಪ್ರಾಜೆಕ್ಟ್ ಸನ್‌ರೈಸ್' ಎಂದು ನಾಮಕರಣ ಮಾಡಲಾಗಿದೆ.

ಆಸ್ಟ್ರೇಲಿಯಾದ ಪ್ರಮುಖ ವಿಮಾನಯಾನ ಸಂಸ್ಥೆಯಾದ 'ಕ್ವಾಂಟಾಸ್'ನ ಪ್ರತಿನಿಧಿಯೊಬ್ಬರನ್ನು ಮೊನ್ನೆ ದಿಲ್ಲಿಯಲ್ಲಿ ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ವಿಮಾನಯಾನ ಇತಿಹಾಸದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲು 'ಕ್ವಾಂಟಾಸ್' ಸಿದ್ಧತೆ ನಡೆಸುತ್ತಿದೆಯಂತೆ. 2027ರ ವೇಳೆಗೆ ವಿಶ್ವದ ಅತಿ ಉದ್ದದ ತಡೆರಹಿತ (Nonstop) ಪ್ರಯಾಣಿಕ ವಿಮಾನವನ್ನು ಲಂಡನ್‌ನಿಂದ ಸಿಡ್ನಿಗೆ ಹಾರಿಸಲು ಕ್ವಾಂಟಾಸ್ ಯೋಜನೆ ರೂಪಿಸುತ್ತಿದೆಯಂತೆ. ಸತತ 22 ಗಂಟೆಗಳ ಕಾಲ ಆಕಾಶದಲ್ಲಿಯೇ ಹಾರಾಡುವ ಈ ವಿಮಾನವು, ಸುಮಾರು 10,500 ಮೈಲಿಗಳಷ್ಟು (ಸುಮಾರು 17,000 ಕಿ.ಮೀ.) ದೀರ್ಘ ಅಂತರವನ್ನು ಕ್ರಮಿಸಲಿದೆಯಂತೆ. ಈ ಮಹತ್ವಾಕಾಂಕ್ಷಿ ಯೋಜನೆಗೆ 'ಪ್ರಾಜೆಕ್ಟ್ ಸನ್‌ರೈಸ್' ಎಂದು ಹೆಸರಿಡಲಾಗಿದೆಯಂತೆ.

ಈ ಯೋಜನೆಯು ಜಾಗತಿಕ ಪ್ರಯಾಣದ ದಿಕ್ಕನ್ನೇ ಬದಲಾಯಿಸಲಿದ್ದು, ಪ್ರಯಾಣಿಕರಿಗೆ ಹೊಸ ಅನುಭವವನ್ನು ನೀಡಲಿದೆ. ಕ್ವಾಂಟಾಸ್ ಏರ್‌ಲೈನ್ಸ್‌ನ 'ಪ್ರಾಜೆಕ್ಟ್ ಸನ್‌ರೈಸ್' ಎಂಬುದು ಜಗತ್ತಿನ ಯಾವುದೇ ಮೂಲೆಯಿಂದ ಆಸ್ಟ್ರೇಲಿಯಾದ ಪೂರ್ವ ಕರಾವಳಿಯ ನಗರಗಳಿಗೆ (ಸಿಡ್ನಿ ಮತ್ತು ಮೆಲ್ಬರ್ನ್) ನೇರ ವಿಮಾನ ಸಂಪರ್ಕ ಕಲ್ಪಿಸುವ ಯೋಜನೆಯಾಗಿದೆ. ಪ್ರಸ್ತುತ ಲಂಡನ್ ಮತ್ತು ನ್ಯೂಯಾರ್ಕ್‌ನಂಥ ನಗರಗಳಿಂದ ಆಸ್ಟ್ರೇಲಿಯಾಕ್ಕೆ ಬರಬೇಕಾದರೆ, ಮಧ್ಯದಲ್ಲಿ ಒಮ್ಮೆಯಾದರೂ ಇಳಿದು ವಿಮಾನ ಬದಲಾಯಿಸಬೇಕಾಗುತ್ತದೆ. ಆದರೆ ಈ ಯೋಜನೆಯ ಮೂಲಕ ಆ ಅಡೆತಡೆಯನ್ನು ನಿವಾರಿಸಿ, ಲಂಡನ್‌ನಿಂದ ನೇರವಾಗಿ ಸಿಡ್ನಿಗೆ ಹಾರಾಟ ನಡೆಸುವ ಗುರಿಯನ್ನು ಹೊಂದಲಾಗಿದೆ.

ಈ ಹಿಂದೆ 1940ರ ದಶಕದಲ್ಲಿ ಕ್ವಾಂಟಾಸ್ ಸಂಸ್ಥೆಯು ಆಸ್ಟ್ರೇಲಿಯಾದಿಂದ ಲಂಡನ್‌ಗೆ ವಿಮಾನ ಹಾರಾಟ ನಡೆಸುತ್ತಿತ್ತು. ಅಂದು ಈ ಪ್ರಯಾಣಕ್ಕೆ ಹಲವಾರು ದಿನಗಳು ಬೇಕಾಗುತ್ತಿದ್ದವು ಮತ್ತು ಮಧ್ಯದಲ್ಲಿ ಇಂಧನ ತುಂಬಿಸಲು ಹಾಗೂ ಪ್ರಯಾಣಿಕರ ವಿಶ್ರಾಂತಿಗಾಗಿ ವಿಮಾನ ಹಲವೆಡೆ ನಿಲ್ಲುತ್ತಿತ್ತು. ಆ ಸಮಯದಲ್ಲಿ ಪ್ರಯಾಣಿಕರು ಎರಡು ಕಡೆ ಸೂರ್ಯೋದಯವನ್ನು ಕಾಣುತ್ತಿದ್ದರು. ಹೀಗಾಗಿಯೇ ಈ ಆಧುನಿಕ ಯೋಜನೆಗೆ 'ಪ್ರಾಜೆಕ್ಟ್ ಸನ್‌ರೈಸ್' ಎಂದು ನಾಮಕರಣ ಮಾಡಲಾಗಿದೆ.

ಇಷ್ಟೊಂದು ದೀರ್ಘಾವಧಿಯ ಪ್ರಯಾಣವನ್ನು ಸುಗಮವಾಗಿ ನಡೆಸಲು ಸಾಮಾನ್ಯ ವಿಮಾನಗಳು ಸಾಕಾಗುವುದಿಲ್ಲ. ಇದಕ್ಕಾಗಿಯೇ ಕ್ವಾಂಟಾಸ್ ಸಂಸ್ಥೆಯು ವಿಶೇಷವಾಗಿ ವಿನ್ಯಾಸಗೊಳಿಸಲಾದ 12 ಹೊಸ 'ಏರ್‌ಬಸ್ A 350-1000' ವಿಮಾನಗಳನ್ನು ಆರ್ಡರ್ ಮಾಡಿದೆ. ಸಾಮಾನ್ಯವಾಗಿ ಇಂಥ ದೊಡ್ಡ ವಿಮಾನಗಳಲ್ಲಿ 300ಕ್ಕೂ ಹೆಚ್ಚು ಪ್ರಯಾಣಿಕರು ಇರುತ್ತಾರೆ. ಆದರೆ, ಈ 22 ಗಂಟೆಗಳ ಸುದೀರ್ಘ ಪ್ರಯಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು, ಆರಾಮದಾಯಕ ಅನುಭವ ನೀಡಲು 238 ಆಸನಗಳನ್ನು ಮಾತ್ರ ಅಳವಡಿಸಲಾಗುತ್ತಿದೆ. ಇದು ಪ್ರಯಾಣಿಕರಿಗೆ ಕಾಲು ಚಾಚಲು ಮತ್ತು ಓಡಾಡಲು ಹೆಚ್ಚಿನ ಸ್ಥಳಾವಕಾಶವನ್ನು ನೀಡುತ್ತದೆ. ಈ ವಿಮಾನದಲ್ಲಿ ಪ್ರಥಮ ದರ್ಜೆಯ ಪ್ರಯಾಣಿಕರಿಗೆ ಹೋಟೆಲ್ ರೂಮ್‌ಗಳಂಥ ಐಷಾರಾಮಿ 'ಸೂಟ್'ಗಳನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಪ್ರತ್ಯೇಕ ಬೆಡ್, ಕುರ್ಚಿ ಮತ್ತು ವಾರ್ಡ್‌ರೋಬ್ ಸೌಲಭ್ಯಗಳಿರಲಿವೆ. ಸತತ 22 ಗಂಟೆಗಳ ಕಾಲ ಒಂದೇ ಕಡೆ ಕುಳಿತು ಪ್ರಯಾಣಿಸುವುದು ಆರೋಗ್ಯದ ದೃಷ್ಟಿಯಿಂದ ಕಷ್ಟಕರ. 'ಜೆಟ್ ಲ್ಯಾಗ್' ಮತ್ತು ದೈಹಿಕ ಆಯಾಸವನ್ನು ಕಡಿಮೆ ಮಾಡಲು ವಿಮಾನದ ಮಧ್ಯಭಾಗದಲ್ಲಿ ವಿಶೇಷ 'ವೆಲ್‌ನೆಸ್ ಜೋನ್'ಗಳನ್ನು ನಿರ್ಮಿಸಲಾಗುತ್ತಿದೆ. ಇಲ್ಲಿ ಪ್ರಯಾಣಿಕರು ಎದ್ದು ನಡೆದಾಡಬಹುದು, ಸ್ಟ್ರೆಚಿಂಗ್ ವ್ಯಾಯಾಮಗಳನ್ನು ಮಾಡಬಹುದು ಮತ್ತು ರಿಫ್ರೆಶ್ ಆಗಬಹುದು.

ವಾಸ್ತವವಾಗಿ, ಕ್ವಾಂಟಾಸ್ ಸಂಸ್ಥೆಯು ಈ ಐತಿಹಾಸಿಕ ವಿಮಾನ ಹಾರಾಟವನ್ನು 2025ರಲ್ಲೇ ಆರಂಭಿಸಲು ನಿರ್ಧರಿಸಿತ್ತು. ಆದರೆ, ಇಡೀ ವಿಶ್ವವನ್ನೇ ತಲ್ಲಣಗೊಳಿಸಿದ ಕೋವಿಡ್ ಈ ಯೋಜನೆಗೂ ಅಡ್ಡಿಯಾಯಿತು. ಕರೋನಾ ಲಾಕ್‌ಡೌನ್‌ನಿಂದಾಗಿ ಅಂತಾರಾಷ್ಟ್ರೀಯ ವಿಮಾನಯಾನ ಸಂಪೂರ್ಣ ಸ್ಥಗಿತಗೊಂಡಿತ್ತು ಮತ್ತು ವಿಮಾನ ತಯಾರಿಕಾ ಸಂಸ್ಥೆಗಳಲ್ಲಿ ಉತ್ಪಾದನಾ ಪ್ರಕ್ರಿಯೆಗಳೂ ವಿಳಂಬವಾದವು. ಇದೀಗ ಪರಿಸ್ಥಿತಿ ಸುಧಾರಿಸಿದ್ದು, ವಿಮಾನ ತಯಾರಿಕೆ ಪುನರಾರಂಭಗೊಂಡಿದೆ. ಮೊದಲ ಏರ್‌ಬಸ್ A -350 ವಿಮಾನವು 2026ರ ಅಂತ್ಯದ ವೇಳೆಗೆ ಕ್ವಾಂಟಾಸ್ ಕೈಸೇರುವ ನಿರೀಕ್ಷೆಯಿದೆ. ನಂತರ ಅಗತ್ಯ ಪರೀಕ್ಷೆಗಳು ಮುಗಿದು, 2027ರಲ್ಲಿ ಅಧಿಕೃತವಾಗಿ ಲಂಡನ್-ಸಿಡ್ನಿ ಹಾರಾಟ ಆರಂಭವಾಗಲಿದೆ.

ಇಂಥ ನೇರ ವಿಮಾನಗಳು ಜಾಗತಿಕ ಪ್ರಯಾಣದ ಸ್ವರೂಪವನ್ನೇ ಮರುರೂಪಿಸಲಿವೆ. ಈ ಯೋಜನೆಯು ಯಶಸ್ವಿಯಾದರೆ, ಇದು ಕೇವಲ ಸಮಯ ಉಳಿತಾಯದ ವಿಷಯವಷ್ಟೇ ಆಗಿರುವುದಿಲ್ಲ. ಇದು ವಿಮಾನಯಾನ ತಂತ್ರಜ್ಞಾನದಲ್ಲಿ ಮನುಷ್ಯ ಸಾಧಿಸಿದ ಮತ್ತೊಂದು ಎತ್ತರವಾಗಲಿದೆ. ಲಂಡನ್‌ನಿಂದ ನ್ಯೂಯಾರ್ಕ್‌ಗೆ, ನ್ಯೂಯಾರ್ಕ್‌ನಿಂದ ಸಿಡ್ನಿಗೆ- ಹೀಗೆ ವಿಶ್ವದ ಪ್ರಮುಖ ಆರ್ಥಿಕ ಕೇಂದ್ರಗಳನ್ನು ನೇರವಾಗಿ ಬೆಸೆಯುವಲ್ಲಿ ಇದು ಮಹತ್ತರ ಪಾತ್ರ ವಹಿಸಲಿದೆ. 22 ಗಂಟೆಗಳ ಕಾಲ ತಡೆರಹಿತವಾಗಿ ಹಾರಾಟ ನಡೆಸುವುದು ತಾಂತ್ರಿಕವಾಗಿ ಮತ್ತು ಮಾನವ ಸಾಮರ್ಥ್ಯದ ದೃಷ್ಟಿಯಿಂದ ಒಂದು ದೊಡ್ಡ ಸವಾಲು. ಪೈಲಟ್‌ಗಳು, ಸಿಬ್ಬಂದಿ ವರ್ಗ ಮತ್ತು ಪ್ರಯಾಣಿಕರ ಆರೋಗ್ಯದ ಮೇಲೆ ಈ ದೀರ್ಘ ಪ್ರಯಾಣವು ಬೀರಬಹುದಾದ ಪರಿಣಾಮಗಳನ್ನು ಅಧ್ಯಯನ ಮಾಡಲು ಕ್ವಾಂಟಾಸ್ ಈಗಾಗಲೇ ಸಂಶೋಧಕರೊಂದಿಗೆ ಕೆಲಸ ಮಾಡುತ್ತಿದೆ. ವಿಮಾನದೊಳಗಿನ ಗಾಳಿ, ಬೆಳಕು ಮತ್ತು ಆಹಾರ ಪದ್ಧತಿಯನ್ನು ಪ್ರಯಾಣಿಕರ ನಿದ್ರೆ ಮತ್ತು ಜಾಗರೂಕತೆಯನ್ನು ಕಾಪಾಡುವಂತೆ ವಿನ್ಯಾಸಗೊಳಿಸಲಾಗುತ್ತಿದೆ.

2027ರಲ್ಲಿ ಲಂಡನ್‌ನಿಂದ ಹೊರಡುವ ಈ ವಿಮಾನವು ಸಿಡ್ನಿಯಲ್ಲಿ ಇಳಿಯುವಾಗ, ಅದು ಕೇವಲ ಒಂದು ಪ್ರಯಾಣವಾಗಿರದೇ, ಮಾನವನ ಚಲನಶೀಲತೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಘಟನೆಯಾಗಲಿದೆ. 'ಪ್ರಾಜೆಕ್ಟ್ ಸನ್‌ರೈಸ್' ಕೇವಲ ದೂರದ ಹಾರಾಟವಷ್ಟೇ ಅಲ್ಲ, ಅದೊಂದು ಎಂಜಿನಿಯರಿಂಗ್ ಅದ್ಭುತವೂ ಹೌದು. ಈ ಯೋಜನೆಯ ತಾಂತ್ರಿಕ ಅಂಶಗಳು ಮತ್ತು ಆರ್ಥಿಕ ಲೆಕ್ಕಾಚಾರಗಳು ನಿಜಕ್ಕೂ ಸ್ವಾರಸ್ಯಕರ. ಈ ಯೋಜನೆಯ ಬೆನ್ನೆಲುಬು ಏರ್‌ಬಸ್ A 350-1000 ವಿಮಾನ. ಅಷ್ಟು ದೂರ ಹಾರಲು ಅದು ಹೇಗೆ ಶಕ್ತವಾಗಿದೆ ? ಈ ವಿಮಾನದಲ್ಲಿ ವಿಶ್ವದ ಅತ್ಯಂತ ದಕ್ಷ ದೊಡ್ಡ ಏರೋ-ಎಂಜಿನ್‌ಗಳಾದ 'ರೋಲ್ಸ್ ರಾಯ್ಸ್ ಟ್ರೆಂಟ್ XWಆ 97'ಗಳನ್ನು ಬಳಸಲಾಗುತ್ತಿದೆ. ಇವು ಹಿಂದಿನ ತಲೆಮಾರಿನ ವಿಮಾನಗಳಿಗೆ ಹೋಲಿಸಿದರೆ ಸುಮಾರು ಶೇ.25ರಷ್ಟು ಕಡಿಮೆ ಇಂಧನವನ್ನು ಬಳಸುತ್ತವೆ ಮತ್ತು ಕಡಿಮೆ ಇಂಗಾಲವನ್ನು ಹೊರಸೂಸುತ್ತವೆ.

ಲಂಡನ್‌ನಿಂದ ಸಿಡ್ನಿಗೆ ತಲುಪಲು ಸಾಮಾನ್ಯ ಇಂಧನ ಸಾಮರ್ಥ್ಯ ಸಾಲದು. ಹೀಗಾಗಿ, ಕ್ವಾಂಟಾಸ್ ವಿಶೇಷವಾಗಿ ಆರ್ಡರ್ ಮಾಡಿರುವ ಈ ವಿಮಾನಗಳಲ್ಲಿ ಹೆಚ್ಚುವರಿ ಇಂಧನ ಟ್ಯಾಂಕ್ ಅಳವಡಿಸಲಾಗುತ್ತಿದೆ. ಇದು ವಿಮಾನಕ್ಕೆ ಸುಮಾರು 1,56,000 ಲೀಟರ್‌ಗಳಷ್ಟು ಇಂಧನವನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ನೀಡುತ್ತದೆ. ಈ ವಿಮಾನದ ದೇಹವನ್ನು ಕಾರ್ಬನ್-ಫೈಬರ್ ಸಂಯೋಜಿತ ವಸ್ತುಗಳಿಂದ (Composite materials) ತಯಾರಿಸಲಾಗಿದೆ. ಇದು ವಿಮಾನದ ತೂಕವನ್ನು ಕಡಿಮೆ ಮಾಡುವುದಲ್ಲದೇ, ದೀರ್ಘ ಕಾಲದ ಹಾರಾಟಕ್ಕೆ ಬೇಕಾದ ಸಾಮರ್ಥ್ಯವನ್ನೂ ನೀಡುತ್ತದೆ.

ಸಾಮಾನ್ಯವಾಗಿ ಏರ್‌ಬಸ್ A 350-1000 ವಿಮಾನದಲ್ಲಿ 350ರಿಂದ 410 ಪ್ರಯಾಣಿಕರಿಗೆ ಆಸನ ವ್ಯವಸ್ಥೆ ಮಾಡಬಹುದು.

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಆದರೆ, 'ಪ್ರಾಜೆಕ್ಟ್ ಸನ್‌ರೈಸ್' ವಿಮಾನದಲ್ಲಿ 238 ಸೀಟುಗಳನ್ನು ಮಾತ್ರ ಇಡಲಾಗಿದೆ. ಇದಕ್ಕೆ ಕಾರಣ ತೂಕ ನಿರ್ವಹಣೆ. ವಿಮಾನವು 20ಕ್ಕಿಂತ ಹೆಚ್ಚು ಗಂಟೆಗಳ ಕಾಲ ಹಾರಲು ಭಾರಿ ಪ್ರಮಾಣದ ಇಂಧನವನ್ನು ತುಂಬಿಸಿಕೊಳ್ಳಬೇಕಾಗುತ್ತದೆ. ಇಂಧನದ ತೂಕ ಹೆಚ್ಚಾದಾಗ, ಪ್ರಯಾಣಿಕರ ಮತ್ತು ಲಗೇಜ್ ತೂಕವನ್ನು ಕಡಿಮೆ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ವಿಮಾನ ಟೇಕಾಫ್ ಆಗುವುದು ಕಷ್ಟ ಮತ್ತು ಮೈಲೇಜ್ ಕೂಡ ಕಡಿಮೆಯಾಗುತ್ತದೆ. ಕ್ವಾಂಟಾಸ್ ಇನ್ನೂ ಅಧಿಕೃತವಾಗಿ 2027ರ ದರ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ. ಆದರೆ, ವಿಮಾನಯಾನ ತಜ್ಞರ ಲೆಕ್ಕಾಚಾರದ ಪ್ರಕಾರ, ಈ ವಿಮಾನದ ಟಿಕೆಟ್ ದರಗಳು, ಒಂದು ಕಡೆ ನಿಲ್ಲಿಸಿ (Layover) ಹೋಗುವ ವಿಮಾನಗಳಿಗಿಂತ ಕನಿಷ್ಠ ಶೇ.20ರಿಂದ

ಶೇ.30ರಷ್ಟು ದುಬಾರಿಯಾಗಿರುವ ಸಾಧ್ಯತೆಯಿದೆ. ಇದು ಪ್ರಮುಖವಾಗಿ ಕಾರ್ಪೊರೇಟ್ ಉದ್ಯೋಗಿಗಳು ಮತ್ತು ಸಮಯ ಉಳಿಸಲು ಬಯಸುವ ಶ್ರೀಮಂತ ಪ್ರಯಾಣಿಕರನ್ನು (Business Travelers) ಗುರಿಯಾಗಿಸಿಕೊಂಡಿದೆ. ಕಡಿಮೆ ಸೀಟುಗಳಿರುವುದರಿಂದ, ಪ್ರತಿ ಸೀಟಿನ ಬೆಲೆ ಹೆಚ್ಚಿದ್ದರೆ ಮಾತ್ರ ಏರ್‌ಲೈನ್ಸ್‌ಗೆ ಲಾಭವಾಗುತ್ತದೆ. ಇಕಾನಮಿ ಕ್ಲಾಸ್‌ನಲ್ಲಿ ಕೂಡ ಟಿಕೆಟ್ ದರ ಸಾಮಾನ್ಯಕ್ಕಿಂತ ಹೆಚ್ಚಿರಲಿದೆ. ಅಂದಾಜು ಪ್ರಕಾರ, ಲಂಡನ್-ಸಿಡ್ನಿ ಇಕಾನಮಿ ಟಿಕೆಟ್ ಬೆಲೆ ಸುಮಾರು ಒಂದೂವರೆ ಲಕ್ಷ ರುಪಾಯಿಯಿಂದ ಎರಡು ಲಕ್ಷ ರುಪಾಯಿ ಆಸುಪಾಸಿನಲ್ಲಿರಬಹುದು. ಬಿಸಿನೆಸ್ ಮತ್ತು ಫಸ್ಟ್ ಕ್ಲಾಸ್ ದರಗಳು ಐದರಿಂದ ಎಂಟು ಲಕ್ಷಕ್ಕೂ ಅಧಿಕವಿರಬಹುದು.

ಕೇವಲ ವಿಮಾನವಲ್ಲ, ಮನುಷ್ಯರಿಗೂ ಇದು ಸವಾಲಿನ ಕೆಲಸ. ಈ ವಿಮಾನದಲ್ಲಿ ಕನಿಷ್ಠ ನಾಲ್ವರು ಪೈಲಟ್‌ಗಳು ಇರುತ್ತಾರೆ (ಒಬ್ಬ ಕ್ಯಾಪ್ಟನ್, ಒಬ್ಬ ಫಸ್ಟ್ ಆಫೀಸರ್ ಮತ್ತು ಇಬ್ಬರು ಸೆಕೆಂಡ್ ಆಫೀಸರ್‌ಗಳು). ಅವರು ಪಾಳಿಯಲ್ಲಿ ವಿಮಾನ ಹಾರಿಸುತ್ತಾರೆ ಮತ್ತು ಉಳಿದವರು ವಿಮಾನದಲ್ಲಿರುವ ವಿಶೇಷ ಸ್ಲೀಪಿಂಗ್ ಬಂಕ್‌ಗಳಲ್ಲಿ ವಿಶ್ರಾಂತಿ ಪಡೆಯುತ್ತಾರೆ. 22 ಗಂಟೆಗಳ ಕಾಲ ಸತತವಾಗಿ ವಿಮಾನದಲ್ಲಿ ಕುಳಿತು ಪ್ರಯಾಣಿಸುವುದು ದೈಹಿಕವಾಗಿ ಮತ್ತು ಮಾನಸಿಕವಾಗಿ ಒಂದು ದೊಡ್ಡ ಸವಾಲು. ಇದನ್ನು ಮನಗಂಡಿರುವ ಕ್ವಾಂಟಾಸ್, ಕೇವಲ ವಿಮಾನದ ಎಂಜಿನಿಯರಿಂಗ್ ಮೇಲೆ ಮಾತ್ರವಲ್ಲದೇ, 'ಮಾನವ ಶರೀರಶಾಸ್ತ್ರ'ದ ಮೇಲೂ ಸಂಶೋಧನೆ ನಡೆಸಿದೆ.

ಸಿಡ್ನಿ ವಿಶ್ವವಿದ್ಯಾಲಯದ ಪ್ರಖ್ಯಾತ 'ಚಾರ್ಲ್ಸ್ ಪರ್ಕಿನ್ಸ್ ಸೆಂಟರ್'ನ ವಿಜ್ಞಾನಿಗಳೊಂದಿಗೆ ಸೇರಿ ಕ್ವಾಂಟಾಸ್ ಈ ವಿಶೇಷ ವ್ಯವಸ್ಥೆಯನ್ನು ರೂಪಿಸಿದೆ. ಪ್ರಯಾಣಿಕರಿಗೆ ಜೆಟ್-ಲ್ಯಾಗ್ ಕಡಿಮೆ ಮಾಡಲು ಮತ್ತು ಸುಸ್ತು ಅನಿಸದಂತೆ ನೋಡಿಕೊಳ್ಳಲು ತಂತ್ರಜ್ಞಾನ ಮತ್ತು ಆಹಾರ ಪದ್ಧತಿಯನ್ನು ರೂಪಿಸಿದೆ. ನಮ್ಮ ದೇಹಕ್ಕೆ ನಿದ್ರೆ ಮತ್ತು ಎಚ್ಚರವನ್ನು ನಿಯಂತ್ರಿಸುವ ಒಂದು ನೈಸರ್ಗಿಕ ಗಡಿಯಾರವಿರುತ್ತದೆ. ಇದನ್ನು 'ಸಿರ್ಕಾಡಿಯನ್ ರಿದಮ್' ಎಂದು ಕರೆಯುತ್ತಾರೆ. ನಾವು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವೇಗವಾಗಿ ಹೋದಾಗ ಈ ಗಡಿಯಾರ ಏರುಪೇರಾಗಿ 'ಜೆಟ್-ಲ್ಯಾಗ್' ಉಂಟಾಗುತ್ತದೆ. ಇದನ್ನು ಸರಿಪಡಿಸಲು ಕ್ವಾಂಟಾಸ್ ವಿಮಾನದ ಲೈಟಿಂಗ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ.

ವಿಮಾನದ ಒಳಗಿನ ದೀಪಗಳು ಕೇವಲ 'ಆನ್' ಮತ್ತು 'ಆಫ್' ಆಗುವುದಿಲ್ಲ. ಬದಲಿಗೆ, ಅವು ಸೇರಬೇಕಾದ ಊರಿನ (ಉದಾಹರಣೆಗೆ ಸಿಡ್ನಿ ಅಥವಾ ಲಂಡನ್) ಸಮಯಕ್ಕೆ ತಕ್ಕಂತೆ ಬಣ್ಣ ಬದಲಾಯಿಸುತ್ತವೆ. ಪ್ರಯಾಣಿಕರು ಎಚ್ಚರವಾಗಿರಬೇಕಾದ ಸಮಯದಲ್ಲಿ, ವಿಮಾನದ ಒಳಗೆ ನೀಲಿ ಮಿಶ್ರಿತ ಪ್ರಕಾಶಮಾನವಾದ ಬೆಳಕನ್ನು ಹರಿಸಲಾಗುತ್ತದೆ. ಇದು ಸೂರ್ಯನ ಬೆಳಕನ್ನು ಹೋಲುತ್ತದೆ ಮತ್ತು ಮಿದುಳಿನಲ್ಲಿ 'ಮೆಲಟೋನಿನ್' (ನಿದ್ರೆ ಬರಿಸುವ ಹಾರ್ಮೋನ್) ಉತ್ಪತ್ತಿಯನ್ನು ತಡೆದು, ಪ್ರಯಾಣಿಕರು ಚುರುಕಾಗಿರುವಂತೆ ಮಾಡುತ್ತದೆ. ನಿದ್ರೆಯ ಸಮಯ ಬಂದಾಗ, ದೀಪಗಳು ನಿಧಾನವಾಗಿ ಸೂರ್ಯಾಸ್ತದ ಬಣ್ಣಗಳಿಗೆ ತಿರುಗುತ್ತವೆ. ಇದು ದೇಹಕ್ಕೆ ವಿಶ್ರಾಂತಿ ಪಡೆಯಲು ಸಂಕೇತ ನೀಡುತ್ತದೆ ಮತ್ತು ಸಹಜ ನಿದ್ರೆಗೆ ಜಾರಲು ಸಹಾಯ ಮಾಡುತ್ತದೆ. ಈ ಬೆಳಕಿನ ಬದಲಾವಣೆಯಿಂದಾಗಿ, ಪ್ರಯಾಣಿಕರು ವಿಮಾನದಿಂದ ಇಳಿಯುವ ಹೊತ್ತಿಗೆ ಅವರ ದೇಹವು ಆ ಹೊಸ ದೇಶದ ಸಮಯಕ್ಕೆ ಆಗಲೇ ಒಗ್ಗಿಕೊಂಡಿರುತ್ತದೆ.

ಸಾಮಾನ್ಯ ವಿಮಾನಗಳಲ್ಲಿ ಊಟದ ರುಚಿಗಿಂತ ಹೊಟ್ಟೆ ತುಂಬಿಸುವುದಕ್ಕೆ ಆದ್ಯತೆ ನೀಡಲಾಗುತ್ತದೆ. ಆದರೆ 'ಪ್ರಾಜೆಕ್ಟ್ ಸನ್‌ರೈಸ್' ವಿಮಾನದಲ್ಲಿ ಆಹಾರವೇ ಒಂದು ಔಷಧಿಯಂತೆ ಕೆಲಸ ಮಾಡಲಿದೆ. ಇಲ್ಲಿನ ಮೆನುವನ್ನು 'ನಿದ್ರೆ' ಮತ್ತು 'ಎಚ್ಚರ' ಎಂಬ ಎರಡು ವಿಭಾಗಗಳಾಗಿ ವಿನ್ಯಾಸಗೊಳಿಸಿದ್ದಾರೆ. ಪ್ರಯಾಣಿಕರು ಮಲಗಬೇಕಾದ ಸಮಯದಲ್ಲಿ ನೀಡುವ ಊಟದಲ್ಲಿ ಕಾರ್ಬೋಹೈಡ್ರೇಟ್‌ಗಳು ಮತ್ತು 'ಟ್ರಿಪ್ಟೊಫಾನ್' ಅಂಶ ಹೆಚ್ಚಿರುವ ಪದಾರ್ಥಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ, ಡೇರಿ ಉತ್ಪನ್ನಗಳು, ಸೂಪ್‌ಗಳು ಮತ್ತು ಕೆಲವು ಬಗೆಯ ಬ್ರೆಡ್‌ಗಳು. ಇವು ದೇಹವನ್ನು ಹಗುರಾಗಿಸಿ ನಿದ್ರೆಗೆ ಸಹಾಯ ಮಾಡುತ್ತವೆ.

ಗಮ್ಯಸ್ಥಾನ ತಲುಪುವ ಮೊದಲು ಅಥವಾ ಎಚ್ಚರವಾಗಿರಬೇಕಾದ ಸಮಯದಲ್ಲಿ ನೀಡುವ ಆಹಾರದಲ್ಲಿ ಮಸಾಲೆ ಪದಾರ್ಥಗಳು, ಶುಂಠಿ, ಲೆಮನ್‌ಗ್ರಾಸ್ ಮತ್ತು ಮೆಣಸನ್ನು ಬಳಸಲಾಗುತ್ತದೆ. ಈ ಪದಾರ್ಥಗಳು ದೇಹದ ಚಯಾಪಚಯ ಕ್ರಿಯೆಯನ್ನು ಚುರುಕುಗೊಳಿಸಿ, ಆಲಸ್ಯವನ್ನು ಹೋಗಲಾಡಿಸುತ್ತವೆ. ಪ್ರಯಾಣಿಕರಿಗೆ ಹಸಿವಾಯಿತೆಂದು ಊಟ ನೀಡುವುದಿಲ್ಲ. ಬದಲಿಗೆ, ಗಮ್ಯಸ್ಥಾನದ ಸಮಯಕ್ಕೆ ತಕ್ಕಂತೆ ಊಟದ ಸಮಯವನ್ನು ನಿಗದಿಪಡಿಸಲಾಗುತ್ತದೆ. ಇದರಿಂದ ದೇಹದ ಜೈವಿಕ ಗಡಿಯಾರವನ್ನು ವೇಗವಾಗಿ ಹೊಂದಿಸಲು ಸಾಧ್ಯವಾಗುತ್ತದೆ. ದೀರ್ಘ ಪ್ರಯಾಣದಲ್ಲಿ ನಿರ್ಜಲೀಕರಣ (Dehydration) ದೊಡ್ಡ ಸಮಸ್ಯೆ. ಇದಕ್ಕಾಗಿ ನೀರಿನ ಜತೆಗೆ ಇಲೆಕ್ಟ್ರೋಲೈಟ್ ಪಾನೀಯಗಳು ಮತ್ತು ಗಿಡಮೂಲಿಕೆ ಚಹಾಗಳನ್ನು ಆಗಾಗ ನೀಡಲಾಗುತ್ತದೆ. ಆಹಾರ ಮತ್ತು ಬೆಳಕು ಮಾತ್ರವಲ್ಲ, ದೈಹಿಕ ಚಲನೆಗೂ ಆದ್ಯತೆ ಇದೆ. ಇಕಾನಮಿ ಕ್ಲಾಸ್ ಪ್ರಯಾಣಿಕರು ಸಹ ಕುಳಿತೇ ಇರಬೇಕಿಲ್ಲ. ವಿಮಾನದ ಮಧ್ಯಭಾಗದಲ್ಲಿನ ಆಸನಗಳನ್ನು ತೆಗೆದುಹಾಕಿ ಒಂದು ತೆರೆದ ಸ್ಥಳವನ್ನು (Open Space) ನಿರ್ಮಿಸಲಾಗಿದೆ. ಇಲ್ಲಿ ಪ್ರಯಾಣಿಕರು ಬಂದು ನಿಲ್ಲಬಹುದು, ಕೈಕಾಲುಗಳನ್ನು ಸ್ಟ್ರೆಚ್ ಮಾಡಬಹುದು. ಅಲ್ಲಿರುವ ಡಿಜಿಟಲ್ ಸ್ಕ್ರೀನ್‌ಗಳಲ್ಲಿ ಸರಳ ವ್ಯಾಯಾಮದ ಮಾರ್ಗದರ್ಶನ ನೀಡಲಾಗುತ್ತದೆ. ಇದನ್ನು ನೋಡಿ ಪ್ರಯಾಣಿಕರು ವ್ಯಾಯಾಮ ಮಾಡಬಹುದು.

ಕ್ವಾಂಟಾಸ್ ಈ ಎಲ್ಲವನ್ನೂ ಕೇವಲ ಊಹೆಯ ಮೇಲೆ ಮಾಡುತ್ತಿಲ್ಲ. 2019ರಲ್ಲಿ ನಡೆಸಿದ ಪ್ರಾಯೋಗಿಕ ಹಾರಾಟಗಳಲ್ಲಿ, ಪ್ರಯಾಣಿಕರ ತಲೆಗೆ ಸೆನ್ಸರ್‌ಗಳನ್ನು ಅಳವಡಿಸಿ ಅವರ ಮಿದುಳಿನ ತರಂಗಗಳನ್ನು ಅಧ್ಯಯನ ಮಾಡಲಾಗಿತ್ತು. ಈ ವಿಶೇಷ ಬೆಳಕು ಮತ್ತು ಆಹಾರ ಪದ್ಧತಿಯನ್ನು ಅನುಸರಿಸಿದ ಪ್ರಯಾಣಿಕರು, ಸಾಮಾನ್ಯ ಪ್ರಯಾಣಿಕರಿಗಿಂತ ಕಡಿಮೆ ಜೆಟ್-ಲ್ಯಾಗ್ ಅನುಭವಿಸಿದರು ಮತ್ತು ವಿಮಾನ ಇಳಿದ ನಂತರ ಹೆಚ್ಚು ಲವಲವಿಕೆಯಿಂದ ಕೂಡಿದ್ದರು ಎಂದು ಸಂಶೋಧನೆ ದೃಢಪಡಿಸಿದೆ. ಹೀಗಾಗಿ, 2027ರ ಈ ಪ್ರಯಾಣವು ಕೇವಲ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದಲ್ಲ, ಬದಲಿಗೆ ಆಕಾಶದಲ್ಲೇ ಒಂದು 'ವೆಲ್‌ನೆಸ್ ರಿಟ್ರೀಟ್' ಅನುಭವವನ್ನು ನೀಡಲಿದೆ.

ಈ 'ಪ್ರಾಜೆಕ್ಟ್ ಸನ್‌ರೈಸ್' ಯೋಜನೆಯಲ್ಲಿ ಲಗೇಜ್ ನಿರ್ವಹಣೆ ಅತ್ಯಂತ ನಿರ್ಣಾಯಕ ವಿಷಯ. ಪ್ರಯಾಣಿಕರ ಹಿತದೃಷ್ಟಿಯಿಂದ ಮತ್ತು ವಿಮಾನಯಾನ ಸಂಸ್ಥೆಯ ದೃಷ್ಟಿಯಿಂದಲೂ ಇದು ಎಂಜಿನಿಯರಿಂಗ್ ಲೆಕ್ಕಾಚಾರದ ಒಂದು ಭಾಗ. ಈ ಐತಿಹಾಸಿಕ ವಿಮಾನದಲ್ಲಿ ಲಗೇಜ್ ಮಿತಿ ಹೇಗಿರಬಹುದು ಮತ್ತು ಪ್ರಯಾಣಿಕರು ತಮ್ಮ ಲಗೇಜ್ ಅನ್ನು ಹೇಗೆ ಬುದ್ಧಿವಂತಿಕೆಯಿಂದ ನಿರ್ವಹಿಸಬೇಕು ಎಂಬುದು ಸಹ ಮುಖ್ಯ. ಸಾಮಾನ್ಯ ವಿಮಾನಗಳಲ್ಲಿ ಒಂದೆರಡು ಕಿಲೋ ಹೆಚ್ಚುವರಿ ಲಗೇಜ್ ಇದ್ದರೆ ಏರ್‌ಲೈನ್ಸ್ ಸಿಬ್ಬಂದಿ ದಂಡ ವಿಧಿಸಿ ಅನುಮತಿಸಬಹುದು. ಆದರೆ, 'ಪ್ರಾಜೆಕ್ಟ್ ಸನ್‌ರೈಸ್' ವಿಮಾನದಲ್ಲಿ ಇದು ಅಷ್ಟು ಸುಲಭವಲ್ಲ.

ಹದಿನೇಳು ಸಾವಿರ ಕಿ.ಮೀ. ಹಾರಲು ವಿಮಾನವು ಟನ್‌ಗಟ್ಟಲೆ ಇಂಧನವನ್ನು ಹೊತ್ತೊಯ್ಯಬೇಕಾಗುತ್ತದೆ. ವಿಮಾನದ ಒಟ್ಟು ತೂಕದಲ್ಲಿ ಇಂಧನವೇ ಸಿಂಹಪಾಲನ್ನು ಆಕ್ರಮಿಸಿಕೊಳ್ಳುತ್ತದೆ. ಹೀಗಾಗಿ, ಪ್ರಯಾಣಿಕರು ಮತ್ತು ಅವರ ಲಗೇಜ್ ತೂಕವನ್ನು ಬಹಳ ಕರಾರುವಾಕ್ಕಾಗಿ ಲೆಕ್ಕ ಹಾಕಲಾಗುತ್ತದೆ. ತೂಕವನ್ನು ಸರಿದೂಗಿಸಲು, ಕ್ವಾಂಟಾಸ್ ಈ ವಿಮಾನಗಳಲ್ಲಿ ವಾಣಿಜ್ಯ ಸರಕುಗಳನ್ನು ಸಾಗಿಸುವುದಿಲ್ಲ ಎಂದು ಈಗಾಗಲೇ ಸುಳಿವು ನೀಡಿದೆ. ವಿಮಾನದ 'ಬೆಲ್ಲಿ' ಭಾಗದಲ್ಲಿ ಪ್ರಯಾಣಿಕರ ಬ್ಯಾಗ್‌ಗಳಿಗೆ ಮಾತ್ರ ಆದ್ಯತೆ ನೀಡಲಾಗುತ್ತದೆ. ಕ್ವಾಂಟಾಸ್ ಇನ್ನೂ ಅಧಿಕೃತವಾಗಿ ಲಗೇಜ್ ನೀತಿಯನ್ನು ಪ್ರಕಟಿಸಿಲ್ಲ. ಚೆಕ್-ಇನ್ ಮಾಡುವಾಗ ತೂಕದ ಮಿತಿಯನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ.

ಇಷ್ಟು ದೀರ್ಘ ಪ್ರಯಾಣದಲ್ಲಿ ಫ್ರೆಶ್ ಆಗಿರಲು ಒಂದು ಸೆಟ್ ಆರಾಮದಾಯಕ ಬಟ್ಟೆ (ಉದಾಹರಣೆಗೆ ಪೈಜಾಮ ಅಥವಾ ಟ್ರ್ಯಾಕ್ ಪ್ಯಾಂಟ್) ಮತ್ತು ಒಳ ಉಡುಪುಗಳನ್ನು ಹ್ಯಾಂಡ್ ಬ್ಯಾಗ್‌ನಲ್ಲಿ ಇಟ್ಟುಕೊಳ್ಳುವುದು ಅತ್ಯಗತ್ಯ. ನೇರ ವಿಮಾನವಾಗಿರುವುದರಿಂದ, ಮಧ್ಯದಲ್ಲಿ ಎಲ್ಲಿಯೂ ಲಗೇಜ್ ಬದಲಾಯಿಸುವ ತೊಂದರೆ ಇರುವುದಿಲ್ಲ. ಇದು ಪ್ರಯಾಣಿಕರಿಗೆ ಒಂದು ದೊಡ್ಡ ಪ್ಲಸ್ ಪಾಯಿಂಟ್. ಲಂಡನ್‌ಲ್ಲಿ ಬ್ಯಾಗ್ ಚೆಕ್-ಇನ್ ಮಾಡಿದರೆ, ನೇರವಾಗಿ ಸಿಡ್ನಿಯಲ್ಲಿ ಅದನ್ನು ಪಡೆಯಬಹುದು. ಇದರಿಂದ ಲಗೇಜ್ ಕಳೆದುಹೋಗುವ ಸಾಧ್ಯತೆ ತೀರಾ ಕಡಿಮೆ. 2027ರ ಈ ಪ್ರಯಾಣದಲ್ಲಿ ಲಗೇಜ್ ಮಿತಿಯು ಸಾಮಾನ್ಯ ವಿಮಾನಗಳಂತೆಯೇ ಇದ್ದರೂ, ಅದರ ನಿರ್ವಹಣೆಯ ಬಗೆಗೆ ಹೆಚ್ಚು ಗಮನ ಹರಿಸಬೇಕಾಗುತ್ತದೆ.

ಹಾಗೇ ಸುಮ್ಮನೆ ಅಲ್ಲದ ಹಾಗೇ ಸುಮ್ಮನೆಗಳು...

'ಅನಿಸುತಿದೆ ಯಾಕೋ ಇಂದು' ಹಾಡು ಯಶಸ್ವಿಯಾದದ್ದು ಹಾಗೇ ಸುಮ್ಮನೆ ಅಲ್ಲ, 'ಹಾಗೇ ಸುಮ್ಮನೆ' ಪದಪುಂಜದಿಂದಲೇ ಎಂದು ನನ್ನ ಅಭಿಪ್ರಾಯ. ಜಯಂತ ಕಾಯ್ಕಿಣಿಯವರು ಹಾಡಿನ ಎರಡು ಚರಣಗಳನ್ನೂ 'ಹಾಗೇ ಸುಮ್ಮನೆ'ಯಿಂದಲೇ ಕೊನೆಗೊಳಿಸಿದ್ದಾರೆ. ಒಂದು ಚರಣದಲ್ಲಿ ''ನಿನಗುಂಟೇ ಇದರ ಕಲ್ಪನೆ... ನನ್ನ ಹೆಸರ ಕೂಗೇ ಒಮ್ಮೆ ಹಾಗೇ ಸುಮ್ಮನೆ'' ಎಂದು; ಇನ್ನೊಂದು ಚರಣದಲ್ಲಿ ''ನಾ ಕೈದಿ ನೀನೇ ಸೆರೆಮನೆ, ತಪ್ಪಿ ನನ್ನ ಅಪ್ಪಿಕೋ ಒಮ್ಮೆ ಹಾಗೇ ಸುಮ್ಮನೆ'' ಎಂದು!

ಅನಿಸುತಿದೆ ಯಾಕೋ ಇಂದು ನೀನೇನೆ ನನ್ನವಳೆಂದು... ಮಾಯದ ಲೋಕದಿಂದ ನನಗಾಗಿ ಬಂದವಳೆಂದು... ಆಹಾ ಎಂಥ ಮಧುರ ಯಾತನೆ... ಕೊಲ್ಲು ಹುಡುಗಿ ಒಮ್ಮೆ ನನ್ನ ಹಾಗೇ ಸುಮ್ಮನೆ!'' ಮುಂಗಾರು ಮಳೆ ಚಿತ್ರದ ಈ ಹಾಡು ಆವತ್ತಿನ ದಿನಗಳಲ್ಲಿ ಮಾಡಿದ್ದ ಮೋಡಿ ಅಂಥಿಂಥದಲ್ಲ. ಆವತ್ತಿನ ದಿನಗಳು ಅಂತೇನು, ಈಗ ಕೇಳಿದರೆ ಈಗಲೂ ಅದೇ ತಾಜಾತನ. ವಯಸ್ಸಿನ ಪರಿವೆಯಿಲ್ಲದೆ ಪ್ರೇಮಕಲ್ಪನೆಗಳು ಗರಿಗೆದರುವ ಕ್ಷಣ. ಬಹುಶಃ 21ನೆಯ ಶತಮಾನದಲ್ಲಿ ಬಂದ ಕನ್ನಡ ಚಿತ್ರಗೀತೆಗಳ ಪೈಕಿ ಗಾಢವಾಗಿ ಮತ್ತು ಚಿರಕಾಲ ಶ್ರೋತೃಗಳ ನಾಲಗೆ ಮೇಲೆ ನಲಿದಾಡಿದ, ಕರಣಗಣದಿ ರಿಂಗಣಿಸಿದ, ಮನ ತುಂಬ ಮೆಲುವಾಗಿ ಮಾರ್ದನಿಗೊಂಡ ಕೆಲವೇಕೆಲವು ಚಿತ್ರಗೀತೆಗಳಲ್ಲಿ ಇದೊಂದು. ಜಯಂತ ಕಾಯ್ಕಿಣಿ (ಸಾಹಿತ್ಯ), ಮನೋಮೂರ್ತಿ (ಸಂಗೀತ), ಸೋನು ನಿಗಮ್ (ಗಾಯನ), ಗಣೇಶ್ (ಅಭಿನಯ), ಯೋಗರಾಜ ಭಟ್ (ನಿರ್ದೇಶನ)- ಕೀರ್ತಿಯಶಸ್ಸುಗಳಲ್ಲಿ ಎಲ್ಲರ ಪಾಲೂ ಇದೆ. ಇರಲಿ, ನಾನೀಗ ವಿಶ್ಲೇಷಣೆಗೆ ಹೊರಟಿದ್ದು ಮುಂಗಾರು ಮಳೆ ಚಿತ್ರದ ಬಗೆಗಲ್ಲ; ಈ ಪಂಚಪ್ರತಿಭೆಗಳ ಬಗೆಗೂ ಅಲ್ಲ. ಈ ಹಾಡಿನಲ್ಲಿ ಬರುವ 'ಹಾಗೇ ಸುಮ್ಮನೆ' ಎಂಬ ಪದಪುಂಜದ ಬಗೆಗೆ ಮಾತ್ರ!

ಮುಂಗಾರು ಮಳೆ ಹಾಡು ಯಶಸ್ವಿಯಾದದ್ದು ಹಾಗೇ ಸುಮ್ಮನೆ ಅಲ್ಲ, 'ಹಾಗೇ ಸುಮ್ಮನೆ' ಪದಪುಂಜದಿಂದಲೇ ಎಂದು ನನ್ನ ಅಭಿಪ್ರಾಯ. ಇದಕ್ಕೆ ಪುರಾವೆಗಳನ್ನೂ ಒದಗಿಸಬಲ್ಲೆ. ಪಲ್ಲವಿಯಲ್ಲಿ ಒಮ್ಮೆ ಮಾತ್ರ ಬಂದು ಹೋಗುವುದಲ್ಲ, ಜಯಂತ ಕಾಯ್ಕಿಣಿಯವರು ಹಾಡಿನ ಎರಡು ಚರಣಗಳನ್ನೂ 'ಹಾಗೇ ಸುಮ್ಮನೆ'ಯಿಂದಲೇ ಕೊನೆಗೊಳಿಸಿದ್ದಾರೆ. ಅದೂ ಸುಂದರ ಪ್ರಾಸದೊಂದಿಗೆ. ಒಂದು ಚರಣದಲ್ಲಿ ''ನಿನಗುಂಟೇ ಇದರ ಕಲ್ಪನೆ... ನನ್ನ ಹೆಸರ ಕೂಗೇ ಒಮ್ಮೆ ಹಾಗೇ ಸುಮ್ಮನೆ'' ಎಂದು; ಇನ್ನೊಂದು ಚರಣದಲ್ಲಿ ''ನಾ ಕೈದಿ ನೀನೇ ಸೆರೆಮನೆ, ತಪ್ಪಿ ನನ್ನ ಅಪ್ಪಿಕೋ ಒಮ್ಮೆ ಹಾಗೇ ಸುಮ್ಮನೆ'' ಎಂದು. ಇದನ್ನು ತುಂಬ ಜನ ''ತಬ್ಬಿ ನನ್ನ ಅಪ್ಪಿಕೋ ಒಮ್ಮೆ ಹಾಗೇ ಸುಮ್ಮನೆ'' ಎಂದು ತಪ್ಪಾಗಿ ಗ್ರಹಿಸುತ್ತಾರೆ, ಬರೆಯುತ್ತಾರೆ, ಹಾಡುತ್ತಾರೆ. ಅದು 'ತಬ್ಬಿ' ಅಲ್ಲ 'ತಪ್ಪಿ' ಎಂದು ಇರುವುದು. ತಬ್ಬಿ ಅಪ್ಪಿಕೋ ಎಂದರೆ ದ್ವಿರುಕ್ತಿಯಾಗುತ್ತದೆ. ತಪ್ಪಿ ಅಪ್ಪಿಕೋ ಎಂದರೆ, ನೀನು ನನ್ನನ್ನು ಅಪ್ಪಿಕೊಳ್ಳಲಿಕ್ಕೆ ಬರುತ್ತೀಯೆಂಬ ಭರವಸೆಯಿಲ್ಲ, ಆದರೆ ಅಪ್ಪಿತಪ್ಪಿಯಾದರೂ, ಬೈ ಮಿಸ್ಟೇಕ್ ರೀತಿಯಲ್ಲಾದರೂ ಒಮ್ಮೆ ಬಂದು ಅಪ್ಪಿಕೋ ಎಂದು ಪ್ರಿಯಕರನ ಅಹವಾಲು, ಬಿನ್ನಹ, ಗೋಗರೆತ. ಜಯಂತ ಕಾಯ್ಕಿಣಿ ಮುಂಗಾರು ಮಳೆ ಸಿನಿಮಾ ತಂಡಕ್ಕೆ ಪದ್ಯವನ್ನು ಓದಿ ವಿವರಿಸುತ್ತಿರುವ ಒಂದು ವಿಡಿಯೊ ತುಣುಕನ್ನು ನಾನು ನೋಡಿದ್ದೇನೆ. ಅದರಲ್ಲಿ ಅವರು 'ತಪ್ಪಿ ಅಪ್ಪಿಕೋ'ವನ್ನು ಒಪ್ಪವಾಗಿ ವಿವರಿಸಿದ್ದಾರೆ. ಅಲ್ಲೇ ಪಕ್ಕ ಕೂತಿದ್ದ ಗಣೇಶ್ ''ಆಹಾ ವ್ಹಾಟ್ ಎ ಬ್ಯೂಟಿಫುಲ್ ಲೈನ್! ಎಷ್ಟು ಚಂದದ ಸಾಲು!'' ಎಂದು ಉದ್ಗಾರವೆತ್ತಿದ್ದಾರೆ.

ಮುಂಗಾರು ಮಳೆ ಮತ್ತು 'ಹಾಗೇ ಸುಮ್ಮನೆ' ಪದಪುಂಜದ ನಂಟು ಅಲ್ಲಿಗೇ ಮುಗಿಯುವುದಿಲ್ಲ. ಚಿತ್ರವು 25 ವಾರಗಳ ಯಶಸ್ವಿ ಪ್ರದರ್ಶನ ಮುಗಿಸಿದಾಗ ನಿರ್ದೇಶಕ ಯೋಗರಾಜ ಭಟ್ ಆ ಬೆಳ್ಳಿಹಬ್ಬ ಸಮಾರಂಭದಲ್ಲೇ ಒಂದು ಪುಸ್ತಕ ಬಿಡುಗಡೆ ಮಾಡಿದ್ದರು. ಮುಂಗಾರು ಮಳೆ ಚಿತ್ರನಿರ್ಮಾಣದ ಬಗ್ಗೆಯೇ (ಮೇಕಿಂಗ್ ಆಫ್ ಮುಂಗಾರು ಮಳೆ) ಇದ್ದ ಆ ಪುಸ್ತಕದ ಶೀರ್ಷಿಕೆಯೂ 'ಹಾಗೇ ಸುಮ್ಮನೆ' ಅಂತಲೇ ಇತ್ತು! ಎರಡು ವರ್ಷಗಳ ಬಳಿಕ 2008ರಲ್ಲಿ 'ಹಾಗೆ ಸುಮ್ಮನೆ' ಎಂಬ ಹೆಸರಿನದೇ ಒಂದು ಚಿತ್ರವೂ ಬಿಡುಗಡೆಯಾಯ್ತು. ಮುಂಗಾರು ಮಳೆಯ ಚಿತ್ರಕಥೆ ಬರೆದಿದ್ದ ಪ್ರೀತಂ ಗುಬ್ಬಿಯವರದೇ ಚಿತ್ರಕಥೆ, ಮಾತ್ರವಲ್ಲ ಈ ಬಾರಿ ನಿರ್ದೇಶನ ಕೂಡ. ಅದರ ಶೀರ್ಷಿಕೆ ಗೀತೆ ''ಮಾಯವಾಗಿದೆ ಮನಸು ಹಾಗೇ ಸುಮ್ಮನೆ... ಗಾಯವ ಮಾಡಿದೆ ಕನಸು ಹಾಗೇ ಸುಮ್ಮನೆ...'' ಮತ್ತೊಮ್ಮೆ ಜಯಂತ ಕಾಯ್ಕಿಣಿ, ಮನೋಮೂರ್ತಿ, ಸೋನು ನಿಗಮ್ ತ್ರಿವೇಣಿ ಸಂಗಮ. ಆ ಹಾಡಾಗಲೀ ಚಿತ್ರವಾಗಲೀ ಮುಂಗಾರು ಮಳೆಯಷ್ಟು ಧೋ ಎನ್ನಲಿಲ್ಲವಾದರೂ 'ಹಾಗೇ ಸುಮ್ಮನೆ' ಪದಪುಂಜ ಅಲ್ಲೂ ರಾರಾಜಿಸಿ ಜಯಂತ ಕಾಯ್ಕಿಣಿ ಸ್ಟೀರಿಯೊಟೈಪಿನ ಛಾಪು ಮೂಡಿಸಿದ್ದಂತೂ ಹೌದು.

ಮುಂಗಾರು ಮಳೆಯಲ್ಲಿ ಒದ್ದೆಯಾಗಿರುವಾಗಲೇ ಇನ್ನೆರಡು ಹಸಿ-ಹಸಿರು ನೆನಪುಗಳನ್ನು ಉಲ್ಲೇಖಿಸಿ ಆಮೇಲೆ ಮೈ ಒರೆಸಿಕೊಳ್ಳುತ್ತೇನೆ. ಮೊದಲನೆಯದು, ಮುಂಗಾರು ಮಳೆ ಕ್ರೇಜ್ ಇನ್ನೂ ಉಚ್ಛ್ರಾಯದಲ್ಲಿದ್ದಾಗಲೇ ನನ್ನೊಬ್ಬ ಸ್ನೇಹಿತ, ಸುಳ್ಯ ಜಾಲ್ಸೂರಿನ ಸುಬ್ರಹ್ಮಣ್ಯ ಭಟ್ 'ಅನಿಸುತಿದೆ ಯಾಕೋ ಇಂದು...' ಹಾಡಿನ ಸಾರವನ್ನು ಒಂದು ಭೋಗ ಷಟ್ಪದಿಯಲ್ಲಿ ಹಿಡಿದಿಟ್ಟಿದ್ದರು. ಜಯಂತ ಕಾಯ್ಕಿಣಿ ಒಂದುವೇಳೆ ಆ ಹಾಡನ್ನು ಭೋಗ ಷಟ್ಪದಿ ಸ್ಟೈಲ್‌ನಲ್ಲಿ ಬರೆದಿದ್ದರೆ, ಸೋನು ನಿಗಮ್ ಅದನ್ನು 'ತಿರುಕನೋರ್ವನೂರಮುಂದೆ ಮುರುಕು ಧರ್ಮಶಾಲೆಯಲ್ಲಿ...' ಧಾಟಿಯಲ್ಲಿ ಹಾಡಿದ್ದರೆ, ಹೇಗಿರುತ್ತಿತ್ತೆಂಬ ಭಲೇ ಕಲ್ಪನೆ: ''ಅನಿಸುತಿರುವುದೇತಕಿಂದು। ಜನಿಸಿ ಬಂದೆ ನನಗೆಯೆಂದು। ಹನಿಸುತಿರುವ ಮಳೆಗು ನಿನ್ನ ಕಂಪು ಘಮ್ಮನೆ। ಎಣಿಸಲಾರೆ ನೀನು ಪರರ। ಕನಸಿನೊಳಗೆ ಸೇರುವುದನು। ಫಿನಿಷು ಮಾಡೆ ಹುಡುಗಿ ನನ್ನ ಹಾಗೆ ಸುಮ್ಮನೆ॥'' ಎರಡನೆಯದು, ನೀವು ಛೀ ಥೂ ಎಂದು ಮೂಗು ಮುರಿಯುವುದಿಲ್ಲವಾದರೆ, ಹೆಚ್ಚೆಂದರೆ ಮೂಗು ಮುಚ್ಚಿಕೊಳ್ಳುವಿರಾದರೆ, ಮಾತ್ರ ಓದಿ- ನನ್ನ ಇನ್ನೊಬ್ಬ ರಸಿಕಸ್ನೇಹಿತ ವಿನಾಯಕ ಕಾಮತ್ ರಚಿಸಿದ್ದೊಂದು ಅಣಕವಾಡು: ''ಅನಿಸುತಿದೆ ಯಾಕೋ ಇಂದು ನೀನೇನೆ ಹೂಸಿದೆಯೆಂದು... ಶಬ್ದದ ಅಂಜಿಕೆಯಿಂದ ತಡೆತಡೆದು ಬೀಸಿದೆಯೆಂದು... ಆಹಾ ಎಂಥ ಮಧುರ ವಾಸನೆ... ಮುಚ್ಚಿಕೊಂಡೆ ಮೂಗನೊಮ್ಮೆ ಹಾಗೇ ಸುಮ್ಮನೆ!''

ಹಾಗೇ ಸುಮ್ಮನೆ ಒಮ್ಮೆ ಯೋಚಿಸಿ. ಸುಮ್ಮನೆ ಎಂಬ ಪದ ನಮ್ಮ ಮಾತಿನಲ್ಲಿ ಬರವಣಿಗೆಯಲ್ಲಿ ಹಾಸು ಹೊಕ್ಕಿರುವುದೇ ಆಗಿದೆ. ''ಅಲ್ಲಿದೆ ನಮ್ಮನೆ ಇಲ್ಲಿರುವುದು ಸುಮ್ಮನೆ'' ಎಂದರು ಪುರಂದರದಾಸರು. ನಮ್ಮ ದೇಹ ಮತ್ತು ಈ ಲೋಕದ ಜೀವನ ತಾತ್ಕಾಲಿಕ, ಆದರೆ ನಮ್ಮ ನಿಜವಾದ ವಾಸಸ್ಥಾನ ಇರಬೇಕಾದ್ದು ವೈಕುಂಠದಲ್ಲಿ ಪರಮಾತ್ಮನ ಪದತಲದಲ್ಲಿ ಎಂಬ ಪಾರಮಾರ್ಥಿಕ ಚಿಂತನೆ ಅದು. ''ಕದ ಬಾಗಿಲಿರಿಸಿಹ ಕಳ್ಳ ಮನೆ ಇದು। ಮುದದಿಂದ ಲೋಲ್ಯಾಡೋ ಸುಳ್ಳು ಮನೆ। ಇದಿರಾಗಿ ವೈಕುಂಠ ವಾಸ ಮಾಡುವಂಥ। ಪದುಮನಾಭನ ದಿವ್ಯ ಬದುಕು ಮನೆ'' ಎಂದು ಅದೇ ಕೀರ್ತನೆಯ ಚರಣದಲ್ಲಿ ವಿವರಣೆಯಿದೆ. ಪರಮಾತ್ಮನ ಪದತಲ ನಮಗೆ ಸುಮ್ಮನೆ ಸಿಗುವುದಿಲ್ಲ. ''ಸುಮ್ಮನೇ ಬ್ರಹ್ಮವಾಗುವನೇ ಮೂಲಾಹಮ್ಮೆಲ್ಲ ಲಯವಾಗಿ ಉಳಿಯದೆ ತಾನೆ ತಾನುಳಿಯದೆ ತಾನೆ...'' ಎಂದು ಕೇಳಿಕೊಳ್ಳಬೇಕಾಗುತ್ತದೆ ಮೈಸೂರು ಶಿವರಾಮ ಶಾಸ್ತ್ರಿಯವರು ರಚಿಸಿದ ತತ್ತ್ವಪದದಲ್ಲಿದ್ದಂತೆ; ಸಾವೆಂಬ ಗುಮ್ಮನನ್ನು ಕರೆಯುತ್ತೇನೆ ಎಂದು ಯಾರಾದರೂ ಹೆದರಿಸಿದರೆ ''ಗುಮ್ಮನ ಕರೆಯದಿರೆ ಅಮ್ಮ ನೀನು ಗುಮ್ಮನ ಕರೆಯದಿರೆ... ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು ಮಮ್ಮು ಉಣ್ಣುತ್ತೇನೆ ಅಮ್ಮ ಅಳುವುದಿಲ್ಲ'' ಎಂದು ಮಾತು ಕೊಡಬೇಕಾಗುತ್ತದೆ ಯಶೋದೆಗೆ ಬಾಲಕೃಷ್ಣ ಕೊಟ್ಟಂತೆ; ''ಅಮ್ಮ ನೀನು ಸಾಯಲೇಕೆ ನಮ್ಮ ತಬ್ಬಲಿ ಮಾಡಲೇಕೆ ಸುಮ್ಮನಿಲ್ಲಿಯೇ ನಿಲ್ಲು'' ಎಂದು ಬಿನ್ನವಿಸಿಕೊಳ್ಳಬೇಕಾಗುತ್ತದೆ ಪುಣ್ಯಕೋಟಿಯ ಕರುವಿನಂತೆ. ಹುಟ್ಟು-ಸಾವಿನ ನೆಲೆಗಟ್ಟಿನ, ಉನ್ನತ ಆಧ್ಯಾತ್ಮಿಕ ಮಟ್ಟದ 'ಸುಮ್ಮನೆ' ಅದು.

ಸುಮ್ಮನೆ ಒಮ್ಮೆ ನಿಘಂಟು ತೆರೆದು ನೋಡಿ. ಅರ್ಥಾತ್, ನಿಘಂಟುವಿನಲ್ಲಿ ಸುಮ್ಮನೆ ಪದದ ಅರ್ಥ ಉದಾಹರಣೆಗಳನ್ನು ಗಮನಿಸಿ. ಸುಮ್ಮನೆ ಅಥವಾ ಅದರ ಇನ್ನೊಂದು ರೂಪ ಸುಮ್ಮಗೆ ಇವೆರಡೂ ಅವ್ಯಯಗಳು. ಲಿಂಗ ವಚನ ಕಾಲ ವಿಭಕ್ತಿಗಳಿಂದ ಬದಲಾಗದವು. ಸುಮ್ಮಗೆಯ ಮೊದಲ ಅರ್ಥ ಮಾತಿಲ್ಲದೆ,

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಮೌನವಾಗಿ ಎಂದು. ''ಲೋಕಕ್ಕೆ ಧರ್ಮಾಧರ್ಮ ತೋರಿಸಲಿಕ್ಕೆಂದು ಸುಮ್ಮಗೆ ಇದ್ದನು'', ''ಕೆಲಕೆಲವು ಪ್ರಸಂಗಗಳಲ್ಲಿ ಮಾತನಾಡುವುದನ್ನು ಬಿಟ್ಟು ಸುಮ್ಮಗೆ ಕೂಡ್ರಬೇಕು''. ಇನ್ನೊಂದು ಅರ್ಥ- ಪ್ರತಿಫಲವಿಲ್ಲದೆ, ಉಚಿತವಾಗಿ ಎಂದು. ''ಮರಿಮಗನಾದರೆ ಹರಿಗೋಲು ಸುಮ್ಮಗೆ ದಾಟಿಸ್ಯಾನೇ?'' ಅಂತ ಗಾದೆಮಾತು. ಸುಮ್ಮನೆ ಪದಕ್ಕೆ ಮೊದಲ ಅರ್ಥ ಸುಮ್ಮಗೆಯದೇ. ''ನಿರ್ಮ್ಮೊಡತಿಯ ಮನೆ ಯಾವುದು ಘಮ್ಮನೆ ಪೇಳೆಂದು ನೃಪತಿ ಬೆಸಗೊಳಲವಳತ್ಯುಮ್ಮಹದಿಂ ಕಿವಿಯೆಡೆಯಂ ಸುಮ್ಮನೆ ತೋರುತ್ತ ಪೋದಳತಿಮುದದಿಂದ...'', ''ನಾವೀ ಮುನಿಗೆ ಸುಮ್ಮನೆ ಪೋಪೆವೆನೆ ಶಾಪವೀವನು...'' ಎರಡನೆಯ ಅರ್ಥ ಉಚಿತವಾಗಿ, ಬಿಟ್ಟಿಯಾಗಿ ಎಂದು. ''ಸುಮ್ಮನೀ ಸುಕ್ಷೇತ್ರವಾಸಿ ವಿಹರಿಸಿದುವೇ ಅಮ್ಮಮ್ಮ...'', ''ತನುವ ದಂಡಿಸುತುಗ್ರ

ತಪದೊಳಾಚರಿಸಿ ಸುಮ್ಮನೆ ಸರ್ವಶಾಸ್ತ್ರಗಳ ಪಠಿಸುವರು...'' ಮೂರನೆಯ ಅರ್ಥ ಅಕಾರಣವಾಗಿ ಎಂದು. ''ಸುಮ್ಮನದು ತಾ ಬಂದು ಮಾಡುವ ಕರ್ಮವಾವುದು?'', ''ಸುಮ್ಮನಪಕೀರ್ತಿಗೊಳಗಾಗಲೇಕೆ?''. ನಾಲ್ಕನೆಯ ಅರ್ಥ ತೆಪ್ಪಗೆ, ನಿಷ್ಕ್ರಿಯವಾಗಿ ಎಂದು. ''ಬ್ರಾಹ್ಮಣನು ಗಂಡನ್ನು ಹುಡುಕಿಹುಡುಕಿ ಸಾಕಾಗಿ ಸುಮ್ಮನೆ ಮನೆಯಲ್ಲಿ ಕೂತುಬಿಟ್ಟನು'' ಸುಮ್ಮಸುಮ್ಮನೆ ಎಂದು ದ್ವಿರುಕ್ತಿಯಾಗಿಯೂ ಬಳಕೆಯಿದೆ. ''ಹೊಟ್ಟೆ ತುಂಬಿದಾಗ್ಯೂ ಸುಮ್ಮಸುಮ್ಮನೆ ಮೃಗಗಳನ್ನು ಕೊಲ್ಲುತ್ತದೆ''. ಸುಖಾಸುಮ್ಮನೆ ಎಂಬ ಬಳಕೆಯೂ ಇದೆ. ''ಸುಖಾಸುಮ್ಮನೆ ಅಕ್ಕಯ್ಯನಿಗೆ ಬೇಸರವಾಗುವುದು ಬೇಡವಷ್ಟೆ?''

ಸುಖಾಸುಮ್ಮನೆ ಇಷ್ಟುಹೊತ್ತು ಏನೇನೋ ಉಪಕಥೆಗಳಿಂದ ನಿಮ್ಮ ತಲೆ ತಿಂದಿದ್ದಕ್ಕೆ ಕ್ಷಮೆಯಿರಲಿ. ತಲೆಯ ಸ್ವಲ್ಪ ಭಾಗ ತಿನ್ನದೇ ಉಳಿದಿದೆಯಾದರೆ ಈಗ ಮುಖ್ಯ ವಿಷಯಕ್ಕೆ ಬರುತ್ತೇನೆ. ಅದೇನೆಂದರೆ 'ಹಾಗೇ ಸುಮ್ಮನೆ' ಎಂಬ ತಲೆಬರಹಗಳು. ನೀವೂ ಗಮನಿಸಿರಬಹುದು, ಅಥವಾ ನೀವೂ ಅಂಥವರೇ ಇರಬಹುದು- ಸಾಮಾಜಿಕ ಮಾಧ್ಯಮಗಳಿಂದಾಗಿ ಹೆಚ್ಚುಹೆಚ್ಚು ಜನರು ಬರೆಯುವ ಹವ್ಯಾಸ ಬೆಳೆಸಿಕೊಳ್ಳುತ್ತಿರುವ, ತಮಗನಿಸಿದ್ದೇನನ್ನೋ ಅಥವಾ ತಮ್ಮಿಷ್ಟದ್ದೇನನ್ನೋ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುತ್ತಿರುವ ಕಾಲಘಟ್ಟದಲ್ಲಿ, ಸೂಕ್ತವಾದ ಶೀರ್ಷಿಕೆ ಇಲ್ಲದ 'ಹಾಗೇ ಸುಮ್ಮನೆ' ಎಂಬ ಶೀರ್ಷಿಕೆ ಕೊಡುವುದು. ಹಾಗೆ ಮಾಡುವುದಕ್ಕೆ ಬೇರೆಬೇರೆ ಕಾರಣಗಳಿರಬಹುದು. ಸೂಕ್ತವಾದ ಶೀರ್ಷಿಕೆ ತತ್‌ಕ್ಷಣಕ್ಕೆ ಹೊಳೆಯದಿರಬಹುದು; ಅಥವಾ, ಇಂಥ ಪುಟಗೋಸಿ ವಿಷಯಕ್ಕೆ ಮಣಭಾರದ ಶೀರ್ಷಿಕೆಯೇನೂ ಬೇಕಿಲ್ಲ ಎಂಬ ಲಘುವಾದ ತಾತ್ಸಾರಭಾವವಿರಬಹುದು; ಆಕರ್ಷಕ ಶೀರ್ಷಿಕೆಯಿಂದ ಹೆಚ್ಚು ನಿರೀಕ್ಷೆ ಹುಟ್ಟಿಸಿ ಆಮೇಲೆ ಅಸಲಿ ವಿಷಯವು ಸಪ್ಪೆಯೆನಿಸಿದರೆ ಮೂಗಿಗಿಂತ ಮೂಗುತಿ ಭಾರವಾದೀತೆಂಬ ಹಿಂಜರಿಕೆ ಇರಬಹುದು; ಬೇರೆಯವರು 'ಹಾಗೇ ಸುಮ್ಮನೆ' ಎಂಬ ತಲೆಬರಹ ಕೊಟ್ಟಿದ್ದಾರೆ ಬಹುಶಃ ಅದೇ ಸರಿಯಾದ ಕ್ರಮ ಎಂದು ಅಂಧಾನುಕರಣೆ ಇರಬಹುದು. ಒಟ್ಟಿನಲ್ಲಿ 'ಹಾಗೇ ಸುಮ್ಮನೆ' ಎಂಬ ಶೀರ್ಷಿಕೆಯಿರುವ ಒಂದಾದರೂ ಪುಟ್ಟ ಬರಹವೋ ಒಂದು ಕವಿತೆಯೋ ಒಂದು ಚಿತ್ರವೋ ಒಂದು ಧ್ವನಿಮುದ್ರಣವೋ ಒಂದು ದೃಶ್ಯಮುದ್ರಣವೋ ಪ್ರತಿದಿನವೂ ಹೊಸದಾಗಿ ನೋಡಲಿಕ್ಕೆ ಸಿಗುತ್ತದೆ.

ಸ್ವಾರಸ್ಯವೆಂದರೆ ಹೊಸಬರಂತಷ್ಟೇ ಅಲ್ಲ, ಆಯಾ ಕ್ಷೇತ್ರಗಳಲ್ಲಿ ಸಾಕಷ್ಟು ಪಳಗಿದವರೂ, ಅನುಭವಿಗಳೂ, ಹೆಸರು ಮಾಡಿದವರೂ ಕೆಲವೊಮ್ಮೆ 'ಹಾಗೇ ಸುಮ್ಮನೆ' ತಲೆಬರಹದ ಮೊರೆ ಹೊಗುವ ಉದಾಹರಣೆಗಳು ಫೇಸ್‌ಬುಕ್‌ನಲ್ಲಿ ಬೇಕಾದಷ್ಟು ಸಿಗುತ್ತವೆ. ಕೆರೆಮನೆ ಶಿವಾನಂದ ಹೆಗಡೆಯವರು ಯಕ್ಷಗಾನ ವೇಷಭೂಷಣದಲ್ಲಿ ತನ್ನದೊಂದು ಫೋಟೊ ಏರಿಸಿ 'ಹಾಗೆ ಸುಮ್ಮನೆ' ಎಂದು ತಲೆಬರಹ ಕೊಟ್ಟಿದ್ದಾರೆ. ಪುಸ್ತಕ ಪ್ರಕಾಶಕ ಜಮೀಲ್ ಸಾವಣ್ಣ ಒಂದೇ ಫ್ರೇಮ್‌ನಲ್ಲಿ ದ್ವಿಪಾತ್ರವೆಂಬಂತೆ ತನ್ನೆರಡು ಭಾವಚಿತ್ರಗಳನ್ನು ಪೋಸ್ಟ್ ಮಾಡಿ 'ಹಾಗೆ ಸುಮ್ಮನೆ' ಎಂದು ಕ್ಯಾಪ್ಷನ್ ಕೊಟ್ಟಿದ್ದಾರೆ. ಕಾಮಿಡಿ ರೀಲ್‌ಗಳಿಂದ ಪ್ರಸಿದ್ಧರಾದ ಗಣೇಶ ಕಾಮತ್ ಒಂದು ಹಾಡು ಹಾಡಿದ್ದನ್ನು ಪೋಸ್ಟ್ ಮಾಡಿ 'ಹಾಗೆ ಸುಮ್ಮನೆ ಹಾಡಿದಾಗ' ಎಂದು ಬರೆದಿದ್ದಾರೆ. ವಾಗ್ಮಿ ಲೇಖಕ ಸದ್ಯೋಜಾತ ಭಟ್ಟರು 'ಹಾಗೇ ಸುಮ್ಮನೆ, ನಿನ್ನೆ ಮಾಡಿದ ಉಪನ್ಯಾಸದ ಚಿಕ್ಕ ತುಣುಕು...' ಎಂದೊಂದು ತುಣುಕು ಏರಿಸಿದ್ದಾರೆ. ಗಾಯಕಿ ಮಂಗಳಾ ರವಿ 'ಹಾಗೇ ಸುಮ್ಮನೆ... ಎಂ.ಎನ್. ವ್ಯಾಸರಾವ್ ರಚನೆ, ಮೂಲದಲ್ಲಿ ಸಿ. ಅಶ್ವತ್ಥ್ ಸಂಗೀತ ನಿರ್ದೇಶನದಲ್ಲಿ ರತ್ನಮಾಲಾ ಪ್ರಕಾಶ್ ಹಾಡಿದ್ದು, ಇಲ್ಲಿ ಕೀಬೋರ್ಡ್ ಕಲಾವಿದ ಅಶ್ವಿನ್‌ಕುಮಾರ್ ಸಾಥ್‌ನಲ್ಲಿ' ಎಂದು ತನ್ನದೊಂದು ಗಾಯನದ ತುಣುಕು ಹಂಚಿಕೊಂಡಿದ್ದಾರೆ. ತರಂಗ ವಾರಪತ್ರಿಕೆಯ ಚಿತ್ರಕಲಾವಿದ ಜೇಮ್ಸ್ ವಾಝ್ ಫೇಸ್‌ಬುಕ್ ಗೋಡೆಮೇಲೆ 'ಹಾಗೇ ಸುಮ್ಮನೆ' ಶೀರ್ಷಿಕೆಯ ಚಿತ್ರಗಳು ಹತ್ತಾರು ಸಿಗುತ್ತವೆ. ಪತ್ರಿಕೆಗಳಲ್ಲಿ ಓದುಗರ ಓಲೆಗಳಿಂದ ಖ್ಯಾತರಾಗಿರುವ ಮೈಸೂರುನಿವಾಸಿ ವಕೀಲ ಪಿ.ಜೆ.ರಾಘವೇಂದ್ರ, ರಾಯಲ್ ಎನ್‌ಫೀಲ್ಡ್ ಬೈಕ್ ಸವಾರಿ ಫೋಟೊಗೆ 'ಯುಗಾದಿಯ ಪ್ರಯುಕ್ತ' ಎನ್ನುತ್ತಲೇ 'ಹಾಗೇ ಸುಮ್ಮನೆ' ಸೇರಿಸಿದ್ದಾರೆ! ಹಾಗೆ ಇನ್ನೊಬ್ಬ ಖ್ಯಾತ(?) ವಕೀಲ ನಾಗರಾಜ ಕುಡ್ಪಲಿ ಮಹಾಶಯರದೊಂದು ಲಿಪ್ ಸಿಂಕಿಂಗ್ ಗಾಯನದ ವಿಡಿಯೊ 'ಹಾಗೇ ಸುಮ್ಮನೆ' ತಲೆಬರಹದ್ದನ್ನು ನಾನು ಗಮನಿಸಿದ್ದಿದೆ. ಇವೆಲ್ಲದಕ್ಕೂ ಕಳಶಪ್ರಾಯವೆಂದರೆ, ಸುಮಾರು 18000 ಫಾಲೊವರ್ಸ್ ಇರುವ 'ಹಾಗೆ ಸುಮ್ಮನೆ' ಹೆಸರಿನದೇ ಒಂದು ಫೇಸ್‌ಬುಕ್ ಪ್ರೊಫೈಲ್!

ನಾನಿದನ್ನು ತಪ್ಪೆನ್ನುತ್ತಿಲ್ಲ, ತುಚ್ಛೀಕರಿಸುತ್ತಿಲ್ಲ. 'ಹಾಗೆ ಸುಮ್ಮನೆ' ಎಂದು ಕ್ಯಾಪ್ಷನ್ ಕೊಡುವುದಕ್ಕೆ ಕಾರಣ ಏನಿರಬಹುದೆಂದಷ್ಟೇ ನನ್ನ ಕುತೂಹಲ. ಏಕೆಂದರೆ 'ಹಾಗೇ ಸುಮ್ಮನೆ' ಎಂದು ಬರೆದುಕೊಂಡರೂ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುವುದು ನಾಲ್ಕಾರು ಜನ ನೋಡಿ ಮೆಚ್ಚಲಿ, ಪ್ರತಿಕ್ರಿಯಿಸಲಿ ಎಂದೇ ತಾನೆ? 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ ಹಾಡುವುದು ಅನಿವಾರ್ಯ ಕರ್ಮ ನನಗೆ...' ರೀತಿಯ ವೈರಾಗ್ಯವೇನೂ ಅವರಲ್ಲಿರುವುದಿಲ್ಲ. ಅಲ್ಲದೇ ಬಹುತೇಕ ಸಂದರ್ಭಗಳಲ್ಲಿ ಅವರ ಸರಕು (ಅದು ಲೇಖನವಿರಲಿ ಕವನವಿರಲಿ ಗಾಯನವಿರಲಿ ಚಿತ್ರಕಲೆಯಿರಲಿ...) ಮೆಚ್ಚುವಂತೆ ಇರುವುದೂ ಹೌದು. ನನ್ನೊಬ್ಬ ಅಮೆರಿಕನ್ನಡಿಗ ಸ್ನೇಹಿತ ಅಲೆಕ್ಸಾಂಡರ್ ಮೈಕೇಲ್, ಗಿಟಾರ್ ಜತೆಗೆ ಚೆನ್ನಾಗಿ ಹಾಡುತ್ತಾರೆ; ಅಣ್ಣಾವ್ರು ಹಾಡಿದ ರಾಘವೇಂದ್ರಸ್ವಾಮಿಗಳ ಭಕ್ತಿಗೀತೆಗಳನ್ನೂ ಅಲೆಕ್ಸ್ ತಮ್ಮ ಸುಶ್ರಾವ್ಯ ಕಂಠದಲ್ಲಿ ಮಧುರವಾಗಿ ಪ್ರಸ್ತುತಪಡಿಸುತ್ತಾರೆ. ಫೇಸ್‌ಬುಕ್‌ಗೇರಿಸುವಾಗ ಮಾತ್ರ 'ಹಾಗೇ ಸುಮ್ಮನೆ' ಎಂಬ ಶೀರ್ಷಿಕೆ. ಸ್ವಾನುಭವಗಳ ಪರಿಪಕ್ವ ಟಿಪ್ಪಣಿಗಳನ್ನು ಬರೆಯುವ, ಇದುವರೆಗೆ ಐದಾರು ಪುಸ್ತಕಗಳನ್ನೂ ಪ್ರಕಟಿಸಿರುವ, ಕೃಷ್ಣಾ ಕೌಲಗಿ ಟೀಚರ್ ಈಗಲೂ ತಮ್ಮ ಫೇಸ್‌ಬುಕ್ ಪೋಸ್ಟ್‌ಗಳಿಗೆಲ್ಲ 'ಹಾಗೇ ಸುಮ್ಮನೆ' ಎಂದೇ ತಲೆಬರಹ ಕೊಡುತ್ತಾರೆ! ಇನ್ನೊಬ್ಬರು ಜ್ಯೋತಿ ರಾಜೇಶ್, ಕುದುರೆಮುಖದಲ್ಲಿದ್ದವರು ಗಣಿಉದ್ಯಮ ನಿಂತಮೇಲೆ ಮಂಗಳೂರಿಗೆ ವರ್ಗವಾಗಿರುವ ಪ್ರತಿಭಾನ್ವಿತ ಬರಹಗಾರ್ತಿ. ನನಗೆ ಭಗವದ್ಗೀತೆ ತರಗತಿಗಳ ಮೂಲಕ ಪರಿಚಯವಾದವರು. ಹಾಸ್ಯರಸ ಬೆರೆಸಿ ಒಳ್ಳೊಳ್ಳೆಯ ವಿಚಾರಪ್ರಚೋದಕ ಕಿರುಬರಹಗಳನ್ನೂ ಕವಿತೆಗಳನ್ನೂ ಹೊಸೆಯುತ್ತಾರೆ. ಶೀರ್ಷಿಕೆ ಮಾತ್ರ ಪ್ರತಿಯೊಂದಕ್ಕೂ 'ಹಾಗೇ ಸುಮ್ಮನೆ'.

ಜ್ಯೋತಿಯವರ ಇತ್ತೀಚಿನದೊಂದು 'ಹಾಗೆ ಸುಮ್ಮನೆ' ಹೀಗಿತ್ತು (ಇದನ್ನು ಇಬ್ಬರ ಸಂಭಾಷಣೆ ಎಂಬಂತೆ ಓದಿ. ಇಲ್ಲಿ ಸ್ಥಳಮಿತಿಯಿಂದಾಗಿ ಹೀಗೆ ಬರೆದಿದ್ದೇನೆ): ''ಹಲೋ...'', ''ಹಲ್ಲೋ...'', ''ಹೇಗಿದ್ದೀರಿ?'', ''ಆರಾಮ್... ಚೆನ್ನಾಗಿದ್ದೀನಿ. ನೀವು ಹೇಗಿದ್ದೀರ?'', ''ನಾನೂ ಚೆನ್ನಾಗಿದೀನಿ...'', ''ಮೊನ್ನೆ ಯಾರೋ ನಿಮಗೆ ತುಂಬ ಜ್ವರ ಅಂತ ಹೇಳಿದ್ರು... ಈಗ ಹೇಗಿದೆ ಜ್ವರ?'', ''ಹೂಂ ಇತ್ತು ಕಣ್ರೀ. ಆದ್ರೆ ಆ ಜ್ವರ ಈಗ ಹೇಗಿದೆ ಅಂತ ಗೊತ್ತಿಲ್ಲಪ್ಪ. ಯಾಕಂದ್ರೆ ಅದು ನನ್ನ ಬಿಟ್ಹೋಗಿ ಎರಡ್ ದಿನ ಆಯ್ತು. ಹೇಗಿದ್ದೀಂತ ಅದ್ನ ವಿಚಾರಿಸೋಣ ಅಂದ್ರೆ, ಅದು ಎಲ್ಲಿ ಹೋಯ್ತೂಂತ್ಲೂ ಗೊತ್ತಾಗ್ಲಿಲ್ಲ ನೋಡಿ. ನಾನಂತೂ ಅರಾಮ್!'' ನಿಮ್ಮೆಲ್ಲರ ಜತೆಗೂ ಒಮ್ಮೆಯಾದರೂ ಇದ್ದಿರಬಹುದಾದ ಶೀತ/ತಲೆನೋವು/ಜ್ವರ/ಹಲ್ಲುನೋವು ಮುಂತಾದವು ಈಗ ಹೇಗಿವೆ ಅಂತೇನಾದ್ರೂ ಗೊತ್ತಾ? ಜ್ಯೋತಿ ಇದನ್ನು 'ಹಾಗೇ ಸುಮ್ಮನೆ' ಎಂಬ ಧಾಟಿಯಲ್ಲಷ್ಟೇ ಬರೆದಿದ್ದಿರಬಹುದು. ಸೂಕ್ಷ್ಮವಾಗಿ ಓದಿಕೊಂಡರೆ ಇದರಲ್ಲೊಂದು ಜೀವನಪಾಠವೇ ಇದೆ! ಜ್ವರದ ಉದಾಹರಣೆಯ ಮೂಲಕ ಸುವಿಚಾರವೊಂದನ್ನು ಬಿತ್ತಿದ್ದಿದೆ. ಅದೇನೆಂದರೆ- ಜ್ವರ ಅಥವಾ ಅಂಥ ಕಾಯಿಲೆಗಳ ನಷ್ಟೇ ಅಲ್ಲ, ಬದುಕಿನಲ್ಲಾದ ಕೆಟ್ಟ ಅನುಭವಗಳನ್ನೂ ನಾವು ಸಾಧ್ಯವಾದಷ್ಟೂ ಮಟ್ಟಿಗೆ ಅವುಗಳ ಪಾಡಿಗೆ ಬಿಟ್ಟುಬಿಡಬೇಕು. ಮತ್ತೆಮತ್ತೆ ಅವುಗಳನ್ನೇ ಕೆದಕಿ ನಮ್ಮ ಮನಸ್ಸೆಂಬ ಮೊಗಸಾಲೆಯಲ್ಲಿ ಅವುಗಳಿಗೆ ಮಣೆಹಾಕಿ ಸತ್ಕರಿಸಬಾರದು. ಇದು ಬರೆದಷ್ಟು/ಹೇಳಿದಷ್ಟು ಸುಲಭ ಅಲ್ಲವಾದರೂ ಪಾಲಿಸಿದರೆ ಫಲಿತಾಂಶ ಒಳ್ಳೆಯದಿರುತ್ತದೆ. ಕನಿಷ್ಠ ಪ್ರಯತ್ನವಾದರೂ ಆ ದಿಸೆಯತ್ತ ಇರಬೇಕು.

ಆದ್ದರಿಂದ ಇನ್ನುಮುಂದೆ 'ಹಾಗೇ ಸುಮ್ಮನೆ' ಶೀರ್ಷಿಕೆಯ ಪೋಸ್ಟುಗಳನ್ನು ಲಘುವಾಗಿ ಪರಿಗಣಿಸಬೇಡಿ. ಅವುಗಳಲ್ಲೂ ಹಿತಕರ ಹೂರಣವಿರುತ್ತದೆಂದು ಗೊತ್ತಿರಲಿ. ಕೊನೆಯಲ್ಲೊಂದು ಸ್ವಾರಸ್ಯಕರ ವಿಪರ್ಯಾಸ. ನಾನು ಬರವಣಿಗೆಯ ಇಷ್ಟು ವರ್ಷಗಳಲ್ಲಿ ಇದುವರೆಗೂ 'ಹಾಗೇ ಸುಮ್ಮನೆ' ಎಂಬ ತಲೆಬರಹ ಕೊಟ್ಟು ಪೋಸ್ಟ್ ಮಾಡಿದ್ದಿಲ್ಲ. ಆದರೆ ಇಂದಿನ ಈ ಅಂಕಣಬರಹದ ಶೀರ್ಷಿಕೆಯಲ್ಲಿ ಒಂದಲ್ಲ ಎರಡು ಸರ್ತಿ 'ಹಾಗೇ ಸುಮ್ಮನೆ'!

ಬಹುಬಲಧಾರಿಣೀಂ ರಿಪುದಲವಾರಿಣೀಂ ಮಾತರಂ

ಟ್ಯಾಗೋರರನ್ನೂ ಸೇರಿ ನಮ್ಮ ಅನೇಕ ನಾಯಕರಿಗೆ ಪೊಳ್ಳು ಜಾತ್ಯತೀತವಾದ, ಅಲ್ಪಸಂಖ್ಯಾತರ ತುಷ್ಟೀಕರಣದ ಚಾಳಿ ಸ್ವಾತಂತ್ರ್ಯಪೂರ್ವದಲ್ಲೇ ತಲೆಗೇರಿತ್ತು ಎನಿಸುತ್ತದೆ. ನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಸಾರ್ವಜನಿಕ ಸಭೆಗಳಲ್ಲಿ ಹಾಡಬೇಕಾದ ರಾಷ್ಟ್ರೀಯ ಗೀತೆಯಾಗಿ ಮೊದಲ 2 ಶ್ಲೋಕಗಳನ್ನಷ್ಟೇ ಅಳವಡಿಸಿಕೊಳ್ಳಲು ನಿರ್ಧರಿಸಿತು.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ವಂದೇ ಮಾತರಂ ಗೀತೆ ನಮಗೆಲ್ಲ ಚಿರಪರಿಚಿತವೇ. ಹಾಗೆ ನೋಡಿದರೆ, ಈ ಗೀತೆಯಲ್ಲಿನ ಶಬ್ದಗಳು ಮತ್ತು ಈ ಗೀತೆಯ ಸಂಗೀತ ಸಂಯೋಜನೆಯಿಂದಾಗಿ, 'ಜನಗಣಮನ ಅಧಿನಾಯಕ' ಎನ್ನುವ ರಾಷ್ಟ್ರಗೀತೆಗಿಂತ ಭಾರತೀಯರಿಗೆ ಹೆಚ್ಚು ಮನೋವೇದ್ಯವಾದದ್ದಾಗಿದೆ. ಆದರೆ ನಾವು ಹಾಡುತ್ತಿರುವ ವಂದೇ ಮಾತರಂ ಗೀತೆಯು ಮೂಲಗೀತೆಯ ಅರ್ಧಭಾಗ ಮಾತ್ರ ಎನ್ನುವುದು ಬಹಳ ಜನರಿಗೆ ತಿಳಿದಿಲ್ಲ. ಅಷ್ಟೇ ಅಲ್ಲದೇ, ವಂದೇ ಮಾತರಂ ಒಂದು ಸ್ವತಂತ್ರ ಗೀತೆಯಲ್ಲ, ಕಾದಂಬರಿಯ ಸಂದರ್ಭಕ್ಕೆ ಹೊಂದುವಂತೆ ರಚನೆಯಾಗಿದ್ದ ಗೀತೆಯಾಗಿತ್ತು ಎನ್ನುವುದೂ ಇಂದಿನ ಕಾಲದ ಬಹಳ ಜನರಿಗೆ ತಿಳಿದಿರಲಿಕ್ಕಿಲ್ಲ. ಹೌದು, ಬ್ರಿಟಿಷರ ವಿರುದ್ಧದ ಬಂಗಾಳದ ಸನ್ಯಾಸಿ ದಂಗೆಯ ಕಥೆಯನ್ನು ಒಳಗೊಂಡ ಬಂಕಿಮ್ ಚಂದ್ರರ 'ಆನಂದಮಠ' ಎನ್ನುವ ಕಾದಂಬರಿಯಲ್ಲಿ ಸಾಂದರ್ಭಿಕವಾಗಿ ಬರುವ ಹಾಡಿದು. ಮುಂದೆ ಭಾರತದ ಸ್ವಾತಂತ್ರ್ಯ ಸಂಗ್ರಾಮದುದ್ದಕ್ಕೂ ಈ ಕಾದಂಬರಿ ಹಾಗೂ ಅದರಲ್ಲಿ ಬರುವ ವಂದೇ ಮಾತರಂ ಗೀತೆ ಮತ್ತು ಘೋಷಣೆಗಳು, ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆಯಾಗಿ ಪರಿಣಮಿಸಿದವು ಎನ್ನುವುದು ಈಗ ಇತಿಹಾಸ.

ಆನಂದಮಠವು ಕವಿ ಬಂಕಿಮ್ ಚಂದ್ರರು ಬರೆದ ಬಂಗಾಳಿ ಐತಿಹಾಸಿಕ ಕಾದಂಬರಿ. ಈ ಕೃತಿ ಬಂಗಾಳಿ ಮತ್ತು ಭಾರತೀಯ ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಕಾದಂಬರಿಯಾಗಿದೆ. ಅತ್ಯಂತ ಶ್ರೀಮಂತ ಕುಟುಂಬದ ಮುಖ್ಯ ಪಾತ್ರಧಾರಿ ಮಹೇಂದ್ರನಿಂದ ಕಥೆ ಪ್ರಾರಂಭವಾಗುತ್ತದೆ. ಮಹೇಂದ್ರನು ಕಲ್ಯಾಣಿ ಎಂಬ ಮಹಿಳೆಯನ್ನು ಮದುವೆಯಾಗಿದ್ದಾನೆ. ಮಹೇಂದ್ರ ಮತ್ತು ಕಲ್ಯಾಣಿ ಅವರಿಗೆ ಸುಕುಮಾರಿ ಎಂಬ ಮಗಳಿದ್ದಾಳೆ. ಮಹೇಂದ್ರನ ಗ್ರಾಮಸ್ಥರು ಭೀಕರ ಬರಗಾಲವನ್ನು ಎದುರಿಸುತ್ತಿರುತ್ತಾರೆ. ತಿನ್ನಲು ಆಹಾರವಿಲ್ಲದ ಸ್ಥಿತಿ. ಗ್ರಾಮಸ್ಥರು ಗ್ರಾಮವನ್ನು ತೊರೆದು ನಗರಕ್ಕೆ ಗುಳೆ ಹೋಗುತ್ತಾರೆ, ಮಹೇಂದ್ರನೂ ತನ್ನ ಕುಟುಂಬದೊಂದಿಗೆ ಕಲ್ಕತ್ತಾಗೆ ಹೋಗಲು ನಿರ್ಧರಿಸುತ್ತಾನೆ.

ಕಲ್ಕತ್ತಾಗೆ ಹೋಗುವಾಗ, ಮಹೇಂದ್ರನು ತನ್ನ ಮಗಳಿಗೆ ಕುಡಿಯಲು ಹಾಲು ಹುಡುಕಲು ಒಂದು ಹಳ್ಳಿಗೆ ಹೋಗುತ್ತಾನೆ. ಮಹೇಂದ್ರ ಹಾಲನ್ನು ಹುಡುಕಿಕೊಂಡು ಹಳ್ಳಿಗೆ ಹೋದಾಗ, ದರೋಡೆಕೋರರು ಮಹೇಂದ್ರನ ಹೆಂಡತಿ ಮತ್ತು ಮಗಳನ್ನು ಅಪಹರಿಸುತ್ತಾರೆ. ಅವನು ತನ್ನ ಹೆಂಡತಿ ಮತ್ತು ಮಗಳಿಗಾಗಿ ಹಳ್ಳಿಯಲ್ಲೆಲ್ಲ ಹುಡುಕಾಡುತ್ತಿರುವಾಗ ಬ್ರಿಟಿಷ್ ಸೈನಿಕರ ಗುಂಪು ಮಹೇಂದ್ರನನ್ನು ಬಂಡಾಯಗಾರನೆಂದು ಅನುಮಾನಿಸಿ ಬಂಧಿಸುತ್ತದೆ. ಏತನ್ಮಧ್ಯೆ, ದರೋಡೆಕೋರರಿಂದ ಸೆರೆಯಾಳಾಗಿದ್ದ ಮಹೇಂದ್ರನ ಪತ್ನಿ ಕಲ್ಯಾಣಿ ಮತ್ತು ಸುಕುಮಾರಿ, ದರೋಡೆಕೋರರ ನಡುವೆ ಜಗಳವಾಗುತ್ತಿದ್ದಾಗ ತಪ್ಪಿಸಿಕೊಳ್ಳುತ್ತಾರೆ. ದರೋಡೆಕೋರರಿಂದ ತಪ್ಪಿಸಿಕೊಂಡು ಕಲ್ಯಾಣಿ ಮತ್ತು ಸುಕುಮಾರಿ ಕಾಡಿನಲ್ಲಿರುವ ಸನ್ಯಾಸಿಗಳ ಆಶ್ರಮಕ್ಕೆ ಬರುತ್ತಾರೆ. ತಮ್ಮನ್ನು ಭಾರತ ಮಾತೆಯ ಸಂತತಿ ಎಂದು ಕರೆಸಿಕೊಳ್ಳುತ್ತಿದ್ದ ಸನ್ಯಾಸಿ ಬಂಡಾಯಗಾರರ ಈ ಗುಂಪು, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ದಂಗೆ ಎದ್ದಿತ್ತು.

ಕಥೆಯು ಈಗ ಸನ್ಯಾಸಿ ಗುಂಪಿನ ನಾಯಕ ಮಹಾತ್ಮ ಸತ್ಯಾನಂದನನ್ನು ಪರಿಚಯಿಸುತ್ತದೆ. ಸತ್ಯಾನಂದನು ಕಲ್ಯಾಣಿ ಮತ್ತು ಅವಳ ಮಗಳಿಗೆ ತನ್ನ ಆಶ್ರಮದಲ್ಲಿ ಆಶ್ರಯವನ್ನು ಒದಗಿಸುತ್ತಾನೆ. ಸತ್ಯಾನಂದನು ಕಲ್ಯಾಣಿಗೆ ಆಕೆಯ ಗಂಡನನ್ನು ಹುಡುಕಿ ಅವನನ್ನು ಮತ್ತೆ ಅವಳ ಬಳಿಗೆ ಕರೆತರುವುದಾಗಿ ಭರವಸೆ ನೀಡುತ್ತಾನೆ. ಅದರಂತೆ ಅವರು ಮಹೇಂದ್ರನನ್ನು ಹುಡುಕಿ ಕರೆತರುತ್ತಾರ. ಮಹೇಂದ್ರನನ್ನು ತನ್ನ ಸನ್ಯಾಸಿ ಗುಂಪಿಗೆ ಸೇರಿಸಲು ಸತ್ಯಾನಂದ ಬಯಸುತ್ತಾನೆ. ಮಹೇಂದ್ರನು ಸನ್ಯಾಸಿ ದಂಗೆಯ ಬಗ್ಗೆ ಎಲ್ಲವನ್ನೂ ತಿಳಿದುಕೊಂಡು, ಸನ್ಯಾಸಿಯಾಗಲು ತನ್ನ ಹೆಂಡತಿ ಮತ್ತು ಮಗಳನ್ನು ತ್ಯಜಿಸಬೇಕಾಗುವುದರಿಂದ ಸನ್ಯಾಸಿ ಗುಂಪಿಗೆ ಸೇರಲು ನಿರಾಕರಿಸುತ್ತಾನೆ.

ಮಹೇಂದ್ರನು ತನ್ನಿಂದಾಗಿ ಸನ್ಯಾಸಿ ದಂಗೆಗೆ ಸೇರಲು ನಿರಾಕರಿಸಿದ್ದಾನೆ ಎಂದು ತಿಳಿದಾಗ ಕಲ್ಯಾಣಿಗೆ ತೀವ್ರ ದುಃಖವಾಗಿ ತನ್ನ ಮಗಳೊಂದಿಗೆ ವಿಷಸೇವನೆ ಮಾಡುತ್ತಾಳೆ. ಮಹೇಂದ್ರನು ತನ್ನ ಹೆಂಡತಿ ಮತ್ತು ಮಗಳ ಸಾವನ್ನ ನೆನೆದು ಕಣ್ಣೀರಿಡುತ್ತಿರುವಾಗ, ಅವರ ಅಂತ್ಯಕ್ರಿಯೆಗೂ ಅವಕಾಶ ಕೊಡದೇ ಅವನನ್ನು ಸನ್ಯಾಸಿ ದಂಗೆಕೋರ ಎಂದು ತಪ್ಪಾಗಿ ಭಾವಿಸಿ ಪೊಲೀಸರು ಬಂಧಿಸುತ್ತಾರೆ.

ಕಲ್ಯಾಣಿ ಮತ್ತು ಸುಕುಮಾರಿ ಅವರ ಶವಗಳು ಇನ್ನೂ ರಸ್ತೆ ಬದಿಯಲ್ಲಿ ಬಿದ್ದಿರುತ್ತವೆ. ಇಬ್ಬರು ಸಾಧುಗಳು ಅವನ್ನು ನೋಡಿದಾಗ, ತಾಯಿ ಸತ್ತಿದ್ದಾಳೆ ಮತ್ತು ಮಗಳು ಜೀವಂತವಾಗಿದ್ದಾಳೆ ಎಂಬುದು ಗೊತ್ತಾಗುತ್ತದೆ. ಮಗಳನ್ನು ತಮ್ಮೊಂದಿಗೆ ಕರೆದೊಯ್ದು ಶುಶ್ರೂಷೆ ಮಾಡುತ್ತಾರೆ. ಸ್ವಲ್ಪ ಸಮಯದ ನಂತರ, ಸನ್ಯಾಸಿನಿಯೊಬ್ಬಳು ಕಲ್ಯಾಣಿಯ ದೇಹವನ್ನು ನೋಡುತ್ತಾಳೆ, ಅವಳು ಇನ್ನೂ ಜೀವಂತವಾಗಿದ್ದಾಳೆ ಎಂದು ಕಂಡುಕೊಳ್ಳುತ್ತಾಳೆ ಮತ್ತು ಔಷದೋಪಚಾರ ಮಾಡಿ ಅವಳು ಚೇತರಿಸಿಕೊಳ್ಳುವಂತೆ ಮಾಡುತ್ತಾಳೆ.

ಏತನ್ಮಧ್ಯೆ, ಸತ್ಯಾನಂದನು ತನ್ನ ಶಿಷ್ಯನ ಸಹಾಯದಿಂದ ಮಹೇಂದ್ರನನ್ನು ಜೈಲಿನಿಂದ ಬಿಡುಗಡೆ ಮಾಡಿಸುತ್ತಾನೆ. ತರುವಾಯ, ಸತ್ಯಾನಂದನು ಮಹೇಂದ್ರನಿಗೆ ತ್ಯಾಗದ ಮಾರ್ಗವನ್ನು ಕಲಿಸಲು ಪ್ರಾರಂಭಿಸುತ್ತಾನೆ. ತನ್ನ ಹೆಂಡತಿ ಮತ್ತು ಮಗಳ ಕಾರಣದಿಂದಾಗಿ ತ್ಯಾಗಿಗಳ ಗುಂಪಿಗೆ ಸೇರಲು ಹಿಂಜರಿಯುತ್ತಿದ್ದ ಮಹೇಂದ್ರ, ತನ್ನ ಹೆಂಡತಿ ಮತ್ತು ಮಗಳು ಜೀವಂತವಾಗಿಲ್ಲ ಎಂದು ತಿಳಿದುಕೊಂಡು ಸನ್ಯಾಸಿಯಾಗಲು ಒಪ್ಪಿಕೊಳ್ಳುತ್ತಾನೆ. ಹೀಗೆ ಅನೇಕ ಜನ ದಂಗೆಯಲ್ಲಿ ಸೇರಲು ಮುಂದೆ ಬರುವುದರಿಂದ, ಸನ್ಯಾಸಿ ಹೋರಾಟಗಾರರ ಗುಂಪು ದಿನದಿಂದ ದಿನಕ್ಕೆ ಬಲಗೊಳ್ಳುತ್ತ ಸಾಗುತ್ತದೆ. ಒಂದು ದಿನ, ಬ್ರಿಟಿಷ್ ಸೈನ್ಯವು ಕಾಡಿನಲ್ಲಿ ಸನ್ಯಾಸಿ ಗುಂಪಿನ ಅಡಗುತಾಣವನ್ನು ಕಂಡುಹಿಡಿದು, ಅವರ ಮೇಲೆ ದಾಳಿ ಮಾಡುತ್ತದೆ ಮತ್ತು ಅಲ್ಲಿ ಘೋರ ಯುದ್ಧ ನಡೆಯುತ್ತದೆ. ಅಂತಿಮವಾಗಿ ಸನ್ಯಾಸಿ ಹೋರಾಟಗಾರರು ಯುದ್ಧವನ್ನು ಗೆಲ್ಲುತ್ತಾರೆ. ಯುದ್ಧದ ನಂತರ, ಮಹೇಂದ್ರ ತನ್ನ ಹೆಂಡತಿ ಮತ್ತು ಮಗಳೊಂದಿಗೆ ಮತ್ತೆ ಒಂದಾಗುತ್ತಾನೆ. ಇದು ಪ್ರಸಿದ್ಧ 'ಆನಂದ ಮಠ' ಕಾದಂಬರಿಯ ಕಥಾವಸ್ತುವಿನ ಸ್ಥೂಲ ಪರಿಚಯ.

'ವಂದೇ ಮಾತರಂ' ಹಾಡು ಆನಂದಮಠ ಕಾದಂಬರಿಯುದ್ದಕ್ಕೂ ಪ್ರಮುಖವಾಗಿ ಕಾಣಿಸಿಕೊಂಡಿದೆ. ಪ್ರಮುಖ ದೃಶ್ಯವೊಂದರಲ್ಲಿ, ಸನ್ಯಾಸಿ ಹೋರಾಟಗಾರನೊಬ್ಬ ಈ ಹಾಡು ಮತ್ತು ಅದರ ಪರಿಕಲ್ಪನೆಯನ್ನು ನಾಯಕ ಮಹೇಂದ್ರನಿಗೆ ಪರಿಚಯಿಸುತ್ತಾನೆ. ಅವನನ್ನು ತಮ್ಮ ದೇವಾಲಯದ ಒಳಗೆ ಕರೆದೊಯ್ದು, ಇದು ರಾಷ್ಟ್ರದ ಭೂತ, ವರ್ತಮಾನ ಮತ್ತು ಭವಿಷ್ಯವನ್ನು ಸಂಕೇತಿಸುವ ಮೂರು ರೂಪಗಳಲ್ಲಿ ದೇವತೆಯಾಗಿ ಮೂರ್ತೀಕರಿಸಲ್ಪಟ್ಟ ಮಾತೃಭೂಮಿಯ ಚಿತ್ರವಾಗಿದೆ ಎಂದು ತಿಳಿಸುತ್ತಾನೆ. ಈ ದೇವಾಲಯದ ದೃಶ್ಯದಲ್ಲಿಯೇ ಬಂಡುಕೋರರು ತಾಯ್ನಾಡನ್ನು ದೇವತೆಯಾಗಿ ಮೂರ್ತರೂಪದಿಂದ ಪೂಜಿಸುತ್ತಾರೆ ಮತ್ತು ಆರು ಶ್ಲೋಕಗಳ ಭಕ್ತಿ ಕಾವ್ಯವಾದ 'ವಂದೇ ಮಾತರಂ' ಅನ್ನು ಪಠಿಸುತ್ತಾರೆ. ಈ ಹಾಡು ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟದಲ್ಲಿ ಸನ್ಯಾಸಿ ಬಂಡುಕೋರರಿಗೆ ಪ್ರಮುಖ ಮಂತ್ರ ಮತ್ತು ಒಂದುಗೂಡಿಸುವ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಇಂದಿಗೂ 'ಆನಂದಮಠ' ಕಾದಂಬರಿಯು ಭಾರತೀಯ ರಾಷ್ಟ್ರೀಯತೆಯ ಅಡಿಪಾಯ ಪಠ್ಯವಾಗಿ ಉಳಿದಿದೆ. ಇದು ನಿರಂತರ ಪ್ರತಿರೋಧದ ಮನೋಭಾವ ಮತ್ತು ನಾಗರಿಕ ಕರ್ತವ್ಯದ ಕರೆಗೆ ಸಾಕ್ಷಿಯಾಗಿ ಹಾಗೂ ಭಾರತೀಯ ರಾಷ್ಟ್ರೀಯತೆಯ ಪ್ರಬಲ ಪ್ರಚೋದನೆಯಾಗಿ ಪ್ರತಿಧ್ವನಿಸುತ್ತಿದೆ.

ಬಂಕಿಮ್ ಚಂದ್ರರ ಜನಪ್ರಿಯ 'ವಂದೇ ಮಾತರಂ' ಗೀತೆ ರಚನೆಯಾಗಿ 150 ವರ್ಷಗಳು ಪೂರ್ಣಗೊಂಡಿವೆ. 1875ರ ನವೆಂಬರ್ 7ರಂದು ಮೊದಲ ಬಾರಿಗೆ ಪ್ರಕಟವಾದ 'ವಂದೇ ಮಾತರಂ' ಕ್ರಾಂತಿಗೀತೆಗೆ ಈಗ 150ರ ಸಂಭ್ರಮ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟಗಾರರ ಉತ್ಸಾಹ ಹೆಚ್ಚಿಸಿದ್ದ ಈ ಹಾಡನ್ನು ಸ್ಮರಣೀಯಗೊಳಿಸಲು ಕೇಂದ್ರ ಸರಕಾರ ಕಾರ್ಯಪ್ರವೃತ್ತವಾಗಿದೆ. ಈ ಹಾಡಿನ ಇತಿಹಾಸ ಮತ್ತು ಪರಂಪರೆಯ ಕಡಿಮೆ ತಿಳಿದಿರುವ ಅಂಶಗಳನ್ನು ಇಂದಿನ ಜನಾಂಗಕ್ಕೆ ತಿಳಿಸಲು ಲೋಕಸಭೆಯ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸಲಾಯಿತು. ಈ ಚರ್ಚೆಯಲ್ಲಿ ಹಾಡಿನ ಮೂಲ ಹಾಗೂ ಅಲ್ಪಸಂಖ್ಯಾತರನ್ನು ಸಮಾಧಾನಿಸಲು ಅದನ್ನು ಹ್ರಸ್ವಪಡಿಸಿದ ಕಾಂಗ್ರೆಸ್ಸಿನ ಮನೋಧೋರಣೆಯನ್ನೂ ಸರಕಾರ ಎಳೆಎಳೆಯಾಗಿ ದೇಶದ ಮುಂದಿರಿಸಿತು. ಸ್ವತಃ ಪ್ರಧಾನಮಂತ್ರಿಗಳು ಈ ಕುರಿತು ಸುದೀರ್ಘ ಭಾಷಣಮಾಡಿ, ಕಾಂಗ್ರೆಸ್ಸಿನಿಂದ ಈ ಹಾಡಿಗಾದ ಶಾಶ್ವತ ಅನ್ಯಾಯವನ್ನು ಪ್ರಭಾವಶಾಲಿಯಾಗಿ ಪ್ರಸ್ತುತಪಡಿಸಿದರು. ''ಮುಂಬರುವ ಪಶ್ಚಿಮ ಬಂಗಾಳದ ಚುನಾವಣೆಯನ್ನು ದೃಷ್ಟಿಯಲ್ಲಿರಿಸಿ ಈ ಚರ್ಚೆಯನ್ನು ಸರಕಾರ ಆಯೋಜಿಸಿದೆ, ಎಲ್ಲ ವಿಷಯಗಳಲ್ಲೂ ನೆಹರು ಅವರನ್ನು ಎಳೆದು ತರದಿದ್ದರೆ ಬಿಜೆಪಿಯವರಿಗೆ ನಿದ್ದೆ ಬಾರದು'' ಎಂದು ಸಂಸದೆ ಪ್ರಿಯಾಂಕ ಗಾಂಧಿ ಸದನದಲ್ಲಿ ಪ್ರತಿಕ್ರಿಯಿಸಿದರು. ಮೋದಿಯವರು ಪ್ರಸ್ತುತಪಡಿಸಿದ ತಥ್ಯಗಳನ್ನು ಸುಳ್ಳು ಎಂದು ಸಾಬೀತುಪಡಿಸುವಲ್ಲಿ ಮಾತ್ರ ಅವರು ವಿಫಲರಾದರು.

ಮೌಲಾನಾ ಆಜಾದ್, ಜವಾಹರಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಆಚಾರ್ಯ ದೇವ ಮತ್ತು ರವೀಂದ್ರನಾಥ ಟ್ಯಾಗೋರ್ ಅವರನ್ನೊಳಗೊಂಡ ಸಮಿತಿಯು ಶಿಫಾರಸು ಮಾಡಿದ ನಂತರ, 1937ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಂದೇ ಮಾತರಂನ ಮೊದಲರ್ಧ ಭಾಗಗಳನ್ನು ರಾಷ್ಟ್ರೀಯ ಗೀತೆಯಾಗಿ ಆಯ್ಕೆ



ಮಾಡಿತು. ಹಿಂದೂಯೇತರರ ಭಾವನೆಗಳನ್ನು ಗೌರವಿಸುವಸಲುವಾಗಿ ಇಡೀ ಹಾಡನ್ನು ಈ ನಾಯಕರು ಆಯ್ಕೆ ಮಾಡಲಿಲ್ಲ ಎನ್ನುವುದು ವಿಪರ್ಯಾಸ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಸುಭಾಷ್ ಚಂದ್ರ ಬೋಸ್ ಅವರು ವಂದೇ ಮಾತರಂ ಹಾಡಿನ ಬಗ್ಗೆ ಟ್ಯಾಗೋರ್ ಅವರ ಅಭಿಪ್ರಾಯಗಳನ್ನು ಕೇಳಿದಾಗ, ''ಈ ಗೀತೆಯಲ್ಲಿ ಮೊದಲ ಎರಡು ಚರಣಗಳಲ್ಲಿ ಮಾತೃಭೂಮಿಯ ಸೌಂದರ್ಯದ ಅಸಾಧಾರಣ ವರ್ಣನೆಯಿದೆ; ಆದರೆ ಈ ಗೀತೆಯ ತಿರುಳು ದುರ್ಗಾದೇವಿಯ ಸ್ತುತಿಯೇ ಆಗಿದೆ. ಯಾವುದೇ ಮುಸಲ್ಮಾನನು ಹತ್ತು ಕೈಗಳ ದೇವತೆಯನ್ನು ನಮ್ಮ ತಾಯ್ನಾಡು ಎಂದು ಪೂಜಿಸುತ್ತಾನೆ ಎಂದು ನನಗನಿಸುವುದಿಲ್ಲ, ಈ ಹಾಡು ಸಾಂದರ್ಭಿಕವಾಗಿ ಕಾದಂಬರಿಗೆ ಸೂಕ್ತವಾಗಿದೆ. ದೇಶವು ಎಲ್ಲಾ ಧಾರ್ಮಿಕ ಗುಂಪುಗಳಿಗೆ ಸೇರಿದ ಒಕ್ಕೂಟವಾಗಿರುವಾಗ ಈ ಹಾಡು ಸರ್ವಸಮ್ಮತವಾಗಲು ಸಾಧ್ಯವಿಲ್ಲ'' ಎಂದು ಅಭಿಪ್ರಾಯಪಟ್ಟರು.

ಟ್ಯಾಗೋರರನ್ನೂ ಸೇರಿ ನಮ್ಮ ಅನೇಕ ನಾಯಕರಿಗೆ ಪೊಳ್ಳು ಜಾತ್ಯತೀತವಾದ, ಅಲ್ಪಸಂಖ್ಯಾತರ ತುಷ್ಟೀಕರಣದ ಚಾಳಿ ಸ್ವಾತಂತ್ರ್ಯಪೂರ್ವದಲ್ಲೇ ತಲೆಗೇರಿತ್ತು ಎನ್ನುವುದು ಇದರಿಂದ ತಿಳಿದುಬರುತ್ತದೆ. ನಂತರ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಾರ್ವಜನಿಕ ಸಭೆಗಳಲ್ಲಿ ಹಾಡಬೇಕಾದ ರಾಷ್ಟ್ರೀಯ ಗೀತೆಯಾಗಿ ಮೊದಲ ಎರಡು ಶ್ಲೋಕಗಳನ್ನು ಮಾತ್ರ ಅಳವಡಿಸಿಕೊಳ್ಳಲು ನಿರ್ಧರಿಸಿ, 'ಕೋಟಿ ಕಂಠ ಕಲಕಲ ನಿನಾದ ಕರಾಲೇ', 'ತುಮಿ ವಿದ್ಯಾ ತುಮಿ ಧರ್ಮ ತುಮಿ ಹೃದಿ ತುಮಿ ಮರ್ಮ' ಹಾಗೂ 'ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ ಕಮಲಾ ಕಮಲಾದಲ ವಿಹಾರಿಣೀ' ಎನ್ನುವ ದುರ್ಗಾ, ಲಕ್ಷ್ಮಿ ಹಾಗೂ ಸರಸ್ವತಿಯ ಉಲ್ಲೇಖವಿರುವ ಇತರ ಚರಣಗಳನ್ನು ತೆಗೆದುಹಾಕಲಾಯಿತು.

1950ರ ಜನವರಿ 24ರಂದು ಸಂವಿಧಾನ ರಚನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜೇಂದ್ರ ಪ್ರಸಾದ್ ಅವರ ಈ ಕೆಳಗಿನ ಹೇಳಿಕೆಯನ್ನು ಈ ವಿಷಯದ ಬಗ್ಗೆ ಅಂತಿಮ ನಿರ್ಧಾರವಾಗಿ ಅಂಗೀಕರಿಸಲಾಯಿತು. ರವೀಂದ್ರರ 'ಜನ ಗಣ ಮನ ಅಧಿನಾಯಕ' ಸಂಯೋಜನೆಯು ಭಾರತದ ರಾಷ್ಟ್ರಗೀತೆಯಾಗಿದ್ದು, ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಐತಿಹಾಸಿಕ ಪಾತ್ರ ವಹಿಸಿದ 'ವಂದೇ ಮಾತರಂ' ಹಾಡನ್ನು 'ಜನ ಗಣ ಮನ'ದೊಂದಿಗೆ ಸಮಾನವಾಗಿ ಗೌರವಿಸಲಾಗುವುದು ಎನ್ನುವುದು ರಾಜೇಂದ್ರ ಪ್ರಸಾದ್ ಅವರ ನಿರ್ಣಯವಾಗಿತ್ತು.

ಇಡೀ ವಂದೇ ಮಾತರಂ ಹಾಡನ್ನು ಬಂಕಿಮ್ ಚಂದ್ರರು ಭಕ್ತಿಗೀತೆಯಾಗಿ ಬರೆದಿದ್ದಾರೆ, ಅಲ್ಲಿ ಅವರು ದೇಶವನ್ನು ದೇವತೆ ಎಂದು ಬಣ್ಣಿಸುತ್ತಾರೆ, ಅವರ ಹಾಡು ದೇವಿಯನ್ನು ಪೂಜಿಸಬೇಕು ಮತ್ತು ಸೇವೆ ಸಲ್ಲಿಸಬೇಕು ಎಂದು ಕರೆ ನೀಡುತ್ತದೆ. ನಾವು ನಮಸ್ಕರಿಸುವುದು ನಮ್ಮ ದೇವರಾದ ಅಲ್ಲಾಹುವಿಗೆ ಮಾತ್ರ ಮತ್ತು ನಾವು ಅಲ್ಲಾಹುವನ್ನು ಹೊರತುಪಡಿಸಿ ಬೇರೆ ಯಾರನ್ನೂ ಆರಾಧಿಸುವುದಿಲ್ಲ, ವಂದೇ ಮಾತರಂ ಹಾಡುವಂತೆ ನಿರ್ಧರಿಸುವುದು ಮುಸ್ಲಿಮರಿಗೆ ತಮ್ಮ ಧರ್ಮಕ್ಕೆ ವಿರುದ್ಧವಾಗಿ ಹೋಗುವಂತೆ ಒತ್ತಡ ಹೇರಿದಂತಾಗುತ್ತದೆ. 'ಸಾರೆ ಜಹಾನ್ ಸೆ ಅಚ್ಛಾ 'ನಂಥ ಬೇರೆ ದೇಶಭಕ್ತಿ ಗೀತೆಗಳನ್ನು ಹಾಡಲು ನಮಗೆ ಅಭ್ಯಂತರವಿಲ್ಲ, ಇದು ಹಿಂದೂ ದೇಶಭಕ್ತಿಯ ಗೀತೆಯಾಗಿದೆ ಮತ್ತು ಅದನ್ನು ಜಾತ್ಯತೀತವಾಗಿ ಕಾಣುವಂತೆ ಮಾಡಲು ಕವಿತೆಯ ಕೆಲವು ಭಾಗಗಳನ್ನು ಮಾತ್ರ ಕತ್ತರಿಸಲಾಗಿದೆ ಎಂದು ಮುಸ್ಲಿಮ್ ನಾಯಕರುಗಳು ಆಗಲೂ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು.

'ಜನಗಣ ಮನ ಅಧಿನಾಯಕ ಜಯ ಹೇ ಭಾರತೊ ಭಾಗ್ಯಬಿಧಾತೋ' ಎನ್ನುವ ನಮ್ಮ ಈಗಿನ ರಾಷ್ಟ್ರಗೀತೆಯನ್ನು ಕವಿ ರವೀಂದ್ರನಾಥ ಟ್ಯಾಗೋರರು 1911ರಲ್ಲೇ ಬಂಗಾಳಿ ಭಾಷೆಯಲ್ಲಿ ರಚಿಸಿದ್ದರು. 1950ರಲ್ಲಿ ಅದನ್ನು ರಾಷ್ಟ್ರಗೀತೆಯಾಗಿ ಅಂಗೀಕರಿಸಲಾಗಿತ್ತು. ವಿಶೇಷವೆಂದರೆ, ಈ ಹಾಡಿನಲ್ಲಿ ಎಲ್ಲೂ ಭಾರತಮಾತೆಯ ಅಥವಾ ಮಾತೃಭೂಮಿಯ ಕುರಿತಾದ ಪ್ರಸ್ತಾಪವೇ ಇಲ್ಲ. ಯಾವುದೋ ಅಜ್ಞಾತ ಪುರುಷ, ಭಾರತ ಭಾಗ್ಯವಿಧಾತನಿಗೆ ಜಯಕಾರ ಹೇಳುವ ಧಾಟಿಯಲ್ಲಿ ಈ ಗೀತೆಯಿದೆ. ಟ್ಯಾಗೋರರು ಹೇಳುವ ಆ 'ಜನಗಣ ಮನದ ಅಧಿನಾಯಕ', 'ಭಾರತ ಭಾಗ್ಯವಿಧಾತ' ಯಾರು ಎನ್ನುವುದು ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ.

'ಜನಗಣ ಮನ ಅಧಿನಾಯಕ' ರಾಷ್ಟ್ರಗೀತೆಯಾಗಿ ಅಧಿಕೃತವಾಗಿ ಅಂಗೀಕೃತವಾದ ಮೇಲೂ, ಬಂಕಿಮ್ ಚಂದ್ರರ 'ವಂದೇ ಮಾತರಂ' ಗೀತೆ ತನ್ನ ಹೊಳಪನ್ನು ಕಳೆದುಕಂಡಿಲ್ಲ ಎನ್ನುವುದು ವಿಶೇಷ. ಕ್ಷುಲ್ಲಕ ರಾಜಕೀಯ ಕಾರಣಕ್ಕಾಗಿ ಹ್ರಸ್ವಗೊಳಿಸಿದ ವಂದೇ ಮಾತರಂ ಗೀತೆಯ ಚರಣಗಳ ಅರ್ಥಾನುಸಂಧಾನ ಮಾಡಿದರೆ ಇಂದಿಗೂ ನಾವು ರೋಮಾಂಚಿತರಾಗುವುದರಲ್ಲಿ ಸಂದೇಹವಿಲ್ಲ.

ಕೋಟಿ ಕಂಠಗಳಿಂದ ಘರ್ಜನೆಯು ಮೊಳಗುತ್ತಿರುವಾಗ, ಕೋಟಿ ಕೈಗಳಲ್ಲಿ ಹಿಡಿದಿರುವ ಖಡ್ಗಗಳ ಮೊನೆಯು ಹೊಳೆಯುತ್ತಿರುವಾಗ ನೀನು ಅಬಲೆಯೆಂದು ಹೇಳುವ ಧೈರ್ಯ ಯಾರಿಗಿದೆ? ಅಪಾರ ಸಾಮರ್ಥ್ಯದಿಂದ ಶತ್ರುಸೈನ್ಯವನ್ನು ಹಿಮ್ಮೆಟ್ಟಿಸಿ ನಿನ್ನ ಸಂತಾನವನ್ನು ರಕ್ಷಿಸುತ್ತಿರುವ ನಿನಗೆ ವಂದನೆಗಳು. ನೀನೇ ನಮ್ಮ ಜ್ಞಾನ, ಚಾರಿತ್ರ್ಯ, ಧರ್ಮವಾಗಿದ್ದೀ. ನೀನೇ ನಮ್ಮ ಹೃದಯ ಚೈತನ್ಯವಾಗಿದ್ದೀ. ನಮ್ಮ ಪ್ರಾಣವು ನೀನೇ ಆಗಿದ್ದೀ. ನಮ್ಮ ಭುಜಕೀರ್ತಿ, ಅಂತಃಕರಣದಲ್ಲಿನ ಕಾಳಿಯೂ ನೀನೇ. ದೇವಸ್ಥಾನದಲ್ಲಿ ಕಾಣುವ ವಿವಿಧ ಮೂರ್ತಿಗಳೂ ನಿನ್ನದೇ ರೂಪಗಳಾಗಿವೆ. ದಶಭುಜಗಳಲ್ಲಿ ಶಸ್ತ್ರಗಳನ್ನು ಧರಿಸಿದ ಶತ್ರುಸಂಹಾರಿಣಿ ದುರ್ಗೆಯೂ ನೀನೇ, ಕಮಲದ ಪುಷ್ಪಗಳಿಂದ ತುಂಬಿದ ಸರೋವರದಲ್ಲಿ ವಿಹರಿಸುವ ಲಕ್ಷ್ಮಿಯೂ ನೀನೇ. ವಿದ್ಯಾ ಪ್ರದಾಯಿನಿಯಾದ ಶಾರದೆಯೂ ನೀನೇ. ಐಶ್ವರ್ಯದಾತ್ರಿ, ಪುಣ್ಯಪ್ರದಾಯಿನಿ ಮತ್ತು ಪಾವನ, ಪವಿತ್ರ ಜಲಪ್ರವಾಹಗಳಿಂದ ಮತ್ತು ಅಮೃತಮಯ ಫಲಗಳಿಂದ ಸಮೃದ್ಧಳಾಗಿರುವ ಮಾತೆಯೇ ನಿನ್ನ ಶ್ರೇಷ್ಠತನಕ್ಕೆ ಯಾವುದೇ ಹೋಲಿಕೆಯಿಲ್ಲ.. ಹೇ ಮಾತೆ, ಹೇ ಜನನಿ ನಿನಗೆ ನಮ್ಮ ಪ್ರಣಾಮಗಳು....

ಕಾರ್ತಿಕ ದೀಪಕ್ಕೆ ಡಿಎಂಕೆ ವಿರೋಧ, ನ್ಯಾಯಾಂಗಕ್ಕೂ ಅವಮಾನ

ಕ್ರಿಯಾಲೋಪ
ಶ್ರೀನಿವಾಸ ಶರ್ಮ
vveditoped@gmail.com

ತಮಿಳುನಾಡಿನ ತಿರುಪಾರನುಕುಂಡ್ರಮ್ ಎಂಬಲ್ಲಿ 'ಕಾರ್ತಿಕ ದೀಪಂ' ಅಥವಾ 'ಕಾರ್ತಿಗೈ ದೀಪಂ' ಉತ್ಸವದ ಕುರಿತು ಉಂಟಾಗಿರುವ ವಿವಾದವು ಡಿಎಂಕೆ ಪಕ್ಷದ ಅಸಲಿ ಬಣ್ಣವನ್ನು ಬಯಲಿಗೆಳೆದಿದೆ. ತಿರುಪಾರನುಕುಂಡ್ರಮ್‌ನ ಬೆಟ್ಟದಲ್ಲಿ ಶತಶತಮಾನಗಳಿಂದಲೂ ಪರಂಪರಾನುಗತವಾಗಿ ಭಕ್ತಾದಿಗಳು ಕಾರ್ತಿಕ ದೀಪಂ ಉತ್ಸವವನ್ನು ಸಂಭ್ರಮ, ಸಡಗರ, ಭಕ್ತಿ ಮತ್ತು ಶ್ರದ್ಧೆಯಿಂದ ಆಚರಿಸುತ್ತಿದ್ದಾರೆ. ವಕ್ಫ್ ಮಂಡಳಿ ಕೂಡ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ಆದರೆ ಸ್ವತಃ ಡಿಎಂಕೆ ಸರಕಾರ ಮಾತ್ರ ಕಾರ್ತಿಕ ದೀಪಂ ಉತ್ಸವ ನಡೆಸದಂತೆ ಹೇಳಿರುವುದು ಭಾರಿ ವಿವಾದ ಸೃಷ್ಟಿಸಿದೆ. ಹೈಕೋರ್ಟ್ ಕೂಡ ಕಾರ್ತಿಕ ದೀಪ ಬೆಳಗಿಸುವ ಪರಂಪರೆಯನ್ನುಪುರಸ್ಕರಿಸಿದ್ದರೂ, ಡಿಎಂಕೆ ಸರಕಾರ ಮಾತ್ರ ಕಾರ್ತಿಕ ದೀಪ ಬೆಳಗುವುದನ್ನು ಅಪರಾಧದಂತೆ ಕಾಣುತ್ತಿರುವುದು ಆ ಪಕ್ಷದ ಮುಖವಾಡವನ್ನು ಕಳಚಿಟ್ಟಿದೆ. ಇದು ಖಂಡಿತ ಆಡಳಿತವಲ್ಲ, ಹಿಂದೂ ನಂಬಿಕೆಗಳ ವಿರುದ್ಧ ಮಾಡಿರುವ ಘೋರ ಅಪಚಾರ. ಮಾತ್ರವಲ್ಲದೆ ಇದು ನ್ಯಾಯಾಂಗದ ನಿಂದನೆಯೂ ಆಗಿದೆ. ನ್ಯಾಯಾಂಗವನ್ನೇ ಧಿಕ್ಕರಿಸುವ ಪ್ರಯತ್ನಕ್ಕೆ ಡಿಎಂಕೆ ಕೈಹಾಕಿದಂತಾಗಿದೆ.

ತಮಿಳುನಾಡಿನ ಡಿಎಂಕೆ ನೇತೃತ್ವದ ಸರಕಾರದಲ್ಲಿ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯ (ಎಚ್‌ಆರ್‌ಸಿಇ) ಸಚಿವರಾದ ಪಿ.ಕೆ. ಶೇಖರ್ ಬಾಬು ಅವರು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ತಿರುಪಾರನುಕುಂಡ್ರಮ್‌ನಲ್ಲಿ ದೀಪ ಬೆಳಗುವುದರಿಂದ ಬೀದಿಯಲ್ಲಿ ರಕ್ತ ಹರಿಯಲಿದೆ ಎಂದು ಇಲ್ಲಸಲ್ಲದ 'ಲೂಸ್‌ಟಾಕ್' ಆಡಿದ್ದಾರೆ. ಯಾವುದೇ ಸಮುದಾಯವು ಇಂಥ ಬಾಲಿಶ ಹೇಳಿಕೆಯನ್ನು ನೀಡಿಲ್ಲ. ಡಿಎಂಕೆ ಸರಕಾರ ಮಾತ್ರ ಖುದ್ದಾಗಿ ಇಂಥ ಭೀತಿಯ ವಾತಾವರಣವನ್ನು ಸೃಷ್ಟಿಸಿದೆ.

ದೀಪ ಬೆಳಗಿಸುವುದಕ್ಕೆ ಡಿಎಂಕೆ ವಿರೋಧ: ಹಿಂದೂ ಧಾರ್ಮಿಕ ಪರಂಪರೆಯೊಂದನ್ನು ಸ್ಥಗಿತಗೊಳಿಸಲು ನಕಲಿ ಬೆದರಿಕೆಯನ್ನು ಡಿಎಂಕೆ ನಾಯಕರು ಒಡ್ಡುತ್ತಿದ್ದಾರೆ. ದೇವಾಲಯದ ವ್ಯಾಪ್ತಿಯಲ್ಲಿ ದೀಪ ಬೆಳಗುವುದರಿಂದ ಯಾರಿಗೂ ಸಮಸ್ಯೆಯಾಗುವುದಿಲ್ಲ. ಆದರೆ ಡಿಎಂಕೆ ವರ್ತನೆ ಮಾತ್ರ ಹಿಂದೂಗಳ ವಿರುದ್ಧವಾಗಿದೆ.

ಇದರ ಹಿಂದಿನ ಸತ್ಯ ಸರಳವಾಗಿದೆ. ಡಿಎಂಕೆ ಜಾತ್ಯತೀತತೆಯ ಬಗ್ಗೆ ಮಾತನಾಡುತ್ತದೆ. ಆದರೆ ಸ್ವತಃ ಹಿಂದೂಗಳನ್ನು ಟಾರ್ಗೆಟ್ ಮಾಡುತ್ತದೆ. ಮತ್ತೊಂದು ಧರ್ಮದ ದರ್ಗಾವನ್ನಾಗಲಿ, ಅದರ ಸಹ ಸಂಸ್ಥೆಗಳನ್ನಾಗಲಿ ಸವಾಲಿಗೆ ಒಳಪಡಿಸುವುದಿಲ್ಲ. ಇತರ ಯಾವುದೇ ಧರ್ಮದ ನಂಬಿಕೆಗಳನ್ನು ಅದು ಪ್ರಶ್ನಿಸುವುದಿಲ್ಲ. ಆದರೆ ಶತ ಶತಮಾನಗಳಿಂದ ಅಸ್ತಿತ್ವದಲ್ಲಿರುವ, ಭಗವಂತ ಮುರುಗನ್ ಸ್ವಾಮಿಯ ಕುರಿತ ಭಕ್ತರ ಆಚರಣೆ ವಿರುದ್ಧ ಕೋರ್ಟ್ ಮೆಟ್ಟಿಲೇರುತ್ತದೆ. ದೇವಾಲಯದಲ್ಲಿ ದೀಪ ಬೆಳಗಿದ ಹಿಂದೂಗಳು ಕೋರ್ಟಿಗೆ ಹೋಗಬೇಕಾದ ತಪ್ಪೇನು ಮಾಡಿದ್ದಾರೆ? ಡಿಎಂಕೆ ಸರಕಾರದ ಅಡಿಯಲ್ಲೇ ಏಕೆ ಇಂಥ ವಿವಾದಗಳು ಉದ್ಭವಿಸುತ್ತವೆ?

ತಿರುಪಾರನುಕುಂಡ್ರಮ್ ಕ್ಷೇತ್ರದಲ್ಲಿ ಕಾರ್ತಿಕ ದೀಪವನ್ನು ಬೆಳಗುವ ನಿಟ್ಟಿನಲ್ಲಿ ಭಕ್ತಾದಿಗಳ ಪರವಾಗಿ ಹೈಕೋರ್ಟ್ ತನ್ನ ತೀರ್ಪು ನೀಡಿತ್ತು. ಆದರೆ ಈ ಆದೇಶದ ವಿರುದ್ಧ ಡಿಎಂಕೆ ಸರಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ದೀಪ ಬೆಳಗುವುದರಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುತ್ತದೆ ಎಂದು ಡಿಎಂಕೆ ಸರಕಾರ ವಾದಿಸಿದೆ. ಆದರೆ ಇದು ಗೊಂದಲವನ್ನು ಸೃಷ್ಟಿಸುವ ಪ್ರಯತ್ನ ಎಂದು ಭಕ್ತಾದಿಗಳು ಹೇಳಿದ್ದಾರೆ.

ಅತ್ಯಂತ ಆಘಾತಕರ ಬೆಳವಣಿಗೆ ಏನೆಂದರೆ, ಡಿಎಂಕೆ ಸಂಸದರು, ಕಾರ್ತಿಕ ದೀಪ ಬೆಳಗಿಸುವ ಹಿಂದೂಗಳ ಹಕ್ಕಿನ ಪರವಾಗಿ ನಿಂತಿದ್ದ ಹೈಕೋರ್ಟ್ ನ್ಯಾಯಾಧೀಶ ಜಿ.ಆರ್. ಸ್ವಾಮಿನಾಥನ್ ವಿರುದ್ಧ ವಾಗ್ದಂಡನೆಗೆ ಆಗ್ರಹಿಸಿ ನಿಲುವಳಿಯನ್ನು ಮಂಡಿಸಲು ಮುಂದಾಗಿರುವುದು. ಐವತ್ತಕ್ಕೂ ಹೆಚ್ಚು ನಿವೃತ್ತ ನ್ಯಾಯಾಧೀಶರು ಇದೀಗ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರ ಬೆಂಬಲಕ್ಕೆ ಮುಂದಾಗಿದ್ದಾರೆ. ಡಿಎಂಕೆಯು ನ್ಯಾಯಾಂಗದ ವಿರುದ್ಧ ಹೋಗುತ್ತಿರುವುದನ್ನು ಇದು ಬಿಂಬಿಸಿದೆ. ಇದು ನ್ಯಾಯಾಂಗಕ್ಕೆ ಮಾಡುವ ಅವಮಾನವೂ, ಅಗೌರವವೂ ಆಗಿದೆ. ಅತಿ ದೊಡ್ಡ ವಿಪರ್ಯಾಸವೇನೆಂದರೆ ಡಿಎಂಕೆ ಮತ್ತು ಅದರ ಒಡನಾಡಿಯಾದ 'ಇಂಡಿ' ಮೈತ್ರಿಕೂಟವು 'ಸಂವಿಧಾನವು ಅಪಾಯದಲ್ಲಿದೆ' ಎಂಬ ಬೆದರಿಕೆ ಒಡ್ಡುತ್ತಿವೆ. ಸಂವಿಧಾನ ವಿರೋಧಿ ನಡೆಯನ್ನು ಅನುಸರಿಸುತ್ತಿವೆ. ರಾಜಕೀಯ ಬೆದರಿಕೆಗೆ ಜಗ್ಗದೆ ತೀರ್ಪು ನೀಡಿದ ನ್ಯಾಯಾಧೀಶರನ್ನೇ ಡಿಎಂಕೆ ಅವಮಾನಿಸುತ್ತಿದೆ. ಇದು ನ್ಯಾಯಾಂಗದ ಸಾಂಸ್ಥಿಕ ವ್ಯವಸ್ಥೆಯನ್ನೇ ತಿರುಚಲು ಮಾಡುವ ಯತ್ನವಾಗಿದೆ.

ಹಿಂದೂ ಪರ ತೀರ್ಪಿದ್ದರೂ ವಿರೋಧ: ತಿರುಪಾರನುಕುಂಡ್ರಮ್ ಕ್ಷೇತ್ರದಲ್ಲಿ ಹಿಂದೂಗಳು ಕಾರ್ತಿಕ ದೀಪವನ್ನು ಬೆಳಗಲು ಹೈಕೋರ್ಟ್ ತೀರ್ಪು ನೀಡಿದ್ದರೂ, 'ಇಂಡಿ' ಒಕ್ಕೂಟವು ಇದರ ವಿರುದ್ಧ ನಿಂತಿರುವುದು ಹಿಂದೂ ವಿರೋಧಿ ಕೃತ್ಯವಾಗಿದೆ. ಈ ತೀರ್ಪು ನೀಡಿದ ನ್ಯಾಯಾಧೀಶರನ್ನು ಪಕ್ಷಪಾತಿ, ಕೋಮುವಾದಿ ಎಂದು ಆರೋಪಿಸುವುದು ಪೂರ್ವಗ್ರಹಪೀಡಿತವಾಗಿದೆ. ಇದು ಕಾಂಗ್ರೆಸ್, ಡಿಎಂಕೆ ಪಕ್ಷಗಳ ಚಾಳಿಯಾಗಿಬಿಟ್ಟಿದೆ.

ನ್ಯಾಯಮೂರ್ತಿ ರಂಜನ್ ಗೊಗೋಯ್ ಅವರು ರಾಜ್ಯಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭದ ಕಾರ್ಯಕ್ರಮವನ್ನು 'ಇಂಡಿ' ಒಕ್ಕೂಟ ಬಹಿಷ್ಕರಿಸಿತ್ತು. ಜಸ್ಟೀಸ್ ರಂಜನ್ ಗೊಗೋಯ್ ಅವರು ಶ್ರೀರಾಮ ಜನ್ಮಭೂಮಿಯಲ್ಲಿ ರಾಮ ಮಂದಿರ ನಿರ್ಮಿಸುವುದರ ಪರವಾಗಿ ತೀರ್ಪು ಕೊಟ್ಟಿದ್ದುದೇ ಈ ವಿರೋಧಕ್ಕೆ ಕಾರಣವಾಗಿತ್ತು. ಇದು 'ಇಂಡಿ' ಒಕ್ಕೂಟದ ಪ್ರಜಾಪ್ರಭುತ್ವ ವಿರೋಧಿ ನಿಲುವಾಗಿದೆ.

1973ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಮೂವರು ನ್ಯಾಯಾಧೀಶರನ್ನು ಬೈಪಾಸ್ ಮಾಡಿ ನ್ಯಾಯಮೂರ್ತಿ ಎ.ಎನ್. ರಾಯ್ ಅವರನ್ನು ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಿದ್ದರು. ಸರಕಾರದ ವಿರುದ್ಧ ತೀರ್ಪು ನೀಡಿದ್ದ ಹಿರಿಯ ನ್ಯಾಯಾಧೀಶರುಗಳನ್ನು ಅವಗಣನೆ ಮಾಡಿದ್ದರು. 1977ರಲ್ಲಿ ಎರಡನೇ ಬಾರಿಗೆ ನ್ಯಾಯಮೂರ್ತಿ ಎಚ್.ಆರ್. ಖನ್ನಾ ಅವರನ್ನು ಟಾರ್ಗೆಟ್

ಮಾಡಿ ಅವರನ್ನು ಬೈಪಾಸ್ ಮಾಡಲಾಯಿತು. ತುರ್ತುಪರಿಸ್ಥಿತಿಯ ಸಂದರ್ಭ ಮೂಲಭೂತ ಹಕ್ಕುಗಳನ್ನು ಎತ್ತಿ ಹಿಡಿದಿದ್ದಕ್ಕೆ ಈ ಪ್ರತೀಕಾರದ ಕ್ರಮವನ್ನು ಸರಕಾರ ಕೈಗೊಂಡಿತ್ತು. ಇಂಥ 'ಡಿಎನ್‌ಎ' ಈಗ ಡಿಎಂಕೆ ಪಕ್ಷದಲ್ಲಿದೆ.

ಇಂದಿರಾ ಗಾಂಧಿ ನೇತೃತ್ವದ ಸರಕಾರದಲ್ಲಿ ಸಚಿವರಾಗಿದ್ದ ಮೋಹನ್ ಕುಮಾರಮಂಗಲಮ್ ಅವರು ''ನ್ಯಾಯಾಂಗವು ಆಡಳಿತಾರೂಢ ಸರಕಾರದ ಐಡಿಯಾಲಜಿಗಳಿಗೆ ಬದ್ಧವಾಗಿರಬೇಕು'' ಎಂದು ಬಹಿರಂಗವಾಗಿಯೇ ಪ್ರತಿಪಾದಿಸಿದ್ದರು. ಡಿಎಂಕೆಯು ತಮಿಳುನಾಡಿನಲ್ಲಿ ಇದೇ ತಂತ್ರಗಾರಿಕೆಯನ್ನು ಅನುಸರಿಸುತ್ತಿದೆ. ಈಗ ಅದು ಹಿಂದೂ ಧಾರ್ಮಿಕ ನಂಬಿಕೆಗಳ ಪರವಾಗಿ ತೀರ್ಪು ನೀಡಿರುವ ನ್ಯಾಯಾಧೀಶರ ಪದಚ್ಯುತಿಗೆ ಯತ್ನಿಸುತ್ತಿದೆ. ನಾಳೆ ತನ್ನ ರಾಜಕೀಯ ಸಿದ್ಧಾಂತಗಳಿಗೆ ವಿರುದ್ಧವಾಗಿ ತೀರ್ಪು ನೀಡುವ ಪ್ರತಿಯೊಬ್ಬ ನ್ಯಾಯಾಧೀಶರನ್ನೂ ಪದಚ್ಯುತಿಗೊಳಿಸಲು ಅದು ಹುನ್ನಾರ ನಡೆಸಬಹುದು.

ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ವಿರುದ್ಧ ವಾಗ್ದಂಡನೆಗೆ ಆಗ್ರಹಿಸಿರುವ ಡಿಎಂಕೆಯದ್ದು ರಾಜಕೀಯ ಪ್ರೇರಿತ ದಾಳಿಯಲ್ಲದೆ ಇನ್ನೇನು? ವಾಗ್ದಂಡನೆ ಎಂದರೆ ಸಾಮಾನ್ಯವಲ್ಲ. ಇದು ನ್ಯಾಯಾಂಗವನ್ನೇ ಹತ್ತಿಕ್ಕುವ ಯತ್ನ. ಮುಖ್ಯವಾಗಿ ಹಿಂದೂ ಪರ ಹಕ್ಕುಗಳನ್ನು ಎತ್ತಿಹಿಡಿದಿರುವ ನ್ಯಾಯಮೂರ್ತಿಗಳ ವಿರುದ್ಧದ ನಡೆಯಾಗಿದೆ. ಎನ್‌ಡಿಎ ನ್ಯಾಯಾಂಗದ ಪರ ಇರುವುದನ್ನು ಇಲ್ಲಿ ಗಮನಿಸಬಹುದು.

ಡಿಎಂಕೆಯ ಒಟ್ಟಾರೆ ಉದ್ದೇಶ ಒಂದು ಸಮುದಾಯದ ಓಲೈಕೆಯೇ ಆಗಿದೆ. ವಕ್ಫ್ ಭೂ ಕಬಳಿಕೆ ಬಗ್ಗೆ ಅದು ಮಾತನಾಡುವುದಿಲ್ಲ. ಆದರೆ ಹಿಂದೂ ದೇವಾಲಯಗಳಿಗೆ ಸಂಬಂಧಿಸಿ ಅನಗತ್ಯ ವಿಚಾರಗಳಿಗೆ ಮಧ್ಯಪ್ರವೇಶಿಸುತ್ತಿದೆ. ಹಿಂದೂ ದೇವಾಲಯಗಳನ್ನು ಸರಕಾರ ನಿಯಂತ್ರಿಸುತ್ತಿದೆ. ದೇವಾಲಯಗಳಿಗೆ ಬರುವ ಕಾಣಿಕೆಯನ್ನು ಬೇರೆ ಯಾವುದೋ ಉದ್ದೇಶಕ್ಕೆ ಖರ್ಚು ಮಾಡುತ್ತಾರೆ. ದೇವಾಲಯಗಳ ಸಂಸ್ಕೃತಿ, ಆಚರಣೆಗಳನ್ನು ನಿರ್ಬಂಧಿಸಲಾಗುತ್ತಿದೆ. ಈ ದೌರ್ಜನ್ಯವು ಡಿಎಂಕೆ ಸರಕಾರದ ಅಡಿಯಲ್ಲಿ ನಡೆಯುತ್ತಿದೆ. ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಇರುವುದೇ ಹಿಂದೂ ದೇವಾಲಯಗಳ ಸಂಸ್ಕೃತಿ ರಕ್ಷಣೆಗೆ. ಆದರೆ ಅದನ್ನೇ ಹಿಂದೂಗಳ ವಿರುದ್ಧ ಆಯುಧವಾಗಿ ಬಳಸಲಾಗುತ್ತಿದೆ. ತಮಿಳುನಾಡಿನಲ್ಲಿ ಈ ಇಲಾಖೆಯೇ ಹಿಂದೂ ನಂಬಿಕೆಗಳನ್ನು ಘಾಸಿಗೊಳಿಸುತ್ತಿದೆ. ಇದೆಂಥಾ ಜಾತ್ಯತೀತತೆ?

ತಮಿಳುನಾಡಿನಲ್ಲಿ ನಡೆದಿರುವುದು 'ಇಂಡಿ' ಒಕ್ಕೂಟದ ಮನಸ್ಥಿತಿಯನ್ನು ಬಿಂಬಿಸುತ್ತಿದೆ. ಹಿಂದೂ ದೇವಾಲಯಗಳನ್ನು ಟಾರ್ಗೆಟ್ ಮಾಡುವುದು, ನಿಯಂತ್ರಿಸುವುದು, ಬಳಿಕ ಸೆಕ್ಯುಲರಿಸಂ ಎಂದು ಅದನ್ನೇ ಬಿಂಬಿಸುವುದು ಇವರ ದುರುದ್ದೇಶ. ತಮ್ಮ ಕೃತ್ಯಗಳನ್ನು ಬೆಂಬಲಿಸುವ ನ್ಯಾಯಾಂಗ ಅವರಿಗೆ ಬೇಕಾಗಿದೆಯೇ ವಿನಾ, ನಿಜವಾದ ನ್ಯಾಯಾಂಗ ವ್ಯವಸ್ಥೆಯಲ್ಲ. ಸಾಂವಿಧಾನಿಕ ಸಂಸ್ಥೆಗಳನ್ನು ಈ ರೀತಿ ಬೆದರಿಸಬಾರದು. ಬಿಜೆಪಿ ಹಿಂದೂಗಳ ಸಂಸ್ಕೃತಿ, ಆಚರಣೆಗಳನ್ನು ಸಂರಕ್ಷಿಸುತ್ತಿದೆ. ಜತೆಗೆ ಪ್ರಜಾಪ್ರಭುತ್ವ, ನ್ಯಾಯಾಂಗ, ಒಕ್ಕೂಟ ವ್ಯವಸ್ಥೆಯ ರಕ್ಷಣೆಗೂ ಬದ್ಧವಾಗಿದೆ. ಜನರು ಎಲ್ಲವನ್ನೂ ಸ್ಪಷ್ಟವಾಗಿ ನೋಡುತ್ತಿದ್ದಾರೆ. ಭಕ್ತಾದಿಗಳ ಪರ-ವಿರೋಧ ಯಾರು ಇದ್ದಾರೆ ಎಂಬುದು ಅವರಿಗೆ ತಿಳಿದಿದೆ. ಭಾರತೀಯರು ತಮಿಳುನಾಡಿನಲ್ಲಿ ಮುಂಬರುವ ತಿಂಗಳುಗಳಲ್ಲಿ 'ಇಂಡಿ' ಒಕ್ಕೂಟದ ಪಕ್ಷಗಳಿಗೆ ತಕ್ಕ ಶಾಸ್ತಿ ಮಾಡಲಿದ್ದಾರೆ.

(ಲೇಖಕರು ಹವ್ಯಾಸಿ ಬರಹಗಾರರು)

ಎವ್ವೆರಿ ಡೇ ಈಸ್ ನಾಟ್ ಫ್ರೈಡೇ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ದರ್ಶನ್ ಅಭಿನಯದ 'ಡೆವಿಲ್' ಚಿತ್ರ ಬಿಡುಗಡೆ ಆಗಿದೆ. ದರ್ಶನ್ ಜೈಲಿನಲ್ಲಿದ್ದಾಗ ಬಿಡುಗಡೆ ಆಗ್ತಾ ಇರೋ ಚಿತ್ರ ಅಂತಾನೇ ಇದಕ್ಕೆ ಹೆಚ್ಚಿನ ಪ್ರಚಾರ ಸಿಕ್ಕಿತ್ತು. ಹಿಂದೆ ಅವರು ಜೈಲಿನಲ್ಲಿ ಇದ್ದಾಗ ಬಿಡುಗಡೆ ಆಗಿದ್ದ 'ಸಾರಥಿ' ಚಿತ್ರ ಸೂಪರ್‌ಹಿಟ್ ಆಗಿತ್ತು. ಹಾಗಾಗಿ 'ಡೆವಿಲ್' ಕೂಡಾ ಹಿಟ್ ಆಗುತ್ತೆ ಅಂತ ಅವರ ಅಭಿಮಾನಿಗಳು ನಂಬಿಕೊಂಡಿದ್ದರು. ಆದರೆ ಸಾರಥಿ ಚಿತ್ರದ ಮಟ್ಟಕ್ಕೆ ಹಿಟ್ ಆಗೋದಿರಲಿ, ಅದರ ಹತ್ತಿರಕ್ಕೆ ಹೋಗೋ ಯಾವ ಲಕ್ಷಣಗಳನ್ನೂ ಡೆವಿಲ್ ತೋರಿಸುತ್ತಿಲ್ಲ. ಅದಕ್ಕೆ ಕಾರಣ ಚಿತ್ರಮಂದಿರಗಳು ಎರಡನೇ ದಿನವೇ ಭಣಗುಟ್ಟುತ್ತಿರೋದು. ''ನಮ್ಮ ಬಾಸ್ ಸಿನಿಮಾ ಗೆಲ್ಲಿಸೋಕೆ ನಾವೇ ಸಾಕು'' ಎಂದೆಲ್ಲಾ ಡೈಲಾಗ್ ಹೊಡೆಯುತ್ತಿದ್ದ ಅವರ ಅಭಿಮಾನಿಗಳು ಈಗ ತಣ್ಣಗಾಗಿದ್ದಾರೆ. ಕೇವಲ ಅಭಿಮಾನಿಗಳು ನೋಡಿದ ಮಾತ್ರಕ್ಕೆ ಯಾವ ಸಿನಿಮಾವೂ ಹಿಟ್ ಆಗಲ್ಲ ಅನ್ನೋದು ಈ ಮೂಲಕ ಪ್ರೂವ್ ಆಗಿದೆ. ಸಿಂಗಲ್ ಥಿಯೇಟರ್ ಮತ್ತು ಮಲ್ಟಿಪ್ಲೆಕ್ಸ್ ಎರಡೂ ಕಡೆ ಬುಕ್ಕಿಂಗ್ ಪರಿಸ್ಥಿತಿ ತೀರಾ ಅಧ್ವಾನವಾಗಿದೆ. ಎಲ್ಲ ಕಡೆ ಹಸಿರು ಬಣ್ಣವೇ ಕಾಣಿಸುತ್ತಿದ್ದು, ಬುಕ್ಕಿಂಗ್‌ಗಳೇ ಇಲ್ಲದೆ ಸಿನಿಮಾ ನಲುಗಿದೆ. ಹಾಗಾಗಿ 'ಡೆವಿಲ್' ಸಿನಿಮಾ 'ಸಾರಥಿ' ಥರ ಆಗದೇ ಅವರ ಇನ್ನೊಂದು ಫ್ಲಾಪ್ ಚಿತ್ರ 'ಕ್ರಾಂತಿ' ಥರ ಆಗಿದೆ. ಹಾಗಾಗಿಯೇ ''ಹಸಿರುಕ್ರಾಂತಿ ಆಗ್ತಾ ಇದೆ, ಎವ್ವೆರಿ ಡೇ ಈಸ್ ನಾಟ್ 'ಫ್ರೈಡೇ'.... '' ಅಂತ ಅವರ ವಿರೋಧಿಗಳು ಆಡಿಕೊಳ್ಳಲು ಅನುಕೂಲವಾದಂತಿದೆ. ದರ್ಶನ್ ಅಭಿಮಾನಿಗಳು ನೋಡದೇ ಇದ್ರೆ, ಯಾವ ಕನ್ನಡ ಸಿನಿಮಾನೂ ಹಿಟ್ ಆಗಲ್ಲ ಅಂತಿದ್ದ ಅವರ ಅಭಿಮಾನಿಗಳು ಈಗ ಅವರ ಬಾಸ್ ಚಿತ್ರವನ್ನೇ ಉಳಿಸಿಕೊಳ್ಳಲು ಕಷ್ಟಪಡ್ತಾ ಇದ್ದಾರೆ ಅನ್ನೋದು ವಿಪರ್ಯಾಸ.

ಲೂಸ್ ಟಾಕ್ ›› ಯೋಗಿ ಆದಿತ್ಯನಾಥ್

- ನಿಮ್ಮನ್ನ 'ಸ್ವಾಮಿ' ಅಂತ ಕರಿಬೇಕಾ, 'ಸರ್' ಅಂತ ಕರಿಬೇಕಾ ಅನ್ನೋದೇ ಕನ್‌ಫ್ಯೂಷನ್.
- – ಮುಖ್ಯಮಂತ್ರಿ ಆಗಿರೋದ್ರಿಂದ ಸರ್ ಅನ್ನೋದು. ಆದ್ರೆ, ಹೇಳಿ ಕೇಳಿ ಶಬರಿಮಲೆ ಸೀಸನ್ನು, ಹಂಗಾಗಿ, ಸ್ವಾಮಿ ಅಂತ ಕರೆದ್ರೂ ಅಡ್ಡಿಯಿಲ್ಲ.
- ಸರಿ, ನಿಮ್ಮ ಯುಪಿ ದೇಶದಲ್ಲೇ ನಂಬರ್ ಒನ್ ಅಂತ ಎಲ್ಲಾ ಕಡೆ ಜಾಹೀರಾತು ಕೊಡ್ತಾ ಇದ್ದೀರಲ್ಲ, ಇದು ನಿಜ್ವಾಗ್ಲೂ ನಿಜನಾ?
- – ನಂಬರ್ ಒನ್ ಅಂತ ಹೇಳಿದ್ದೀವಿ, ಯಾವುದರಲ್ಲಿ, ಯಾವ ಕಡೆಯಿಂದ ಅಂತೆಲ್ಲಾ ಮಾತ್ರ ಕೇಳಬೇಡಿ.
- ಆದ್ರೂ, ಯುಪಿಯಲ್ಲಿ ಕ್ರೈಮ್ ರೇಟ್ ಜಾಸ್ತಿ ಇದೆ ಅಂತ ವರದಿಗಳು ಹೇಳ್ತಾವಲ್ಲ?
- – ಏನ್ ಮಾಡೋದು ಅಲಹಾಬಾದ್ ಹೆಸರನ್ನು 'ಪ್ರಯಾಗ್‌ರಾಜ್' ಅಂತ ಬದಲಾವಣೆ ಮಾಡಿದ ಮೇಲೆ, ನಮ್ಮ ಆಡಳಿತ 'ಪ್ರಯಾಸ್‌ರಾಜ್' ಆಗಿಬಿಟ್ಟಿದೆ.
- ಅದ್ಸರಿ, ಯುಪಿಯಲ್ಲಿ ಏನ್ ತೊಂದರೆ ಆದ್ರೂ, ಅದಕ್ಕೆಲ್ಲಾ ಹಿಂದಿನ ಸರಕಾರಗಳೇ ಕಾರಣ ಅಂತ ಹೇಳ್ತಾ ಇರ್ತೀರಲ್ಲ?
- – ಏನ್ ಮಾಡೋದು, ಹಿಸ್ಟರಿ ಕ್ರಿಯೇಟ್ ಮಾಡೋದು ಕಷ್ಟ, ಅದಕ್ಕೆ ತಿದ್ದುತ್ತಾ ಇದ್ದೀವಿ.
- ಸರಿ, ನೀವು ಪೇಪರ್ ಓದ್ತೀರಾ ಅಂತ ಗೊತ್ತು. ಪೇಪರ್‌ಗಳಲ್ಲಿ ನಿಮ್ಮ ಇಷ್ಟದ ಸೆಕ್ಷನ್ ಯಾವುದು?
- – ಹೆಸರು ಬದಲಾವಣೆ

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಯಾವುದೋ ವಿಷಯಕ್ಕೆ ಮುನಿಸಿಕೊಂಡು ಮನೆಯಲ್ಲಿ ದೊಡ್ಡ ಜಗಳ ಆಗಿತ್ತು. ಖೇಮು ಕೂಡಾ ಅವತ್ತು ತುಂಬಾ ಸಿಟ್ಟಲ್ಲಿದ್ದ. ಹಂಗಾಗಿ ಖೇಮುಶ್ರೀಯನ್ನು ಬಾಯಿಗೆ ಬಂದಂತೆ ಬೈದಿದ್ದ. ಖೇಮುಶ್ರೀ ಏನೂ ಕಡಿಮೆ ಇರಲಿಲ್ಲ. ಗಂಡನ ಮೇಲೆ ತಿರುಗಿ ಬಿದ್ದು ಅವನನ್ನು ಎಲ್ಲ ರೀತಿಯಲ್ಲೂ ಹೀಯಾಳಿಸಿದ್ದಳು. ಅದಕ್ಕೆ ಖೇಮುಗೆ ಸಿಕ್ಕಾಪಟ್ಟೆ ಬೇಜಾರಾಗಿ ಎದ್ದು ಗಾಡಿ ತಗೊಂಡು ಹೊರಗೆ ಹೋದ. ಹೋದ್ರೆ ಹೋಗ್ಲಿ ಅಂತ ಖೇಮುಶ್ರೀ ಸುಮ್ಮನಾದಳು. ಆದರೆ, ಎಷ್ಟೊತ್ತಾದರೂ ಖೇಮು ವಾಪಸ್ ಬರಲಿಲ್ಲ. ಊಟದ ಟೈಮಿಗೆ ಬರ್ತಾನೆ ಅಂತ ಕಾದು ಕೂತಿದ್ದ ಖೇಮುಶ್ರೀಗೆ ಕೊಂಚ ಗಾಬರಿ ಆಯ್ತು. ಹಂಗಾಗಿ ಗಂಡನಿಗೆ ಕಾಲ್ ಮಾಡಿದಳು. ಮೊದಲೆರಡು ಸಲ, ಖೇಮು ಕಾಲ್ ರಿಸೀವ್ ಮಾಡಲಿಲ್ಲ. ಆಮೇಲೆ ಮೂರ್ನಾಲ್ಕು ಸಲ ಆದ್ಮೇಲೆ ಕಾಲ್ ತೆಗೆದು ಖೇಮು ''ಏನು?'' ಅಂದ. ಸದ್ಯ ಅಂತ ಸಮಾಧಾನಪಟ್ಟುಕೊಂಡ ಖೇಮುಶ್ರೀ, ''ಎಲ್ಲಿದ್ದೀರಾ?'' ಅಂತ ಕೇಳಿದಳು. ಅದಕ್ಕೆ ಖೇಮು ಸ್ವಲ್ಪ ಎಮೋಷನಲ್ ಆಗಿ ಮಾತನಾಡತೊಡಗಿದ- ''ನಿಂಗೆ ನೆನಪಿದೆಯಾ, 5 ವರುಷದ ಹಿಂದೆ ಸಿಟಿ ಸೆಂಟರ್‌ನಲ್ಲಿರೋ ಜ್ಯೂವೆಲ್ಲರ್ಸ್ ಒಂದಕ್ಕೆ ಹೋಗಿದ್ವಿ, ಅಲ್ಲಿ ನಿಂಗೊಂದು, ಡೈಮಂಡ್ ನೆಕ್ಲೇಸ್ ತುಂಬಾ ಇಷ್ಟ ಆಗಿತ್ತು''. ಖೇಮುಶ್ರೀ ಎಕ್ಸೈಟ್ ಆಗಿ ''ಹೌದು, ಹೌದು'' ಅಂದ್ಳು. ಖೇಮು ಮುಂದುವರಿಸಿದ- ''ಆದ್ರೆ ಅವತ್ತು ನನ್ನತ್ರ ದುಡ್ಡಿರಲಿಲ್ಲ. ಮುಂದೊಂದಿನ ಏನೇ ಆಗ್ಲಿ ಆ ನೆಕ್ಲೇಸ್‌ನ ನಾನು ನಿಂಗೆ ಕೊಡಿಸೇ ಕೊಡಿಸ್ತೀನಿ ಅಂತ ಹೇಳಿದ್ದೆ''. ಖೇವಮುಶ್ರೀ ಇನ್ನೂ ಎಕ್ಸೈಟ್ ಆಗಿ ''ಹೌದು, ನಿಜ, ತುಂಬಾ ಚೆನ್ನಾಗಿ ನೆನಪಿದೆ'' ಅಂದ್ಳು. ಅದಕ್ಕೆ ಖೇಮು ''ಆ ಜ್ಯೂವೆಲ್ಲರಿ ಮುಂದಿರೋ ಬಾರಲ್ಲಿ ಕುಂತು ಕುಡಿತಾ ಇದ್ದೀನಿ. ಏನ್ ಕಾಲ್ ಮಾಡಿದ್ದು?'' ಅಂತ ರೇಗಿದ.

ಲೈನ್‌ಮ್ಯಾನ್

- ಲೈಫಲ್ಲಿ ಏನೂ ಸಾಧನೆ ಮಾಡಿರದ ತಮ್ಮ ಮಕ್ಕಳನ್ನ ಬಾಲಿವುಡ್ ಮಂದಿ ಹೆಂಗೆ ಬಯ್ತಾರೆ?
- – ಆ ಹೀರೋನ ನೋಡಿ ಕಲ್ತೊಕ್ಕೋ, ನಿನ್ ವಯಸ್ಸಿಗೆ ಮೂರ್ ಮೂರ್ ಮದ್ವೆ ಆಗಿದ್ದ ಅವ್ನು
- ಹಂಗಾದ್ರೆ ಸಲ್ಮಾನ್ ಖಾನ್ ಕಥೆ?
- – ಅವ್ನಿಗೆ ಅವ್ನ್ ಅಪ್ಪ ಅಮ್ಮನೇ ಬಯ್ತಾರೆ, ''ನಿನ್ ಜತೆಗಿದ್ದ 'ಹುಡಿಗೀರಿಗೆಲ್ಲಾ' ಮದ್ವೆ ಆಗಿ ಮಕ್ಕಳಾಯ್ತು, ನಿಂದ್ಯಾವಾಗ್ಲೋ?''
- ಕಿವಿ ಚುಚ್ಚುವವರ ಕೆಲಸಕ್ಕೆ ಏನಂತಾರೆ?
- – ಇಯರ್ ರಿಂಗ್ ಏಯ್ಡ್
- ಡಿಕ್ಷನರಿಗೆ ಇನ್ನೊಂದು ಹೆಸರು
- – 'ಅರ್ಥ' ಶಾಸ್ತ್ರ
- ಅಮೆರಿಕಕ್ಕೆ ಸಂಬಂಧ ಪಟ್ಟ ಸುದ್ದಿ
- – 'ಸ್ಟೇಟ್ಸ್' ಲೆವೆಲ್ ಸುದ್ದಿ
- ಒನ್ ಡೇ ಮ್ಯಾಚಲ್ಲಿ ಸೆಂಚುರಿ ಹೊಡೆದು ಟೆಸ್ಟ್ ಮ್ಯಾಚಲ್ಲಿ ಸೊನ್ನೆಗೆ ಔಟಾಗೋ ಬ್ಯಾಟ್ಸ್‌ಮನ್ ನೋಡಿ ಹೇಳೋ ಮಾತು
- – ಎವ್ವೆರಿ ಡೇ ಈಸ್ ನಾಟ್ ಒನ್ ಡೇ
- 'ಸಿನಿಮಾರಂಗ'ದಲ್ಲಿ ಒಂದು ಸೂಪರ್‌ಹಿಟ್ ಕೊಟ್ಟು ನಂತರದ ಸಿನಿಮಾ ಫ್ಲಾಪ್ ಆದ್ರೆ, ಜನ ಏನಂತಾರೆ?
- – ಎವ್ವೆರಿ ಡೇ ಈಸ್ ನಾಟ್ 'ಫ್ರೈಡೇ'
- ಕಾಲೇಜಿನಲ್ಲಿ ವಿದ್ಯಾರ್ಥಿಗಳು ಡೆಸ್ಕ್ ಅಥವಾ ಬೆಂಚ್ ಮೇಲೆ ಬರೆಯುವ ಕವಿತೆಗಳು
- – ಬೆಂಚ್‌ಮಾರ್ಕ್ ಸಾಹಿತ್ಯ
- ಅಂಥ ಸಾಹಿತ್ಯ ಬರೆಯುವ ವಿದ್ಯಾರ್ಥಿಯನ್ನ ಏನಂತಾರೆ?
- – ಡೆಸ್ಕ್ ಟಾಪ್ ಐಕಾನ್
- ಹಾಸಿಗೆಯಲ್ಲಿ ಕಕ್ಕ ಮಾಡಿಕೊಳ್ಳೋ ಪುಟ್ಟ ಮಗನನ್ನು ಏನಂತಾರೆ?
- – 'ಮಲ' ಮಗ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 333

ಸಮಾಚಾರ ಸಣ್ಣದಲ್ಲ

ಮೇಕೆದಾಟು ಯೋಜನೆ: ಎಐಎಡಿಎಂಕೆ ಅಪಸ್ವರ

ಚೆನ್ನೈ: ಮೇಕೆದಾಟು ಅಣೆಕಟ್ಟು ಯೋಜನೆ ಕಾರ್ಯಗತಗೊಳಿಸಿ ತಮಿಳುನಾಡನ್ನು ಮರುಭೂಮಿಯಾಗಿಸುವುದೇ ಕರ್ನಾಟಕದ ಕಾಂಗ್ರೆಸ್ ಸರಕಾರದ ಏಕಮೇವ ಗುರಿಯಾಗಿದೆ ಎಂದು 'ಎಐಎಡಿಎಂಕೆ'

ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಶನಿವಾರ ಕಿಡಿಕಾರಿದ್ದಾರೆ. ಮೇಕೆದಾಟುನಲ್ಲಿ ಸಮತೋಲನ ಜಲಾಶಯ ನಿರ್ಮಿಸುವ ಯೋಜನೆಯೊಂದಿಗೆ ಮುಂದುವರಿಯುತ್ತಿರುವ ಕರ್ನಾಟಕ ಸರಕಾರ, ಈ ಯೋಜನೆಯಿಂದ ತಮಿಳುನಾಡಿನ ಕೃಷಿ ಭೂಮಿ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುವುದನ್ನು ಪರಿಗಣಿಸುತ್ತಿಲ್ಲ. ಇಂಥ ದುರದೃಷ್ಟಕರ ಪರಿಸ್ಥಿತಿಗೆ ರಾಜ್ಯದಲ್ಲಿನ ಆಡಳಿತಾರೂಢ ಡಿಎಂಕೆ ಸರಕಾರವೇ ಕಾರಣ ಎಂದು ಎಡಪ್ಪಾಡಿ 'ಎಕ್ಸ್' ಸಂದೇಶದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಕೆಲಸವೆಲ್ಲಾ ತಪ್ಪು ಎನ್ನಲಾಗದು

ದೆಹಲಿ: ಯಾರೇ ಪ್ರಧಾನಿ ಆಗಿರಲಿ, ಅವರ ಎಲ್ಲಾ ಕೆಲಸಗಳಲ್ಲೂ ಲೋಪ ಹುಡುಕುವುದು ಸರಿಯಲ್ಲ. ಅವರು ಮಾಡುವುದೆಲ್ಲವನ್ನೂ ತಪ್ಪು ಎಂದು



ಟೀಕಿಸುತ್ತಾ ಇರುವುದು ಥರವಲ್ಲ ಎಂದು ಕೇಂದ್ರದ ಮಾಜಿ ಸಚಿವ, ಕಾಂಗ್ರೆಸ್‌ನ ಮಾಜಿ ನಾಯಕ ಅಶ್ವನಿ ಕುಮಾರ್ ಹೇಳಿದ್ದಾರೆ. ತಮ್ಮ 'ಗಾರ್ಡಿಯನ್ಸ್ ಆಫ್ ದಿ ರಿಪಬ್ಲಿಕ್' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಕುಮಾರ್, ಪ್ರಜಾಪ್ರಭುತ್ವ ನಾಯಕತ್ವದ ಎಲ್ಲಾ ಗುಣಗಳ ಬಗ್ಗೆ ಹೇಳಿದೆ. ಅದರಲ್ಲಿ ಉದಾರತೆ ಅತ್ಯಂತ ಮುಖ್ಯವಾದದ್ದು. ಮನಸ್ಸಿನಲ್ಲಿ ಸಂಕುಚಿತ ಭಾವ ಇರಬಾರದು. ಬದಲಾಗಿ ಚೈತನ್ಯದ ವೈಶಾಲ್ಯ, ಹೃದಯದಲ್ಲಿ ಉದಾರತೆ ಬೇಕಿದೆ. ಅದು ಮಾಜಿ ಪ್ರಧಾನಿ ದಿ. ಮನಮೋಹನ್ ಸಿಂಗ್ ಪ್ರತಿನಿಧಿಸಿದ್ದ ನಾಯಕತ್ವದ ಗುಣವಾಗಿದೆ ಎಂದಿದ್ದಾರೆ. ಕಾಂಗ್ರೆಸ್ ಇಲ್ಲದೆ ದೇಶದಲ್ಲಿ ಪರಿಣಾಮಕಾರಿ ವಿರೋಧ ಪಕ್ಷ ಇರಲು ಸಾಧ್ಯವಿಲ್ಲ, ಆದರೆ ಪಕ್ಷವು ಹಿಂದುಳಿದಿದೆ. ಪಕ್ಷ ತನ್ನನ್ನು ಪುನರುಜ್ಜೀವನಗೊಳಿಸಿಕೊಳ್ಳಬೇಕಾದ ಅಗತ್ಯವಿದೆ. ಅದು ರಾಷ್ಟ್ರೀಯ ಬಾಧ್ಯತೆಯೂ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈಗಿನ ಪ್ರಧಾನಿ ಎಲ್ಲವನ್ನೂ ತಪ್ಪು ಮಾಡುತ್ತಿದ್ದಾರೆ ಎಂಬ ಅಭಿಪ್ರಾಯ ಸರಿಯಲ್ಲ ಎಂದು ಹೇಳಿದ್ದಾರೆ.

ಸಂಪಾದಿಸುವ ಸ್ತ್ರೀಗೆ ಜೀವನಾಂಶವಿಲ್ಲ: ಹೈ

ಅಲಹಾಬಾದ್: ದುಡಿಮೆ ಮಾಡಿ ಹಣ ಸಂಪಾದನೆ ಮಾಡುವ ಮಹಿಳೆ ತನ್ನನ್ನು ತಾನು ಕಾಪಾಡಿಕೊಳ್ಳಲು ಸಮರ್ಥಳಾಗಿರುತ್ತಾಳೆ. ಹಾಗಾಗಿ ಆಕೆ ವಿಚ್ಛೇದನ ಪಡೆದರೂ ವಿಚ್ಛೇದಿತ ಪತಿಯಿಂದ ಜೀವನಾಂಶ ಪಡೆಯುವುದಕ್ಕೆ ಅರ್ಹಳಾಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ 'ವಿಚ್ಛೇದನ ಪ್ರಕರಣ'ಗಳಲ್ಲಿ ಜೀವನಾಂಶಕ್ಕೆ ಸಂಬಂಧಿಸಿ ಮಹತ್ವದ ತೀರ್ಪು ನೀಡಿದೆ. ಪರಿತ್ಯಕ್ತ ಪತ್ನಿಗೆ ಜೀವನಾಂಶ ಪಾವತಿಸುವಂತೆ ವಿಚ್ಛೇದಿತ ಪತಿ ಅಂಕಿತ್ ಸಹಾ ಎಂಬಾತನಿಗೆ ಆದೇಶಿಸಿದ್ದ ಗೌತಮ್ ಬುದ್ಧ ನಗರದ ಕುಟುಂಬ ನ್ಯಾಯಾಲಯದ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ರದ್ದುಗೊಳಿಸಿದೆ. ಮಹಿಳೆ ಸ್ನಾತಕೋತ್ತರ ಪದವೀಧರೆ ಮತ್ತು ವೆಬ್ ಡಿಸೈನರ್ ಕೆಲಸ ಮಾಡುತ್ತಿರುವುದನ್ನು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ. ಅಲ್ಲದೇ ಅವರು ಕಂಪನಿಯೊಂದರಲ್ಲಿ ಹಿರಿಯ ಮಾರಾಟ ಸಂಯೋಜಕರಾಗಿ ಮಾಸಿಕ 34,000 ರು. ಸಂಬಳ ಪಡೆಯುತ್ತಿದ್ದಾರೆ. ಪತ್ನಿ ನೌಕರಿಯಲ್ಲಿದ್ದು, ಸಂಪಾದನೆ ಮಾಡುತ್ತಿರುವುದರಿಂದ ಆಕೆಗೆ ಪತಿಯು ಜೀವನಾಂಶ ನೀಡಬೇಕಾದ ಅಗತ್ಯವಿಲ್ಲ ಎಂದು ನ್ಯಾಯಮೂರ್ತಿ ಮದನ್ ಪಾಲ್ ಸಿಂಗ್ ಅವರ ಪೀಠ ಹೇಳಿದೆ.

ಇದು ಪ್ರಜಾಪ್ರಭುತ್ವದ ಸೌಂದರ್ಯ: ಶಶಿ ತರೂರ್

ತಿರುವನಂತಪುರಂ: ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತಿರುವನಂತಪುರಂ ಮಹಾ ನಗರ ಪಾಲಿಕೆಯಲ್ಲಿ ಭಾರತೀಯ ಜನತಾ ಪಕ್ಷ(ಬಿಜೆಪಿ)

ಐತಿಹಾಸಿಕ ಗೆಲುವು ಸಾಧಿಸಿರುವುದಕ್ಕೆ ಸ್ಥಳೀಯ ಕಾಂಗ್ರೆಸ್ ಸಂಸದ ಶಶಿ ತರೂರ್ ಅಭಿನಂದನೆ ಸಲ್ಲಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಬಿಜೆಪಿಗೆ ಜನರ ತೀರ್ಪು ನೀಡಿದ್ದಾರೆ. ಅದನ್ನು ಗೌರವಿಸಬೇಕು ಎಂದೂ ಹೇಳಿದ್ದಾರೆ. ಅಲ್ಲದೇ 'ಈ ಫಲಿತಾಂಶ ಪ್ರಜಾಪ್ರಭುತ್ವದ ಸೌಂದರ್ಯ'ಕ್ಕೆ ಸಾಕ್ಷಿ ಎಂದೂ 'ಎಕ್ಸ್' ಸಂದೇಶದಲ್ಲಿ ಬಣ್ಣಿಸಿದ್ದಾರೆ. ಇದೇ ವೇಳೆ, ಕಾಂಗ್ರೆಸ್ ನೇತೃತ್ವದ 'ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್'(ಯುಡಿಎಫ್) ಬಹಳಷ್ಟು ಪಾಲಿಕೆ, ಮುನಿಸಿಪಾಲಿಟಿ, ಪಂಚಾಯತ್‌ಗಳಲ್ಲಿ ಗೆಲುವು ಸಾಧಿಸಿರುವುದನ್ನೂ ಶಶಿತರೂರ್ ಶ್ಲಾಘಿಸಿದ್ದಾರೆ.

{ ಕೆ.ಸಿ.ವೇಣುಗೋಪಾಲ್ } ಕಾಂಗ್ರೆಸ್ ಸಂಸದ

ಈ ಹಿಂದೆ 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ'(ಎಂಜಿಎನ್ ಆರ್‌ಇಜಿಎ) ಯೋಜನೆಯನ್ನು ವೈಫಲ್ಯದ ಜೀವಂತ ಸ್ಮಾರಕ ಎಂದು ಟೀಕಿಸಿದ್ದ ಪ್ರಧಾನಿ ನರೇಂದ್ರ ಮೋದಿ, ಈಗ ಅದೇ ಯೋಜನೆಗೆ ಮರುನಾಮಕರಣ ಮಾಡುವ ಪ್ರಯತ್ನದ ಮೂಲಕ ಯೋಜನೆಯ ಕೀರ್ತಿ ತಮ್ಮದಾಗಿಸಿಕೊಳ್ಳಲು ಹೊಂಚು ಹಾಕಿದ್ದಾರೆ.

ಆದಿತ್ಯ ಎಸ್.ಕೊಳವಿಯ ಭಾವಚಿತ್ರ

ಬೆಂಗಳೂರಿನ 'ಪಿಇಎಸ್' ವಿಶ್ವವಿದ್ಯಾಲಯ ಬಿಟೆಕ್ ಪದವೀಧರ | ವ್ಯಾಸಂಗ ಅವಧಿಯ ವರ್ಷದಲ್ಲೇ ಅದ್ಭುತ ಸಾಧನೆಗಳ ಸರಮಾಲೆ | ಮೈಕ್ರೊಸಾಫ್ಟ್‌ನಿಂದ ಮೆಟಾವರೆಗೂ ಮಿಂಚಿನೋಪಾದಿ ಪಯಣ

ನವ ಭಾರತದ ಟೆಕ್ ಕಿಡಿ ಜೆನ್-ಜೆಡ್ ಆದಿತ್ಯ ಎಸ್.ಕೊಳವಿ

- ಆಪಲ್ ಕಂಪನಿಯಲ್ಲಿ 'ಮೆಷಿನ್ ಲರ್ನಿಂಗ್'(ಎಂಎಲ್) ಇಂಟರ್ನ್‌ಶಿಪ್ ಮೂಲಕ ಹೊಸ ಕಲಿಕೆಯ ಆರಂಭ. ಅದ್ಭುತ ತಂತ್ರಜ್ಞರ ತಂಡದೊಂದಿಗೆ ಟೆಕ್ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಿ ತಂತ್ರಜ್ಞಾನದ ಒಳ-ಹೊರಗು ಅನುಭವ ಗಳಿಸಿಕೊಳ್ಳುವ ಸುವರ್ಣಾವಕಾಶ.
- ಬಳಿಕ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ ಕಂಪನಿ 'ಮೈಕ್ರೊಸಾಫ್ಟ್' ಸೇರಿ 'ಏಜೆಂಟಿಕ್ ಮೆಮೊರಿ' ವಿಷಯದಲ್ಲಿ ಸಂಶೋಧನೆಗೆ ಅವಕಾಶ.
- ಪರಿಣಾಮವಾಗಿ ಮತ್ತೊಂದು ದಿಗ್ಗಜ ತಂತ್ರಜ್ಞಾನ ಕಂಪನಿ 'ಮೆಟಾ'ದಿಂದ 6 ಅಂಕಿಗಳ ಅಮೆರಿಕ ಡಾಲರ್ ಸಂಶೋಧನಾ(ಎಲ್‌ಎಲ್ಎಎಂಎ ಇಂಪ್ಯಾಕ್ಟ್ ಗ್ರಾಂಟ್) ನಿಧಿ ಪಡೆಯುವ ಸದಾವಕಾಶ. ಈ ನಿಧಿಯನ್ನೇ ಬಳಸಿಕೊಂಡು 'ಕಾಗ್ನಿಟಿವ್‌ಲ್ಯಾಬ್'ನಲ್ಲಿ ಫ್ರಾಂಟಿಯರ್ ಲೆವೆಲ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್(ಎ.ಐ) ಅಭಿವೃದ್ಧಿ ಪಡಿಸುವ ದೊಡ್ಡ ಹೊಣೆಗಾರಿಕೆ ನಿರ್ವಹಣೆ.
- ಆ ಬಳಿಕ ನಮ್ಮ ಕೋಡ್ ಎಕ್ಸ್‌ಪ್ಲೊರೇಷನ್ ಟೂಲ್ 'ಗಿಟ್ ವಿಜ್' ವೆರ್ಸೆಲ್ ಓಪನ್ ಸೋರ್ಸ್ ಸ್ಪಾನ್ಸರ್‌ಶಿಪ್ ಪ್ರೊಗ್ರಾಮ್‌ನಲ್ಲಿ ಸ್ವೀಕೃತಿ. ಪರಿಣಾಮವಾಗಿ ಓಪನ್ ಸೋರ್ಸ್ ಪ್ರಾಜೆಕ್ಟ್‌ನಲ್ಲಿ '10 ಸಾವಿರ ಗಿಟ್‌ಹಬ್ ಸ್ಟಾರ್' ಗಳಿಕೆಯ ಸಾಧನೆ.
- ಆ ಬಳಿಕ ಟ್ವಿಟರ್, ಲಿಂಕ್ಡ್‌ಇನ್, ಗಿಟ್‌ಹಬ್‌ನಲ್ಲಿ 20 ಸಾವಿರ ಫಾಲೋವರ್ಸ್ ಸಂಪಾದನೆ. ಪರಿಣಾಮವಾಗಿ ಸಂಶೋಧಕರು, ಟೆಕ್ ಕಂಪನಿಗಳ ಸಂಸ್ಥಾಪಕರು, ಟೆಕ್ ಬಿಲ್ಡರ್ಸ್ (ತಂತ್ರಜ್ಞಾನ ಅಭಿವೃದ್ಧಿಪಡಿಸುವವರ) ಸಂಪರ್ಕ ಸಾಧ್ಯವಾಗಿದ್ದು ಹೆಚ್ಚುವರಿ ಗಳಿಕೆ.
- ಇದೆಲ್ಲದರ ಬಳಿಕ 5 ಸಂಶೋಧನಾ ವರದಿಗಳ ಪ್ರಕಟಣೆ. 'ಎಎಐ', 'ಎನ್‌ಎಎಸಿಎಲ್', 'ಸಿವಿಪಿಆರ್', 'ಐಸಿಸಿವಿ' ಮತ್ತು 'ನ್ಯೂಯರ್‌ಐಪಿಎಸ್'ಗಳಲ್ಲಿ ಸಂಶೋಧನಾ ವರದಿಗಳ ಸ್ವೀಕೃತಿ. ಪರಿಣಾಮವಾಗಿ ಉನ್ನತ ದರ್ಜೆಯ ಸಂಸ್ಥೆಗಳ ಕಾರ್ಯಾಗಾರಗಳ ಜತೆಗೂಡಿ 'ಎಐ' ಆಧಾರಿತ ವಿವಿಧ ಡೊಮೇನ್‌ಗಳಲ್ಲಿ 'ಏಜೆಂಟಿಕ್ ಸಿಸ್ಟೆಮ್ಸ್'ನಿಂದ ಆರಂಭಿಸಿ 'ಮಲ್ಟಿಮಾಡೆಲ್ ಮಲ್ಟಿಲಿಂಗ್ವಲ್ ಮಾಡೆಲ್'ವರೆಗೂ ಹಾಗೂ 'ಲಾರ್ಜ್ ಸ್ಕೇಲ್ ಡೇಟಾ ಸಿಂಥೆಸಿಸ್' ವಲಯಗಳಲ್ಲಿ ಕೆಲಸ ಮಾಡುವ ವಿಶೇಷ ಅವಕಾಶ.



ಲಿಂಕ್ಡ್‌ಇನ್ ಪೋಸ್ಟ್ ಚಿತ್ರ

- ಈ ಎಲ್ಲಾ ಅನುಭವಗಳ ಆಧಾರದಲ್ಲೇ 'ವೈಬ್ ಮೋಷನ್'(ಮೋಷನ್ ಗ್ರಾಫಿಕ್ಸ್‌ಗೆ ಪ್ರಿಯವಾದ) ಆಪ್ ಅಭಿವೃದ್ಧಿಪಡಿಸಿ ಮಾರು ಕಟ್ಟೆಗೆ ಬಿಡುಗಡೆ. ಅದಕ್ಕೀಗ 2 ಲಕ್ಷ ವೀಕ್ಷಣೆಗಳ ಭಾಗ್ಯ, ಆರಂಭಿಕ ಹಂತದ ಗ್ರಾಹಕರು-ಬಳಕೆದಾರರಿಂದ ವ್ಯಾಪಕ ಬಳಕೆ-ಮೆಚ್ಚುಗೆ.
- ಪರಿಣಾಮವಾಗಿ 'ಇಲವೆನ್‌ಲ್ಯಾಬ್ಸ್ ಗ್ಲೋ ಬಲ್ ಹ್ಯಾಕಥಾನ್' ಹಾಗೂ 'ದಿ 100ಎಕ್ಸ್ ಇಂಜಿನಿಯರ್ಸ್ ನ್ಯಾಷನಲ್ ಎಐ ಹ್ಯಾಕ ಥಾನ್' ಮತ್ತು 'ಮೈಕ್ರೊಸಾಫ್ಟ್ ಗ್ಲೋಬಲ್ ಇಂಟರ್ನಲ್ ಹ್ಯಾಕಥಾನ್' ಎಂಬ 3 ಮೇ ಜರ್ ಹ್ಯಾಕಥಾನ್‌ಗಳಲ್ಲಿ ಬಹುಮಾನ ಗಳಿಕೆ.
- ಲೋಸ್‌ಫಂಕ್‌ನಲ್ಲಿ 6 ವಾರಗಳ 'ಎಐ' ರೆಸಿಡೆನ್ಸಿ ಪೂರ್ಣ, ಕನಸಿನೋಪಾದಿಯ ಟೆಕ್ ಕಂಪನಿಗಳು, ಸಂಶೋಧಕ ಲ್ಯಾಬ್ ಸಂಸ್ಥೆ ಗಳಲ್ಲಿ ಸಂದರ್ಶನಕ್ಕೆ ಹಾಜರಾಗುವ ಅವಕಾಶ.
- ಇದೆಲ್ಲದರ ಮಧ್ಯೆಯೇ ಬೆಂಗಳೂರಿನ 'ಪಿಇಎಸ್' ವಿಶ್ವವಿದ್ಯಾಲಯದಲ್ಲಿ 2024ರಲ್ಲಿ 'ಬಿಟೆಕ್' ಪದವಿ ವ್ಯಾಸಂಗ ಪೂರ್ಣಗೊಳಿಸಿದ ಖುಷಿ.
- ಸಂಶೋಧನೆ- ಸಾಧನೆಗಳ ಕುರಿತು 'ಎಕನಾಮಿಕ್ ಟೈಮ್ಸ್'ನಂತಹ ಪ್ರಮುಖ ಪತ್ರಿಕೆಯಲ್ಲಿ ಹಾಗೂ 'ಎಂಐಟಿ ಟೆಕ್ನಾಲಜಿ ರಿವ್ಯೂ' ಮತ್ತು 'ಅನಾಲಿಟಿಕ್ ಇಂಡಿಯ' ಮ್ಯಾಗ್‌ಜಿನ್‌ನಲ್ಲಿ ನನ್ನ ಸಾಧನೆ-ಸಂಶೋ ಧನೆಗಳ ಕುರಿತು ಕಿರು ಪರಿಚಯ ಲೇಖನಗಳು ಪ್ರಕಟ.

ಇದಿಷ್ಟೂ ನನ್ನ 22ನೇ ವರ್ಷದ ಹುಟ್ಟು ಹಬ್ಬದ (2025 ಡಿ.11) ವೇಳೆಗೆ ಸಾಧ್ಯವಾದ ಸಂಪಾದನೆ-ಸಾಧನೆ. ಆದರೂ, 'ಬದುಕು ಈಗಷ್ಟೇ ಶುರುವಾಗುತ್ತಿದೆ' ಎಂಬ ಭಾವ. 'ಮುಂದೇನು ಬರಲಿದೆಯೋ?' ಎಂಬ ಕುತೂಹಲ, ಭಾವೋದ್ವೇಗ.

ಈ ಮೇಲಿನ ಅಂಶಗಳೆಲ್ಲವೂ ಅಚ್ಚ ಕನ್ನಡದ ಪ್ರತಿಭೆ, ಮೈಕ್ರೊಸಾಫ್ಟ್ ಕಂಪನಿಯ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ಸಂಶೋಧಕ, 'ಎ.ಐ' ಸಂಶೋಧನೆಗಳ ಕನಸುಗಾರ ಯುವಕ 'ಆದಿತ್ಯ ಎಸ್.ಕೊಳವಿ' ಎಂಬ ಬೆಂಗಳೂರಿನ ಪಿಇಎಸ್ ವಿಶ್ವವಿ ದ್ಯಾಲಯದ ನವ 'ಬಿಟೆಕ್ ಪದವೀಧರ' ತಮ್ಮ 'ಲಿಂಕ್ಡ್‌ಇನ್' ಖಾತೆಯಲ್ಲಿ ಇದೇ ಡಿ.11ರಂದು ಬರೆದುಕೊಂಡಿರುವ ಪುಟ್ಟ ಆತ್ಮಕಥನ.

ತುಟಿಯ ಮೇಲೆ ಈಗಷ್ಟೇ ಚಿಗುರುತ್ತಿರುವ ಎಳೆಮೀಸೆಯ ಮೊಗದಲ್ಲಿನ್ನೂ ಮರೆಯಾಗದ ಮುಗ್ಧಭಾವ, ಕಣ್ಣಂಚಲ್ಲಿ ಹೊರಚಿಮ್ಮಲು ಕಾದಿರುವ ತುಂಟತನದ ಕಿರುಬೆಳಕು, ಬಂದಿದ್ದನ್ನು ಹಾಗೇ ಸ್ವೀಕರಿಸಬಲ್ಲೆ ಎಂಬ ಆತ್ಮವಿಶ್ವಾಸದ ನೋಟ..., ಇದು ಆದಿತ್ಯ ಎಸ್.ಕೊಳವಿಯ ಚಹರೆಯ ಕಿರು ಪರಿಚಯ.

ಕರ್ನಾಟಕದ ಈ ಯುವ ಪ್ರತಿಭೆಯ ಡಿ.11ರ ಲಿಂಕ್ಡ್‌ಇನ್ ಪೋಸ್ಟ್‌ಗೆ ಡಿ.12ರ ವೇಳೆಗಲ್ಲಾ 2 ಸಾವಿರಕ್ಕೂ ಅಧಿಕ ಲೈಕ್‌ಗಳು ಬಂದಿವೆ, ಹಲವರು ಸಕಾರಾತ್ಮಕವಾಗಿ ಪ್ರತಿಕ್ರಿಯೆಗಳನ್ನೂ ದಾಖಲಿಸಿದ್ದಾರೆ. ನೂರಾರು ಮಂದಿ ಚಪ್ಪಾಳೆ ತಟ್ಟಿದ್ದಾರೆ, ಹಿರಿಯದು ಮನದುಂಬಿ ಹರಸಿದ್ದಾರೆ. ಆದಿತ್ಯ ಎಸ್.ಕೊಳವಿ ಕರ್ನಾಟಕದ ಪ್ರತಿಭೆ, ಬೆಂಗಳೂರಿನ ಕಾಲೇಜು ಹುಡುಗ ಎಂಬುದೇ ಕನ್ನಡಿಗರ ಹೆಮ್ಮೆ ಹೆಚ್ಚಿಸಿದೆ.

ಫೆಡರಲ್ ನ್ಯಾಯಾಲಯದಲ್ಲಿ ಜಂಟಿ ದಾವೆ | ಕ್ಯಾಲಿಫೋರ್ನಿಯ ಅ.ಜನರಲ್ ವಕಾಲತು

ಎಚ್-1ಬಿ ವೀಸಾ ಶುಲ್ಕ ಏರಿಕೆ ವಿರುದ್ಧ ಅಮೆರಿಕಾದ 20 ರಾಜ್ಯಗಳ ತಗಾದೆ

ವಾಷಿಂಗ್ಟನ್: ಹೆಚ್ಚು ಕೌಶಲಯುತ ವಿದೇಶಿ ಉದ್ಯೋಗಿಗಳನ್ನು ಅಮೆರಿಕಕ್ಕೆ ಕರೆಸಿಕೊಂಡು ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವ ಎಚ್-1ಬಿ ವೀಸಾಗೆ 1 ಲಕ್ಷ ಡಾಲರ್ ಶುಲ್ಕ ವಿಧಿಸಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರಕಾರದ ವಿರುದ್ಧವೇ 20 ರಾಜ್ಯಗಳು ತಗಾದೆ ತೆಗೆದಿವೆ. ವೀಸಾ ಶುಲ್ಕ 1 ಲಕ್ಷ ಡಾಲರ್‌ಗೆ ಏರಿಕೆ ಮಾಡಿರುವ ಸರಕಾರದ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ಅಮೆರಿಕದ 20 ರಾಜ್ಯಗಳು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ವಿರುದ್ಧವೇ ಶುಕ್ರವಾರ ಮೊಕದ್ದಮೆ ಹೂಡಿವೆ.

ಕ್ಯಾಲಿಫೋರ್ನಿಯ ರಾಜ್ಯದ ಅಟಾರ್ನಿ ಜನರಲ್ ರಾಬ್ ಬೊಂಟಾ ಅವರು 20 ರಾಜ್ಯಗಳು ಒಟ್ಟಾಗಿ ಹೂಡಿರುವ ಮೊಕದ್ದಮೆಯನ್ನು ಮುನ್ನಡೆಸುತ್ತಿದ್ದಾರೆ. ಟ್ರಂಪ್ ಸರಕಾರದ ವೀಸಾ ದುಬಾರಿ ಶುಲ್ಕ ನೀತಿ ಕಾನೂನುಬಾಹಿರ ಎಂದು ಆಕ್ಷೇಪಿಸಿದ್ದಾರೆ. ಅಮೆರಿಕದ ಕಂಪನಿಗಳಿಗೆ ಅತ್ಯಗತ್ಯವಾಗಿ ಬೇಕಾಗಿರುವ ಕೌಶಲಪೂರ್ಣ ವಿದೇಶಿ ಉದ್ಯೋಗಿಗಳನ್ನೇ ಅವಲಂಬಿಸಿರುವ ಐಟಿ ಮೊದಲಾದ ಪ್ರಮುಖ ಉದ್ಯಮ ವಲಯಗಳಿಗೆ ಇದರಿಂದ ಭಾರೀ ತೊಡಕಾಗಲಿದೆ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ.

20 ರಾಜ್ಯಗಳು ಅಮೆರಿಕ ಸರಕಾರದ ವಿರುದ್ಧವೇ ಫೆಡರಲ್ ನ್ಯಾಯಾಲಯದಲ್ಲಿ ದಾವೆ ಹೂಡಿವೆ. ಸಂಸತ್ತಿನ ಅಧಿಕಾರ ವ್ಯಾಪ್ತಿಯನ್ನೂ ಮೀರಿ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ ವೀಸಾ ಶುಲ್ಕ ಏರಿಕೆ ಮಾಡಿದೆ. ಯಾವುದೇ ಸೂಚನೆ ನೀಡದೆ, ಸಮರ್ಪಕ ಕಾನೂನು ಪ್ರಕ್ರಿಯೆಗಳನ್ನೂ ಕೈಗೊಳ್ಳದೇ ಎಚ್-1ಬಿ ವೀಸಾಗೆ ಭಾರಿ ಶುಲ್ಕ ವಿಧಿಸಿರುವುದು ಅಮಾನ್ಯವಾಗಬೇಕಿದೆ ಎಂದು 20 ರಾಜ್ಯಗಳ ಪರವಾಗಿ ರಾಬ್ ಬೊಂಡಾ ವಾದಿಸಿದ್ದಾರೆ ಎಂದೂ 'ರಾಯಿಟರ್ಸ್' ಪತ್ರಿಕೆ ಶುಕ್ರವಾರ ವರದಿ ಮಾಡಿದೆ. ಸಾಮಾನ್ಯ ಎಚ್-1ಬಿಗೆ ನಿಗದಿಪಡಿಸಿರುವುದಕ್ಕಿಂತ 10 ಪಟ್ಟು ಹೆಚ್ಚು ಶುಲ್ಕವನ್ನು ಟ್ರಂಪ್ ಸರಕಾರ ವಿಧಿಸಿದೆ. ಎಚ್-1ಬಿ ವೀಸಾ ಉದ್ಯೋಗಿಗಳನ್ನೇ ಅವಲಂಬಿಸಿರುವ ಐಟಿ ಉದ್ಯಮಗಳು, ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಆಸ್ಪತ್ರೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಬೊಂಟಾ ವಾದಿಸಿರುವುದಾಗಿ ಅವರ ಕಚೇರಿ ಮೂಲಗಳು ತಿಳಿಸಿವೆ.

ದಾವೆ ಹೂಡಿದ 20 ರಾಜ್ಯಗಳು

ಮೊದಲಿಗೆ 13 ಕಾಲೊನಿಗಳೊಂದಿಗೆ ರಚನೆಯಾದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ(ಯುಎಸ್‌ಎ) ದೇಶಕ್ಕೆ 1959ರಲ್ಲಿ 49 ಮತ್ತು 50ನೇ ರಾಜ್ಯಗಳಾಗಿ ಅಲಾಸ್ಕ ಮತ್ತು ಹವಾಯಿ ಸೇರಿಕೊಳ್ಳುವುದರೊಂದಿಗೆ ಅಮೆರಿಕ ಪಶ್ಚಿಮಾಭಿಮುಖವಾಗಿ ಹಿಗ್ಗಿಕೊಂಡಿತು. ಸದ್ಯ ಅಮೆರಿಕವೆಂಬ ಬೃಹತ್ ದೇಶದಲ್ಲಿ 50 ರಾಜ್ಯಗಳಿವೆ. ಅವುಗಳಲ್ಲಿ 20 ರಾಜ್ಯಗಳು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್-1ಬಿ ವೀಸಾ ಶುಲ್ಕ ಏರಿಕೆ ಮಾಡಿರುವ ಆದೇಶವನ್ನು ವಿರೋಧಿಸುತ್ತಿವೆ.

ಕ್ಯಾಲಿಫೋರ್ನಿಯ, ಅರಿಜೋನಾ, ಕೊಲೊರಾಡೊ, ಕನೆಕ್ಟಿಕಟ್, ಡೆಲವೇರ್, ಹವಾಯಿ, ಇಲಿನಾಯ್ಸ್, ಮೆರ್ರಿಲ್ಯಾಂಡ್, ಮಸಾಚ್ಯುಸೆಟ್ಸ್, ಮಿಚಿಗನ್, ಮಿನ್ನೆಸೋಟ, ನೆವಾಡಾ, ಉತ್ತರ ಕೆರೊಲಿನ, ನ್ಯೂಜೆರ್ಸಿ, ನ್ಯೂಯಾರ್ಕ್, ಒರೆಗಾನ್, ರೋಡ್ ಐಲೆಂಡ್, ವರ್ಮೊಂಟ್, ವಾಷಿಂಗ್ಟನ್ ಮತ್ತು ವಿಸ್ಕಾನ್ಸಿನ್ ರಾಜ್ಯಗಳು ದಾವೆ ಹೂಡಿವೆ.

ಶುಲ್ಕ ಏರಿಕೆಗೆ ಟ್ರಂಪ್ ಸಹಿ

ಎಚ್-1ಬಿ ವೀಸಾ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಏರಿಕೆ ಮಾಡುವ ಕಾರ್ಯನಿರ್ವಾಹಕ ಆದೇಶಕ್ಕೆ ಟ್ರಂಪ್ ಸೆ.19ರಂದು ಸಹಿ ಹಾಕಿದ್ದಾರೆ. 2024ರಲ್ಲಿ ಎಚ್-1ಬಿ

ವೀಸಾ ಪಡೆದ ವಿದೇಶಿ ಉದ್ಯೋಗಿಗಳಲ್ಲಿ ಭಾರತೀಯರ ಪಾಲೇ ಶೇ.71ರಷ್ಟು ದೊಡ್ಡದಿದೆ. ಚೀನಾ ಪ್ರತಿಭೆಗಳು ಶೇ.11.7ರ ಪಾಲಿನೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಇಂಜಿನಿಯರ್ಸ್, ಸಂಶೋಧಕರು, ವೈದ್ಯರು ಮತ್ತು ಉನ್ನತ ಶ್ರೇಣಿ ಬೋಧಕರು ಸೇರಿದಂತೆ ಹೆಚ್ಚು ಕೌಶಲಯುತ ವಿದೇಶಿ ವೃತ್ತಿನಿರತರನ್ನು ನೇಮಿಸಿಕೊಳ್ಳಲು ಅಮೆರಿಕದ ಕಂಪನಿಗಳಿಗೆ ಎಚ್-1ಬಿ ವೀಸಾ ಅನುವು ಮಾಡಿಕೊಡುತ್ತದೆ. ಈಗ ಶುಲ್ಕ 10 ಪಟ್ಟು ಏರಿಕೆ ಆಗಿರುವುದರಿಂದ ವಿದೇಶಿ ಪ್ರತಿಭೆಗಳು ಬರುವುದೇ ಕಡಿಮೆ ಆಗಿದ್ದು, ಆರೋಗ್ಯ, ರಕ್ಷಣೆ, ಶಿಕ್ಷಣ ಸೇರಿದಂತೆ ಅನೇಕ ಸರಕಾರಿ ಮತ್ತು ಖಾಸಗಿ ಕ್ಷೇತ್ರದ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಾರಂಭಿಸಿದೆ ಎಂದು ಉದ್ಯಮ ಕ್ಷೇತ್ರ ಕಳವಳ ವ್ಯಕ್ತಪಡಿಸುತ್ತಿದೆ.

ಬಕುಂಗ್ ಚಂಡಮಾರುತ ಆರ್ಭಟ

ಜಕಾರ್ತಾ: ಹಿಂದೂ ಮಹಾಸಾಗರದ ನೈರುತ್ಯ ಭಾಗದಲ್ಲಿ ಧ್ರುವ ಪ್ರದೇಶದ ಚಂಡಮಾರುತದ ಮೂಲ '91 ಎಸ್' ಸೃಷ್ಟಿಯಾಗಿದ್ದು, ಶುಕ್ರವಾರ ಬಳಿಕ ಬಕುಂಗ್ ಚಂಡಮಾರುತವಾಗಿ ಬದಲಾಗಿದೆ. ಇಂಡೋನೇಷ್ಯಾದಿಂದ ಪಶ್ಚಿಮಕ್ಕೆ ಚಲಿಸುತ್ತಿದ್ದು, ಕ್ರಮೇಣ ಬಲಗೊಳ್ಳುತ್ತಿದೆ ಎಂದು ಇಂಡೋನೇಷ್ಯಾದ ಹವಾಮಾನ ಇಲಾಖೆ 'ಬಿಎಂಕೆಜಿ' ಮುನ್ಸೂಚನೆ ವರದಿ ಪ್ರಕಟಿಸಿದೆ.

ಚಂಡಮಾರುತದ ಕೇಂದ್ರಭಾಗದಲ್ಲಿ 1 ಸಾವಿರ ಎಚ್‌ಪಿಎಯಷ್ಟು ಒತ್ತಡ ಸೃಷ್ಟಿಯಾಗಿದೆ. ಗಂಟೆಗೆ 65 ಕಿ.ಮೀ. ವೇಗದಲ್ಲಿ ಚಲಿಸಲಾರಂಭಿಸಿ ಇಂಡೋನೇಷ್ಯಾದಿಂದ ದೂರ ಸರಿಯುತ್ತಿದೆ. ಹಿಂದೂ ಮಹಾಸಾಗರದ ನೈರುತ್ಯ ದಿಕ್ಕಿನಲ್ಲಿ ವೇಗವಾಗಿ ಸಾಗುತ್ತಿದೆ. ಪರಿಣಾಮ ದಕ್ಷಿಣ ಭಾರತದ ರಾಜ್ಯಗಳಲ್ಲಿ ಥಂಡಿ ಹವಾಮಾನ ಸೃಷ್ಟಿಯಾಗಿದ್ದು, ಚಳಿ ಪ್ರಮಾಣದಲ್ಲಿ ತೀವ್ರ ಹೆಚ್ಚಳವಾಗಿದೆ.

ಬಕುಂಗ್ ಚಂಡಮಾರುತ ದೂರವಾಗಿ ಚಲಿಸುತ್ತಿದ್ದರೂ, ಮುಂದಿನ ಒಂದೆರಡು ದಿನ ಇಂಡೋನೇಷ್ಯಾದಲ್ಲಿನ ಹವಾಮಾನ ಪರಿಸ್ಥಿತಿ ಮತ್ತು ಕರಾವಳಿ ಪ್ರದೇಶದ ಮೇಲೆ ಪರಿಣಾಮ ಬೀರಬಹುದಾಗಿದೆ. ಬಕುಂಗ್ ಚಂಡಮಾರುತದ ಗರಿಷ್ಠ ವೇಗ ಗಂಟೆಗೆ 100 ಕಿ.ಮೀ.ಗೆ ಹೆಚ್ಚಬಹುದಾಗಿದೆ ಎಂದು ದ್ವೀಪ ರಾಷ್ಟ್ರದ ಹವಾಮಾನ ಇಲಾಖೆ ತಿಳಿಸಿದೆ.

ಬಕುಂಗ್ ಚಂಡಮಾರುತ ದೂರವಿದ್ದರೂ ಕರ್ನಾಟಕ, ಆಂಧ್ರ, ತಮಿಳುನಾಡಿನ ಮೇಲೆ ಪ್ರಭಾವ ಬೀರಲಿದೆ. ಗಂಟೆಗೆ 12 ಕಿ.ಮೀ. ವೇಗದಲ್ಲಿ ಶೀತಗಾಳಿ ಬೀಸಲಿದೆ. ಚಂಡಮಾರುತದ ಪರಿಣಾಮ ಆಂಧ್ರಪ್ರದೇಶದ ಕರಾವಳಿಯಲ್ಲಿ ಶನಿವಾರ ಭಾರೀ ಅಲೆಗಳು ದಂಡೆಗೆ ಅಪ್ಪಳಿಸಿವೆ.

- ಇಂಡೋನೇಷ್ಯಾದಿಂದ ಭಾರತದತ್ತ ಚಂಡಮಾರುತ ಚಲನೆ
- ನೈರುತ್ಯ ದಿಕ್ಕಿನಲ್ಲಿ ಗಂಟೆಗೆ 65 ಕಿ.ಮೀ. ವೇಗದಲ್ಲಿ ಸಂಚಾರ



ಬಕುಂಗ್ ಚಂಡಮಾರುತ ಇಂಡೋನೇಷ್ಯಾದಿಂದ ಭಾರತದತ್ತ ಚಲನೆ.

ದಕ್ಷಿಣ ತಮಿಳುನಾಡಲ್ಲಿ ಮಳೆ ಸಾಧ್ಯತೆ: ವರದಿ

ಬಕುಂಗ್ ಚಂಡಮಾರುತ ಶನಿವಾರ ಬಂಗಾಳಕೊಲ್ಲಿಯ ಆಗ್ನೇಯ ಭಾಗದಲ್ಲಿ ಕೇಂದ್ರೀಕೃತವಾಗಿದ್ದು, ಪಶ್ಚಿಮದತ್ತ ಚಲಿಸುತ್ತಿದೆ. ಪೋರ್ಟ್ ಬ್ಲೇರ್‌ನಿಂದ 460 ಕಿಮೀ ಪಶ್ಚಿಮ-ನೈರುತ್ಯ, ಚೆನ್ನೈನಿಂದ 950 ಕಿಮೀ ಪೂರ್ವ-ಆಗ್ನೇಯ ಮತ್ತು ಕಾಕಿನಾಡದಿಂದ 970 ಕಿಮೀ ಆಗ್ನೇಯದಲ್ಲಿತ್ತು. ದಕ್ಷಿಣ ತಮಿಳುನಾಡು ಮತ್ತು ಡೆಲ್ಟಾ ಜಿಲ್ಲೆಗಳಲ್ಲಿ ಸಾಧಾರಣ ಮಳೆ ಸಾಧ್ಯತೆಯಿದೆ. ದಕ್ಷಿಣ ತಮಿಳುನಾಡಿನ ಕರಾವಳಿ ಪ್ರದೇಶ, ಮನ್ನಾರ್ ಕೊಲ್ಲಿ ಮತ್ತು ಕುಮಾರಿಕಡಲ್ ಪ್ರದೇಶಗಳಲ್ಲಿ ಗಾಳಿ ಗಂಟೆಗೆ ಗರಿಷ್ಠ 55 ಕಿ.ಮೀ. ವೇಗ ತಲುಪುವ ನಿರೀಕ್ಷೆಯಿದೆ. ಮೀನುಗಾರರು ಈ ಭಾಗಕ್ಕೆ ತೆರಳಬಾರದೆಂದು ಹವಾಮಾನ ಇಲಾಖೆ ತಿಳಿಸಿದೆ.

ಜೆಡಿಯು-ಆರ್‌ಜೆಡಿ ನಾಯಕರ ವಾಕ್‌ಸಮರ

ಆರ್‌ಜೆಡಿ 18 ಶಾಸಕರು ಎನ್‌ಡಿಎಗೆ?

ಪಟನಾ: ತಿಂಗಳ ಹಿಂದಷ್ಟೇ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ-ಜೆಡಿಯು ಪಕ್ಷಗಳ ಜಂಟಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 202 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಿದೆ. ಪರಿಣಾಮ ರಾಜ್ಯದ ರಾಜಕೀಯ ಚಿತ್ರಣವೇ ಬದಲಾಗಿದೆ. ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಪಕ್ಷದೊಳಗೆ ಸೋದರ-ಸೋದರಿ ಕದನದ ಜತೆಗೇ ಪಕ್ಷದಲ್ಲಿ ಆಂತರಿಕ ಕಲಹ ನಡೆದಿದೆ. ಇದೆಲ್ಲದರಿಂದ ಬೇಸರಗೊಂಡಿರುವ ಆರ್‌ಜೆಡಿ ಶಾಸಕರಲ್ಲಿ ಕೆಲವರು 'ಎನ್‌ಡಿಎ' ಮೈತ್ರಿಕೂಟದತ್ತ ಮುಖಮಾಡಿದ್ದಾರೆ ಎನ್ನಲಾಗಿದೆ.

ಲಾಲು ಯಾದವ್ ಅವರ ಕುಟುಂಬದಲ್ಲಿ ಸದಸ್ಯರ ಮಧ್ಯೆಯೇ ಜೋರು ಕಲಹ ನಡೆಯುತ್ತಿದೆ. ಆರ್‌ಜೆಡಿ ಪಕ್ಷದೊಳಗೂ ಆಂತರಿಕ ಸಂಘರ್ಷ ಶುರುವಾಗಿದೆ. ಆರ್‌ಜೆಡಿ ನಾಯಕ ಮತ್ತು ಲಾಲು ಯಾದವ್ ಅವರ ಮಿತ್ರ ಶಿವಾನಂದ್ ತಿವಾರಿ, ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರ ನಾಯಕತ್ವವನ್ನೇ ಪ್ರಶ್ನೆ ಮಾಡಿದ್ದಾರೆ. ಪಕ್ಷದ ಹೀನಾಯ ಸೋಲಿನ ನಂತರ ತೇಜಸ್ವಿ ಯಾದವ್ ಕ್ಷೇತ್ರವನ್ನೇ ತೊರೆದಿದ್ದಾರೆ ಎಂದು ಹೇಳಿರುವುದಾಗಿ ಬಿಜೆಪಿ ನಾಯಕ ಮತ್ತು ಬಿಹಾರ ಆರೋಗ್ಯ ಸಚಿವ ಮಂಗಲ್ ಪಾಂಡೆ ಸುದ್ದಿಗಾರರ ಬಳಿ ಹೇಳಿಕೊಂಡಿದ್ದಾರೆ.

ಆರ್‌ಜೆಡಿ ಸೇರಿದಂತೆ ಮಹಾಘಟಬಂಧನ್ ಪಾಲುದಾರ ಪಕ್ಷಗಳ 17-18 ಶಾಸಕರು ನಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ. ಆದರೆ, ಬಂಡಾಯವೇಳಲು ಸಜ್ಜಾಗಿರುವ 17-18 ಶಾಸಕರಿಗೆ ಸ್ವಲ್ಪ ಸಮಯ ತಾಳ್ಮೆಯಿಂದಿರಲು ಹೇಳಲಾಗಿದೆ ಎಂದು ಸಂಯುಕ್ತ ಜನತಾ ದಳ(ಜೆಡಿಯು) ವಿಧಾನ ಪರಿಷತ್ ಸದಸ್ಯ ಮತ್ತು ವಕ್ತಾರ ನೀರಜ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ನೀರಜ್ ಕುಮಾರ್ ಅವರ ಹೇಳಿಕೆಗೆ ಮಹಾಘಟಬಂಧನ್ ಪಕ್ಷಗಳು ತೀವ್ರವಾಗಿ ಪ್ರತಿಕ್ರಿಯಿಸಿವೆ. ನೀರಜ್‌ಕುಮಾರ್ ಹೇಳಿಕೆ ಆಧಾರರಹಿತ, ಕಟ್ಟುಕಥೆ. ಅಧಿಕಾರಕ್ಕಾಗಿ ಎನ್‌ಡಿಎಯ ಆಂತರಿಕ ಹೋರಾಟ ನಡೆದಿರುವುದನ್ನು ಮರೆಮಾಡಲು ಇಂಥ ವದಂತಿ ಹರಡುತ್ತಿದ್ದಾರೆ ಎಂದು ಆರ್‌ಜೆಡಿ ವಕ್ತಾರ ಚಿತ್ತರಂಜನ್ ಗಗನ್ ಟೀಕಿಸಿದ್ದಾರೆ.

ಸಂಸತ್ ದಾಳಿ: ಹುತಾತ್ಮರಿಗೆ ನಮನ

ದೆಹಲಿ: ಸಂಸತ್ ಭವನ ಮೇಲೆ ಪಾಕ್ ಮೂಲದ ಭಯೋತ್ಪಾದಕರು ದಾಳಿ ನಡೆಸಿ 24 ವರ್ಷಗಳೇ ಕಳೆದಿವೆ. ಹಳೆಯ ಸಂಸತ್ ಭವನದ 'ಸಂವಿಧಾನ್ ಸದನ'ದ ಆವರಣದಲ್ಲಿ ಪ್ರತಿ ವರ್ಷದ ಡಿ.13ರಂದು ಹುತಾತ್ಮರಿಗೆ ಗೌರವ ನಮನ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ.

2001ರ ಡಿ.13ರಂದು ದೆಹಲಿಯಲ್ಲಿ ಹಳೆಯ ಸಂಸತ್ ಭವನದ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಭದ್ರತಾ ಸಿಬ್ಬಂದಿಗಳಿಗೆ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಗೌರವ ನಮನ ಸಲ್ಲಿಸಲಾಯಿತು.

ಕೇಂದ್ರ ಸಚಿವರಾದ ಕಿರಣ್ ರಿಜಿಜು, ಜಿತೇಂದ್ರ ಸಿಂಗ್ ಮತ್ತು ಅರ್ಜುನ್ ರಾಮ್ ಮೇಘವಾಲ್, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಸೋದರಿ-ಪಕ್ಷದ ಸಂಸದೆ ಪ್ರಿಯಾಂಕಾ ವಾದ್ರಾ ಹುತಾತ್ಮ ಭದ್ರತಾ ಸಿಬ್ಬಂದಿಗಳ ಛಾಯಾಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದ ಪ್ರಮುಖರು. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಮಾಜಿ ಕೇಂದ್ರ ಸಚಿವ ಶಿವರಾಜ್ ಪಾಟೀಲ್ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದಾರೆ.

ಸಿಐಎಸ್‌ಎಫ್ ಸಿಬ್ಬಂದಿ ಗೌರವ ವಂದನೆ ಸಲ್ಲಿಸಿದರು, ನಂತರ ಕೆಲ ಕ್ಷಣ ಮೌನ ಶ್ರದ್ಧಾಂಜಲಿ ನಡೆಯಿತು. 2023ರವರೆಗೂ ಸಿಆರ್‌ಪಿಎಫ್ 'ಸಲಾಮಿ ಶಾಸ್ತ್ರ' ಗೌರವ ಸಲ್ಲಿಸುತ್ತಿತ್ತು.

ಒಟ್ಟು 6 ಪಾಲಿಕೆ: 4 ಯುಡಿಎಫ್ ವಶ, ಎಲ್‌ಡಿಎಫ್, ಬಿಜೆಪಿಗೆ ತಲಾ 1

ಬದಲಾವಣೆ ಬಯಸಿದ ಕೇರಳ: ಯುಡಿಎಫ್ ಜಯಭೇರಿ

ತಿರುವನಂತಪುರಂ: ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿದ್ದು, ಕೇರಳದ ಮತದಾರರು 'ನಾವು ಬದಲಾವಣೆ ಬಯಸಿದ್ದೇವೆ' ಎಂಬುದನ್ನು ಮತದಾನದ ಮೂಲಕ ಸ್ಪಷ್ಟವಾಗಿ ಹೇಳಿದ್ದಾರೆ. ಈ ಫಲಿತಾಂಶವನ್ನು ಕಾಂಗ್ರೆಸ್ ನೇತೃತ್ವದ 'ಯುಡಿಎಫ್' ಮತ್ತು ಬಿಜೆಪಿ ನೇತೃತ್ವದ 'ಎನ್‌ಡಿಎ' ಮೈತ್ರಿಕೂಟಗಳು ಬಲು ದೊಡ್ಡದಾಗಿ ಸಂಭ್ರಮಿಸುತ್ತಿವೆ,

ಕೇರಳದ ಮತದಾರರು ಬದಲಾವಣೆ ಬಯಸಿರುವ ನಿರ್ಧಾರದ ಕಾರಣ ಆಡಳಿತಾರೂಢ ಪಕ್ಷವಾದ 'ಲೆಫ್ಟ್ ಡೆಮಾಕ್ರೆಟಿಕ್ ಫ್ರಂಟ್'(ಎಲ್‌ಡಿಎಫ್) ಬಹಳಷ್ಟು ಕಡೆ ಸೋಲು ಅನುಭವಿಸಿದ್ದರೆ, ರಾಜ್ಯ ವಿಧಾನಸಭೆಯಲ್ಲಿ ಪ್ರತಿಪಕ್ಷವಾಗಿರುವ 'ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್'(ಯುಡಿಎಫ್) ಹೆಚ್ಚಿನ ಪಾಲಿಕೆ, ಪುರಸಭೆ, ಬ್ಲಾಕ್ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಲ್ಲಿ ಗೆಲುವು ಸಾಧಿಸಿದೆ. ಅಚ್ಚರಿ ಎಂಬಂತೆ ಇದೇ ಮೊದಲ ಬಾರಿಗೆ ಕೇರಳದ ರಾಜಕಾರಣದಲ್ಲಿ ಕೇಸರಿ ಧ್ವಜ ಗಮನ ಸೆಳೆಯುವಂತೆ ಹಾರಾಡಿರುವುದನ್ನು ಈ ಚುನಾವಣೆಯಲ್ಲಿ ಫಲಿತಾಂಶ ತೋರಿಸಿಕೊಟ್ಟಿದೆ. ಮುಖ್ಯವಾಗಿ ರಾಜಧಾನಿ ನಗರ ತಿರುವನಂತಪುರಂನ ಮಹಾನಗರ ಪಾಲಿಕೆಯಲ್ಲಿ 'ಎಲ್‌ಡಿಎಫ್'ನ ಆಡಳಿತ ಕೊನೆಗೊಂಡಿದೆ. ರಾಜಧಾನಿ ನಗರದ ಜನತೆ ಕೇಸರಿ ಪಕ್ಷಕ್ಕೆ ಮತ ಚಲಾಯಿಸಿ ಬದಲಾಗುತ್ತಿರುವ ಕೇರಳ ರಾಜಕಾರಣದ ಬಗ್ಗೆ ಸ್ಪಷ್ಟ ಸೂಚನೆ ಕೊಟ್ಟಿದ್ದಾರೆ.

ತನ್ನ ಸಾಂಪ್ರದಾಯಿಕ ಮತ ಬ್ಯಾಂಕ್‌ಗಳಿರುವ ಕ್ಷೇತ್ರಗಳಲ್ಲೇ 'ಎಲ್‌ಡಿಎಫ್' ಸೋಲುಂಡಿರುವುದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆದಿಯಾಗಿ ಕಮ್ಯುನಿಸ್ಟ್ ನಾಯಕರುಗಳಿಗೆಲ್ಲಾ ಆಘಾತ ಉಂಟು ಮಾಡಿದೆ. ಸ್ಥಳೀಯ ಸಂಸ್ಥೆಗಳ ಈಗಿನ ಚುನಾವಣೆಯನ್ನೇ 2026ರ ವಿಧಾನಸಭೆ ಚುನಾವಣೆಗೆ 'ಸೆಮಿಫೈನಲ್' ಎಂದೇ ವಿಶ್ಲೇಷಣೆ ಮಾಡಲಾಗುತ್ತಿದೆ. ಈಗಿನ ಫಲಿತಾಂಶವನ್ನೇ ಮುಂಬರುವ ಚುನಾವಣೆಗೆ ಸ್ಪಷ್ಟ ದಿಕ್ಸೂಚಿ ಎಂದೂ ಹೇಳಲಾಗುತ್ತಿದೆ.

ಯುಡಿಎಫ್‌ಗೆ ದೊಡ್ಡ ಪಾಲು

ರಾಜ್ಯದ 86 ಮುನಿಸಿಪಾಲಿಟಿಗಳಲ್ಲಿ 54 ಮುನಿಸಿಪಾಲಿಟಿಗಳು 'ಯುಡಿಎಫ್' ಒಕ್ಕೂಟದ ವಶವಾಗಿವೆ. ಎರ್ನಾಕುಲಂ, ಅಳಪ್ಪುಳ, ಮಲಪ್ಪುರಂ, ಕೊಟ್ಟಾಯಂ ಜಿಲ್ಲೆಗಳಲ್ಲಿ ಯುಡಿಎಫ್ ಸ್ಪಷ್ಟ ಗೆಲುವು ದಾಖಲಿಸಿದೆ. ಪಾಲಕ್ಕಾಡ್ ಜಿಲ್ಲೆಯಲ್ಲಿ ಭಾಗಶಃ ಜಯ ಸಿಕ್ಕಿದೆ. ಪತ್ತನಂತಿಟ್ಟ ಮತ್ತು ಇಡುಕ್ಕಿ ಈ ಬಾರಿ ಯುಡಿಎಫ್ ವಶವಾಗಿವೆ. 'ಎಲ್‌ಡಿಎಫ್'ಗೆ ತಿರುವನಂತಪುರಂ, ಕೊಲ್ಲಂ, ಕೋಯಿಕ್ಕೋಟ್, ಕಣ್ಣೂರು ಜಿಲ್ಲೆಗಳ ಮುನಿಸಿಪಾಲಿಟಿಯಲ್ಲಷ್ಟೇ ಗೆಲ್ಲಲು ಸಾಧ್ಯವಾಗಿದೆ. 14 ಜಿಲ್ಲಾ ಪಂಚಾಯತ್‌ಗಳಲ್ಲಿ ಯುಡಿಎಫ್‌ಗೆ 8, ಎಲ್‌ಡಿಎಫ್‌ಗೆ 6ರಲ್ಲಿ ಗೆಲುವಾಗಿದೆ. 941 ಗ್ರಾಮ ಪಂಚಾಯತ್‌ಗಳಲ್ಲಿ ಯುಡಿಎಫ್ 492 ಗ್ರಾಪಂಗಳಲ್ಲಿ ಗೆದ್ದಿದ್ದರೆ, ಎಲ್‌ಡಿಎಫ್ 347ರಲ್ಲಿ, ಬಿಜೆಪಿ 25 ಗ್ರಾಮ ಪಂಚಾಯತ್‌ಗಳಲ್ಲಿ ಗೆಲುವು ಸಾಧಿಸಿದೆ. 64 ಗ್ರಾಪಂಗಳಲ್ಲಿ ಸಮಾನ ಫಲಿತಾಂಶ ಬಂದಿದೆ.

ಹರ್ಷದಲ್ಲಿ ತೇಲಿದ ಬಿಜೆಪಿ

ದಕ್ಷಿಣದ ರಾಜ್ಯದ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಕೇರಳದ ಜನತೆ ದೊಡ್ಡ ಮಟ್ಟದ ಬದಲಾವಣೆ ಮಾಡಿದ್ದಾರೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಎಂದು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್' ಸಂದೇಶ ರವಾನಿಸಿದ್ದಾರೆ. ಕೇರಳ ರಾಜ್ಯದಲ್ಲಿ ಬಿಜೆಪಿ ಬೇರು ಬಿಟ್ಟು ಬೆಳವಣಿಗೆ ಕಾಣುತ್ತಿದೆ ಎಂಬುದು ಈ ಫಲಿತಾಂಶದ ದ್ಯೋತವಾಗಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಪ್ರತಿಕ್ರಿಯಿಸಿದ್ದಾರೆ. ಬದಲಾವಣೆ ಬಯಸಿದ ಕೇರಳ ಮತದಾರರಿಗೆ ಧನ್ಯವಾದ ಎಂದೂ ಹೇಳಿದ್ದಾರೆ. 'ವಿಕಸಿತ ಕೇರಳಂ' ಬಿಜೆಪಿ ಘೋಷವಾಕ್ಯವಾಗಿತ್ತು. ಅದನ್ನು ಜನತೆ ಅನುಮೋದಿಸಿದ್ದಾರೆ ಎಂದು ಕೇರಳ ಬಿಜೆಪಿ ನಾಯಕ ಸುರೇಂದ್ರನ್ ಹರ್ಷ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಸಂತಸ

ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಇಷ್ಟು ದೊಡ್ಡ ಮಟ್ಟದ ಗೆಲುವು ಕೊಟ್ಟಿರುವುದಕ್ಕೆ ಕೇರಳ ಜನತೆ ತುಂಬು ಹೃದಯದ ಧನ್ಯವಾದ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿಯೂ ಇದೇ ಬದಲಾವಣೆ ಕಾಣಬರಲಿದೆ ಎಂದು ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತಾಲ ಸಂತಸ ಹಂಚಿಕೊಂಡಿದ್ದಾರೆ.

ತಿರುವನಂತಪುರಂದಲ್ಲಿ ಬಿಜೆಪಿಗೆ ಸ್ವಾಗತ

ಸದ್ಯ ಕೇರಳದ 6 ಕಾರ್ಪೊರೇಷನ್‌ಗಳು, 14 ಜಿಲ್ಲಾ ಪಂಚಾಯತ್‌ಗಳು,ಮ 86 ಮುನ್ಸಿಪಾಲಿಟಿ ಗಳು, 152 ಬ್ಲಾಕ್ ಪಂಚಾಯತ್‌ಗಳು ಮತ್ತು 941 ಗ್ರಾಮ ಪಂಚಾಯತ್‌ಗಳಿಗೆ ಡಿ.9 ಮತ್ತು 11 ರಂದು 2 ಹಂತಗಳಲ್ಲಿ ಚುನಾವಣೆ ನಡೆದು ಶನಿವಾರ ಫಲಿತಾಂಶ ಪ್ರಕಟವಾಗಿದೆ. 4 ಕಾರ್ಪೊರೇಷನ್‌ಗಳಲ್ಲಿ ಯುಡಿಎಫ್ ಗೆಲುವು ಕಂಡಿದೆ. ಕೊಲ್ಲಂ, ಕೊಚ್ಚಿ, ತ್ರಿಶೂರು ಮತ್ತು ಕಣ್ಣೂರಿನಲ್ಲಿ 'ಯುಡಿಎಫ್'ಗೆ ಬಹುಮತ ಪ್ರಾಪ್ತವಾಗಿದೆ. ಆ ಮೂಲಕ ಎಲ್‌ಡಿಎಫ್ ಹಿಡಿತದಲ್ಲಿದ್ದ ಕೆಲವು ಪಾಲಿಕೆಗಳನ್ನು ಯುಡಿ ಎಫ್ ಕಿತ್ತುಕೊಂಡಿದೆ. ಕೋಯಿಕ್ಕೋಡ್ ಕಾರ್ಪೊರೇಷನ್ ಮಾತ್ರವೇ 'ಎಲ್‌ಡಿಎಫ್' ಪಕ್ಷದಲ್ಲಿ ಉಳಿದುಕೊಂಡಿದೆ. ಪ್ರಮುಖ ಪಾಲಿಕೆಯಾಗಿದ್ದ ತಿರುವನಂತರಪುರಂ ಬಿಜೆಪಿಗೆ ಸ್ವಾಗತಕೋರಿದೆ. 101 ವಾರ್ಡ್‌ಗಳ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ 50 ವಾರ್ಡ್‌ಗಳಲ್ಲಿ ಜಯ ದಾಖ ಲಿಸಿದೆ. ಕೊರತೆಯಾಗಿರುವ ಒಂದು ಸ್ಥಾನಕ್ಕಾಗಿ ಗೆದ್ದಿರುವ ಸ್ವತಂತ್ರ ಅಭ್ಯರ್ಥಿಗಳ ಜತೆ ಮಾತುಕತೆ ನಡೆಸುತ್ತಿದೆ.

ಸಮಾಚಾರ ಸಣ್ಣದಲ್ಲ

ಮನರೇಗಾ ಯೋಜನೆ: ಮರುನಾಮಕರಣ

ದೆಹಲಿ: ಕೋಟ್ಯಂತರ ಭಾರತೀಯರ ಪಾಲಿಗೆ ಆಶಾಕಿರಣವಾಗಿರುವ 2005ರಲ್ಲಿ ಯುಪಿಎ ಸರಕಾರ ಜಾರಿಗೆ ತಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ ಹೆಸರು ಬದಲಾಯಿಸಲಾಗಿದೆ. ಈ ಯೋಜನೆಯ ಹೆಸರನ್ನು ಇದೀಗ ಪೂಜ್ಯ ಬಾಪು ಗ್ರಾಮೀಣ ರೋಜ್‌ಗಾರ್ ಯೋಜನೆ ಎಂದು ಬದಲಾಯಿಸ ಲಾಗಿದೆ. ಡಿಸೆಂಬರ್ 12ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಮರುನಾಮಕರಣಕ್ಕೆ ಒಪ್ಪಿಗೆ ನೀಡಲಾಯಿತು, ಜತೆಗೆ ಉದ್ಯೋಗ ನಿಯಮಗಳಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ. ಈ ಯೋಜನೆಯಡಿ ಒದಗಿಸುವ ಕೆಲಸದ ದಿನಗಳ ಸಂಖ್ಯೆಯನ್ನು 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ. ಈ ನಿರ್ಧಾರವು ಗ್ರಾಮೀಣ ಕಾರ್ಮಿಕರ ಜೀವನೋಪಾಯದ ಭದ್ರತೆಯನ್ನು ಗಣನೀಯವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ಕಾರ್ಮಿಕರಿಗೆ ದೊರೆಯುವ ಕನಿಷ್ಠ ವೇತನವನ್ನು 240 ರು.ಗೆ ಹೆಚ್ಚಿಸಲಾಗಿದೆ. ಅದು ಬಿಟ್ಟು ಯೋಜನೆ ಮೊದಲಿನಂತೆಯೇ ಕಾರ್ಯನಿರ್ವಹಿಸಲಿದೆ ಎಂದು ಸರಕಾರದ ಮೂಲಗಳು ತಿಳಿಸಿವೆ. ಈ ಯೋಜನೆಯಡಿ ರಸ್ತೆ ನಿರ್ಮಾಣ, ಕೃಷಿ ಚಟುವಟಿಕೆ, ಜಲ ಸಂರಕ್ಷಣಾ ಚಟುವಟಿಕೆ, ಕೆರೆ ಅಗೆತ, ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದ ಶ್ರಮದಾಯಕ ಕೆಲಸಗಳಿಗೆ ಅವಕಾಶವಿದೆ. ಫಲಾನುಭವಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ.

ನಿವೃತ್ತ ವಾಯುಪಡೆ ಅಧಿಕಾರಿಯ ಬಂಧನ

ಇಟಾನಗರ: ಪಾಕಿಸ್ತಾನಕ್ಕೆ ಗೂಢಚಾರಿಕೆ ಮಾಡಿರುವ ಆರೋಪದ ಮೇಲೆ ಭಾರತೀಯ ವಾಯುಸೇನಾ ನಿವೃತ್ತ ಅಧಿಕಾರಿಯನ್ನು ಅಸ್ಸಾಂ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ತೇಜ್ಪುರದ ಪಾಟಿಯಾ ಪ್ರದೇಶದ ನಿವಾಸಿ ಕುಲೇಂದ್ರ ಶರ್ಮಾ ಎಂದು ಗುರುತಿಸಲಾಗಿದೆ. ಶರ್ಮಾನ ಚಲನವಲನಗಳನ್ನು ನಿರಂತರವಾಗಿ ಪೊಲೀಸರು ಗಮನಿಸುತ್ತಿದ್ದರು. ಪ್ರಾಥಮಿಕ ತನಿಖೆಯ ನಂತರ ಆತನನ್ನು ಬಂಧಿಸಲಾಗಿದೆ ಪೊಲೀಸ್ ಮೂಲಗಳ ಪ್ರಕಾರ, ಬಂಧಿತ ವ್ಯಕ್ತಿಯ ಮೇಲೆ ಕೆಲವು ದಿನಗಳಿಂದ ನಿಗಾ ಇರಿಸಲಾಗಿತ್ತು. ಆತ ಪಾಕಿಸ್ತಾನಿ ಬೇಹುಗಾರಿಕಾ ಸಂಸ್ಥೆಗೆ ಸಂಬಂಧಿಸಿದ ವ್ಯಕ್ತಿಗಳ ಜತೆ ಸಂಪರ್ಕದಲ್ಲಿದ್ದು, ಅವರಿಗೆ ಸೂಕ್ಷ್ಮ ಮಾಹಿತಿಯನ್ನು ಪೂರೈಸುತ್ತಿದ್ದಾನೆ ಎಂದು ಆರೋಪಿಸಲಾಗಿದೆ. ಆತನ ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್‌ನಿಂದ ಅನುಮಾನಾಸ್ಪದ ಡೇಟಾಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ ಕೆಲವು ಡೇಟಾವನ್ನು ಅಳಿಸಲಾಗಿದೆ ಎಂದು ಶಂಕಿಸಲಾಗುತ್ತಿದೆ. ಶರ್ಮಾಗೆ ಪಾಕಿಸ್ತಾನದವರ ಜತೆ ಸಂಪರ್ಕವಿದೆ ಎಂಬ ಅನುಮಾನ ಪ್ರಬಲವಾಗಿದ್ದರೂ, ತನಿಖೆ ಪೂರ್ಣಗೊಳ್ಳುವವರೆಗೆ ಅದನ್ನು ದೃಢಪಡಿಸಲಾಗುವುದಿಲ್ಲ ಎಂದು ಪೊಲೀಸ್ ಅಧಿಕಾರಿ ಹರಿಚರಣ್ ಭೂಮಿಜ್ ಹೇಳಿದರು.

ಗೋಯಲ್ ಮುಖ್ಯ ಮಾಹಿತಿ ಆಯುಕ್ತ

ದೆಹಲಿ: ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರನ್ನಾಗಿ (ಸಿಐಸಿ) ಮಾಜಿ ಕಾನೂನು ಕಾರ್ಯದರ್ಶಿ ರಾಜ್‌ಕುಮಾರ್

ಗೋಯಲ್ ಅವರನ್ನು ನೇಮಕ ಮಾಡಲಾಗಿದೆ, ಇವರೊಂದಿಗೆ ಆಯುಕ್ತರನ್ನೂ ನೇಮಿಸಲಾಗಿದೆ. ಸೆಪ್ಟೆಂಬರ್‌ನಲ್ಲಿ ನಿವೃತ್ತರಾದ ಹೀರಾಲಾಲ್ ಸಮಾರಿಯಾ ಅವರ ಬಳಿಕ ಆಯೋಗಕ್ಕೆ ಮುಖ್ಯ ಮಾಹಿತಿ ಆಯುಕ್ತರೇ ಇಲ್ಲದಂತಾಗಿತ್ತು. ಈ ವರೆಗೆ ಆಯೋಗದಲ್ಲಿ ಇಬ್ಬರೇ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದರು. ಸೋಮವಾರ ಬೆಳಗ್ಗೆ 11 ಗಂಟೆಗೆ ಗೋಯಲ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಬೋಧಿಸಲಿದ್ದಾರೆ, ಬಳಿಕ ಗೋಯಲ್ ಅವರು 8 ಆಯುಕ್ತರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಪ್ರಧಾನಿ ಮೋದಿ ಅವರ ನೇತೃತ್ವದ ಆಯ್ಕೆ ಸಮಿತಿಯು ಖಾಲಿ ಇದ್ದ ಹುದ್ದೆಗಳಿಗೆ ನೇಮಕಾತಿ ಮಾಡಿದೆ. ಸಮಿತಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇದ್ದರು. 'ಆಯುಕ್ತರ ಆಯ್ಕೆಯಲ್ಲಿ ಬಹುಜನ ಸಮಾಜಕ್ಕೆ ಮನ್ನಣೆ ನೀಡಲಾಗಿಲ್ಲ' ಎಂದು ರಾಹುಲ್ ತಮ್ಮ ಆಕ್ಷೇಪ ಮುಂದಿಟ್ಟಿದ್ದರು. ಆದರೆ ಈ ಆಕ್ಷೇಪವನ್ನು ಕೇಂದ್ರ ತಳ್ಳಿ ಹಾಕಿದೆ. ಹೀರಾಲಾಲ್ ಅವರು ದಲಿತ ಸಮುದಾಯಕ್ಕೆ ಸೇರಿದ ಮೊದಲ ಮುಖ್ಯ ಮಾಹಿತಿ ಆಯುಕ್ತರಾಗಿದ್ದರು.

ಪಾಕಿಸ್ತಾನ ವಿ.ವಿ: ಸಂಸ್ಕೃತ ಕಲಿಕೆ

ಲಾಹೋರ್: ಪಾಕಿಸ್ತಾನದ ಲಾಹೋರ್ ನಿರ್ವಹಣಾ ವಿಜ್ಞಾನ ವಿ.ವಿಯು (ಎಲ್‌ಯುಎಂಎಸ್) ಇದೇ ಮೊದಲ ಬಾರಿ ವಿದ್ಯಾರ್ಥಿಗಳಿಗೆ ಸಂಸ್ಕೃತ ಕೋರ್ಸ್ ಅನ್ನು ಆರಂಭಿಸಿದ್ದು, ಡಿಸೆಂಬರ್‌ನಿಂದಲೇ ತರಗತಿಗಳು ಆರಂಭವಾಗಿವೆ. ಆರಂಭದಲ್ಲಿ ವಾರಾಂತ್ಯದಲ್ಲಿ ಮಾತ್ರ ಸಂಸ್ಕೃತ ತರಗತಿಗಳನ್ನು ನಡೆಸಲಾಗುತ್ತಿತ್ತು. ವಿದ್ಯಾರ್ಥಿಗಳು, ಸಂಶೋಧಕರು, ವಕೀಲರು, ಶಿಕ್ಷಕರು ಸೇರಿದಂತೆ ಎಲ್ಲರಿಗೂ ಇದು ಮುಕ್ತವಾಗಿದೆ. ಈ ತರಗತಿಗಳಿಗೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾದ ಕಾರಣ ಇದನ್ನೇ ಕೋರ್ಸ್ ರೀತಿಯಲ್ಲಿ ಪರಿಚಯಿಸಲಾಗಿದೆ. 1947ರಲ್ಲಿ ದೇಶವಿಭಜನೆಯಾದ ಬಳಿಕ ಪಾಕಿಸ್ತಾನದ ಶಿಕ್ಷಣ ಸಂಸ್ಥೆಯೊಂದು ಸಂಸ್ಕೃತ ಕಲಿಕೆಯನ್ನು ಅಧಿಕೃತವಾಗಿ ಆರಂಭಿಸಿರುವುದು ಇದೇ ಮೊದಲ ಬಾರಿ ಎಂಬುದು ವಿಶೇಷವಾಗಿದೆ. 1947ರ ವಿಭಜನೆಯ ನಂತರ ಪಾಕಿಸ್ತಾನದಲ್ಲಿ ಔಪಚಾರಿಕವಾಗಿ ಸಂಸ್ಕೃತವನ್ನು ಕಲಿಸಲಾಗುತ್ತಿರುವುದು ಅಪರೂಪವಾಗಿದೆ. ದಕ್ಷಿಣ ಏಷ್ಯಾದ ಬೌದ್ಧಿಕ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ತೊಡಗಿಸಿಕೊಳ್ಳುವ ನವೀಕೃತ ಬದ್ಧತೆಯನ್ನು ಸೂಚಿಸುತ್ತದೆ ಎಂದು ವಿ.ವಿ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಭಾರತದಲ್ಲಿ 35 ಶತಕೋಟಿ ಡಾಲರ್ ಹೂಡಿಕೆಗೆ ಅಮೆಜಾನ್ ನಿರ್ಧಾರ | 2030ರೊಳಗೆ 38 ಲಕ್ಷ ಉದ್ಯೋಗ ಸೃಷ್ಟಿಸುವ ನಿರೀಕ್ಷೆ

ಅಮೆಜಾನ್ ಭಾರೀ ಹೂಡಿಕೆ

ದೆಹಲಿ: ಭಾರತದಲ್ಲಿ 2030ರ ವೇಳೆಗೆ 35 ಶತಕೋಟಿ ಡಾಲರ್‌ಗಳ (3.15 ಲಕ್ಷ ಕೋಟಿ ರುಪಾಯಿ) ಭಾರೀ ಹೂಡಿಕೆ ಮಾಡುವುದಾಗಿ ಇ-ಕಾಮರ್ಸ್ ದಿಗ್ಗಜ ಅಮೆಜಾನ್ ಕಂಪನಿಯ ಉಪಾಧ್ಯಕ್ಷ ಅಮಿತ್ ಅಗ್ರವಾಲ್ ತಿಳಿಸಿದ್ದಾರೆ.

'ಅಮೆಜಾನ್ ಸಂಭವ್-2025' ಸಮಾರಂಭದಲ್ಲಿ ಮಾತನಾಡಿದ ಅವರು

ಈ ವಿಷಯವನ್ನು ತಿಳಿಸಿದರು. ಅಮೆಜಾನ್ ತನ್ನ 10 ಮಿನಿಟ್ ಡೆಲಿವರಿ ವ್ಯವಸ್ಥೆಯನ್ನು ಬಲಪಡಿಸಲಿದೆ, ಇತರ ಬಿಸಿನೆಸ್‌ಗಳನ್ನು ಗಣನೀಯವಾಗಿ ಹೆಚ್ಚಿಸುವ ಉದ್ದೇಶವನ್ನೂ ಹೊಂದಿದೆ ಎಂದು ವಿವರಿಸಿದರು.

ಅಮೆಜಾನ್ 2010-24ರ ಅವಧಿಯಲ್ಲಿ ಭಾರತದಲ್ಲಿ ಅಮೆಜಾನ್ 40 ಶತಕೋಟಿ ಡಾಲರ್‌ಗೂ ಹೆಚ್ಚು ಹೂಡಿಕೆಯನ್ನು ಮಾಡಿದೆ. 2030ರೊಳಗೆ ಹೊಸ ಹೂಡಿಕೆಯನ್ನು 15 ಶತಕೋಟಿ ಡಾಲರ್‌ನಿಂದ 30 ಶತಕೋಟಿ ಡಾಲರ್‌ಗೆ ಹೆಚ್ಚಿಸಲು ಉದ್ದೇಶಿಸಿದೆ.

ಜೆಫ್ ಬಿಜೋಸ್ ಅವರು ಸ್ಥಾಪಿಸಿರುವ ಅಮೆಜಾನ್ ಎ.ಐ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತಿದ್ದು, ಅದರಿಂದ ಗ್ರಾಹಕರಿಗೂ ಅನುಕೂಲಕರವಾಗಿದೆ. ನಗರಗಳು ಮತ್ತು ಪಟ್ಟಣಗಳಲ್ಲಿ ಅಮೆಜಾನ್ ಸೇವೆ ವ್ಯಾಪಕವಾಗಿ ವಿಸ್ತರಿಸುತ್ತಿದೆ. ಅಮೆಜಾನ್ ತನ್ನ 35 ಶತಕೋಟಿ ಡಾಲರ್ ಹೂಡಿಕೆಯನ್ನು ಇ-ಕಾಮರ್ಸ್, ಎಡಬ್ಲ್ಯುಎಸ್, ಪ್ರೈಮ್ ವಿಡಿಯೊ, ಕಂಟೆಂಟ್ ಮತ್ತು ಹಣಕಾಸು ಸೇವಾ ವಿಭಾಗಗಳಲ್ಲಿ ಹೂಡಿಕೆ ಮಾಡಲಿದೆ ಎಂದು ಅಗ್ರವಾಲ್ ಹೇಳಿದರು. ಕಳೆದ ಒಂದು ವರ್ಷದಲ್ಲೇ ಐದು ವಿಧದ ಹೊಸ ಸೇವೆಗಳನ್ನು ಬಿಡುಗಡೆ ಮಾಡಿದ್ದೇವೆ. ಅಮೆಜಾನ್ ನೌ, ಅಮೆಜಾನ್ ಬಜಾರ್, ಹೆಲ್ತ್ ಕೇರ್, ಡಯಾಗ್ನಸ್ಟಿಕ್ಸ್, ವಿಡಿಯೊ ಕನ್ಸಲ್ಟೇಶನ್ಸ್ ಸೇವೆಗಳನ್ನು ಬಿಡುಗಡೆ ಮಾಡಿದ್ದೇವೆ, ಕಂಪನಿ ಈಗ 300 ಡಾರ್ಕ್ ಸ್ಟೋರ್‌ಗಳನ್ನೂ ಒಳಗೊಂಡಿದೆ ಎಂದರು.

38 ಲಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ

ಭಾರತದಲ್ಲಿ 1.2 ಕೋಟಿಗೂ ಹೆಚ್ಚು ಸಣ್ಣ ಉದ್ದಿಮೆಗಳನ್ನು ಅಮೆಜಾನ್ ಡಿಜಿಟಲೀಕರಣಗೊಳಿಸಿದೆ. 2,000 ಕೋಟಿ ಡಾಲರ್ ಮೌಲ್ಯದ ಇ-ಕಾಮರ್ಸ್ ರಫ್ತು ನಡೆಸಿದೆ. ಈ ಭಾರೀ ಹೂಡಿಕೆಯ ಪರಿಣಾಮವಾಗಿ 2030ರೊಳಗೆ ಅಮೆಜಾನ್ 38 ಲಕ್ಷ ನೇರ-ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ. ತಂತ್ರಜ್ಞಾನ, ಉತ್ಪಾದನೆ, ಪ್ಯಾಕೇಜಿಂಗ್, ಕಾರ್ಯಾಚರಣೆ, ಲಾಜಿಸ್ಟಿಕ್ಸ್, ಕಸ್ಟಮರ್ ಸಪೋರ್ಟ್, ಕ್ಲೌಡ್ ಸರ್ವೀಸ್, ವೇರ್‌ಹೌಸ್, ಲಾಸ್ಟ್ ಮೈಲ್ ಡೆಲಿವರಿ ಇತ್ಯಾದಿ ವಲಯಗಳಲ್ಲಿ ಉದ್ಯೋಗಗಳ ಸೃಷ್ಟಿ ಆಗಲಿದೆ. ಉದ್ಯೋಗಿಗಳಿಗೆ ಸ್ಪರ್ಧಾತ್ಮಕ ವೇತನ, ಹೆಲ್ತ್ ಬೆನಿಫಿಟ್‌ಗಳನ್ನು ಕಲ್ಪಿಸಲಾಗಿದೆ. ಆತ್ಮನಿರ್ಭರ ಭಾರತ ಮತ್ತು ವಿಕಸಿತ ಭಾರತಕ್ಕೆ ಅಮೆಜಾನ್ ಸಹಕರಿಸಲಿದೆ. ವಿದ್ಯಾರ್ಥಿಗಳು, ಉದ್ಯಮಿಗಳು, ವ್ಯಾಪಾರಸ್ಥರು ಮತ್ತು ಎಲ್ಲರಿಗೂ ಎ.ಐ ಪ್ರಯೋಜನಗಳನ್ನು ದಾಟಿಸುವುದು ಅಮೆಜಾನ್‌ನ ಮಹತ್ವದ ಯೋಜನೆಯಾಗಿದೆ. ಸರಕಾರಿ ಶಾಲೆಗಳ 40 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಎ.ಐ ತರಬೇತಿ, ಶಿಕ್ಷಣ ನೀಡಲಾಗುವುದು ಎಂದು ಅಮೆಜಾನ್ ಕಂಪನಿಯ ಉಪಾಧ್ಯಕ್ಷರು ತಿಳಿಸಿದ್ದಾರೆ.

ವೈದ್ಯರಿಗೆ ಸೇವಾ ಮನೋಭಾವ ಮುಖ್ಯ

ಬೆಂಗಳೂರು: ಮಾನವ ಧರ್ಮದ ಸೇವೆ ಮಾಡಬೇಕು ಎಂದವರು ಮಾತ್ರ ವೈದ್ಯ ವೃತ್ತಿ ಆಯ್ಕೆ ಮಾಡಿಕೊಳ್ಳುತ್ತಾರೆ. ಸೇವಾ ಮನೋಭಾವ ಇಲ್ಲದಿದ್ದವರು ವೈದ್ಯರಾಗಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ಬೆಂಗಳೂರು ಜಯನಗರದಲ್ಲಿರುವ ಯುನೈಟೆಡ್ ಆಸ್ಪತ್ರೆಯ ಒಂದು ಕೋಟಿ ರು. ವರೆಗಿನ ತುರ್ತು ಚಿಕಿತ್ಸೆ ಯೋಜನೆ ಉದ್ಘಾಟಿಸಿ ಮಾತನಾಡಿ, ನಿಸ್ವಾರ್ಥ ಮನೋಭಾವ ಇರಬೇಕು. ಈ ಕೆಲಸದಲ್ಲಿ ಸಾಕಷ್ಟು ಸವಾಲುಗಳು ಇರುತ್ತವೆ. ಇದನ್ನು ಮೀರಿ ನಡೆಯಬೇಕು. ಈಗ ತಂತ್ರಜ್ಞಾನವೂ ಮುಂದುವರಿದು ನಿಮ್ಮ ನೆರವಿಗಿದೆ, ಇದರಿಂದ ಸಾಕಷ್ಟು ಉಪಯೋಗವಾಗಿದೆ ಎಂದರು.

ಗ್ರಾಮೀಣ ಭಾಗದಲ್ಲಿ ಕೆಲಸ ನಿರ್ವಹಣೆ ಮಾಡಿದ ವೈದ್ಯರಿಗೆ ನಗರ ಭಾಗದಲ್ಲಿ ಕೆಲಸ ಮಾಡುವುದು ಸಾಕಷ್ಟು ಸುಲಭ, ಏಕೆಂದರೆ ಗ್ರಾಮೀಣ ಭಾಗದಲ್ಲಿ ಇರುವ ಸೀಮಿತ ಅವಕಾಶದಲ್ಲಿ ಅವರೇ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ನಗರ ಭಾಗದಲ್ಲಿ ಹಿರಿಯ ವೈದ್ಯರ ಸಲಹೆ ಪಡೆದು ಕಿರಿಯ ವೈದ್ಯರು ಕೆಲಸ ಮಾಡಬೇಕಾಗುತ್ತದೆ. ನಾನು ಸ್ವಲ್ಪ ದಿನ ವೈದ್ಯಕೀಯ ಶಿಕ್ಷಣ ಸಚಿವನಾಗಿ ಕೆಲಸ ಮಾಡಿದ ಕಾರಣಕ್ಕೆ ಇದರ ಬಗ್ಗೆ ಅರಿವಿದೆ, ನಿರ್ವಹಣೆ ಮಾಡಲು ಆಗಲ್ಲ ಎಂದು ಕೈಬಿಟ್ಟೆ ಎಂದರು.

ವಿಕ್ರಮ್ ಅವರು ದೂರದ ಗುಲ್ಬರ್ಗದಿಂದ ಬಂದು ಇಲ್ಲಿ ಸೇವೆ ಸಲ್ಲಿಸಿ ಜನಪರವಾಗಿ ಕೆಲಸ ಮಾಡುತ್ತಿದ್ದಾರೆ. 10 ರೂಪಾಯಿ ನೀಡಿದರೆ 1 ಕೋಟಿ ವರೆಗೆ ಆರೋಗ್ಯ ವಿಮೆ ನೀಡುವುದಾಗಿ ಹೇಳಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರ ಯಶಸ್ವಿನಿ ಸೇರಿದಂತೆ ಒಂದಷ್ಟು ವಿಮೆ ಯೋಜನೆಗಳನ್ನು ತಂದಿದ್ದರು. ಒಂದಷ್ಟು ಯಶಸ್ವಿಯಾಗಿವೆ, ಒಂದಷ್ಟು ಆಗಿಲ್ಲ. ಯಾವುದೇ ಆಸ್ಪತ್ರೆ ಆದರೂ ನಂಬಿಕೆ ಮುಖ್ಯ. ಇಂತಹ ಆಸ್ಪತ್ರೆಗೆ ಹೋದರೆ ನಾನು ಗುಣವಾಗುತ್ತೇನೆ ಎನ್ನುವುದು ಜನರ ಮನಸ್ಸಿಗೆ ಬರಬೇಕು. ವೈದ್ಯರ ಮಾತು, ಕೈಗುಣ, ಸಿಬ್ಬಂದಿ ಹೀಗೆ ಎಲ್ಲವೂ ಮುಖ್ಯವಾಗುತ್ತದೆ. ಇದೆಲ್ಲವೂ ಸೇರಿದರೆ ಯಶಸ್ಸು ದೊರೆಯುತ್ತದೆ ಎಂದು ಹೇಳಿದರು.

ಜಯನಗರದ ಯುನೈಟೆಡ್ ಆಸ್ಪತ್ರೆಯ ಒಂದು ಕೋಟಿ ರು. ವರೆಗಿನ ತುರ್ತು ಚಿಕಿತ್ಸೆ ಯೋಜನೆಯನ್ನು ಡಿಸಿಎಂ ಉದ್ಘಾಟಿಸಿದರು.

ಗೆಳತಿ ನೋಡ ಹೋದಾತನ ಮೇಲೆ ಹಲ್ಲೆ

ಮಡಿಕೇರಿ: ಫೇಸ್‌ಬುಕ್‌ನಲ್ಲಿ ಪರಿಚಯವಾದ ಮಹಿಳೆ ನೋಡಲು ಬೆಂಗಳೂರಿನಿಂದ ಮಡಿಕೇರಿಗೆ ಬಂದಿದ್ದ ಯುವಕನ ಮೇಲೆ ಮೂವರು ಯುವಕರು ಹಲ್ಲೆ ನಡೆಸಿರುವ ಘಟನೆ ಶುಕ್ರವಾರ ನಗರದಲ್ಲಿ ನಡೆದಿದೆ. ಈ ಕುರಿತು ಹಲ್ಲೆಗೊಳಗಾದ ಹೆಚ್.ಪಿ.ಮಹದೇವ(39) ಎಂಬಾತ ನೀಡಿದ ದೂರಿನ ಆಧಾರದಲ್ಲಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಹಿಳೆ ರಚನ, ಆಕೆಯ ತಾಯಿ ಮಾಲತಿ, ಯುವತಿಯ ಸ್ನೇಹಿತರಾದ ದಿನೇಶ್, ಸುಜೀತ್, ದರ್ಶನ್, ಹಾಗೂ ಒಬ್ಬ ಆಟೋ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮೂಲತಃ ಮಂಡ್ಯ ಮದ್ದೂರು ತಾಲೂಕಿನ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ವಾಸವಿರುವ ಯುವಕ ಎಚ್.ಪಿ.ಮಹದೇವ ಎಂಬಾತನಿಗೆ ಕೆಲವು ಸಮಯದ ಹಿಂದೆ ಫೇಸ್‌ಬುಕ್ ಮೂಲಕ ಮಡಿಕೇರಿ ಮಂಗಳದೇವಿನಗರ ನಿವಾಸಿ ರಚನ ಎಂಬಾಕೆಯ ಪರಿಚಯವಾಗಿತ್ತು. ನಂತರ ಮಹಿಳೆ ತನಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿ ನವೆಂಬರ್ 20 ಮತ್ತು 28ರಂದು ಕ್ರಮವಾಗಿ ತಲಾ 5 ಸಾವಿರದಂತೆ ಒಟ್ಟು 10 ಸಾವಿರ ರು. ಗೂಗಲ್ ಮತ್ತು ಫೋನ್ ಪೇ ಮೂಲಕ ರಚನ ಪಡೆದುಕೊಂಡಿದ್ದಳು. ಈ ಹಣವನ್ನು ಮರಳಿ ಕೇಳಿದ ಸಂದರ್ಭ ಮೈಸೂರು ಅಥವಾ ಕುಶಾಲನಗರಕ್ಕೆ ಬರುವಂತೆ ರಚನ ಆಹ್ವಾನ ನೀಡಿದ್ದಳು. ಅದರಂತೆ ನೆನ್ನೆ ದಿನ ರಾತ್ರಿ ಮಹದೇವ ಮಡಿಕೇರಿಗೆ ಬಂದಿದ್ದು ರಾತ್ರಿ 10.30ರ ಸಮಯದಲ್ಲಿ ರಚನ ಮಹದೇವನನ್ನು ತನ್ನ ಮನೆಗೆ ಕರೆದುಕೊಂಡು ತೆರಳಿದ್ದಳು. ದಿನೇಶ್ ಫೋನ್ ಮೂಲಕ ದರ್ಶನ್ ಮತ್ತು ಸುಜೀತ್ ಅವರನ್ನು ಸ್ಥಳಕ್ಕೆ ಕರೆಯಿಸಿಕೊಂಡು ಮಹದೇವನ ಬಟ್ಟೆ ಬಿಚ್ಚಿಸಿ ಅದನ್ನು ಸುಟ್ಟು ಹಾಕಿ ತಲೆಗೆ ಏರ್ ಗನ್ ಹಿಡಿದ್ದು ದೊಣ್ಣೆ ಮತ್ತು ಕತ್ತಿಯಿಂದ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ ಎನ್ನಲಾಗಿದೆ. ಹಲ್ಲೆಗೊಳಗಾದ ಮಹದೇವ 6 ಮಂದಿಯ ವಿರುದ್ಧ ದೂರು ನೀಡಿದ್ದಾನೆ. ಪ್ರಕರಣ ದಾಖಲಿಸಿಕೊಂಡ ನಗರ ಠಾಣೆ ಪೊಲೀಸರು ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

ದ್ವೇಷ ಭಾಷಣ ವಿಧೇಯಕಕ್ಕೆ ಕರವೇಯಿಂದ ವಿರೋಧ

ಜನರು ಭಯದಿಂದ ಮಾತನಾಡದೆ ಇರಬೇಕಾದುದು ಸರಕಾರದ ಉದ್ದೇಶ: ನಾರಾಯಣ ಗೌಡ

ಬೆಂಗಳೂರು: ರಾಜ್ಯ ಸರಕಾರ ಈ ಬಾರಿ ಅಧಿವೇಶನದಲ್ಲಿ ಮಂಡಿಸಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ-2025 ಭಾರೀ ವಿವಾದಕ್ಕೆ ಕಾರಣವಾಗಿದೆ.

ಈಗಾಗಲೇ ಬಿಜೆಪಿ, ಜೆಡಿಎಸ್ ಹಾಗೂ ಹಿಂದೂ ಪರ ಸಂಘಟನೆಗಳು ಈ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿದೆ. ಇದೀಗ ಕರ್ನಾಟಕ ರಕ್ಷಣಾ ವೇದಿಕೆ

ಕೂಡ ಇದನ್ನು ವಿರೋಧಿಸಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಕರವೇ ಅಧ್ಯಕ್ಷ ನಾರಾಯಣಗೌಡ, ಈ ಕಾನೂನು ಭಾರತದ ಸಂವಿಧಾನಕ್ಕೆ ವಿರೋಧವಾಗಿದ್ದು, ಇದು ನಾಗರಿಕರ ಮೂಲ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ ಎಂದಿದ್ದಾರೆ. ಈ ವಿಧೇಯಕ ಹಿಂಪಡೆಯದಿದ್ದರೆ ಹೋರಾಟ ನಡೆಸೋದಾಗಿ ಸರಕಾರಕ್ಕೆ ಕರವೇ ಎಚ್ಚರಿಸಿದೆ.

ಇದು ಭಾರತದ ಸಂವಿಧಾನಕ್ಕೆ ವಿರುದ್ಧ: ಭಾರತದ ಸಂವಿಧಾನದ ಅನುಚ್ಛೇದ 19(1)(ಎ)ಯಲ್ಲಿ ಮಾತನಾಡುವ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಲಾಗಿದೆ. ಆದರೆ ಈ ವಿಧೇಯಕದಲ್ಲಿ ದ್ವೇಷ ಭಾಷಣಕ್ಕೆ ನೀಡಿರುವ ವ್ಯಾಖ್ಯೆಯೇ ಅಸ್ಪಷ್ಟವಾಗಿದೆ. ಸರಕಾರದ ಉದ್ದೇಶವೇ ಅನುಮಾನ ಹುಟ್ಟಿಸುವಂತಿದೆ. ಹಿಂಸೆಗೆ ಪ್ರಚೋದನೆ ನೀಡುವ ಭಾಷಣಗಳನ್ನು ತಡೆಯಲು ಈಗಿರುವ ಕಾನೂನುಗಳಲ್ಲೇ ಅವಕಾಶ ಇದೆ. ಆದರೆ ಸರಕಾರ ಈಗ ರೂಪಿಸಿರುವ ದ್ವೇಷಭಾಷಣ ಕಾಯಿದೆ ಕರಡಿನಲ್ಲಿ ಧರ್ಮ, ಜಾತಿ, ಲಿಂಗ, ಭಾಷೆ, ಲೈಂಗಿಕತೆ ಮುಂತಾದವುಗಳ ಆಧಾರದಲ್ಲಿ ಅಸಾಮರಸ್ಯ ಅಥವಾ ದ್ವೇಷದ ಭಾವನೆಗಳನ್ನು ಮೂಡಿಸುವ ಯಾವುದೇ ಮಾತು ಅಥವಾ ಬರಹವನ್ನು ಅಪರಾಧ ಎಂದು ಕರೆಯಲಾಗಿದೆ. ಇದರಿಂದ ಸರಕಾರದ ನೀತಿಗಳ ವಿರುದ್ಧದ ಟೀಕೆ, ಸಾಮಾಜಿಕ ಚರ್ಚೆ, ಹಾಸ್ಯ ಅಥವಾ ಸತ್ಯವನ್ನು ಹೇಳುವುದು ಕೂಡ ದ್ವೇಷ ಎಂದು ಪರಿಗಣಿಸುವ ಅಪಾಯವಿದೆ. ಜನರು ಭಯದಿಂದ ಮಾತನಾಡದೆ ಇರಬೇಕಾದುದು ಸರಕಾರದ ಉದ್ದೇಶವಾಗಿದ್ದಂತಿದೆ ಎಂದಿದ್ದಾರೆ.

ಸಂವಿಧಾನದ ಅನುಚ್ಛೇದ 19(2)ಯಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ನಿರ್ಬಂಧಗಳು ಇದ್ದರೂ, ಈ ವಿಧೇಯಕವು ಅದನ್ನು ಮೀರಿ ಹೋಗಲಿದೆ. ಈ ಕಾನೂನು ಪೊಲೀಸರಿಗೆ ಮತ್ತು ಸರಕಾರಕ್ಕೆ ನಿರಂಕುಶ ಅಧಿಕಾರ ನೀಡುತ್ತದೆ. ಕಾಯಿದೆ ಹೇಳುವಂತೆ ಇಲ್ಲಿನ ಅಪರಾಧಗಳು ಸಂಜ್ಞೆಯ ಮತ್ತು ಜಾಮೀನು ಇಲ್ಲದ್ದು. ಯಾರಾದರೂ ದೂರು ಕೊಟ್ಟರೆ ಸಾಕು, ಪೊಲೀಸರು ತಕ್ಷಣ ಬಂಧನ ಮಾಡಬಹುದು. ಆರೋಪಿಗಳಿಗೆ ನೋಟಿಸ್ ನೀಡುವ ಅಗತ್ಯವೂ ಇರುವುದಿಲ್ಲ. ಇದು ಎಂಥ ಕರಾಳ ಕಾಯಿದೆ? ಜನಸಾಮಾನ್ಯರನ್ನು ಅಪರಾಧಿಗಳಾಗಿ ಮಾಡುವ ಈ ಕೀಳುಮಟ್ಟದ ಕಾಯಿದೆ ನಮಗೆ ಬೇಕೆ? ವಿಧೇಯಕದ ಕಲಂ 4ರಲ್ಲಿ ಪ್ರತಿಬಂಧಕ ಕ್ರಮಗಳನ್ನೂ ಉಲ್ಲೇಖಿಸಲಾಗಿದೆ. ಪೊಲೀಸರು ಅಥವಾ ಅಧಿಕಾರಿಗಳು ಸಂಭಾವ್ಯ ಅಪರಾಧ ಎಂದು ಭಾವಿಸಿ ಮುಂಚಿತವಾಗಿ ಕ್ರಮ ಕೈಗೊಳ್ಳಬಹುದು. ಕಲಂ 6ರಲ್ಲಿ ಸರಕಾರ ಹೇಳುತ್ತಿರುವ ಭದ್ವೇಷ ಭಾಷಣಗಳನ್ನು ಬ್ಲಾಕ್ ಮಾಡುವ ಅಧಿಕಾರವನ್ನೂ ನೀಡಲಾಗಿದೆ. ಇದರ ಮೂಲಕ ಸರಕಾರದ ಟೀಕೆ ಮಾಡುವ ಪೋಸ್ಟ್‌ಗಳನ್ನು ಸುಲಭವಾಗಿ ತೆಗೆದುಹಾಕಬಹುದು. ಇದು ಸಂವಿಧಾನದಲ್ಲಿ ನೀಡಿರುವ ಸ್ವಾತಂತ್ರ್ಯ ಕಿತ್ತುಕೊಳ್ಳುತ್ತದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ವಿಧೇಯಕ ವಾಪಸ್ ಪಡೆಯದಿದ್ದರೆ ಹೋರಾಟದ ಎಚ್ಚರಿಕೆ

ವಿಧೇಯಕದಿಂದ ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು, ಸಾಮಾಜಿಕ ಮಾಧ್ಯಮ ಬಳಸುವವರು ಹೆಚ್ಚು ತೊಂದರೆಗೀಡಾಗುತ್ತಾರೆ. ಅನ್ಯಾಯ ಅಥವಾ ಸರಕಾರದ ತಪ್ಪುಗಳ ಬಗ್ಗೆ ಮಾತನಾಡಿದರೆ ಭಾವನಾತ್ಮಕ ಹಾನಿ ಎಂದು ಆರೋಪಿಸಿ ಬಂಧನ ಮಾಡಲು ಇದು ಪೊಲೀಸರಿಗೆ ಅಧಿಕಾರ ನೀಡುತ್ತದೆ. ಪತ್ರಕರ್ತರ ತನಿಖಾ ವರದಿಗಳು ಅಪಾಯಕ್ಕೆ ಸಿಲುಕುತ್ತವೆ. ಸಾಮಾಜಿಕ ಮಾಧ್ಯಮದಲ್ಲಿ ಹಾಸ್ಯ ಅಥವಾ ಟೀಕೆಯನ್ನು ದ್ವೇಷ ಎಂದು ಕರೆದು ಬ್ಲಾಕ್ ಮಾಡಬಹುದು. ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಮತ್ತು ಜನರ ಧ್ವನಿಯನ್ನು ನಾಶಪಡಿಸುವ ಇಂಥ ಕಾಯಿದೆ ಯಾವುದೇ ಕಾರಣಕ್ಕೂ ಜಾರಿಯಾಗಕೂಡದು. ಕರ್ನಾಟಕ ರಕ್ಷಣಾ ವೇದಿಕೆಯು ಈ ವಿಧೇಯಕವನ್ನು ತಕ್ಷಣ ಹಿಂಪಡೆಯಬೇಕೆಂದು ಒತ್ತಾಯಿಸುತ್ತದೆ. ಹಿಂದಕ್ಕೆ ಪಡೆಯದೇ ಹೋದರೆ ನಾವು ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ. ಈ ದೇಶದ ನಾಗರಿಕರಿಗೆ ಸಂವಿಧಾನದ ಹಕ್ಕುಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯ. ಈ ಕಾನೂನು ನಾಗರಿಕರ ಸ್ವಾತಂತ್ರ್ಯವನ್ನು ಕೊಲ್ಲುತ್ತದೆ. ಹೀಗಾಗಿ ಇದು ಜಾರಿಯಾಗಲು ನಾವು ಅವಕಾಶ ನೀಡುವುದಿಲ್ಲ ಎಂದು ಟ್ವೀಟ್ ಮೂಲಕ ಕರವೇ ಅಧ್ಯಕ್ಷ ನಾರಾಯಣಗೌಡ ಅವರು ಕಿಡಿಕಾರಿದ್ದಾರೆ.

ವಿಠ್ಠಲ್ ಮಲ್ಯ ರಸ್ತೆಯ ಸೆಂಟ್ ಜೋಸೆಫ್ಸ್ ಇಂಡಿಯನ್ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡ ನಟಿ ಸಂಯುಕ್ತ ಹೊರನಾಡು ಅವರಿಗೆ ಆಡಳಿತ ಮಂಡಳಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಶಾಲಾ ಮುಖ್ಯಸ್ಥರಾದ ವಂದನೀಯ ಫಾದರ್ ಜೋಸೆಫ್ ಡಿಸೋಜಾ, ಮುಖ್ಯೋಪಾಧ್ಯಾಯಿನಿಯಾದ ಸಿಸ್ಟರ್ ಜೈನ್ ಬೆನಿಟಾ ಇದ್ದರು.

ತೊಗರಿ ಬೆಂಬಲ ಬೆಲೆ ಖರೀದಿ: ರೈತರು ನಿರಾಳ

ತೊಗರಿ ದರ ಕುಸಿತದಿಂದಾಗಿ ಕಂಗಾಲಾಗಿದ್ದ ಸಾವಿರಾರು ರೈತರು | ಈ ಸಲ 12.60 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ

ಹೂವಪ್ಪ ಐ ಹೆಚ್. ಬೆಂಗಳೂರು

ಪ್ರಸಕ್ತ ಸಾಲಿನಲ್ಲಿ ಅತಿವೃಷ್ಟಿಯಿಂದ ತೊಗರಿಯೂ ಸೇರಿದಂತೆ ಮುಂಗಾರು ಬೆಳೆಗಳು ಹಾನಿಗೊಳಗಾಗಿದ್ದು, ಅವೆಲ್ಲವುಗಳ ಪರಿಹಾರ ಇನ್ನೂ ರೈತರ ಕೈಗೆ ಬಂದಿಲ್ಲ. ಈಗ ಅಳಿದುಳಿದ ತೊಗರಿ ಬೆಳೆ ಕಟಾವಿಗೆ ಬಂದಿದ್ದು, ರಾಶಿ ಮಾಡಲು ಶುರು ಮಾಡಿದ್ದಾರೆ. ಮಾರುಕಟ್ಟೆಗೆ ಆವಕ ಜಾಸ್ತಿ ಆದಂತೆ ಬೆಲೆ ಕಡಿಮೆಯಾಗುತ್ತದೆ ಎಂದು ಭಾವಿಸಿ ನಾ ಮುಂದೆ ತಾ ಮುಂದೆ ಎನ್ನುವಂತೆ ರೈತರು ಮಾರುಕಟ್ಟೆಗೆ ತೊಗರಿ ತರಲಾರಂಭಿಸಿದ್ದು, ಮುಕ್ತ ಮಾರುಕಟ್ಟೆಯಲ್ಲಿ ದರ ಇಳಿಕೆಯಾಗಿರುವುದು ಕಂಡ ರೈತರಿಗೆ ಆತಂಕವಾಗತೊಡಗಿತ್ತು.

ನಮ್ಮ ರಾಜ್ಯವು ದೇಶದ ಪ್ರಮುಖ ತೊಗರಿ ಉತ್ಪಾದಕ ರಾಜ್ಯವಾಗಿದ್ದು, 2025-26ರ ಖಾರಿಫ್ ಋತುವಿನಲ್ಲಿ ಅಂದಾಜು ತೊಗರಿ 16.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ, 12.60 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. ಮಾರುಕಟ್ಟೆಯಲ್ಲಿ ತೊಗರಿ ಕ್ವಿಂಟಾಲ್‌ಗೆ 5,830ರಿಂದ 6,700 ರು. ಮಾತ್ರ ಬೆಲೆ ದೊರೆಯುತ್ತಿತ್ತು. ಆದರೆ ಈಗ ಕೇಂದ್ರ ಸರಕಾರ 2025-26ರ ಕನಿಷ್ಠ ಬೆಂಬಲ ಬೆಲೆಯನ್ನು ರು. 8,000 ಎಂದು ಘೋಷಿಸಿದೆ. ಹಾಗಾಗಿ ರೈತರಲ್ಲಿ ಸ್ವಲ್ಪ ನೆಮ್ಮದಿ ಕಾಣತೊಡಗಿದೆ, ಆದರೆ ಸರಕಾರ ತಕ್ಷಣ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಸಿ ರೈತರ ನೆರವಿಗೆ ಧಾವಿಸಬೇಕೆಂದು ಯಾದಗಿರಿ ಜಿಲ್ಲೆಯ ಸುರುಪುರ ತಾಲೂಕು ರೈತ ಸಂಗಮೇಶ್ ಅವರ ಮನವಿಯಾಗಿದೆ.

ಈ ಬಾರಿ ತೊಗರಿ ಇಳುವರಿ ಕೂಡ ಕಡಿಮೆಯಾಗಿದೆ. ಪ್ರವಾಹ, ಅತಿವೃಷ್ಟಿಯ ಹೊಡೆತದ ನಡುವೆ ಉಳಿದ ಒಂದಿಷ್ಟು ತೊಗರಿ ಬೆಳೆಯ ಫಸಲು ಕೊಯ್ಲಿಗೆ ಬಂದಿದ್ದು, ಸದ್ಯ ಒಕ್ಕಣೆ ಶುರುವಾಗಿದೆ. ಬೆಳೆಗೆ ಮಾಡಿದ್ದ ಸಾಲ ತೀರಿಸಲೂ ಸೇರಿದಂತೆ ವಿವಿಧ ಕಾರಣಕ್ಕಾಗಿ ರೈತರು ತೊಗರಿಯನ್ನು ಮಾರಾಟ ಮಾಡಲಾರಂಭಿಸಿದ್ದಾರೆ.

ನಮ್ಮ ರಾಜ್ಯದ ಗುಲ್ಬರ್ಗ, ಯಾದಗಿರಿ, ವಿಜಾಪುರ, ಬಾಗಲಕೋಟೆ, ಬೀದರ್ ಜಿಲ್ಲೆಗಳಲ್ಲಿ ಹೆಚ್ಚು ತೊಗರಿ ಬೆಳೆಯಲಾಗುತ್ತದೆ. ಇಲ್ಲಿಯವರೆಗೆ ಸಿಕ್ಕ ಅಂದಾಜು ಅಂಕಿ-ಅಂಶ ಪ್ರಕಾರ 58,319 ಹೆಕ್ಟೇರ್‌ನಲ್ಲಿ ಬೆಳೆ ಹಾನಿಯಾಗಿದೆ, ಉತ್ತರದ ಒಟ್ಟು 10 ಜಿಲ್ಲೆಗಳಲ್ಲಿ ಅತಿವೃಷ್ಟಿ ಎದುರಾಗಿದ್ದರಿಂದ ಬಹತೇಕ ಎಲ್ಲ ಬೆಳೆಗಳೂ ಈ ಸಲ ಹಾನಿಯಾಗಿದೆ.

ದರ ಕುಸಿತದ ಹೊಡೆತ: ರೈತರು ತೊಗರಿಯನ್ನು ಮಾರುಕಟ್ಟೆಗೆ ತರಲಾರಂಭಿಸುತ್ತಿದ್ದಂತೆ ವರ್ತಕರು ದರ ಇಳಿಸಿದ್ದಾರೆ. ವಾರದ ಹಿಂದೆ ಮುಕ್ತ ಮಾರುಕಟ್ಟೆಯಲ್ಲಿ 7000 ರು. ಬೆಲೆ ಇತ್ತು. ಆದರೀಗ 5,500-6,500 ರು.ಗೆ ಇಳಿದಿದೆ. ರೈತರ ಅನಿವಾರ್ಯತೆಯ ಲಾಭ ಪಡೆಯುವ ತಂತ್ರ ಅನುಸರಿಸಿದ ವರ್ತಕರು ತೊಗರಿಯ ಬೆಲೆಯನ್ನು ಇಳಿಸಿದ್ದಾರೆ. ಈ ಬಗ್ಗೆ ರೈತರು ಪ್ರಶ್ನಿಸಿದರೆ ತೊಗರಿ ಇನ್ನೂ ಒಣಗಿಲ್ಲ, ತೇವಾಂಶ ಹೆಚ್ಚಿದೆ ಎಂದು ನೆಪ ಹೇಳುತ್ತಾರೆ. ವರ್ತಕರೆಲ್ಲರೂ ಮಾತಾಡಿಕೊಂಡು ದರ ಇಳಿಸುತ್ತಾರೆ ಎಂದು ಹಲವಾರು ರೈತ ಮುಖಂಡರು ದೂರುತ್ತಾರೆ.

ರೈತರಿಗೆ ಸಂತಸದ ವಿಷಯ: ಮಳೆ ಹೊಡೆತ, ಉತ್ಪಾದನಾ ವೆಚ್ಚದ ಏರಿಕೆ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಸಂಕಷ್ಟದಲ್ಲಿ ಸಿಲುಕಿದ್ದ ಕರ್ನಾಟಕದ ತೊಗರಿ ಬೆಳೆಗಾರರಿಗೆ ಕೇಂದ್ರ ಸರಕಾರದಿಂದ ಸಂತಸದ ಸುದ್ದಿ ಬಂದಿದೆ. ರಾಜ್ಯ ಸರಕಾರ ಹಾಗೂ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರಿಂದ ಬಂದ ನಿರಂತರ ಮನವಿಗೆ ಸ್ಪಂದಿಸಿದ ಕೇಂದ್ರ ಸರಕಾರದ ಕೃಷಿ ಸಚಿವರು, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಅಡಿಯಲ್ಲಿ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ಒಟ್ಟು 9.67 ಲಕ್ಷ ಮೆಟ್ರಿಕ್ ಟನ್ ತೊಗರಿಯನ್ನು ನಫೆಡ್ ಮತ್ತು ಎನ್‌ಸಿಸಿಎಫ್ ಮುಖಾಂತರ ಖರೀದಿಸಲು ಹಸಿರು ನಿಶಾನೆ ತೋರಿಸಿದೆ ಎಂದು ಹೇಳಲಾಗುತ್ತಿದೆ.

ಕೇಂದ್ರ ಸರಕಾರ ತೊಗರಿ ಕ್ವಿಂಟಲ್ ಗೆ 8,000 ರು.ಗೆ ಖರೀದಿಸಬೇಕೆಂದು ಅನುಮೋದನೆ ಕೊಟ್ಟ ಹಿನ್ನೆಲೆಯಲ್ಲಿ ಈಗಾಗಲೇ ಮುಕ್ತ ಮಾರುಕಟ್ಟೆಯಲ್ಲಿ ತೊಗರಿ ಕ್ವಿಂಟಲ್‌ಗೆ 200-300 ರು.ನಷ್ಟು ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಸ್ವಲ್ಪ ಏರಿಕೆಯಾಗಬಹುದು.

ಮನವಿಗೆ ಸ್ಪಂದಿಸಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್

ರಾಜ್ಯದಲ್ಲಿ ಕೃಷಿಕರ ಸಮಸ್ಯೆಗೆ ತಕ್ಷಣ ಪರಿಹಾರ ಕಲ್ಪಿಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿಗೆ ಪತ್ರ ಬರೆದು, ಎಂಎಸ್‌ಪಿ ಅಡಿಯಲ್ಲಿ ತೊಗರಿ ಖರೀದಿಯ ಅವಧಿಯನ್ನು ಬದಲಿಸಿ ಶೀಘ್ರ ಖರೀದಿ ಆರಂಭಿಸುವಂತೆ ವಿನಂತಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕೂಡ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ಅವರಿಗೆ ಈ ಕುರಿತಾಗಿ ತುರ್ತು ಮನವಿ ಮಾಡಿಕೊಂಡಿದ್ದರು. ಅವರಿಬ್ಬರ ಮನವಿಗೆ ಸ್ಪಂದಿಸಿದ ಕೇಂದ್ರ ಕೃಷಿ ಸಚಿವರು ಕೆಲವೇ ದಿನಗಳಲ್ಲಿ, ಅಂದರೆ ಡಿ.12ರಂದು ಅದಕ್ಕೆ ಅನುಮೋದನೆ ನೀಡಿದ್ದಾರೆ.

ತೊಗರಿ ಖರೀದಿಗೆ ಕೇಂದ್ರ ಸರಕಾರ ಒಪ್ಪಿಗೆ ಸೂಚಿಸಿದೆ. ರಾಜ್ಯ ಸರಕಾರ ತಕ್ಷಣ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಪ್ರಕ್ರಿಯೆ ಆರಂಭಿಸಿ ರೈತರ ನೆರವಿಗೆ ಧಾವಿಸಬೇಕು

-ರಮೇಶ್ಚಂದ್ರ ಲಾಹೋಟಿ ಎಫ್‌ಕೆಸಿಸಿ ಮಾಜಿ ಅಧ್ಯಕ್ಷರು

ಕೆಂಪೇಗೌಡ ನಗರದ ಆರ್.ವಿ ದೇವರಾಜ್ ಅಭಿಮಾನಿಗಳು ಇತ್ತೀಚೆಗೆ ಅಗಲಿದ ಮಾಜಿ ಶಾಸಕ ಆರ್.ವಿ ದೇವರಾಜ್ ಅವರಿಗೆ ಮೇಣದ ಬತ್ತಿ ಹಚ್ಚಿ ಸಂತಾಪ ಸೂಚಿಸಿದರು.

ನಿವೇಶನ ನೀಡಲು ಕರ್ನಾಟಕ ವಕೀಲರ ಪರಿಷತ್ ಮನವಿ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ ಕಾರ್ಯಚಟುವಟಿಕೆಗಳನ್ನು ಸರಾಗವಾಗಿ ನಡೆಸಲು ಹೈಕೋರ್ಟ್ ಸಮೀಪ ನಿವೇಶನ ಅಥವಾ ಕಟ್ಟಡ ಹಂಚಿಕೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಪರಿಷತ್ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಪರಿಷತ್‌ನಲ್ಲಿ 20 ಸಮಿತಿಗಳಿದ್ದು, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪರಿಷತ್ ಸದಸ್ಯರ ಚೇಂಬರ್‌ಗಳನ್ನು ಬಳಕೆ ಮಾಡಿಕೊಂಡು ಮೂರು ಸಮಿತಿಗಳು ಕೆಲಸ ಮಾಡುವ ಸ್ಥಿತಿ ಇದೆ. ರಾಜ್ಯ ಮತ್ತು ಹೊರರಾಜ್ಯಗಳ ವಕೀಲರು ಕೆಎಸ್‌ಬಿಸಿಗೆ ಭೇಟಿ ನೀಡಲಿದ್ದು, ಅವರಿಗೆ ಸೌಲಭ್ಯ ಕಲ್ಪಿಸಲು ಕಷ್ಟವಾಗಿದೆ. 2016ರಿಂದಲೂ ಹೈಕೋರ್ಟ್ ಸಮೀಪ ನಿವೇಶನ ಅಥವಾ ಕಟ್ಟಡ ಹಂಚಿಕೆ ಮಾಡಿಕೊಡಲು ನಿರಂತರವಾಗಿ ಮನವಿ ಮಾಡಲಾಗುತ್ತಿದ್ದು, ಈ ಕೆಲಸ ಕಾರ್ಯಸಾಧ್ಯವಾಗಿಸುವಂತೆ ಕೋರಲಾಗಿದೆ.

ಪರಿಷತ್ ಸೃಷ್ಟಿಯಾಗಿ 60 ವರ್ಷಗಳಾಗಿದ್ದರೂ ಸ್ವಂತ ಕಟ್ಟಡವಿಲ್ಲ. ಇದು ಆರಂಭವಾದಾಗ ಸುಮಾರು 800 ಸದಸ್ಯರಿದ್ದರು. ಈಗ 1.10 ಲಕ್ಷ ವಕೀಲ ಸದಸ್ಯರಿದ್ದು, ಪ್ರತಿ ವರ್ಷ ಸರಾಸರಿ 3,000-3,500 ಸಾವಿರ ವಕೀಲರು ನೋಂದಾಯಿಸಿಕೊಳ್ಳುತ್ತಿದ್ದಾರೆ. ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಸಂದರ್ಭದಲ್ಲಿ ಹೊಸ ವಕೀಲರ ನೋಂದಣಿ ಹೆಚ್ಚಾಗಲಿದೆ ಎಂದು ವಿವರಿಸಲಾಗಿದೆ.

ಸಮಾಚಾರ ಸಣ್ಣದಲ್ಲ

3 ವಿಕೆಟ್ ಪಡೆದು ಮಿಂಚಿದ ಸಿರಾಜ್

ಮುಂಬೈ: ಭಾರತ ತಂಡದ ವೇಗಿ ಮೊಹಮ್ಮದ್ ಸಿರಾಜ್ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ಸೂಪರ್ ಲೀಗ್ ಪಂದ್ಯದಲ್ಲಿ ಮುಂಬೈ ವಿರುದ್ಧ ಅದ್ಭುತ ಪ್ರದರ್ಶನ ನೀಡಿ 3 ವಿಕೆಟ್ ಪಡೆದಿದ್ದಾರೆ, ಆ ಮೂಲಕ ರಾಷ್ಟ್ರೀಯ ಟಿ20 ತಂಡದಿಂದ ಕಡೆಗಣಿಸಿದ್ದ ಬಿಸಿಸಿಐ ಆಯ್ಕೆ ಸಮಿತಿಗೆ ಬಲವಾದ ಸಂದೇಶ ರವಾನಿಸಿದ್ದಾರೆ. ಸೂಪರ್‌ಲೀಗ್ ಹಂತದ ಪಂದ್ಯದಲ್ಲಿ ಹೈದರಾಬಾದ್ ಹಾಗೂ ಮುಂಬೈ ತಂಡ ಸೆಣೆಸಾಟ ನಡೆಸಿದವು. ಸಿರಾಜ್ ಅವರ ಮಾರಕ ಬೌಲಿಂಗ್ ದಾಳಿಯ ಪರಿಣಾಮದಿಂದಾಗಿ ಮುಂಬೈ ತಂಡ ಕೇವಲ 131 ರನ್‌ಗಳನ್ನಷ್ಟೇ ಕಲೆಹಾಕಲು ಶಕ್ತವಾಯಿತು. ಸಿರಾಜ್ ಎಸೆದ 17ನೇ ಓವರ್‌ನಲ್ಲಿ ಸೂರ್ಯಾಂಶ್ ಶೆಡ್ಗೆ ಹಾಗೂ ತಂಡದ ನಾಯಕ ಶಾರ್ದುಲ್ ಠಾಕೂರ್ ಅವರ ವಿಕೆಟ್ ಪಡೆದು ಡೆತ್ ಓವರ್‌ನಲ್ಲಿ ಕಡಿವಾಣ ಹಾಕಿದರು. ಬಳಿಕ ತನುಷ್ ಕೋಟ್ಯಾನ್ ಅವರ ವಿಕೆಟ್ ಕಬಳಿಸಿದರು. ಇದರಿಂದಾಗಿ ಪಂದ್ಯದಲ್ಲಿ ಮುಂಬೈ ತಂಡ ಸ್ಪರ್ಧಾತ್ಮಕ ಮೊತ್ತ ಕಲೆ ಹಾಕಲು ವಿಫಲವಾಯಿತು. 132 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಹೈದರಾಬಾದ್ ತಂಡವು ಕೇವಲ 11.5 ಓವರ್‌ಗಳಲ್ಲೇ ಗೆಲುವಿನ ನಗೆ ಬೀರಿತು, ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಟೀಮ್ ಇಂಡಿಯಾ ವೇಗಿ ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಿತೀಶ್ ರೆಡ್ಡಿಗೆ ಹ್ಯಾಟ್ರಿಕ್ ವಿಕೆಟ್

ಹೈದರಾಬಾದ್: ಆಂಧ್ರಪ್ರದೇಶದ ಯುವ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಸೂಪರ್ ಲೀಗ್ ಹಂತದಲ್ಲಿ ಅದ್ಭುತ ಪ್ರದರ್ಶನ ನೀಡಿ ಹ್ಯಾಟ್ರಿಕ್ ವಿಕೆಟ್ ಪಡೆದಿದ್ದಾರೆ. ಮಧ್ಯಪ್ರದೇಶ ವಿರುದ್ಧದ ಪಂದ್ಯದಲ್ಲಿ ನಿತೀಶ್ ತಮ್ಮ ಟಿ20 ವೃತ್ತಿಜೀವನದ ಮೊದಲ ಹ್ಯಾಟ್ರಿಕ್ ಪಡೆದರು. ಐಪಿಎಲ್‌ನಲ್ಲಿ ಆರ್‌ಸಿಬಿ ತಂಡದ ನಾಯಕ ಮತ್ತು ಮಧ್ಯಪ್ರದೇಶದ ಪ್ರಮುಖ ಆಟಗಾರ ರಜತ್ ಪಾಟೀದಾರ್ ಅವರನ್ನು ಔಟ್ ಮಾಡುವ ಮೂಲಕ ನಿತೀಶ್ ಕುಮಾರ್ ರೆಡ್ಡಿ ತಮ್ಮ ಹ್ಯಾಟ್ರಿಕ್ ಪೂರ್ಣಗೊಳಿಸಿದರು. 113 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಮಧ್ಯಪ್ರದೇಶ 17.3 ಓವರ್‌ಗಳಲ್ಲಿ ಆರು ವಿಕೆಟ್‌ಗಳ ನಷ್ಟಕ್ಕೆ ಗುರಿಯನ್ನು ತಲುಪಿ ಪಂದ್ಯವನ್ನು ಗೆದ್ದುಕೊಂಡಿತು. ಆಂಧ್ರಪ್ರದೇಶ ತಂಡದ ಪರ ಆಡುತ್ತಿರುವ ನಿತೀಶ್ ಕುಮಾರ್ ರೆಡ್ಡಿ ಇನ್ನಿಂಗ್ಸ್‌ನ ಮೂರನೇ ಓವರ್‌ನ ಕೊನೆಯ ಮೂರು ಎಸೆತಗಳಲ್ಲಿ ವಿಕೆಟ್ ಪಡೆಯುವ ಮೂಲಕ ಹ್ಯಾಟ್ರಿಕ್ ಪೂರ್ಣಗೊಳಿಸಿದರು.

ಇಂದು ಭಾರತ–ದ.ಆಫ್ರಿಕಾ 3ನೇ ಟಿ20 | 1–1 ಸಮಬಲದಲ್ಲಿರುವ 2 ತಂಡಗಳಿಗೂ ಪ್ರತಿಷ್ಠೆಯ ಕಾದಾಟ

2 ತಂಡಗಳಿಗೂ ಸರಣಿ ಮುನ್ನಡೆ ನಿರೀಕ್ಷೆ

ಧರ್ಮಶಾಲಾ: ದಕ್ಷಿಣ ಆಫ್ರಿಕಾ ವಿರುದ್ಧ ಎರಡನೇ ಟಿ20ಐ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ಭಾರತ ತಂಡವವು, ಭಾನುವಾರ ಧರ್ಮಶಾಲಾದ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆಯುವ ಮೂರನೇ ಟಿ20 ಪಂದ್ಯಕ್ಕೆ ಸಜ್ಜಾಗಿದೆ. ಮೊದಲನೇ ಪಂದ್ಯದಲ್ಲಿ 101 ರನ್‌ಗಳಿಂದ ಗೆದ್ದು ಟಿ20 ಸರಣಿಯಲ್ಲಿ ಶುಭಾರಂಭ ಕಂಡಿದ್ದ ಸೂರ್ಯಕುಮಾರ್ ಯಾದವ್ ನಾಯಕತ್ವದ ಟೀಮ್ ಇಂಡಿಯಾ, ನಂತರ ಎರಡನೇ ಪಂದ್ಯದಲ್ಲಿ ಬೌಲಿಂಗ್ ಹಾಗೂ ಬ್ಯಾಟಿಂಗ್ ವೈಫಲ್ಯದಿಂದಾಗಿ 51 ರನ್‌ಗಳಿಂದ ಸೋತಿತ್ತು. ಇನ್ನೂ ಟಿ20 ಸರಣಿಯನ್ನು ತನ್ನದಾಗಿಸಿಕೊಳ್ಳಲು ಎರಡೂ ತಂಡಗಳಿಗೂ ಸರಣಿಯಲ್ಲಿ ಇನ್ನೂ ಎರಡು ಗೆಲುವಿನ ಅಗತ್ಯವಿದೆ. ಹಾಗಾಗಿ ಭಾರತ ತಂಡ ಮೂರನೇ ಪಂದ್ಯಕ್ಕೆ ಬಲಿಷ್ಠ ಪಡೆಯೊಂದಿಗೆ ಕಣಕ್ಕೆ ಇಳಿಯಲಿದೆ.

ಆರಂಭಿಕ ವೈಫಲ್ಯ: ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಉಪ ನಾಯಕ ಶುಭಮನ್ ಗಿಲ್ ಎರಡೂ ಪಂದ್ಯಗಳಲ್ಲಿ ವಿಫಲರಾಗಿ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದ್ದಾರೆ. ಗಿಲ್ ಆರಂಭಿಕರಾಗಿ ಬರುವುದಕ್ಕೂ ಮುನ್ನ ಸಂಜು ಸ್ಯಾಮ್ಸನ್, ಅಭಿಷೇಕ್ ಶರ್ಮಾ ಜತೆ ಇನ್ನಿಂಗ್ಸ್ ಆರಂಭಿಸಿ ಯಶಸ್ವಿಯಾಗಿದ್ದರು. ಆದರೆ ಈಗ ಆರಂಭಿಕ ವಿಕೆಟ್‌ಗೆ ಉತ್ತಮ ಜತೆಯಾಟ ಮೂಡಿ ಬರುತ್ತಿಲ್ಲ, ಹಾಗಾಗಿ ಫಾರ್ಮ್‌ನಲ್ಲಿಲ್ಲದ

ಶುಭ್‌ಮನ್ ಗಿಲ್ ಅವರನ್ನು ಈ ಪಂದ್ಯದಲ್ಲಿ ಕೈಬಿಟ್ಟು, ಸಂಜು ಸ್ಯಾಮ್ಸನ್‌ಗೆ ಪುನಃ ಆರಂಭಿಕ ಸ್ಥಾನ ನೀಡುವ ಸಾಧ್ಯತೆ ಇದೆ. ಸಂಜು ಸ್ಯಾಮ್ಸನ್ 17 ಪಂದ್ಯಗಳಲ್ಲಿ ಇನ್ನಿಂಗ್ಸ್ ಆರಂಭಿಸಿದ್ದು, 522 ರನ್‌ಗಳನ್ನು ಬಾರಿಸಿದ್ದಾರೆ. 2024ರಲ್ಲಿ ಅವರು ಮೂರು ಟಿ20 ಶತಕಗಳನ್ನು ಬಾರಿಸಿದ್ದಾರೆ.

ಬೌಲರ್‌ಗಳ ಬದಲಾವಣೆ: ಎರಡನೇ ಟಿ20 ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ಅವರು ನಾಲ್ಕು ಓವರ್‌ಗಳಿಗೆ 54 ರನ್ ನೀಡಿದ್ದರು. ತಮ್ಮ ಮೂರನೇ ಓವರ್‌ನಲ್ಲಿ 7 ವೈಡ್ ಬಾಲ್‌ಗಳನ್ನು ಹಾಕಿದ್ದರು. ಹಾಗಾಗಿ ಅವರ ಸ್ಥಾನಕ್ಕೆ ಬಹುಶಃ ಹರ್ಷಿತ್ ರಾಣಾಗೆ ಅವಕಾಶ ನೀಡಬಹುದು. ಶಿವಂ ದುಬೆ ಕೂಡಾ ಗಮನ ಸೆಳೆಯುವಲ್ಲಿ ವಿಫಲರಾಗಿದ್ದಾರೆ, ಹಾಗಾಗಿ ಅವರನ್ನು ಕೈ ಬಿಟ್ಟು, ಅವರ ಸ್ಥಾನಕ್ಕೆ ಸ್ಪಿನ್ನರ್ ಆಗಿ ಕುಲ್ದೀಪ್ ಯಾದವ್‌ಗೆ ಅವಕಾಶ ನೀಡಬಹುದು. ಹಾಗೆಯೇ ದ.ಆಫ್ರಿಕಾ ಕೂಡಾ ತನ್ನ ತಂಡದಲ್ಲಿ ಒಂದೆರಡು ಬದಲಾವಣೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಎರಡೂ ಪಂದ್ಯಗಳಲ್ಲೂ ಉತ್ತಮ ಪ್ರದರ್ಶನ ತೋರದ ಒಂದಿಬ್ಬರು ಆಟಗಾರರನ್ನು ಬದಲಿಸುವ ಸಾಧ್ಯತೆಯೂ ಇದೆ.

ಸಂಭಾವ್ಯ ತಂಡ

ಭಾರತ: ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ತಿಲಕ್ ವರ್ಮಾ, ಸೂರ್ಯ ಕುಮಾರ್ ಯಾದವ್ (ನಾಯಕ), ಹಾರ್ದಿಕ್ ಪಾಂಡ್ಯ, ಜಿತೇಶ್ ಶರ್ಮಾ (ಕೀಪರ್), ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ.

ದ.ಆಫ್ರಿಕಾ: ಏಡೆನ್ ಮಾರ್ಕ್ರಮ್ (ನಾಯಕ), ಒಟ್ನೀಲ್ ಬಾರ್ಟ್‌ಮನ್, ಕಾರ್ಬಿನ್ ಬಾಷ್, ಡೆವಾಲ್ಡ್ ಬ್ರೆವಿಸ್, ಕ್ವಿಂಟನ್ ಡಿ ಕಾಕ್ (ಕೀಪರ್), ಡೊನೊವನ್ ಫೆರೇರಾ, ರಝಾ ಹೆಂಡ್ರಿಕ್ಸ್, ಮಾರ್ಕೊ ಯೆನ್ಸೆನ್, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಜಾರ್ಜ್ ಲಿಂಡೆ, ಲುಂಗಿ ಎನ್ಗಿಡಿ, ಎನ್ರಿಕ್ ನೊರ್ಕಿಯಾ, ಲುಥೊ ಸಿಪಾಮ್ಲಾ, ಟ್ರಿಸ್ಟನ್ ಸ್ಟಬ್ಸ್.

ಮ್ಯಾಚ್ ಫಿಕ್ಸಿಂಗ್‌ನಲ್ಲಿ ತೊಡಗಿಸಿಕೊಳ್ಳಲು ಪ್ರಚೋದನೆ ಆರೋಪ

ಅಸ್ಸಾಂ ಕ್ರಿಕೆಟ್ ಆಟಗಾರರ ಅಮಾನತು

ಮುಂಬೈ: ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ 4 ಮಂದಿ ಆಟಗಾರರನ್ನು ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಶುಕ್ರವಾರ ಅಸ್ಸಾಂ ಕ್ರಿಕೆಟ್ ಅಸೋಸಿಯೇಷನ್ ಅಮಾನತು ಗೊಳಿಸಿದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಭ್ರಷ್ಟಾಚಾರ ನಿಗ್ರಹ ಮತ್ತು ಭದ್ರತಾ ಘಟಕ ಈ ಕುರಿತು ಈಗಾಗಲೇ ತನಿಖೆ ಕೈಗೆತ್ತಿಕೊಂಡಿದೆ. ತನಿಖೆ ಸಂಪೂರ್ಣವಾಗಿ ಮುಗಿಯುವವರೆಗೆ ಕ್ರಿಕೆಟ್‌ಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಿಂದ ಅವರನ್ನು ಅಮಾನತುಗೊಳಿಸಲಾಗಿದೆ. ಭ್ರಷ್ಟಾಚಾರದಲ್ಲಿ ಭಾಗಿಯಾದ ಮಾಹಿತಿ ಬಂದ ಕೂಡಲೇ ಅಸ್ಸಾಂ ಕ್ರಿಕೆಟ್ ಅಸೋಸಿಯೇಷನ್ ಆಟಗಾರರಾದ ಅಮಿತ್ ಸಿನ್ಹಾ, ಇಶಾನ್ ಅಹ್ಮದ್, ಅಮನ್ ತ್ರಿಪಾಠಿ ಮತ್ತು ಅಭಿಷೇಕ್ ಠಾಕೂರಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಂಡಿದೆ. ಅಮಾನತುಗೊಂಡಿರುವ ಈ ನಾಲ್ವರು ಆಟಗಾರರು ಅಸ್ಸಾಂ ತಂಡವನ್ನು ಪ್ರತಿನಿಧಿಸಿದ್ದು, ಲಖನೌದಲ್ಲಿ ನವೆಂಬರ್ 26ರಿಂದ ಡಿಸೆಂಬರ್ 8ರವರೆಗೆ ನಡೆದ ಈ ಬಾರಿಯ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯದ ವೇಳೆ ಮ್ಯಾಚ್ ಫಿಕ್ಸಿಂಗ್‌ನಲ್ಲಿ ತೊಡಗಿಸಿಕೊಳ್ಳಲು



ಪ್ರಚೋದನೆ ನೀಡಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ. ಅಸ್ಸಾಂ ಕ್ರಿಕೆಟ್ ಅಸೋಸಿಯೇಷನ್ ಕಾರ್ಯದರ್ಶಿ ಸನಾತನ್ ದಾಸ್ ಈ ಕುರಿತು ಮಾತನಾಡಿ, ಆರೋಪಗಳು ಬೆಳಕಿಗೆ ಬಂದ ನಂತರ, ಎಸಿಎ ಕ್ರಿಮಿನಲ್ ಮೊಕದ್ದಮೆಗಳನ್ನು ಸಹ ಪ್ರಾರಂಭಿಸಿದೆ. ಪ್ರಾಥಮಿಕವಾಗಿ ಕ್ರೀಡೆಯ ಸಮಗ್ರತೆಯ ಮೇಲೆ ಪರಿಣಾಮ ಬೀರುವ ಗಂಭೀರ ದುಷ್ಕೃತ್ಯದಲ್ಲಿ ಅವರು ಭಾಗಿಯಾಗಿರುವುದು ಕಂಡುಬರುತ್ತದೆ. ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆಯನ್ನು ದೂರ ಮಾಡಲು ಅಮಾನತು ನಿರ್ಧಾರ ಮಾಡಲಾಗಿದೆ. ಅಮಾನತುಗೊಂಡ ಆಟಗಾರರು ಈಗ ಎಸಿಎ ಇಲ್ಲವೇ ಅದರ ಜಿಲ್ಲಾ ಘಟಕಗಳು ಅಥವಾ ಅಂಗಸಂಸ್ಥೆ ಕ್ಲಬ್‌ಗಳು ನಿರ್ವಹಿಸುವ ಯಾವುದೇ ರಾಜ್ಯ ಮಟ್ಟದ ಟೂರ್ನಿಗಳು ಅಥವಾ ಪಂದ್ಯಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ.

ಐಸಿಸಿ ಜತೆಗಿನ ಒಪ್ಪಂದ: ಜಿಯೊಸ್ಟಾರ್ ಸ್ಪಷ್ಟನೆ

ನವದೆಹಲಿ: ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಜತೆ ಮಾಡಿಕೊಂಡಿರುವ ಕ್ರಿಕೆಟ್ ಪ್ರಸರಣ ಮಾಧ್ಯಮ ಹಕ್ಕುಗಳ ಒಪ್ಪಂದಕ್ಕೆ ತಾನು ಸಂಪೂರ್ಣ ಬದ್ಧವಾಗಿರು ವುದಾಗಿ ಮಾಧ್ಯಮ ಸಂಸ್ಥೆಯಾಗಿರುವ ಜಿಯೊಸ್ಟಾರ್ (ಜಿಯೊ ಹಾಟ್‌ಸ್ಟಾರ್) ತಿಳಿಸಿದೆ. ಐಸಿಸಿ ಜತೆಗಿನ ಒಪ್ಪಂದದಿಂದ ಜಿಯೊಸ್ಟಾರ್ ಹಿಂದೆ ಸರಿದಿದೆ ಎಂಬ ವರದಿಗಳು ಸತ್ಯದಿಂದ ಕೂಡಿಲ್ಲ ಎಂದು ಅದು ಪ್ರಕಟಣೆಯಲ್ಲಿ ಹೇಳಿದೆ. ಒಪ್ಪಂದದ ನಿಯಮಗಳನ್ನು ಪಾಲಿಸಲು ಬದ್ಧವಿರುವುದಾಗಿ ಜಿಯೊಸ್ಟಾರ್ ತಿಳಿಸಿದೆ ಎಂಬುದಾಗಿ ಪ್ರತ್ಯೇಕ ಪ್ರಕಟಣೆಯಲ್ಲಿ ಐಸಿಸಿ ಖಚಿತಪಡಿಸಿದೆ. ನಷ್ಟದ ಕಾರಣದಿಂದಾಗಿ, ಐಸಿಸಿ ಜತೆಗಿನ ನೇರ ಪ್ರಸಾರ ಹಕ್ಕುಗಳ ಒಪ್ಪಂದದಿಂದ ಅವಧಿಗೂ ಮುನ್ನವೇ ಹೊರಬರಲು ಜಿಯೊಸ್ಟಾರ್ ನಿರ್ಧರಿಸಿದೆ, ಆ ಕಾರಣದಿಂದಾಗಿ ಪುರುಷರ ಟಿ20 ವಿಶ್ವಕಪ್‌ಗೂ ಮೊದಲು ಇತರ ಪ್ರಸಾರಕರಿಗಾಗಿ ಐಸಿಸಿ ಹುಟುಕಾಟ ನಡೆಸುತ್ತಿದೆ ಎಂಬ ವರದಿಗಳು ಹರಿದಾಡಿದ್ದವು, ಹೀಗಾಗಿ ಒಪ್ಪಂದದ ಬಗ್ಗೆ ಜಿಯೊಸ್ಟಾರ್ ಸ್ಪಷ್ಟನೆ ನೀಡಿದೆ.

ಮೆಸ್ಸಿಗೆ ಸ್ವಾಗತ ಕೋರಿದ ಸಿಎಂ ರೇವಂತ್, ರಾಹುಲ್ ಗಾಂಧಿ

ಹೈದರಾಬಾದ್ ಮೆಸ್ಸಿ ಹವಾ

ಹೈದರಾಬಾದ್: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು 'ಗೋಟ್ ಇಂಡಿಯಾ' ಪ್ರವಾಸದ ಭಾಗವಾಗಿ ಭಾರತಕ್ಕೆ ಬಂದಿರುವ ಫುಟ್‌ಬಾಲ್ ದಂತಕಥೆ ಲಿಯೋನೆಲ್ ಮೆಸ್ಸಿ ಅವರನ್ನು ಶನಿವಾರ ಹೈದರಾಬಾದ್‌ನಲ್ಲಿ ಭೇಟಿ ಆಗಿದ್ದಾರೆ.

ಮಧ್ಯಾಹ್ನ 2.15ರ ಸುಮಾರಿಗೆ ವಿಶೇಷ ವಿಮಾನದ ಮೂಲಕ ದೆಹಲಿಯಿಂದ ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿ ಫಲಕ್ನುಮಾ ಪ್ಯಾಲೇಸ್ ಹೋಟೆಲ್‌ಗೆ ತೆರಳಲಿದ್ದು, ಅಲ್ಲಿ ಅವರು ಮೆಸ್ಸಿಯನ್ನು ಭೇಟಿಯಾಗಲಿದ್ದಾರೆ. ಮೆಸ್ಸಿ ಮತ್ತು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ನೇತೃತ್ವದ ತಂಡಗಳ ನಡುವಿನ ಸೌಹಾರ್ದ ಪಂದ್ಯಕ್ಕೆ ರಾಹುಲ್ ಸಾಕ್ಷಿಯಾಗಿದ್ದಾರೆ. ಶನಿವಾರ ಮಧ್ಯಾಹ್ನ ಕೋಲ್ಕತ್ತಾದಲ್ಲಿ ನಡೆದ ಸಾಲ್ಟ್ ಲೇಕ್ ದಾಂಧಲೆಯ ಬೆನ್ನಲ್ಲೇ ಹೈದರಾಬಾದ್ ಮೆಸ್ಸಿ ಕಾರ್ಯಕ್ರಮಕ್ಕೆ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಮೈದಾನದಲ್ಲಿ ಮೆಸ್ಸಿಯನ್ನು ನೋಡಲು ಸಾವಿರಾರು ಅಭಿಮಾನಿಗಳು ಕಾತರದಿಂದ ನೆರೆದಿದ್ದರು.

ಹೈದರಾಬಾದ್‌ನಲ್ಲಿ ಮೆಸ್ಸಿಯನ್ನು ಸಿಎಂ ರೇವಂತ್ ರೆಡ್ಡಿ ಸ್ವಾಗತಿಸಿದರು.

ಸೌಹಾರ್ದ ಪಂದ್ಯದಲ್ಲಿ ಪಾಲ್ಗೊಂಡ ಸಿಎಂ–ಮೆಸ್ಸಿ.

ನಾಳೆ ಮೋದಿ ಭೇಟಿ

ಡಿ.15ರಂದು ಮೆಸ್ಸಿ, ಪ್ರಧಾನಿ ಮೋದಿಯನ್ನು ಅವರ ನಿವಾಸದಲ್ಲೇ ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ. ಮೋದಿ ಜೊತೆ ಔತಣ ಕೂಟದಲ್ಲೂ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಬಳಿಕ ನವದೆಹಲಿಯ ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮೆಸ್ಸಿ ಭಾಗಿಯಾಗಲಿದ್ದಾರೆ.

ವಿಟಾಕೀಸ್

ಅದ್ದೂರಿಯಾಗಿ ಮೂಡಿಬರಲಿದೆ

ರಾಯರ ದರ್ಶನ

ಕಲಿಯುಗದ ಕಾಮಧೇನು ಕಲ್ಪವೃಕ್ಷರೆಂದೆ ಖ್ಯಾತರಾದ ಮಂತ್ರಾಲಯ ಗುರು ಶ್ರೀರಾಘವೇಂದ್ರಸ್ವಾಮಿಗಳಿಗೆ ವಿಶ್ವದಾದ್ಯಂತ ಕೋಟ್ಯಾಂತರ ಭಕ್ತರಿದ್ದಾರೆ. ರಾಯರ ಕುರಿತು ಸಾಕಷ್ಟು ಭಕ್ತಿಗೀತೆಗಳು ಬಂದಿದೆ. ಆದರೆ ಈವರೆಗೂ ಯಾರು ಹೇಳದ ಹಾಗೂ ತೋರಿಸದ ರಾಯರ ಬಗ್ಗೆಗಿನ ಕೆಲವು ವಿಷಯಗಳನ್ನು ರಾಯರ ದರ್ಶನ ಆಲ್ಬಂನಲ್ಲಿ ತೋರಿಸಲಾಗುತ್ತಿದೆ. ಲಕ್ಷ್ಮೀ ಗಣೇಶ ಪ್ರೊಡಕ್ಷನ್ಸ್ ಹಾಗೂ ದಿ ನ್ಯೂ ಇಂಡಿಯನ್ ಟೈಮ್ಸ್ ಲಾಂಛನದಲ್ಲಿ ಸುಗುಣ ರಘು ಈ ಅಲ್ಬಂ ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ಮಾಧ್ಯಮದವರಿಗೆ ಕೊಡಮಾಡುವ ಟಿ.ಎನ್.ಐ.ಟಿ ಪ್ರಶಸ್ತಿ ಸೇರಿದಂತೆ ಅನೇಕ ಸಮಾಜಮುಖಿ ಕಾರ್ಯಗಳಿಂದ ಗುರುತಿಸಿಕೊಂಡಿರುವ ರಘು ಭಟ್ ಉಸ್ತುವಾರಿ ವಹಿಸಿಕೊಂಡಿದ್ದಾರೆ.

ಮಂತ್ರಾಲಯದ ಪ್ರಸ್ತುತ ಪೀಠಾಧಿಪತಿಗಳಾದ ಸುಬುಧೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಗುರು ರಾಘವೇಂದ್ರ ಸ್ವಾಮಿಗಳ ದಿವ್ಯ ಚರಿತ್ರೆಯನ್ನು ವಿಶ್ವದಾದ್ಯಂತ ಹರಡುವ ಧ್ಯೇಯದೊಂದಿಗೆ ರಾಯರ ದರ್ಶನ ಆಲ್ಬಂ ಸಾಂಗ್ ನಿರ್ಮಾಣವಾಗುತ್ತಿದೆ. ರಾಯರ ಕುರಿತು ಸಾಕಷ್ಟು ಗೀತೆಗಳು ಬಂದಿದೆಯಾದರೂ, ಈವರೆಗೂ ಯಾರು ಹೇಳಿರದ ಹಾಗೂ ತೋರಿಸಿರದ ರಾಯರ ಕುರಿತಾದ ಕೆಲವು ವಿಷಯಗಳು ಈ ಆಲ್ಬಂ ಸಾಂಗ್‌ನಲ್ಲಿ ರಲ್ಲಿದೆ. ಇದೇ ತಿಂಗಳ 23ರಿಂದ ಏಳು ದಿನಗಳ ಕಾಲ ಮಂತ್ರಾಲಯದಲ್ಲಿ ಶ್ರೀಗಳು ಚಿತ್ರೀಕರಣಕ್ಕಾಗಿ ಸಮಯ ನೀಡಿದ್ದಾರೆ. ರಾಯರ ಭಕ್ತರಾದ ಅನೇಕ

ಸೆಲೆಬ್ರಿಟಿ ಕಲಾವಿದರು ಈ ಆಲ್ಬಂ ಸಾಂಗ್‌ನಲ್ಲಿ ಅಭಿನಯಿಸಲಿದ್ದಾರೆ. ನಾಗಾರ್ಜುನ ಶರ್ಮ ಅವರು ಗೀತರಚನೆ ಮಾಡುತ್ತಿದ್ದು, ಹೆಸರಾಂತ ಸಂಗೀತ ನಿರ್ದೇಶಕರಾದ ಸಿ.ಆರ್ ಬಾಬಿ ಹಾಗೂ ಅಜನೀಶ್ ಲೋಕ ನಾಥ್ ಸಂಗೀತ ಸಂಯೋಜಿಸಲಿದ್ದಾರೆ. ಫೆಬ್ರವರಿಯಲ್ಲಿ ಮಂತ್ರಾಲಯದಲ್ಲೇ ಅದ್ದೂರಿಯಾಗಿ ರಾಯರ ದರ್ಶನ ಆಲ್ಬಂ ಸಾಂಗ್ ಅನಾವರಣವಾಗಲಿದೆ. ನಾನು ದೆಹಲಿಯಲ್ಲಿದೆ. ಶ್ರೀಗಳು ಫೋನ್ ಮಾಡಿ ಈ ಪತ್ರಿಕಾಗೋಷ್ಠಿಗೆ ಹೋಗಲು ಆದೇಶಿಸಿ ದ್ದರು. ರಾಯರ ಕೆಲಸ ಅಂದ ಮೇಲೆ ಆಗಲ್ಲ ಎನ್ನುವ ಮಾತೇ ಇಲ್ಲ. ಏಕೆಂದರೆ ನನ್ನ ಉಸಿರೆ ರಾಯರು ಎಂದು ಭಾವುಕ ರಾಗಿ ಮಾತನಾಡಿದ ನಟ ಜಗ್ಗೇಶ್, ತಮಗೆ ರಾಯರ ಮೇಲೆ ಭಕ್ತಿ ಬರಲು ಕಾರಣ ನಮ್ಮ ತಾಯಿ. ಅವರು 500 ರೂಪಾಯಿ ಕೊಟ್ಟು ನನ್ನನ್ನು ಮೊದಲ ಬಾರಿಗೆ ಮಂತ್ರಾಲಯಕ್ಕೆ ಕಳುಸಿದರು. ರಾಯರಿ ದ್ದಾರೆ ಎಂದು ಮನದಲ್ಲಿ ಬಿತ್ತಿದ್ದರು. ಆನಂತರ ತಮ್ಮ ಜೀವನದಲ್ಲಾಗಿ ರುವ ರಾಯರ ಕರುಣೆ ಯನ್ನು ಮನದಾಳದ ಮಾತುಗಳ ಮೂಲಕ ತೆರೆದಿಟ್ಟ ಜಗ್ಗೇಶ್, ರಾಯರ ದರ್ಶನ ಆಲ್ಬಂ ಸಾಂಗ್ ಗೆ ಶುಭ ಕೋರಿ, ಎಲ್ಲರೂ ರಘು ಭಟ್ ಅವರ ಕಾರ್ಯಕ್ಕೆ ಪ್ರೋತ್ಸಾಹ ನೀಡಿ ಎಂದರು. ಮಂತ್ರಾಲಯದಿಂದ ಆಗಮಿಸಿದ್ದ ಶ್ರೀನಿಧಿ ಕರಣಂ ಅವರು ಶ್ರೀಗುರು ರಾಯರ ಹಾಗೂ ಸುಬುಧೇಂದ್ರ ತೀರ್ಥರ ಕರುಣೆಯನ್ನು ನೆನೆದು ಭಾವುಕರಾದರು. ರಘು ಭಟ್ ಅವರ ಈ ಪ್ರಯತ್ನಕ್ಕೆ ಶ್ರೀಗಳ ಸಂಪೂರ್ಣ ಅನುಗ್ರಹವಿದೆ ಎಂದರು. ರಾಯರ ಮಠದ ಮುಂದೆ ಇರುವಗಲೇ ರಾಯರ ದರ್ಶನ ದ ಹಾಡು ಬರೆಯಲು ರಘು ಭಟ್ ಅವರಿಂದ ಕರೆ ಬಂದ ವಿಷಯ ವನ್ನು ಗೀತರಚನೆಕಾರ ನಾಗಾರ್ಜುನ ಶರ್ಮ ತಿಳಿಸಿದರು. ನಿರ್ಮಾಪಕಿ ಸುಗುಣಾ ರಘು ಎಲ್ಲರನ್ನು ಸ್ವಾಗತಿಸಿದರು.

ಜೀನಲ್ಲಿ ಗ್ರೀನ್

ಕನ್ನಡ ಸೈಕಲಾಜಿಕಲ್ ಥ್ರಿಲ್ಲರ್ ಗ್ರೀನ್ ಸಿನಿಮಾ ಒಟಿಟಿ ಎಂಟ್ರಿಗೆ ಸಜ್ಜಾಗಿದೆ. ನಾಳೆಯಿಂದ ¨hh5 ಒಟಿಟಿಯಲ್ಲಿ ಈ ಚಿತ್ರ ಸ್ಟ್ರೀಮಿಂಗ್ ಆಗಲಿದೆ. ರಾಜ್ ವಿಜಯ್ ನಿರ್ದೇಶನದಲ್ಲಿ ಮೂಡಿಬಂದ ಈ ಚಿತ್ರದಲ್ಲಿ ವಿಭಿನ್ನ ಕಥಾಹಂದರವಿದೆ. ಇದು ಮನಸ್ಸನ್ನು ಬೆರಗುಗೊಳಿಸುವ ಥ್ರಿಲ್ಲರ್ ಚಿತ್ರವಾಗಿದ್ದು, ಪ್ರೇಕ್ಷಕರ ಮನಸ್ಸಿನ ಆಳಕ್ಕೆ ಕರೆದೊಯ್ಯುತ್ತದೆ. ತನ್ನ ಇಡೀ ಬದುಕನ್ನೇ ನಿಯಂತ್ರಣ ಮಾಡುವ ತನ್ನೊಳಗಿನ ರಾಕ್ಷಸನಿಂದ ಹೊರಬರಲು ಪ್ರಯತ್ನಿಸುವ ನಾಯಕನ ಕಥೆಯೇ ಗ್ರೀನ್.

ಗ್ರೀನ್ ಸಿನಿಮಾದಲ್ಲಿ ಗೋಪಾಲಕೃಷ್ಣ ದೇಶಪಾಂಡೆ, ಬಾಲಾಜಿ ಮನೋಹರ್, ಡಿಂಪಿ ಫಾಧ್ಯಾ, ಆರ್ ಜೆ ವಿಕ್ಕಿ ಮತ್ತು ಶಿವ ಮಂಜು ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ಕೆ. ಮಧುಸೂದನ್ ಅವರು ಛಾಯಾಗ್ರಹಣ ಮಾಡಿದ್ದಾರೆ. ಶಕ್ತಿ ಸ್ಯಾಕ್ ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ. ಗ್ರೀನ್ ಸಿನಿಮಾವನ್ನು ರಾಜ್ ವಿಜಯ್ ಹಾಗೂ ಬಿ.ಎನ್. ಸ್ವಾಮಿ ನಿರ್ಮಾಣ ಮಾಡಿದ್ದಾರೆ.

ದಾಖಲೆ ಬರೆದ ಜೈ

ಆರ್ನಿಸ್ ಮೂವೀಸ್, ಶೂಲಿನ್ ಫಿಲಂಸ್, ಮುಗ್ರೋಡಿ ಪ್ರೊಡಕ್ಷನ್ ಲಾಂಛನದಲ್ಲಿ ತಯಾರಾದ ರೂಪೇಶ್ ಶೆಟ್ಟಿ ನಿರ್ದೇಶನದ ಜೈ ಸಿನಿಮಾ ಬಿಡುಗಡೆಯಾಗಿ ದಾಖಲೆ ಬರೆಯುತ್ತಿದೆ. ಕನ್ನಡ ಹಾಗೂ ತುಳು ಭಾಷೆಯಲ್ಲಿ ರಿಲೀಸ್ ಆದಂತ ಈ ಸಿನಿಮಾ ಕರ್ನಾಟಕದಲ್ಲಿ ಮಾತ್ರವಲ್ಲ ಬೇರೆ ಬೇರೆ ದೇಶದಲ್ಲೂ ಅಬ್ಬರಿಸ್ತಾ ಇದೆ. ಕನ್ನಡ ನೆಲದಲ್ಲೇ ನೋಡುಗರು ಇಲ್ಲ ಎನ್ನುವ ಮಾತು ದೂರಾಗಿದೆ. ಕನ್ನಡ ಸಿನಿಮಾಗಳಿಗೆ ಗ್ಲೋಬಲ್ ಲೆವೆಲ್ ನಲ್ಲೂ ಮನ್ನಣೆ ಸಿಕ್ತಾ ಇದೆ. ಅದಕ್ಕೆ ಜೈ ಕಾರಣವಾಗಿದೆ.

ಸಿನಿಮಾ ರಿಲೀಸ್ ಆಗಿ ಒಂದು ತಿಂಗಳು ಆಗ್ತಾ ಇದೆ. ಅಂದ್ರೆ ಕಳೆದ ತಿಂಗಳು ನವೆಂಬರ್ 14ರಂದು ಸಿನಿಮಾ ರಿಲೀಸ್ ಆಗಿತ್ತು. ದಿನಕಳೆದಂತೆ ಸಿನಿಮಾದೊಳಗಿರುವ ಕಂಟೆಂಟ್ ಬಗ್ಗೆ ಜನ ಮಾತನಾಡುವುದಕ್ಕೆ ಶುರುವಾಯ್ತು. ಆಗಿನಿಂದ ಸಿನಿಮಾಗೆ ಡಿಮ್ಯಾಂಡ್ ಕೂಡ ಜಾಸ್ತಿ ಆಯ್ತು. ಈಗಿನ ಸಿನಿಮಾಗಳ ಪರಿಸ್ಥಿತಿ ಎಲ್ಲರಿಗೂ ಗೊತ್ತಿರುವಂತದ್ದೇ. ಒಂದು ವಾರ ಥಿಯೇಟರ್ ನಲ್ಲಿ ಇದ್ದರೆ ಹೆಚ್ಚು. ಅಂಥದ್ರಲ್ಲಿ ಜೈ ಸಿನಿಮಾ 16 ಥಿಯೇಟರ್ ನಲ್ಲಿ 25 ದಿನವನ್ನು ಪೂರೈಸಿದೆ. ಇದು ಈಚಿನ ದಿನದ ಸಾಧನೆಯೇ ಸರಿ.

ಜೈ ಸಿನಿಮಾ 2025ರ ಸಕ್ಸಸ್ ಫುಲ್ ಮೂವಿ ಅಂದ್ರೆ ತಪ್ಪಾಗುವುದಿಲ್ಲ, ಇದೇ ಖುಷಿಯಲ್ಲಿ ಸಿನಿಮಾ ತಂಡ 14ನೇ ತಾರೀಖು ಅಂದ್ರೆ ನಾಳೆ ಮುಂಬೈನಲ್ಲಿ 25 ಪ್ರೀಮಿಯರ್ ಶೋ ನಡೆಸಲು ಪ್ಲ್ಯಾನ್ ಹಾಕಿಕೊಂಡಿದೆ. ಇಷ್ಟು ದೊಡ್ಡ ಮಟ್ಟಕ್ಕೆ ತುಳುವಾಗಲಿ, ಕನ್ನಡವಾಗಲಿ ನಡೆದಿರಲಿಲ್ಲ. ಇದೀಗ ಜೈ ಆ ಎರಡು ಭಾಷೆಯ ಸಿನಿಮಾವನ್ನು ಆ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ ರೂಪೇಶ್ ಶೆಟ್ಟಿ.

ಇನ್ನು ಸಿನಿಮಾದ ಹಲವು ರೈಟ್ಸ್‌ಗಳು ಈಗಾಗಲೇ ಒಳ್ಳೆ ಬಜೆಟ್ ಗೆ ಸೇಲ್ ಆಗಿದೆ. ಬಲ್ಲ ಮೂಲಗಳಿಂದ ಸಿಕ್ಕ ಮಾಹಿತಿ ಪ್ರಕಾರ ಜೈ ಸಿನಿಮಾ 5 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿದೆ ಎನ್ನಲಾಗಿದೆ. ಜೈ ಸಿನಿಮಾದಲ್ಲಿ ಸುನೀಲ್ ಶೆಟ್ಟಿ, ಡಾ ದೇವದಾಸ್ ಕಾಪಿಕಾಡ್, ರಾಜ್ ದೀಪಕ್ ಶೆಟ್ಟಿ, ನವೀನ್ ಡಿ ಪಡೀಲ್, ಅರವಿಂದ ಬೋಳಾರ್, ಭೋಜರಾಜ ವಾಮಂಜೂರು, ಪ್ರಸನ್ನ ಶೆಟ್ಟಿ ಬೈಲೂರು, ಸಂದೀಪ್ ಶೆಟ್ಟಿ ಮಾಣಿಬೆಟ್ಟು, ಉಮೇಶ್ ಮಿಜಾರ್, ಮನೋಜ್ ಚೇತನ್ ಡಿ ಸೋಜ ಇನ್ನಿತರರು ಅಭಿನಯಿಸಿದ್ದಾರೆ. ನಾಯಕಿಯಾಗಿ ಅದ್ವಿತಿ ಶೆಟ್ಟಿ ಬಣ್ಣಹಚ್ಚಿದ್ದಾರೆ.

ಚಾಂಪಿಯನ್ ಖಾಜಿಮ ಬಯೋಪಿಕ್

ಇತ್ತೀಚೆಗೆ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಡೆದ ಕ್ಯಾರಮ್ ವಿಶ್ವಕಪ್‌ನಲ್ಲಿ ಮಹಿಳಾ ಸಿಂಗಲ್ಸ್, ಮಹಿಳಾ ಡಬಲ್ಸ್ ಮತ್ತು ಮಹಿಳಾ ತಂಡ ಚಾಂಪಿಯನ್ ಶಿಪ್ - ಮೂರು ಪ್ರಶಸ್ತಿಗಳನ್ನು ಗೆದ್ದ ವಿಶ್ವ ಚಾಂಪಿಯನ್ 16 ವರ್ಷ ವಯಸ್ಸಿನ ಎಂ.ಬಿ. ಖಾಜಿಮ ಅವರ ಸಾಧನೆಯನ್ನು ಸಿನಿಮಾ ರೂಪದಲ್ಲಿ ತೆರೆಗೆ ತರಲು ನಿಹಾನ್ ಎಂಟರ್ಟೈನ್ಮೆಂಟ್ ಸಂಸ್ಥೆಯ ನಾಗೇಶ್ ಪಾಟೀಲ್ ಟಿ ಅವರು ಮುಂದಾಗಿದ್ದಾರೆ. ತಮಿಳು, ತೆಲುಗು, ಕನ್ನಡ, ಮಲೆಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಮೂಡಿ ಬರುತ್ತಿರುವ ಈ ಚಿತ್ರವನ್ನು ಮುರಳಿ ಎಸ್ ವೈ ನಿರ್ದೇಶಿಸುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಸಮಾರಂಭ ಚೆನ್ನೈನ ಪ್ರಸಾದ್ ಲ್ಯಾಬ್ ನಲ್ಲಿ ನಡೆದಿದ್ದು, ಜನವರಿಯಿಂದ ಚಿತ್ರೀಕರಣ ಆರಂಭವಾಗಲಿದೆ. ಚಲನಚಿತ್ರ ಕ್ಷೇತ್ರದಲ್ಲಿ ತನ್ನ ಮೊದಲ ಹೆಜ್ಜೆ ಇಡುತ್ತಿರುವ ನಿಹಾನ್ ಎಂಟರ್‌ಟೈನ್‌ಮೆಂಟ್ ಸಂಸ್ಥೆ, ತನ್ನ ಮೊದಲ ನಿರ್ಮಾಣವಾಗಿ ದಿ ಕ್ಯಾರಮ್ ಕ್ವೀನ್ ಚಿತ್ರವನ್ನು ಅಧಿಕೃತವಾಗಿ ಘೋಷಿಸಿದೆ. ಸಾಮಾನ್ಯ ಹಿನ್ನೆಲೆಯಿಂದ ಬಂದ ಯುವತಿಯೊಬ್ಬಳು ತನ್ನ ಪ್ರತಿಭೆ, ಶ್ರಮ ಮತ್ತು ಅಸಾಧಾರಣ ಹೋರಾಟದ ಮೂಲಕ ಕ್ಯಾರಮ್ ಕ್ರೀಡೆ ಯಲ್ಲಿ ಸಾಧಿಸಿದ ಪಯಣವೇ ಈ ಚಿತ್ರದ ಪ್ರಮುಖ ಕಥಾ ಹಂದರ. ತಮಿಳು

ಚಲನಚಿತ್ರರಂಗದ ಪ್ರತಿಭಾವಂತ ನಟ ಕಾಳಿ ವೆಂಕಟ್, ರಾಂಧ್ಯ ಭೂಮೇಶ್ ಗೌಡ ಹಾಗೂ ರಿಶಿ ಪ್ರಕಾಶ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಉಳಿದ ತಾರಾಬಳಗ ಹಾಗೂ ತಂತ್ರಜ್ಞರ ಕುರಿತು ಮಾಹಿತಿಯನ್ನು ಸದ್ಯದಲ್ಲೇ ತಿಳಿಸಲಾಗುವುದೆಂದು ನಿರ್ದೇಶಕ ಮುರಳಿ ಎಸ್ ವೈ ತಿಳಿದಿದ್ದಾರೆ.



ಇದ್ರೆ ನೆಟ್ಟಗಿರ್ಬೇಕು

ಕಾಲ ಬದಲಾದಂತೆ ಮನುಷ್ಯನ ಮನಸ್ಥಿತಿಯಲ್ಲೂ ಬದಲಾವಣೆ ಗಳುಂಟಾಗಿ ಸಮಾಜದಲ್ಲಿ ಮೌಲ್ಯಗಳೂ ಕ್ಷೀಣಿಸುತ್ತಿದೆ. ಇಂತಹ ಕಾಲಘಟ್ಟದಲ್ಲಿ ಮರೆಯಾ ಗುತ್ತಿರುವ ಬದ್ಧತೆಯನ್ನು ನೆನಪಿ ಸಲು ನಟ, ನಿರ್ದೇಶಕ ಯತಿರಾಜ್ ಕಿರುಚಿತ್ರವೊಂದನ್ನು ನಿರ್ಮಿಸಿ, ನಿರ್ದೇಶನ ಮಾಡಿದ್ದಾರೆ. 'ಇದ್ರೆ ನೆಟ್ಟಗಿರ್ಬೇಕು' ಎಂಬ ಶೀರ್ಷಿಕೆ ಯಡಿಯಲ್ಲಿ ಬಿಡುಗಡೆಯಾಗಿರುವ ಕಿರುಚಿತ್ರ ಜನ ಮೆಚ್ಚುಗೆ ಡೆಯುವಲ್ಲಿ ಯಶಸ್ವಿಯಾಗಿದೆ. ತಣ್ಣಗೆ ಶುರುವಾಗುವ ಕಥೆ ಅನಿರೀಕ್ಷಿತವಾದ ತಿರುವುಗಳು ಪಡೆದು, ಅಂತಿಮ ಹಂತ ತಲುಪುವ ವೇಳೆಗೆ ದೊಡ್ಡದ್ದೊಂದು ಸಂದೇಶ ಸಾರಿ ಹೇಳುವಲ್ಲಿ ಸಫಲವಾಗಿದೆ.

ಯತಿರಾಜ್ ನಿರ್ಮಿಸಿ, ನಿರ್ದೇಶನ ಮಾಡಿರುವ ಜೊತೆಗೆ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ರಂಜಿತ, ತನಿಷ, ಮಹೇಶ್, ಅನು, ದಿವ್ಯ, ಗುರು ಮತ್ತು ಅಭಿಷೇಕ್ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಜೀವಾ ಅವರ ಕ್ಯಾಮೆರಾ ಕೆಲಸ, ವಿಜಯ್ ಹರಿತ್ಸ ಅವರ ಸಂಗೀತ ಮತ್ತು ಜೀವನ್ ಪ್ರಕಾಶ್ ರವರ ಸಂಕಲನ ಉತ್ತಮವಾಗಿದೆ.

ಧ್ರುವ ಸರ್ಜಾ ಸಹಾಯಹಸ್ತ

ಸ್ಯಾಂಡಲ್‌ವುಡ್‌ನ ಆ್ಯಕ್ಷನ್ ಪ್ರಿನ್ಸ್ ಎಂದೇ ಖ್ಯಾತರಾಗಿರುವ ಧ್ರುವ ಸರ್ಜಾ ಇತ್ತೀಚೆಗೆ ಪತ್ನಿ ಪ್ರೇರಣಾ ಜೊತೆ ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ ಕೊಟ್ಟಿದ್ದರು. ಪಕ್ಷಿಧಾಮದಲ್ಲಿ ಕೆಲ ಹೊತ್ತು ವಿಹಾರ ಮಾಡಿದ ಬಳಿಕ ಅಲ್ಲೇನಾದರೂ ಕೊಡುಗೆ ಕೊಡಲು ನಿರ್ಧರಿಸಿದ್ದರು. ಹೀಗಾಗಿ ಅಲ್ಲಿನ ಸಿಬ್ಬಂದಿಗೆ ಹಾಗೂ ಕೆಲಸ ಮಾಡುವ ಕಾರ್ಮಿಕರ ಕಷ್ಟಕ್ಕೆ ಮಿಡಿದಿದ್ದಾರೆ. ಕಾರ್ಮಿಕರಿಗೆ ಜರ್ಕಿನ್, ಬ್ಯಾಗ್, ವಾಟರ್ ಬಾಟಲ್ ಹಾಗೂ ವಿಷಜಂತುಗಳಿಂದ ಅವರನ್ನು ಕಾಪಾಡುವ ಶೂಗಳನ್ನು ನೀಡಿದ್ದಾರೆ.

ನಟ ಧ್ರುವ ಸರ್ಜಾ ಅಲ್ಲಿಗೆ ಭೇಟಿ ಕೊಡೋದಲ್ಲದೆ ಅಲ್ಲಿನ ಕಾರ್ಮಿಕರ ಕಷ್ಟಕ್ಕೆ ಮಿಡಿದಿರುವುದಕ್ಕೆ ಅವರ ಫ್ಯಾನ್ಸ್‌ಗಳಿಂದ ಭಾರೀ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬಿಸಿಲು, ಮಳೆ, ಚಳಿ, ಗಾಳಿ ಲೆಕ್ಕಿಸಿದೆ ಪಕ್ಷಿಧಾಮದ ಪಾರ್ಕ್‌ನಲ್ಲಿ ದುಡಿಯುವ, ಪ್ರಾಣಿ ಪಕ್ಷಿಗಳನ್ನು ಜೋಪಾನ ಮಾಡುವ ಶ್ರಮಿಕರ ಕಷ್ಟಕ್ಕೆ ನಟ ಧ್ರುವ ಸರ್ಜಾ ಆಸರೆಯಾಗಿದ್ದಾರೆ. ಅವರ ಈ ಕೆಲಸಕ್ಕೆ ಪಕ್ಷಿಧಾಮದ ಕಾರ್ಮಿಕರು ಹರಸಿ ಹಾರೈಸಿದ್ದಾರೆ.

ವಿರಾಮ
ಓದುವ ಲೋಕಕ್ಕೆ ಓದುವ ನಿಲ್ದಾಣ
ವಿಶ್ವವಾಣಿ
14.12.2025
ಭಾನುವಾರ

ಯಕ್ಷಗಾನ ಕಲೆಯು ಇಂದು ಒಂದು ಸ್ಥಿತ್ಯಂತರದ ಹಂತದಲ್ಲಿದೆ. ಆಧುನಿಕ ಯುಗದ ಬದಲಾವಣೆಗಳು, ಸುಲಭ ಸಂವಹನ ಸೌಲಭ್ಯಗಳು, ಕಾಲಮಿತಿಯ ಪ್ರಯೋಗ, ಸಾಮಾಜಿಕ ಜಾಲತಾಣಗಳ ಪ್ರಭಾವವು, ಯಕ್ಷಗಾನದಂತಹ ಅಪರೂಪದ ರಂಗಕಲೆಯ ಮೇಲೂ ತೀವ್ರ ಪ್ರಭಾವ ಬೀರುತ್ತಿದೆ. ಕಳೆದ ಶತಮಾನದ ತನಕ ಯಕ್ಷಗಾನದಲ್ಲಿ ಪೌರಾಣಿಕ ಪ್ರಸಂಗಗಳು ಮಾತ್ರ ಜನಪ್ರಿಯವಾಗಿದ್ದವು. ಕಳೆದ ಕೆಲವು ದಶಕಗಳಿಂದ ಸಾಮಾಜಿಕ ಪ್ರಸಂಗಗಳು ಮತ್ತು ಹೆಚ್ಚು ಮನರಂಜನೆ ನೀಡುವ ಕಥೆಗಳು ಯಕ್ಷಗಾನವನ್ನು ಪ್ರವೇಶಿಸಿದವು. ಈಚಿನ ಒಂದೆರಡು ದಶಕಗಳಲ್ಲಿ ವಾಣಿಜ್ಯೀಕರಣದ ಪ್ರಭಾವವೋ ಅಥವಾ ಜನಮಾನಸದ ಬದಲಾದ ಮನಸ್ಥಿತಿಯೋ, ಯಕ್ಷಗಾನದಲ್ಲಿ ಜನರಂಜನೆಯೇ ಪ್ರಮುಖ ಎಂಬ ಅಭಿಪ್ರಾಯವೂ ರೂಪುಗೊಳ್ಳತೊಡಗಿತು. ಈಚಿನ ತಲೆಮಾರಿನ ಯುವಕರಲ್ಲಿ ಕೆಲವರು, ಸಾಮಾಜಿಕ ಪ್ರಸಂಗಗಳನ್ನು ಮತ್ತು ಅದರಲ್ಲಿ ಕಂಡು ಬರುವ ಮಧುರವಾದ ಹಾಡು ಮತ್ತು ವೈವಿಧ್ಯಮಯ ಹಾಸ್ಯವಿಚಾರಗಳನ್ನು ಹೆಚ್ಚು ಹೆಚ್ಚು ಇಷ್ಟಪಡುತ್ತಿದ್ದಾರೆ. ಇದೇ ಮನಸ್ಥಿತಿ ಮುಂದುವರಿದರೆ, ಯಕ್ಷಗಾನ ಕಲೆಯ ಭವಿಷ್ಯವೇನು ಎಂಬ ಕಳವಳವೂ ಕೆಲವರಲ್ಲಿ ಮೂಡಿದೆ. ಇಂದಿನ ಬದಲಾದ ಕಾಲಮಾನದಲ್ಲಿ ಯಕ್ಷಗಾನ ಹೇಗಿರಬೇಕು? ನಿಮ್ಮ ಪ್ರತಿಕ್ರಿಯೆಗೆ ಸ್ವಾಗತ.

ಕಲೆ ಉಳಿದರೂ, ಅದರ ಆತ್ಮ ಉಳಿದೀತೆ?

» ರವಿ ಮಡೋಡಿ

ಕಲಾ ಮಾಧ್ಯಮದಲ್ಲಿ ಅಭಿರುಚಿಗಳು, ಅಭಿಪ್ರಾಯಗಳು ಹೇಗೆ ಬದಲಾಗುತ್ತವೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ. ಒಬ್ಬ ಯುವಕ ನನಗೆ ಯಕ್ಷಗಾನದ ಮೂಲಕ ಹೆಚ್ಚು ಪರಿಚಿತವಾಗಿದ್ದ. ಆತ ಅಪ್ಪಟ ಯಕ್ಷಗಾನ ಪ್ರೇಮಿ. ಎಲ್ಲೇ ಬಯಲಾಟವಿದ್ದರೂ ಆ ಕ್ಷಣದಲ್ಲೇ ಹೊರಡುವಷ್ಟು ಉತ್ಸಾಹ ಅವನದ್ದು.

ಆದರೆ ಆತ ಬೆಳೆದ ಪರಿಸರದ ಪ್ರಭಾವವೋ ಏನೋ, ಯಕ್ಷಗಾನದಲ್ಲಿ ಇತ್ತೀಚೆಗೆ ಬಳಕೆಯಲ್ಲಿರುವ 'ಸಾಮಾಜಿಕ ಪ್ರಸಂಗ'ಗಳನ್ನೇ, ನಿಜವಾದ ಯಕ್ಷಗಾನವೆಂದು ಭಾವಿಸುವ ಮನೋಭಾವ ಅವನಲ್ಲಿ ಗಾಢವಾಗಿ ಬೆಳೆದಿದೆ. ಅವನು ನೋಡುವುದು ಸಾಮಾಜಿಕ ಪ್ರಸಂಗಗಳನ್ನು ಮಾತ್ರ. ಕೆಲವು ಪ್ರಸಂಗಗಳನ್ನು ಆತ ಹತ್ತಾರು ಬಾರಿ ನೋಡಿರಬಹುದು. ಯಕ್ಷಗಾನವೆಂದರೆ ಅಷ್ಟೊಂದು ಅಭಿಮಾನ. ಮೊಬೈಲ್‌ನಲ್ಲಿ 'ಸಾಮಾಜಿಕ ಪ್ರಸಂಗ'ಗಳನ್ನು ರೆಕಾರ್ಡ್ ಮಾಡುವುದು, ಮನೆಗೆ ಬಂದು ಪುನಃ ಪುನಃ ನೋಡುವುದು. ಇವೆಲ್ಲವೂ ಅವನ ನೆಚ್ಚಿನ ಹವ್ಯಾಸಗಳು. ಇದರಲ್ಲಿ ತಪ್ಪೇನೂ ಇಲ್ಲ; ಖುಷಿ ಪಡೆಯಲು ಇಷ್ಟು ಸಾಕು ಎಂದೇ ಭಾವಿಸೋಣ. ಅದರಲ್ಲೂ ಮುಖ್ಯವಾಗಿ, ಇಂದಿನ ವಿವಿಧ ಸಾಮಾಜಿಕ ಜಾಲತಾಣಗಳ ಪ್ರಭಾವದ ಯುಗದಲ್ಲಿ, ಯಕ್ಷಗಾನ ಕಲೆಯನ್ನು ಆತ ಮೆಚ್ಚಿ, ಇಷ್ಟಪಟ್ಟು, ಆಸ್ವಾದಿಸುತ್ತಿದ್ದಾನೆ ಎಂಬುದೂ ಅಭಿಮಾನದ ಸಂಗತಿ.

ಆದರೆ, ಇಲ್ಲೊಂದು ವಿಷಾದದ ಸಂಗತಿ ಇದೆ; ಅದೇನೆಂದರೆ, ಯಕ್ಷಗಾನದಲ್ಲಿ ಜನಪ್ರಿಯವಾಗಿರುವ ಮತ್ತು ಯಕ್ಷಗಾನದ ಮೂಲಗುಣಗಳನ್ನು ಅಳವಡಿಸಿಕೊಂಡಿರುವ 'ಪೌರಾಣಿಕ ಪ್ರಸಂಗ'ಗಳು ಎಂದರೆ, ಆ ಯುವಕನಿಗೆ ಆಗುವುದೇ ಇಲ್ಲ. ಎಷ್ಟರಮಟ್ಟಿಗೆ ಎಂದರೆ, ಪೌರಾಣಿಕ ಪ್ರಸಂಗಗಳನ್ನು, ಕಳೆದ ಶತಮಾನದಿಂದಲೂ ಬಳಕೆಯಲ್ಲಿರುವ ಕೆಲವು ಪ್ರಮುಖ ಪ್ರಸಂಗಗಳನ್ನು ಆತ ನೋಡುವುದಿಲ್ಲ. ಅದರ ಬಗ್ಗೆ ಮಾತಾಡಿದರೆ ದೂರ ಸರಿಯುತ್ತಾನೆ. ಅವನ ಈ ನಿರಾಸಕ್ತಿಯನ್ನು ಕಂಡರೆ, ನನಗನಿಸಿದ್ದು, ಹಳೆಯ ಕಾಲದ ಮತ್ತು ಯಕ್ಷಗಾನದ ಗುಣಗಳನ್ನು ರೂಢಿಸಿಕೊಂಡಿರುವ 'ಪೌರಾಣಿಕ ಪ್ರಸಂಗ'ಗಳನ್ನು ಆಸ್ವಾದಿಸುವ ಸಾಮರ್ಥ್ಯ ಅವನಲ್ಲಿ ಉಳಿದಿಲ್ಲ. ಅಲ್ಲಿ ಬರುವ ಪುರಾಣಜಿಜ್ಞಾಸೆ, ಪಾತ್ರಗಳ ಕಟ್ಟುವಿಕೆ, ನೋಡುವ ದೃಷ್ಟಿ ಯಾವುದೂ ಅವನಿಗೆ ಮುಖ್ಯವಾಗುದೇ ಇಲ್ಲ. ಬಾಲ್ಯದಿಂದಲೂ ಅಂದರೆ, ಕಳೆದ ಒಂದು ದಶಕದಿಂದಲೂ ಸಾಮಾಜಿಕ ಪ್ರಸಂಗಗಳನ್ನು ನೋಡುತ್ತಲೇ ಬಂದಿರುವ, ತುಸು ವಾಣಿಜ್ಯಕ ಛಾಯೆ ಹೊಂದಿರುವ ಪ್ರಸಂಗಗಳನ್ನು ನೋಡುತ್ತಲೇ ಬೆಳೆದಿರುವ ಆತನಿಗೆ, ಯಕ್ಷಗಾನ ಎಂದರೆ 'ಸಾಮಾಜಿಕ ಪ್ರಸಂಗ' ಎಂದನಿಸಿಬಿಟ್ಟಿದೆ!

ಆ ಯುವಕನ ಯಕ್ಷಗಾನ ಆಸಕ್ತಿಯ ಬಗ್ಗೆ ಮತ್ತು ಸಾಮಾಜಿಕ ಪ್ರಸಂಗ ಮಾತ್ರ ವೀಕ್ಷಿಸುವ ಹವ್ಯಾಸದ ಬಗ್ಗೆ ಕುತೂಹಲಗೊಂಡು 'ಯಾಕೆ ಹೀಗೆ?' ಎಂದು ಕೇಳಿದೆ. ಆತ ಅವನ ಆಸಕ್ತಿಯನ್ನು ವಾಸ್ತವ ನೆಲೆಗಟ್ಟಿನಲ್ಲಿ ವಿವರಿಸಿ ಹೇಳಿದ. 'ಹೊಸ ಪ್ರಸಂಗಗಳ ಹೊಸ ಹಾಡುಗಳು, ಹೊಸ ಕಥೆ, ಮಧ್ಯೆ ಮಧ್ಯೆ ಬರುವ ಹಾಸ್ಯ' ಇವೆಲ್ಲ ತನಗೆ ಖುಷಿ ಕೊಡುತ್ತವೆ ಎಂದ. ಪ್ರತಿ ವರ್ಷ ಮೇಳಗಳು ಯಾವ ಹೊಸ ಪ್ರಸಂಗ ತರುತ್ತವೆ, ಯಾವ ಹೊಸ ಹಾಡು ಬರುತ್ತದೆ ಇವೆಲ್ಲವೂ ಅವನ ಕುತೂಹಲದ ವಿಷಯ. ಪೌರಾಣಿಕ ಪ್ರಸಂಗಗಳ ಬಗ್ಗೆ ಮುಂದೆ ಕೇಳಿದಾಗ, ''ಅದು ತುಂಬಾ ಬೋರ್'' ಎಂದು ನೇರವಾಗಿ ಹೇಳಿಬಿಟ್ಟ. ಅವನ ಈ ನಿರಾಸಕ್ತಿಗೆ ನನ್ನಲ್ಲಿ ಉತ್ತರವಿರಲಿಲ್ಲ. ಇಲ್ಲಿ ಯಕ್ಷಗಾನಕ್ಕೆ ಒಬ್ಬ ಪ್ರೇಕ್ಷಕ ಸಿಕ್ಕಿದ ಅಂತ ಖುಷಿ ಪಡುವುದೇ ಅಥವಾ ನಿಜವಾದ ಯಕ್ಷಗಾನವನ್ನು ನೋಡುವ ಒಬ್ಬ ಪ್ರೇಕ್ಷಕನನ್ನು ಕಳೆದುಕೊಂಡಿತೋ ಎನ್ನುವುದೋ ತಿಳಿಯಲಿಲ್ಲ!

ಇಂತಹ ವಿದ್ಯಮಾನವನ್ನು ಆ ಒಬ್ಬ ಯುವಕನ ವಿಚಾರವೆಂದು ಬಿಟ್ಟರೆ ಸಮಸ್ಯೆ ಅಲ್ಲಿಗೆ ನಿಲ್ಲುವುದಿಲ್ಲ; ಇದು ಹೊಸ ತಲೆಮಾರಿನ ಮನೋವೃತ್ತಿಯ ಸ್ಪಷ್ಟ ಸೂಚನೆ ಎಂದು ಭಾವಿಸಬಹುದು. ಸಾಮಾಜಿಕ ಪ್ರಸಂಗ ಮತ್ತು ಅದರಲ್ಲಿ ಬರುವ ಹಾಸ್ಯ ಮತ್ತು ಹೊಸ ಹೊಸ ಹಾಡುಗಳು ಚೆನ್ನ ಎಂದು ಹೇಳುವ ಹತ್ತಾರು ಮಂದಿ ಇಂದು ನಿಮಗೆ ಸಿಗಬಹುದು. ಇನ್ನೊಂದು ಹತ್ತುಇಪ್ಪತ್ತು ವರ್ಷಗಳು ಕಳೆದರೆ, ಯಕ್ಷಗಾನ ಎಂಬ ಕಲೆಯ ರೂಪವೇ ಹೀಗೆಯೇ ಇರಬೇಕು ಎಂಬ ಭಾವನೆ ತಲೆಮಾರುಗಳಲ್ಲಿ ಬೇರೂರಿಬಿಡಬಹುದು! ಇದೊಂದು ಎಂತಹ ಅಭಾಸ ಎನಿಸುವ ವಿಷಯ ಅಲ್ಲವೆ? ಯಕ್ಷಗಾನ ಕಲೆಯ ಅಂತಃಸತ್ವವನ್ನು ಇಂದಿನ ಯುವ ತಲೆಮಾರಿಗೆ ನಾವುಗಳೇ ಅಂದರೆ ಯಕ್ಷಗಾನದ ಕುರಿತು ಮಾಹಿತಿ ಇದ್ದವರು ಹೇಳದಿದ್ದರೆ, ಅವರಿಗೆ ತಿಳಿಹೇಳುವುದು ಯಾರು? ಯಾವ ಮಾದರಿಗಳನ್ನು ನಾವು ಮುಂದಿನ ತಲೆಮಾರಿಗೆ ಉಳಿಸಿಹೋಗುತ್ತಿದ್ದೇವೆ? ಒಂದು ಸಂಸ್ಕೃತಿಯ ಪಲ್ಲಟಕ್ಕೆ ಹೊಣೆಗಾರರು ಯಾರು? ಅಭಿರುಚಿಯನ್ನು ರೂಪಿಸುವಲ್ಲಿ ಸೋಲುತ್ತಿದ್ದೇವಾ? ಸಾಮಾಜಿಕ ಪ್ರಸಂಗಗಳೇ ಇಷ್ಟ ಎಂಬ ಅಭಿಪ್ರಾಯವು ಗಟ್ಟಿಯಾಗಿ ಹೊಸ ತಲೆಮಾರಿನಲ್ಲಿ ಉಳಿಯಿತು ಎಂದರೆ, ಮುಂದೊಂದು ದಿನ ನಾವು ಪರಿತಾಪಗೊಂಡರೂ ಬದಲಾವಣೆ ಮಾಡಿಕೊಳ್ಳಲಾಗದ ಸ್ಥಿತಿಗೆ ತಲುಪುವುದು ಖಚಿತ. ಕಲೆ ಉಳಿದರೂ ಅದರ ಪುರಾಣವೆಂಬ ಆತ್ಮವೇ ಮಾಯವಾಗುವ ಅಪಾಯ ತಪ್ಪದು. ಇದು ಬದಲಾವಣೆಯ ಆರಂಭ ಮಾತ್ರ; ಅದರ ಲಕ್ಷಣಗಳು ಈಗಲೇ ಗೋಚರಿಸುತ್ತಿವೆ.

ಗಮನಿಸಿ, ಇಂದು ಪುರಾಣದ ಬಗ್ಗೆ ಹೆಚ್ಚು ಚರ್ಚೆಗಳು ನಡೆಯುತ್ತಿದ್ದರೆ ಯಕ್ಷಗಾನದಲ್ಲಿ ಮಾತ್ರ. ಸಮಾಜಕ್ಕೆ ಸಾಮಾಜಿಕ ಕಥೆಗಳಿಗಾಗಿ ಸಿನಿಮಾ ಇದೆ, ನಾಟಕವಿದೆ, ಟಿವಿ ಧಾರಾವಾಹಿ ಇದೆ. ಪುರಾಣವನ್ನು ಆಪ್ತವಾಗಿ, ಜೀವಂತವಾಗಿ, ಜನಮನಕ್ಕೆ ತಲುಪಿಸುವಂತೆ ಉಳಿಸಿಕೊಂಡಿರುವುದು ಯಕ್ಷಗಾನ ಕಲೆ ಮಾತ್ರ. ಒಂದರ್ಥದಲ್ಲಿ ಇದು ಭಾರತೀಯ ಸಂಸ್ಕೃತಿಯ ಅಸ್ಮಿತೆಯನ್ನು ಬೆಳಗುತ್ತಿರುವ ಮಹತ್ತರ ಕಲೆ.

ಆದರೆ ಇಂದು ಅದರೊಳಗಿರುವ ನಮ್ಮತನ, ತಾತ್ವಿಕತೆ, ಸಂಸ್ಕಾರ, ಮೂಲ ಮೌಲ್ಯಗಳು ನಿಧಾನವಾಗಿ ಮಾಯವಾಗುತ್ತಿವೆ. ಯಕ್ಷಗಾನವೂ ದಿನೇದಿನೇ ಸಾಮಾಜಿಕ ರಂಜನೆಯ ಆಯಾಮಕ್ಕೆ ಸೀಮಿತವಾಗುತ್ತಿರುವುದು ವಿಷಾದಕರ. ಮುಂದೆ ಕಲೆ ಉಳಿದರೂ, ಅದರ ಆತ್ಮ ಮಾತ್ರ?

(ಪ್ರತಿಕ್ರಿಯಿಸಿ : viramapost@gmail.com)

ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತರ ಕಾದಂಬರಿಗಳನ್ನು ಆಕರ್ಷಕವಾಗಿ ಮರುಮುದ್ರಿಸಿ ಪ್ರಕಟಿಸುವುದರ ಮೂಲಕ, ಆ ಧೀಮಂತ ಸಾಹಿತಿಯ ಕೃತಿಗಳು ನಾಡಿನ ಜನಸಾಮಾನ್ಯರ ಕೈ ಸೇರುವಂತೆ ಮಾಡಿದ್ದು ಈ ಸಂಸ್ಥೆಯ ಒಂದು ಸಾಧನೆ. ಪ್ರತಿ ವರ್ಷ ರಾಜ್ಯೋತ್ಸವ ಆಚರಣೆಯ ಅಂಗವಾಗಿ ದೊಡ್ಡ ಸಂಖ್ಯೆಯಲ್ಲಿ ಕನ್ನಡದ ಪುಸ್ತಕಗಳನ್ನು ಪ್ರಕಟಿಸುವುದು ಸಹ ಇನ್ನೊಂದು ಸಾಧನೆ. ಆ ಮೂಲಕ ಹೊಸ ಲೇಖಕರನ್ನು ಬೆಳೆಸುವ ಕೆಲಸ ಮಾಡುತ್ತಿದೆ ಈ ಸಂಸ್ಥೆ!

ಕನ್ನಡದ ಸೇವೆಯನ್ನು ಹೀಗೂ ಮಾಡಬಹುದು!

» ರಾ.ನಂ. ಚಂದ್ರಶೇಖರ

ಇದೇ ಡಿಸೆಂಬರ್ 27ರಂದು, ಒಟ್ಟು 70 ಕನ್ನಡ ಪುಸ್ತಕಗಳು ಒಂದೇ ವೇದಿಕೆಯಲ್ಲಿ ಲೋಕಾರ್ಪಣೆಯಾಗುತ್ತಿವೆ. ನಿಶ್ಚಿತವಾಗಿ ಇದು ಕನ್ನಡಲೋಕದ ದೊಡ್ಡ ಸಾಧನೆ. ಇಷ್ಟೊಂದು ಕನ್ನಡ ಪುಸ್ತಕಗಳನ್ನು ಒಂದೇ ದಿನ ಬಿಡುಗಡೆ ಮಾಡುತ್ತಿರುವವರು, ಬೆಂಗಳೂರಿನ ಸಪ್ನ ಬುಕ್ ಹೌಸ್‌ನವರು. ಪ್ರತಿ ವರ್ಷ, ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ, ಅದು ಎಷ್ಟನೆಯ ರಾಜ್ಯೋತ್ಸವವೋ ಅಷ್ಟು ಪುಸ್ತಕಗಳನ್ನು ಹಿರಿಯ, ಕಿರಿಯ, ಹೊಸ ಲೇಖಕರಿಂದ ಬರೆಯಿಸಿ ಪ್ರಕಟಿಸುತ್ತಿರುವ ಸಪ್ನದ ಈ 'ಕನ್ನಡದ ಕೆಲಸ' ಅತಿಶಯವಾದದ್ದು. ಸೀಮಿತ ಮಾರುಕಟ್ಟೆಯಿರುವ ಕನ್ನಡದಲ್ಲಿ ಅದೂ ಕನ್ನಡಿಗರು ಪುಸ್ತಕಗಳನ್ನು ಓದುವ ಹವ್ಯಾಸವನ್ನು ಮರೆತಿದ್ದಾರೆ ಅನ್ನುವ ಮಾತುಗಳು ಕೇಳಿ ಬರುತ್ತಿರುವ ಕಾಲದಲ್ಲಿ, ಕನ್ನಡ ಪುಸ್ತಕಗಳನ್ನು ಯಥೇಚ್ಛವಾಗಿ, ಪ್ರತಿ ವರ್ಷ ಪ್ರಕಟಿಸುತ್ತಿರುವ ಸಪ್ನದವರದು ಒಂದು ಅಪರೂಪದ ಸಾಹಸ ಎನ್ನಲಡ್ಡಿಯಿಲ್ಲ.

ಬೆಂಗಳೂರಿನ ಪ್ರಮುಖ ಭಾಗದಲ್ಲಿ ಮಳಿಗೆ ಹೊಂದಿರುವ ಸಪ್ನ ಬುಕ್ ಹೌಸ್‌ನ ಕನ್ನಡ ಪ್ರೀತಿ ಕೇವಲ ನವೆಂಬರ್‌ನಲ್ಲಿ (ಅಥವಾ ರಾಜ್ಯೋತ್ಸವದ ನೆಪದಲ್ಲಿ ಡಿಸೆಂಬರ್‌ನಲ್ಲಿ) ಪುಸ್ತಕಗಳ ಪ್ರಕಟಣೆಗೆ ಸೀಮಿತವಾಗಿಲ್ಲ. ಕನ್ನಡಿಗರ ಭಾವಕೋಶದಲ್ಲಿ ವಿಶೇಷ ಸ್ಥಾನವಿರುವ ನವೆಂಬರ್ ತಿಂಗಳಿನಲ್ಲಿ ಕನ್ನಡಿಗರ ಪುಸ್ತಕ ಪ್ರೇಮವನ್ನು ಉದ್ದೀಪನಗೊಳಿಸುವ ಪ್ರಯತ್ನವನ್ನು ಸಪ್ನ ನಿರಂತರವಾಗಿ ಮಾಡುತ್ತಿದೆ. ಕರ್ನಾಟಕ ರಾಜ್ಯೋತ್ಸವದಂದು (ನವೆಂಬರ್ 1), ತನ್ನ ಮಳಿಗೆಯಲ್ಲಿ ಪುಸ್ತಕ ಜಾತ್ರೆ ನಡೆಸುತ್ತದೆ. ಈ ಜಾತ್ರೆಯಲ್ಲಿ ವಿವಿಧ ಕ್ಷೇತ್ರದ ಕನ್ನಡಾಸಕ್ತರನ್ನು ಆಹ್ವಾನಿಸಿ ಕನ್ನಡ ಪುಸ್ತಕಗಳ ಕೇಂದ್ರಿತವಾಗಿ ಕನ್ನಡಕ್ಕೆ ಸಂಬಂಧಿಸಿದ ಸಂವಾದ ನಡೆಸುತ್ತಾರೆ. ಸುಗಮ ಸಂಗೀತ, ಜಾನಪದ ಕಲೆಯ ಪ್ರದರ್ಶನ, ಮಕ್ಕಳ ಕಾರ್ಯಕ್ರಮವೂ ಇರುತ್ತದೆ.

ರಾಜ್ಯೋತ್ಸವದ ದಿನದಂದು ಮತ್ತೊಂದು ವಿಶೇಷವೆಂದರೆ, ಅವರ ಮಳಿಗೆಯಲ್ಲಿ ಕನ್ನಡ ಪುಸ್ತಕಗಳಿಗೆ ರಿಯಾಯಿತಿ, ಅಂದು ಪಾಲ್ಗೊಂಡವರಿಗೆ ಉಚಿತ ಪುಸ್ತಕ ಕೊಡುಗೆ ಮೊದಲಾದ ವಿನೂತನ ಅಭಿಯಾನಗಳನ್ನು ನಡೆಸುತ್ತಾರೆ. ಅಂದು ಹಿರಿಯ ಕಿರಿಯ ಸಾಹಿತಿಗಳು ಕಲಾವಿದರು, ವಿದ್ಯಾರ್ಥಿಗಳು, ಹಿರಿ-ಕಿರಯ ಸಾಹಿತಿಗಳು, ಸಾಹಿತಾಸಕ್ತರು ಎಲ್ಲರೂ ಕಲೆತು ಸಂಭ್ರಮಿಸುವ ಒಂದು ವೇದಿಕೆಯಾಗಿದೆ. ಈ ಜಾತ್ರೆಯಲ್ಲಿ ಕನ್ನಡ ಓದುಗರನ್ನು ಆಕರ್ಷಿಸುವ ಹಲವು ಯೋಜನೆಗಳಿಗೆ ನಾಂದಿ. ಇಡೀ ನವೆಂಬರ್ ತಿಂಗಳು ಕನ್ನಡ ಪುಸ್ತಕಗಳ ಪ್ರದರ್ಶನ, ರಿಯಾಯಿತಿ ಮಾರಾಟ, ಸಾಹಿತ್ಯ ಸಂವಾದ ನಡೆಯುತ್ತದೆ.

ಎಪ್ಪತ್ತು ಕನ್ನಡ ಪುಸ್ತಕಗಳ ಪ್ರಕಟಣೆ

ಪ್ರತಿ ವರ್ಷ ರಾಜ್ಯೋತ್ಸವದ ನೆಪದಲ್ಲಿ, ಇಷ್ಟೊಂದು ಸಂಖ್ಯೆಯ ಕನ್ನಡ ಪುಸ್ತಕ ಪ್ರಕಟಿಸಿ (ಈ ವರ್ಷ 70 ಪುಸ್ತಕಗಳು), ಸಮಾರಂಭವನ್ನೇರ್ಪಡಿಸಿ, ಗಣ್ಯರಿಂದ ಬಿಡುಗಡೆಯನ್ನು ಮಾಡಿಸಿ, ಆಯಾ ಪುಸ್ತಕಗಳ ಲೇಖಕರನ್ನು ಗೌರವಿಸುವ ಕೆಲಸವನ್ನು ಮಾಡುತ್ತಿರುವುದು ಸಪ್ನ ಬುಕ್ ಹೌಸ್ ಮಾತ್ರ. ಪ್ರತಿ ವರ್ಷ ಈ ರೀತಿಯ ಪುಸ್ತಕ ಬಿಡುಗಡೆ ಮಾಡುವ ಸಂದರ್ಭದಲ್ಲಿ, ಹಿರಿಯ ಕಿರಿಯ ಲೇಖಕರಿಗೆ ಹೆಚ್ಚಿನ ಸ್ಫೂರ್ತಿ, ಬೆಂಬಲವನ್ನೂ ನೀಡಿದಂತಾಗುತ್ತದೆ; ಆ ಮೂಲಕ ಕನ್ನಡದಲ್ಲಿ ಹೊಸ ಹೊಸ ಲೇಖಕರು ಬೆಳೆಯಲು ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಸಪ್ನ ಬುಕ್ ಹೌಸ್ ಸಹಾಯ ಮಾಡುತ್ತಿದೆ ಎಂಬುದು ನಿಸ್ಸಂಶಯ.

ಜನವರಿಯಲ್ಲಿ ಮತ್ತೊಮ್ಮೆ ಪುಸ್ತಕ ಸುಗ್ಗಿ. ಇದಕ್ಕೆ ನೆಪವೆಂದರೆ, ಸಂಕ್ರಾಂತಿ ಹಬ್ಬ! ಈ ಎಲ್ಲ ಕಾರ್ಯಕ್ರಮಗಳಲ್ಲಿ ಹಿರಿ ಕಿರಿಯ ಲೇಖಕರು, ಓದುಗರ ಆ ಸಮ್ಮಿಲನ ಸಂವಾದಕ್ಕೆ ಅವಕಾಶ ಕಲ್ಪಿಸುವಂತಹ, ಕನ್ನಡದ ವಿವಿಧ ಕ್ಷೇತ್ರದ ಸಾಧಕರನ್ನು ಒಳಗೊಳ್ಳುವಂತೆ ನೋಡಿಕೊಳ್ಳುವುದು ಸಪ್ನದ ಹೆಚ್ಚುಗಾರಿಕೆ. ಸಪ್ನ ಇತ್ತೀಚೆಗೆ ಪತ್ತೆದಾರಿ ಕಾದಂಬರಿಕಾರ ಎನ್. ನರಸಿಂಹಯ್ಯ ಅವರ ಶತಮಾನೋತ್ಸವ ಆಚರಿಸಿತು. ತಮ್ಮ ಕಾದಂಬರಿಗಳ ಮೂಲಕ ಕನ್ನಡದ ಆರಂಭಿಕ ಓದುಗರ ಹಸಿವನ್ನು ಹೆಚ್ಚಿಸಿದ ಹೆಗ್ಗಳಿಗೆ ಎನ್.ನರಸಿಂಹಯ್ಯ ಅವರದ್ದು. ಅವರ ಕೆಲವು ಕಾದಂಬರಿಗಳನ್ನು ಮರುಮುದ್ರಣವನ್ನೂ ಮಾಡುವ ಮೂಲಕ, ಸಪ್ನ ಬುಕ್ ಹೌಸ್, ಗೌರವ ತೋರಿದೆ. ಕನ್ನಡ ಪರ ಸಂಘ, ಸಂಸ್ಥೆಗಳು ಮಾಡಬೇಕಿದ್ದ ಕೆಲಸವಿದು.

ಕೆಲವು ದಶಕಗಳ ಹಿಂದೆ ನಮ್ಮ ರಾಜ್ಯದ ಕೆಲವು ವಿಶ್ವವಿದ್ಯಾಲಯಗಳು, ಪ್ರಚಾರೋಪನ್ಯಾಸ ಮಾಲಿಕೆಯ ಮೂಲಕ, ಕಡಿಮೆ ಬೆಲೆಯಲ್ಲಿ ಪುಟ್ಟ ಪುಟ್ಟ ಪುಸ್ತಕಗಳನ್ನು ಪ್ರಕಟಿಸುತ್ತಿದ್ದವು ಮತ್ತು ಆ ಮೂಲಕ ಶ್ರೀಸಾಮಾನ್ಯರಿಗೆ ಎಲ್ಲ ಕ್ಷೇತ್ರದ ಜ್ಞಾನದ ಪರಿಚಯವಾಗುತ್ತಿತ್ತು. ಹಾಗೆಯೇ, ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ ಗೃಹ ಸರಸ್ವತಿ ಮಾಲೆಯ ಪುಸ್ತಕಗಳು ಸಾಹಿತ್ಯಾಸಕ್ತರಿಗೆ, ವಿವಿಧ ಕ್ಷೇತ್ರಗಳ ಆಸಕ್ತರಿಗೆ ಉಪಯುಕ್ತವಾಗಿತ್ತು. ಹಂಪೆಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ 'ಮಂಟಪ ಮಾಲೆ' ಜ್ಞಾನ ಕ್ಷೇತ್ರ ಪ್ರವೇಶಿಸುವವರಿಗೆ ಮೆಟ್ಟಿಲಾಗಿತ್ತು. ಆದರೆ, ಅದೇಕೋ ಈಗ ವಿಶ್ವ ವಿದ್ಯಾಲಯಗಳು ಇಂತಹ ಪ್ರಕಟಣೆಗಳನ್ನು ನಿಲ್ಲಿಸಿವೆ ಅಥವಾ ಬಹುಮಟ್ಟಿಗೆ ಕಡಿಮೆ ಮಾಡಿವೆ. ಇನ್ನು ಕೆಲವು ಸರ್ಕಾರದ ಸಂಸ್ಥೆಗಳು ಪ್ರಕಟಿಸುವ ಪುಸ್ತಕಗಳು 'ಶಾಶ್ವತ ಸಾಹಿತ್ಯ'ವಾಗಿ, ಭದ್ರವಾಗಿ ಉಳಿದಿವೆ. (ಇಲ್ಲಿ 'ಶಾಶ್ವತ' ಅಂದರೆ ಮಾರಾಟವಾಗದೆ, ಆಯಾ ಇಲಾಖೆಗಳ ಕಪಾಟುಗಳಲ್ಲೇ ಉಳಿದಿರುವ ಪುಸ್ತಕಗಳು).

ಹಿರಿಯ ಸಾಹಿತಿಗಳ ಸಮಗ್ರ ಸಂಪುಟಗಳು

ಸೀಮಿತ ಮಾರುಕಟ್ಟೆಯಿರುವ ಕನ್ನಡದಲ್ಲಿ ವಿವಿಧ ಲೇಖಕರ ಸಮಗ್ರ ಸಂಪುಟಗಳ ಪ್ರಕಟಣೆಗೆ ಮುಂದಾದದ್ದು ದೊಡ್ಡ ಸಾಹಸವೇ ಸರಿ. ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತರ ಹಲವು ಕಾದಂಬರಿಗಳನ್ನು ಆಕರ್ಷಕವಾಗಿ ಮುದ್ರಿಸಿ, ಪ್ರಕಟಿಸಿದ್ದು ಇದಕ್ಕೆ ಒಂದು ಉದಾಹರಣೆ. ಗಾಂಧಿನಗರದಂತಹ ಕೇಂದ್ರ ಸ್ಥಾನದಲ್ಲಿ ಶಿವರಾಮ ಕಾರಂತರ ಹಲವು ಕಾದಂಬರಿಗಳನ್ನು ಪ್ರದರ್ಶನಕ್ಕೆ ಇಟ್ಟು, ರಾಜ್ಯದ ವಿವಿಧ ಭಾಗಗಳಿಂದ ಬೆಂಗಳೂರಿಗೆ ಬರುವವರ ಕೈಗೆ ಸುಲಭವಾಗಿ ಸಿಗುವಂತೆ ಮಾಡಿದ್ದು ಸಪ್ನ ಬುಕ್ ಹೌಸ್‌ನ ಒಂದು ವಿಶೇಷ ಸೇವೆ ಎಂದೇ ಹೇಳಬಹುದು; ಅದರಿಂದಾಗಿ, ಇಂದು 'ಮೂಕಜ್ಜಿಯ ಕನಸುಗಳು', 'ಮರಳಿ ಮಣ್ಣಿಗೆ' ಮೊದಲಾದ ಕಾದಂಬರಿಗಳು ನಾಡಿನಾದ್ಯಂತ ಆಸಕ್ತರ ಕೈ ಸೇರಿವೆ. ಇದೇ ರೀತಿ ಹಲವು ಧೀಮಂತ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ, ಜನರ ಕೈಗೆ ತಲುಪಿಸುವಲ್ಲಿ ಸಪ್ನದ ಕೊಡುಗೆ ಹಿರಿದು. ಆನ್‌ಲೈನ್ ಸೇವೆ ಆರಂಭವಾಗುವ ಮುನ್ನ ಇದ್ದ ಸನ್ನಿವೇಶದಲ್ಲಿ ಇಂತಹ ಸಾಹಸ ನಿಜಕ್ಕೂ ವಿಶೇಷ.



ದಿವ್ಯ ದರ್ಶನ ಮಾಲೆ

ಈ ಕೊರತೆಗಳನ್ನು ತುಂಬಲೋ ಎಂಬಂತೆ 'ಸಪ್ನ ಸಪ್ನ ದಿವ್ಯ ದರ್ಶನ ಮಾಲೆ' ಎಂಬ ಪುಸ್ತಕಮಾಲೆಯನ್ನು ಪ್ರಕಟಿಸಲು ಆರಂಭಿಸಿದೆ. ಇದರಲ್ಲಿ, ಮಾನವನ ನಾಗರೀಕತೆ, ಸಂಸ್ಕೃತಿ, ಮಾಹಾನ್ ಚೇತನಗಳ ಚಿಂತನೆಯನ್ನು ಪೂಚಯಿಸಿದೆ; ಜತೆಗೆ, 'ಸಪ್ನ ಜ್ಞಾನದೀಪ ಮಾಲೆ' ಜ್ಞಾನ-ವಿಜ್ಞಾನವನ್ನು ಪರಿಚಯಿಸುತ್ತಿದೆ. ಸಪ್ನ ಬುಕ್ ಹೌಸ್‌ನ ಪ್ರಕಟಣೆಗಳು, ಗಂಭೀರ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಜ್ಞಾನ ಶಾಖೆಗಳ

ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಕನ್ನಡದ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗಿವೆ. ಪ್ರತಿ ವರ್ಷ ಕನಿಷ್ಠ ಇಪ್ಪತ್ತೈದರಿಂದ ಮೂವತ್ತು ಹೊಸ ಲೇಖಕರ ಪುಸ್ತಕಗಳನ್ನು ಸಪ್ನದವರು ಪ್ರಕಟಿಸುತ್ತಾರೆ. ಇವರಲ್ಲಿ ಕೆಲವರಾದರೂ ಬೆಳೆದು, ಮುಂದಿನ ದಿನಗಳಲ್ಲಿ ಕನ್ನಡಕ್ಕೆ ಗೌರವ ತರಬಲ್ಲ ಸಾಹಿತ್ಯ ಸೃಷ್ಟಿಸುವ ಸಾಧ್ಯತೆಯಿದೆ.

ಜನತೆಯ ಋಣ ತೀರಿಸಲು ಏನಾದರೂ ಮಾಡಬೇಕು

ಸಪ್ನ ಬುಕ್ ಹೌಸ್‌ನ ಮುಖ್ಯಸ್ಥರಾದ ಸುರೇಶ್ ಷಾ ಅವರೇ ಒಂದೆಡೆ ಹೇಳಿಕೊಂಡಿರುವಂತೆ, ಇಲ್ಲಿ ನೆಲೆ ನಿಲ್ಲಲು ಸಾಧ್ಯವಾಗಿಸಿದ 'ಕನ್ನಡ ಜನತೆಯ ಋಣ ತೀರಿಸಲು ಏನಾದರು ಮಾಡಬೇಕು' ಎಂಬ ತುಡಿತವಿತ್ತು. ಅದನ್ನು ಸಾಕಾರಗೊಳಿಸಲು ಎಲ್ಲ ಕನ್ನಡ ಪುಸ್ತಕಗಳು ಒಂದೇ ಸೂರಿನಡಿ ಸಿಗುವಂತೆ ಮಾಡುವ ಆಶಯದಿಂದ ಕನ್ನಡ ಪುಸ್ತಕಗಳಿಗೆ ಮೀಸಲಾದ ಪ್ರತ್ಯೇಕ ಸಪ್ನ ಕನ್ನಡ ಪುಸ್ತಕ ಮಳಿಗೆಯನ್ನು ತೆರೆದರು. ಇಂದು ಅದು ಭಾರತದ ದೊಡ್ಡ ಪುಸ್ತಕ ಮಳಿಗೆ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ತಾಯಿನಾಡು ಗುಜರಾತಿನ ಸಂಪರ್ಕ ಬಿಡದೆ, ಬದುಕು ನೀಡಿದ ಕರ್ನಾಟಕವನ್ನು ಪ್ರೀತಿಯಿಂದ ಕಂಡು ಕನ್ನಡದ ಮುಖ್ಯ ವಾಹಿನಿಯಲ್ಲಿ ಬೆರೆತು, ನೆಲೆ ನಿಂತ ಸಪ್ನಾದ ಸ್ಥಾಪಕ ಸುರೇಶ್ ಷಾ ಕುಟುಂಬ ಹೆತ್ತ ತಾಯಿ, ಸಲಹಿದ ತಾಯಿ ಇಬ್ಬರ ಸೇವೆಯನ್ನು ಮಾಡುತ್ತಿರುವುದು ಅನುಕರಣೀಯ, ಅಭಿನಂದನೀಯ.

ಸುಮಾರು ನಾಲ್ಕು ದಶಕಗಳ ಹಿಂದೆ ನವೆಂಬರ್ ಬಂತೆಂದರೆ, ತಮ್ಮ ಸಂತಸವನ್ನು ವ್ಯಕ್ತಪಡಿಸಲು ಕನ್ನಡಾಭಿಮಾನಿಗಳಿಗೆ ಕನ್ನಡ ಚಿತ್ರಗಳನ್ನೇ ನೋಡಬೇಕಿತ್ತು; ಕನ್ನಡ ಪುಸ್ತಕಗಳ ಮಳಿಗೆಗಳಿಗೆ ಭೇಟಿನೀಡಿ, ಸಂಭ್ರಮವನ್ನು ಹಂಚಿಕೊಳ್ಳಲು ಹೆಚ್ಚಿನ ಆಯ್ಕೆಗಳು ಆಗ ಇರಲಿಲ್ಲ. ಪ್ರತಿ ವರ್ಷ ನವೆಂಬರ್‌ನಲ್ಲಿ (ಮೊದಲ ಬಾರಿ 1974ರಲ್ಲಿ) ಸಪ್ನ ಬುಕ್ ಹೌಸ್‌ನವರು ಕನ್ನಡ ಪುಸ್ತಕಗಳಿಗೆ ವಿಶೇಷ ರಿಯಾಯಿತಿ ನೀಡಿದ್ದಲ್ಲದೇ, 'ಸಂಜೆ ನೀವು ಸಾಹಿತಿಗಳೊಡನೆ ಮಾತನಾಡಬಹುದು, ಕೊಳ್ಳುವ ಪುಸ್ತಕಗಳಿಗೆ ಸಾಹಿತಿಗಳು ಸಹಿಯನ್ನೂ ಪಡೆಯಬಹುದು' ಎಂಬ ಪ್ರಕಟಣೆ ನೀಡಿದ್ದನ್ನು ನೋಡಿ ಪುಳಕಿತನಾಗಿದ್ದೆ. ಅಂದು ಸಂತಸದಿಂದ ಸಪ್ನ ಬುಕ್ ಹೌಸ್‌ನಲ್ಲಿ ಕನ್ನಡ ಪುಸ್ತಕಗಳನ್ನು ಕೊಂಡೆವು. ಕನ್ನಡ ರಾಜ್ಯೋತ್ಸವ ತಿಂಗಳಲ್ಲಿ ವಿಶೇಷ ರಿಯಾಯಿತಿ ಮತ್ತು ಒಂದು ಮೊತ್ತದ ಪುಸ್ತಕ ಕೊಂಡವರಿಗೆ ವರ್ಷವೆಲ್ಲ ರಿಯಾಯಿತಿ ಇಂದಿಗೂ ಮುಂದುವರೆದಿದೆ. ನನ್ನ ತಿಳುವಳಿಕೆಯಂತೆ ನವೆಂಬರ್‌ನಲ್ಲಿ ಕನ್ನಡಿಗರ ವಿಶೇಷ ಕನ್ನಡಾಭಿಮಾನವನ್ನು ಗ್ರಹಿಸಿ, ಅದನ್ನು ಸಾಹಿತ್ಯಾಸಕ್ತಿಯ ರೂಪದಲ್ಲಿ ಬಳಸಿಕೊಂಡದ್ದು ಮೊದಲಿಗೆ ಸಪ್ನ ಪುಸ್ತಕ ಮಳಿಗೆ.

ಸಪ್ನ ಬುಕ್ ಹೌಸ್, ಕನ್ನಡ ಸಾಹಿತ್ಯ ಕೃತಿಗಳ ಜತೆಗೆ,ವಿವಿಧ ಜ್ಞಾನ ಕ್ಷೇತ್ರಗಳ ಪುಸ್ತಕವನ್ನು ಪ್ರಕಟಿಸಿದೆ ಮತ್ತು ಕನ್ನಡದ ಜ್ಞಾನಸೃಷ್ಟಿಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಿ ಅದರ ಪ್ರಸರಣವನ್ನು ವ್ಯಾಪಕವಾಗಿ ಮಾಡಿದೆ. ವಿಜ್ಞಾನ, ಕೃಷಿ ಮುಂತಾದ ಕ್ಷೇತ್ರದ ಹಲವು ಪುಸ್ತಕ ಪ್ರಕಟಿಸಿ ಜನರ ಕೈಸೇರುವಂತೆ ಮಾಡಿದ್ದು ಒಂದು ಅಸಾಮಾನ್ಯ ಸಾಧನೆ. ಕರ್ನಾಟಕದಲ್ಲಿ 25 ಪುಸ್ತಕ ಮಳಿಗೆ ತೆರೆಯುವ ಮೂಲಕ ನಾಡಿನ ಎಲ್ಲೆಡೆ ಕನ್ನಡ ಪುಸ್ತಗಳು ದೊರೆಯುವಂತೆ ಮಾಡಿರುವ ಸಪ್ನದವರ ಈ ಕೆಲಸ ಶ್ಲಾಘನೀಯ.

ಪುಸ್ತಕ ವಿಮಾನ

ಯಕ್ಷಗಾನದ ಪೀಠಿಕೆಗಳ ಆಕರಗ್ರಂಥ

» ಡಾ. ಬಿ. ಜನಾರ್ದನ ಭಟ್

ರಾಧಾಕೃಷ್ಣ ಕಲ್ಚಾರ್ ಅವರು ಯಕ್ಷಗಾನ ತಾಳಮದ್ದಳೆಯ ಕ್ಷೇತ್ರದಲ್ಲಿ ಪ್ರಸಿದ್ಧರಾದ ವಿದ್ವಾಂಸರು. ಪತ್ರಕರ್ತರಾಗಿ, ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಸ್ವಯಂನಿವೃತ್ತಿ ಪಡೆದು ಯಕ್ಷಗಾನ ಕ್ಷೇತ್ರಕ್ಕೆ ಬಂದವರು. ಅವರು ಸಾಹಿತಿಯಾಗಿಯೂ ಕಥೆ-ಕಾದಂಬರಿಗಳನ್ನು, ಕಾವ್ಯ-ಪುರಾಣ ಚಿಂತನೆಗಳನ್ನು, ಅಂಕಣಬರಹಗಳನ್ನು, ಅನುಭವಕಥನಗಳನ್ನು ಮತ್ತು ಲಲಿತ ಪ್ರಬಂಧಗಳನ್ನು ಕೊಟ್ಟಿದ್ದಾರೆ. ಅವರು ಕಾವ್ಯ, ಇತಿಹಾಸ, ಪುರಾಣಗಳನ್ನು ನಿರಂತರ ಅಧ್ಯಯನ ಮಾಡುತ್ತಿರುವವರಾದದ್ದರಿಂದ ಈ ಕ್ಷೇತ್ರದ ತಮ್ಮ ಜ್ಞಾನ ಮತ್ತು ಚಿಂತನೆಗಳನ್ನು ವಿಶಿಷ್ಟ ರೀತಿಯಲ್ಲಿ ಕನ್ನಡದ ಓದುಗರೊಂದಿಗೆ ಹಂಚಿಕೊಳ್ಳುತ್ತಾರೆ. ಆ ರೀತಿ ಸೃಷ್ಟಿಯಾದ ಅವರ ಮೂರು ವಿಶಿಷ್ಟ ಕೃತಿಗಳು ಕುತೂಹಲಕಾರಿ ಎನಿಸಿವೆ.

'ಪೀಠಿಕಾ ಪ್ರಕರಣ': ಯಕ್ಷಗಾನ ಪ್ರಸಂಗಗಳ ಪ್ರಸ್ತುತಿಯಲ್ಲಿ ಪ್ರಧಾನ ಪಾತ್ರಗಳು ರಂಗಪ್ರವೇಶ ಮಾಡಿ ತಮ್ಮ ಪರಿಚಯವನ್ನೂ, ಪ್ರಸ್ತುತ ತಮ್ಮೆದುರಿಗೆ ತೆರೆದುಕೊಳ್ಳುತ್ತಿರುವ ಸಮಸ್ಯೆಯನ್ನೂ 'ಸ್ವಗತ'ದ ಮಾದರಿಯಲ್ಲಿ ಪ್ರೇಕ್ಷಕರ ಜತೆಗೆ ಹಂಚಿಕೊಳ್ಳುವುದನ್ನು ಪಾತ್ರಗಳ ಪೀಠಿಕೆ ಎನ್ನುತ್ತಾರೆ. ಯಕ್ಷಗಾನ ರಂಗ ಪ್ರಸ್ತುತಿಗಳಿಗಿಂತ ದೀರ್ಘವಾದ ಪೀಠಿಕೆಗಳು ತಾಳಮದ್ದಳೆಯಲ್ಲಿರುವುದು ಸಾಮಾನ್ಯ ಪದ್ಧತಿ. ಶೇಕ್ಸ್ಪಿಯರ್ ನಾಟಕಗಳ ಮತ್ತು ಮಾರ್ಲೋನ 'ಡಾಕ್ಟರ್ ಫಾಸ್ಟಸ್' ನಂತಹ ನಾಟಕಗಳ 'ಸಾಲಿಲೋಕ್ವಿ' (ದೀರ್ಘ ಸ್ವಗತ)ಗಳಂತೆ ಯಕ್ಷಗಾನ ತಾಳಮದ್ದಳೆಯಲ್ಲಿ ಕೆಲವು ಕಲಾವಿದರ ಪೀಠಿಕೆಗಳು ಜನಾಕರ್ಷಣೆ ಹೊಂದಿವೆ. ಇಲ್ಲಿ ಪೀಠಿಕೆಗಳನ್ನು ಪ್ರಸ್ತುತಪಡಿಸುವುದು ವಿದ್ವತ್ತನ್ನು ಅಪೇಕ್ಷಿಸುವ ಒಂದು ಕಲೆ. ಯಕ್ಷಗಾನದಲ್ಲಿ ಪೀಠಿಕೆಯನ್ನು ಮಂಡಿಸಲು ಪ್ರಸಂಗದ ಪದ್ಯಗಳಿದ್ದರೂ ವಿದ್ವಾಂಸ ಕಲಾವಿದರು ಆ ಪದ್ಯಗಳಿಗೆ ಬದ್ಧರಾಗಿದ್ದೂ ಅವುಗಳನ್ನು ವಿಸ್ತರಿಸಿ ಹೊಸ ಅನುಭವಲೋಕವನ್ನೇ ತೆರೆದಿಡುತ್ತಾರೆ. ಯಕ್ಷಗಾನದಲ್ಲಿ ಪಾತ್ರಧಾರಿಗಳಿಗೆ ಲಿಖಿತ ಪಠ್ಯ ಇರುವುದಿಲ್ಲವಾದುದರಿಂದ ಇವು ಆಶುವೈಭವಗಳೇ ಆಗಿರುತ್ತವೆ.

ಯಕ್ಷಗಾನ ರಂಗ ಪ್ರಸ್ತುತಿಗಳಿಗಿಂತ, ದೀರ್ಘವಾದ 'ಪೀಠಿಕೆ'ಗಳು ತಾಳಮದ್ದಳೆಯಲ್ಲಿರುವುದು ಸಾಮಾನ್ಯ ಪದ್ಧತಿ. ಯಕ್ಷಗಾನದಲ್ಲಿ ಪಾತ್ರಧಾರಿಗಳಿಗೆ ಲಿಖಿತ ಪಠ್ಯ ಇಲ್ಲವಾದುದರಿಂದ, ಇಂಥ ತಾಳಮದ್ದಲೆಯಲ್ಲಿ ಪ್ರಸ್ತುತಪಡಿಸುವ ಇಂತಹ ಪೀಠಿಕೆಗಳು ಆಶುವೈಭವಗಳೇ ಆಗಿರುತ್ತವೆ.

ಇಂತಹ ಪೂರ್ವಸಿದ್ಧತೆಗೆ ಸೂಕ್ತವಾದ ಆಧಾರಗ್ರಂಥಗಳು ಇಲ್ಲದೆ ಇರುವ ಸಂದರ್ಭದಲ್ಲಿ ವಿದ್ವಾಂಸ ರಾಧಾಕೃಷ್ಣ ಕಲ್ಚಾರ್ ಅವರು ಪೀಠಿಕೆಗಳದೇ ಒಂದು ಗ್ರಂಥವನ್ನು ಸಿದ್ಧಪಡಿಸಿದ್ದಾರೆ.



ಪೀಠಿಕಾ ಪ್ರಕರಣ
ಲೇ: ರಾಧಾಕೃಷ್ಣ ಕಲ್ಚಾರ್
ಪ್ರ: ನಿವೇಶ ಪ್ರಕಾಶನ, ವಿಟ್ಲ
ಬೆಲೆ: ರು. 180/-

'ಮೂವತ್ತೆಂಟು ಪ್ರಸಂಗಗಳು – ನೂರ ನಲುವತ್ತು ಪಾತ್ರಗಳು' ಎನ್ನುವ ಉಪಶೀರ್ಷಿಕೆ ಈ ಗ್ರಂಥದ ವ್ಯಾಪ್ತಿಯನ್ನು ಹೇಳುತ್ತದೆ. ಅವುಗಳು ಪುರಾಣಗಳು ರಾಮಾಯಣ ಮಹಾಭಾರತ ಗ್ರಂಥಗಳನ್ನಾಧರಿಸಿದ ಯಕ್ಷಗಾನ ಪ್ರಸಂಗಗಳಲ್ಲಿ ಪ್ರಸ್ತುತಪಡಿಸಲು ಉಪಯುಕ್ತವಾಗುವ ಪೀಠಿಕೆಗಳು. ಇವುಗಳನ್ನು ಬರೆಯಲು ಆಳವಾದ ಮತ್ತು ವಿಸ್ತೃತವಾದ ಅಧ್ಯಯನದ ಜತೆಗೆ ಆಯಾಯ ಪ್ರಸಂಗಗಳು ನಡೆಯುವ ಕಾಲಘಟ್ಟಗಳ ಖಚಿತ ತಿಳಿವಳಿಕೆ ಬೇಕಾಗುತ್ತದೆ. ಉದಾಹರಣೆಗೆ 'ಪಂಚವಟಿ'ಯ ರಾಮನು ರಾವಣನನ್ನು ಉಲ್ಲೇಖಿಸುವಂತಿಲ್ಲ; ಯಾಕೆಂದರೆ ಅವನ ಜೀವನದಲ್ಲಿ ಆ ಸಂದರ್ಭದಲ್ಲಿ ರಾವಣ ಪ್ರವೇಶಿಸಿಯೇ ಇರುವುದಿಲ್ಲ. ಇವೆಲ್ಲವನ್ನೂ ತಮ್ಮ ಸಹಜ ವಿದ್ವತ್ತಿನಲ್ಲಿ ಮತ್ತು ಕಲಾಯಾನದಲ್ಲಿ ಅರಗಿಸಿಕೊಂಡಿರುವ ಕಲ್ಚಾರ್ ಅವರು ಇಂತಹ ಗ್ರಂಥವೊಂದನ್ನು ಸಿದ್ಧಪಡಿಸಿಕೊಟ್ಟಿದ್ದಾರೆ.

ಇದರಲ್ಲಿರುವ 38 ಪ್ರಸಂಗಗಳು ಮತ್ತು 140 ಪಾತ್ರಗಳ ಪಟ್ಟಿಯನ್ನು ನೋಡಿದಾಗ ಯಕ್ಷಗಾನ ಪ್ರಸಂಗಗಳ ಬಗ್ಗೆ ಒಂದು ಪಕ್ಷಿನೋಟವೂ ಸಿಗುತ್ತದೆ. ಅವುಗಳಲ್ಲಿ ಕೆಲವು ಉದಾಹರಣೆ ನೋಡುವುದಾದರೆ, 1. ಶುಂಭವಧೆ (ಶ್ರೀದೇವಿ, ಶುಂಭಾಸುರ, ರಕ್ತಬೀಜ); 2 ಭೃಗುಶಾಪ (ಶುಕ್ರಸಂಜೀವಿನೀ) – (ದೇವೇಂದ್ರ, ತಮಾಸುರ, ಖ್ಯಾತಿ, . ವಿಷ್ಣು, ಭೃಗು); 3 ವಾಮನ ಚರಿತ್ರೆ (ಕಶ್ಯಪ, ವಾಮನ, ಬಲಿ, ವಿಂಧ್ಯಾವಳಿ); 4. ಸತ್ಯವಾನ್ ಸಾವಿತ್ರಿ (ಸತ್ಯವಾನ, ಸಾವಿತ್ರಿ, ನಾರದ, ಯಮ); 5. ದೇವಯಾನಿ ಕಲ್ಯಾಣ (ಕಚ, ಶುಕ್ರ, ವೃಷಪರ್ವ); 6. ಕೌಶಿಕ ಪ್ರತಿಜ್ಞೆ (ಕೌಶಿಕ, ವಸಿಷ್ಠ); 7. ತ್ರಿಶಂಕು ಸ್ವರ್ಗ (ವಿಶ್ವಾಮಿತ್ರ ಪ್ರತಾಪ) (ತ್ರಿಶಂಕು, ವಾಸಿಷ್ಠರು, ಕೌಶಿಕ, ದೇವೇಂದ್ರ); 8. ಸುದರ್ಶನ ವಿಜಯ (ವಿಷ್ಣು, ಸುದರ್ಶನ, ಶತ್ರುಪ್ರಸೂದನ); 9. ಶ್ರೀರಾಮ ಪಟ್ಟಾಭಿಷೇಕ (ದಶರಥ, ಮಂಥರೆ, ಶ್ರೀರಾಮ, ಲಕ್ಷ್ಮಣ); 10. ಪಾದುಕಾ ಪ್ರದಾನ (ಗುಹ, ಭರತ) ಇ.ಇ.

ಯಕ್ಷಗಾನ ಕಲಾವಿದರು ಮಾತ್ರವಲ್ಲ, ನಮ್ಮ ದೇಶದ ಮಹಾಕಾವ್ಯಗಳು, ಅವುಗಳನಾಧರಿಸಿದ ಅನುಸೃಷ್ಟಿಗಳು ಮತ್ತು ಪುರಾಣಗಳಲ್ಲಿ ಆಸಕ್ತಿ ಇರುವವರೆಲ್ಲರಿಗೂ ಆಸಕ್ತಿ ಮೂಡಿಸಬಲ್ಲ ಗ್ರಂಥವಿದು.

ಬುದ್ಧಯಾನ ಕಾದಂಬರಿ

» ಗುರುಪಾದ ಬೇಲೂರು

ಬುದ್ಧನು ಕಂಡುಕೊಂಡ ಸತ್ಯಗಳು ಸರ್ವರಿಗೂ, ಸರ್ವಕಾಲಕ್ಕೂ ಅನ್ವಯವಾಗುವಂತಹವು ಗಳು. ಇಂತಹ ಸಿದ್ಧಿಪುರುಷನ ಕಥೆಯು ಅನೇಕ ಕಾರಣಗಳಿಂದ ನೈಜರೂಪದಲ್ಲಿ ಪ್ರಕಟವಾಗದೆ, ಪುರಾಣಗಳಿಂದ ಪ್ರಭಾವಿತವಾಗಿ, ಕಾಲದ ನಂಬಿಕೆಗಳ ಮಬ್ಬು ಮುಸುಕನ್ನು ಹೊದಿಸಿ, ಬುದ್ಧನನ್ನು ಅವತಾರ ಪುರುಷನನ್ನಾಗಿ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗುತ್ತಿತ್ತು. ಈ ಮುಸುಕನ್ನು ತೆರೆದು ಗೌತಮನನ್ನು ಅವನಿರುವಂತೆ ಚಿತ್ರಿಸಿಕೊಡುವಲ್ಲಿ ಕಂನಾಡಿಗರು, 'ಬುದ್ಧಯಾನ' ಕಾದಂಬರಿಯಲ್ಲಿ ಮಾಡಿದ್ದಾರೆ. ಬುದ್ಧ ಚರಿತೆಯ ಬಗ್ಗೆ ಆಸಕ್ತಿ ಹೊಂದಿರುವ ವರು ತಮ್ಮ ಸಂಗ್ರಹದಲ್ಲಿ ಇಟ್ಟುಕೊಳ್ಳಬೇಕಾಗಿರುವ ಪುಸ್ತಕ ಇದು.

ಬುದ್ಧ ಭಾರತದಲ್ಲಿ ಜನಿಸಿದರೂ, ಬೌದ್ಧ ಧರ್ಮ ಟಿಬೆಟ್, ಚೀನಾ, ಜಪಾನ್, ಥೈಲ್ಯಾಂಡ್, ಕೊರಿಯಾ, ಶ್ರೀಲಂಕಾ ಹೀಗೆ ಹಲವಾರು ದೇಶಗಳಲ್ಲಿ ಪರಿಚಿತನಾಗಿದ್ದಾನೆ. ಅಂತಾರಾಷ್ಟ್ರೀಯ ಪ್ರಸಿದ್ಧಿಯಿರುವ ಬುದ್ಧನ ಚರಿತೆಯನ್ನು ಮರುರೂಪಿಸುವಾಗ ಆತನ ವಾಸ್ತವ ಜೀವನದ ಕಲ್ಪನೆಯನ್ನು ಎಲ್ಲಾ ಮೂಲಗಳನ್ನು ಶೋಧಿಸಿ ಭಟ್ಟಿ ಇಳಿಸಿಕೊಳ್ಳಬೇಕಾಗು ತ್ತದೆ. ಕಂನಾಡಿಗಾರ ಬುದ್ಧಯಾನ ಈ ಪ್ರಯತ್ನದಲ್ಲಿ ಯಶಸ್ವಿಯಾಗಿದೆ. ದೈವಿಕ ಚೌಕಟ್ಟಿನಿಂದ ಬಿಡಿಸಿ ನಮ್ಮ ನಿಮ್ಮ ನಡುವಿನ ಮಾನವನಲ್ಲಿಯ ಅಸಾಮಾನ್ಯ ಗುಣಗಳನ್ನು ಹೆಕ್ಕುವುದು, ಅವನನ್ನು ಒಬ್ಬ ದಾರ್ಶನಿಕನಂತೆ, ಒಬ್ಬ ವಿಜ್ಞಾನಿಯಂತೆ ನೋಡು ವುದು ಕೂಡ ಕಥೆಗಾರರ ಜ್ಞಾನ ಜಿಜ್ಞಾಸೆಯ ಫಲವೇ ಅಲ್ಲವೇ.

ಬುದ್ಧಯಾನ
ಲೇ: ಕಂನಾಡಿಗಾ ನಾರಾಯಣ
ಪ್ರ: ನವಕರ್ನಾಟಕ ಪ್ರಕಾಶನ
ಬೆಲೆ ರು.170/-

ಬುದ್ಧಯಾನದಲ್ಲಿ ಗಮನ ಸೆಳೆಯುವುದು ಕಥನ ಶೈಲಿ. ಇಲ್ಲಿ ಆಯಾ ಪಾತ್ರಗಳೇ ನಿರೂಪಕ ರಾಗುತ್ತಾರೆ. ಇದರ ಒಂದು ಅನುಕೂಲ ವೆಂದರೆ, ಪಾತ್ರಗಳು ಓದುಗರೊಡನೆ ನೇರ ಆಪ್ತತೆಯನ್ನು ಸಾಧಿಸು ವುದು. ನಾಯಕನಾಗಲಿ, ಖಳನಾಯಕ ನಾಗಲಿ ಅವನ ಗುಣಾವಗುಣಗಳನ್ನು ಕಥೆಗಾರನು ಅತೀರಂಜಿಸುವುದು ಇಲ್ಲಿ ತಪ್ಪುತ್ತದೆ. ಪಾತ್ರಗಳು ತಾವು ನಡೆದುಕೊಂಡ ರೀತಿಗೆ ಸಮರ್ಥನೆ ನೀಡುವುದರಿಂದ, ಓದುಗನಿಗೆ ಪಾತ್ರಗಳ ಬೇರೆಯದೆ ಕೋನದ ಪರಿಚಯವಾಗುತ್ತದೆ.

ಸಿದ್ಧಾರ್ಥನು ಕಪಿಲವಸ್ತುವಿನ ಮಹಲಿ ನಲ್ಲಿಯೂ ಹುಟ್ಟದೆ, ದೇವದಹದ ಅರಮನೆ ಯಲ್ಲೂ ಹುಟ್ಟದೆ, ಲುಂಬಿನಿಯ ವನದ ಬಯಲಿನಲ್ಲಿ ಜನಿಸುವ ಅನಿವಾರ್ಯತೆ ತಂದು ಕೊಂಡಂತಹ ಸಂದರ್ಭದ ವರ್ಣನೆ ಸೊಗಸಾಗಿ ಮೂಡಿಬಂದಿದೆ. ಲೇಖಕರ ಹೆಂಗರುಳು ಮಾತ್ರ ಆ ಪ್ರಸವ ವೇದನೆಯ ವರ್ಣನೆ ಯನ್ನು ಅಷ್ಟು ಮನಮುಟ್ಟುವಂತೆ ಚಿತ್ರಿಸಲು ಸಾಧ್ಯ.

ಲೇಖಕರು ಬುದ್ಧನ ಭೋಧನೆಯನ್ನು ಎಷ್ಟು ಸರಳಗೊಳಿಸಿ ಹೇಳಿದ್ದಾರೆಂದರೆ, ಸಂಸಾರಿಗಳೆಲ್ಲಾ ಸನ್ಯಾಸಿಗಳಾದರೆ ಮುಂದಿನ ಜನಾಂಗ ನಿರ್ಮಾಣ ವಾಗಲಾರದು, ಆದ್ದರಿಂದ ಸಂಸಾರದಲ್ಲಿಯೇ ಧರ್ಮಪಾಲನೆ ಮಾಡುವ ಪಂಚಶೀಲ, ಅಷ್ಟಾಂಗ ಮಾರ್ಗಗಳನ್ನು ಪಾಲನೆ ಮಾಡಬೇಕು ಎನ್ನುವಲ್ಲಿ, ಪಂಚಶೀಲ ತತ್ವಗಳನ್ನು ಬಸವಣ್ಣನವರ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ವಚನಕ್ಕೆ ನೇರ ತಾಳೆ ಹಾಕಿ ನಮ್ಮ ಮನಸ್ಸಿನಲ್ಲಿ ಉಳಿಯುವ ಹಾಗೆ ಮಾಡಿದ್ದಾರೆ.

ಬುದ್ಧನ ಬೋಧನೆಯಿಂದ ಪ್ರಭಾವಿತರಾಗುವ ಕಿಸಾಗೋತಮಿ, ಪಥಾಚರಿ, ಆಮ್ರಪಾಲಿ, ಅಂಗುಲಿ ಮಾಲ ಮುಂತಾದವರ ಪ್ರಸಂಗಗಳು ಚುಟುಕಿನಲ್ಲಿ ಬಂದರೂ ಬರವಣಿಗೆಯ ಕುಶಲತೆಯಿಂದಾಗಿ ಕಣ್ಣು ತೇವಗೊಳಿಸುತ್ತವೆ. ಮನಸ್ಸಿನಲ್ಲಿ ಉಳಿಯುತ್ತವೆ.

ಜ್ಞಾನಿಗಳು ಹೇಳುವಂತೆ, ಬುದ್ಧನ ಬೋಧನೆಯ ಅಭ್ಯಾಸವೇ ಒಂದು ಜೀವಮಾನದ ಸಾಧನೆ. ಅದರ ಅಧ್ಯಯನವೇ ಒಂದು ದೊಡ್ಡ ಗ್ರಂಥ ವಾದೀತು. ಬುದ್ಧನ ಜೀವನವನ್ನು ಚಿಕ್ಕದಾಗಿ, ಚೊಕ್ಕವಾಗಿ ಮತ್ತು ಹೃದಯಂಗಮವಾಗಿ ಚಿತ್ರಿಸಿಕೊಡುವುದು ಈ ಕಾದಂಬರಿಯ ವೈಶಿಷ್ಟ್ಯ. ಪುಸ್ತಕ ಓದಿ ಮುಗಿಸಿದಾಗ ಬುದ್ಧ ನಮಗೆ ಇನ್ನೂ ಆಪ್ತನಾಗುತ್ತಾನೆ.

ಬಾಲಕಿಯರು ಅಬಲೆಯರಲ್ಲ!

» ಮಂಜುನಾಥ ಡಿ. ಎಸ್.

ಸುಲಲಿತವಾಗಿ ಓದಿಸಿಕೊಂಡು ಹೋಗುವ, ಪ್ರಶಸ್ತಿ ವಿಜೇತ ಮಕ್ಕಳ ಕಾದಂಬರಿಯಿದು.

ಮನುಜ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುವುದು ಬಾಲ್ಯದಲ್ಲಿ. ಕಳೆದುಕೊಂಡ ಬಾಲ್ಯವನ್ನು ಮತ್ತೆಂದೂ ಪಡೆಯಲಾಗದು. ಬಾಲ್ಯ ಬಹಳವಾಗಿ ಕಾಡಿರುವವರಲ್ಲಿ ಬಾಲ್ಯವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂಬ ಹಂಬಲ ಹುದುಗಿರುತ್ತದೆ. ಈ ತೀವ್ರತಮ ಬಯಕೆ ಬಾಲ ಸಾಹಿತ್ಯದ ಸೃಷ್ಟಿಗೆ ಕಾರಣವಾಗುತ್ತದೆ. 'ಕಳೆದುಹೋದ ನನ್ನದೇ ಬಾಲ್ಯಕ್ಕಾಗಿ ನಾನು ಬರೆಯುವುದು' ಎಂಬ ವಿಲಿಯಂ ಮೈನೆ ಅವರ ಹೇಳಿಕೆ 'ಮಹಿ' ಕಾದಂಬರಿಯ ಲೇಖಕಿಯ ಮಾತುಗಳೂ ಇರಬಹುದು ಎನಿಸುತ್ತದೆ. ಮಕ್ಕಳ ಸಾಹಿತ್ಯವೆಂದರೆ ಮಕ್ಕಳ ಕ್ಷೇತ್ರವಷ್ಟೇ ಅಲ್ಲ. ಬಾಲ್ಯವನ್ನು ಬಳಸಿ ಬಂದ ನಮ್ಮದೂ ಸಹ ಎಂಬ ಮನೋಭಾವ ಮೂಡಲಿ ಎಂದು ಲೇಖಕಿ ವಸು ವತ್ಸಲೆ ಆಶಿಸುತ್ತಾರೆ.

ಕೈಗೆತ್ತಿಕೊಂಡರೆ ಕೆಳಗಿಡಲು ಮನಸ್ಸಾಗದಂತೆ ಓದಿಸಿಕೊಂಡು ಹೋಗುವ ರೋಚಕ ತಿರುವುಗಳ ಮಕ್ಕಳ ಕಾದಂಬರಿ ಇದಾಗಿದೆ. ಧೈರ್ಯ, ಛಲ, ಕಷ್ಟಸಹಿಷ್ಣುತೆ, ಸಮಯಪ್ರಜ್ಞೆ, ಎಲ್ಲವನ್ನೂ ಪ್ರಶ್ನಿಸುವ ವೈಚಾರಿಕ ಮನೋಭಾವ, ಮುಂತಾದ ಗುಣಗಳನ್ನು ಮೈಗೂಡಿಸಿಕೊಂಡಿರುವ ಕಥಾನಾಯಕಿ ಮಹಿಯ ಸಾಹಸಗಾಥೆಯನ್ನು ಈ ಕಾದಂಬರಿ ಅನಾವರಣಗೊಳಿಸುತ್ತದೆ. ಊರಿನವರೆಲ್ಲ ಹೆದರುತ್ತಿದ್ದ ಕರಡಿಗುಡ್ಡದ ಮೇಲೆ ಜ್ಞಾನಜ್ಯೋತಿಯನ್ನು ಬೆಳಗಿದ ಈ ಸಾಹಸಮಯ ಪಯಣದಲ್ಲಿ ಮಹಿಗೆ ಜೊತೆಯಾದ ಅವಳ ಆತ್ಮೀಯ ಗೆಳತಿ ಮಿತಾ ಸಹ ಇಂಥ ಧನಾತ್ಮಕ ಗುಣಗಳ ಗಣಿಯೇ. ಬಾಲಕಿಯರು ಅಬಲೆಯರಲ್ಲ ಸಬಲೆಯರು, ಅವರನ್ನು ಕಡೆಗಣಿಸಬಾರದೆಂಬ ಸಂದೇಶವನ್ನು ಸಾರುತ್ತದೆ ಈ ಕೃತಿ.



ಮಹಿ (ಮಕ್ಕಳ ಕಾದಂಬರಿ)
ಲೇ: ವಸು ವತ್ಸಲೆ
ಪ್ರ : ಅವ್ಯಕ್ತ ಪ್ರಕಾಶನ
ಬೆಲೆ : ರು.275/-

ಹೆಣ್ಣುಮಕ್ಕಳು ಬಲಶಾಲಿಗಳೆಂದು ಲೋಕಕ್ಕೇ ತಿಳಿಸುವ ಉದ್ದೇಶದಿಂದ ಕಥೆಯನ್ನು ಹೆಣೆದು ವಿಸ್ತರಿಸಿಕೊಂಡು ಹೋಗಿರುವ ರೀತಿ ಆಕರ್ಷಕವಾಗಿದೆ. ಇಲ್ಲಿ ಚಿತ್ರಣಗೊಂಡಿರುವ ಬಾಲ್ಯ ಮತ್ತು ಒಟ್ಟಾರೆ ಬದುಕು ತುಂಬ ಕೋಮಲವೂ, ಕುತೂಹಲಕರವೂ ಹಾಗೂ ಮಾನವೀಯ ಪ್ರೀತಿಯಿಂದ ನಳನಳಿಸುವಂತಹುದೂ ಆಗಿದೆ. ಈ ಕಾದಂಬರಿ ಕೇವಲ ಮಕ್ಕಳು ಮಾತ್ರವಲ್ಲದೆ ಎಲ್ಲ ಪ್ರೌಢರೂ ಓದಿ ಸವಿಯುವಂತಹುದಾಗಿದೆ ಎಂದಿದ್ದಾರೆ ಡಾ. ಬಸು ಬೇವಿನ ಗಿಡ ಅವರು.

ಕಾದಂಬರಿಯಲ್ಲಿ ಪೈಡ್ ಪೈಪರ್, ಗಲಿವರ್ಸ್ ಟ್ರಾವೆಲ್ಸ್, ಆಲಿಸ್ ಇನ್ ವಂಡರ್ ಲ್ಯಾಂಡ್ ಮುಂತಾದ ರಮ್ಯ ಕಥೆಗಳ ಛಾಯೆ ಕಂಡುಬರುತ್ತದೆ. ಇವುಗಳನ್ನು ಕಥೆಯ ಬೆಳವಣಿಗೆಗೆ ಪೂರಕವಾಗುವಂತೆ ಅಳವಡಿಸಿ ಕೊಂಡಿರುವ ಪರಿಯಿಂದ ಇವು ಪರಕೀಯ ಎನಿಸುವುದಿಲ್ಲ. 2025ರ ಜಿ. ಬಿ. ಹೊಂಬಳ ಮಕ್ಕಳ ಸಾಹಿತ್ಯ ಪ್ರಶಸ್ತಿಗೆ ಭಾಜನವಾದ ಕಾದಂಬರಿ 'ಮಹಿ'. ಕನ್ನಡದ ಮಕ್ಕಳು ಪುಸ್ತಕಗಳನ್ನು ಓದುವಂತೆ ಈ ಕಾದಂಬರಿ ಪ್ರೇರೇಪಿಸುತ್ತದೆ. ಮಕ್ಕಳ ಜನುಮದಿನಕ್ಕೆ ಉಡುಗೊರೆಯಾಗಿ ನೀಡಲು ಸೂಕ್ತ ಕೃತಿ.

ರಸಗುಲ್ಲಾ- ಖುಲ್ಲಂ ಖುಲ್ಲಾ!

» ಗಿರ್ವಾಣಿ

ನಮಗೆಲ್ಲ ಚೌಕಟ್ಟಿಲ್ಲದ ಕಡಲು ಇಷ್ಟವಾಗುತ್ತದೆ, ಚೌಕಟ್ಟಿಲ್ಲದ ಆಗಸ ಇಷ್ಟವಾಗುತ್ತದೆ, ಹಾಗೆಯೇ ಚೌಕಟ್ಟಿಲ್ಲದ ಚುಟುಕುಗಳೂ ಇಷ್ಟವಾಗಿ ಬಿಡುತ್ತದೆ. ಸಿಹಿಪಾಕದಲ್ಲಿ ಅದ್ದಿದ ರಸಗುಲ್ಲಾಕ್ಕೆ ಕೊನೆಪಕ್ಷ ಪಾತ್ರೆಯ ಚೌಕಟ್ಟಾದರೂ ಇರುತ್ತದೆ. ಆದರೆ ನವರಸಗಳ ಪಾಕದಲ್ಲಿ ಅದ್ದಿದ ರಾಜು ಅಡಕಳ್ಳಿ ಅವರ ರಸಗುಲ್ಲಾ ಮಾತ್ರ ಖುಲ್ಲಂ ಖುಲ್ಲಾ.

ರಸಗುಲ್ಲಾ- ಖುಲ್ಲಂ ಖುಲ್ಲಾ!
ಲೇ: ರಾಜು ಅಡಕಳ್ಳಿ
ಪ್ರ: ವೀರಲೋಕ ಪ್ರತಿಷ್ಠಾನ ಬೆಂಗಳೂರು
7022122121
ಬೆಲೆ ರು. 195/-

ಇದೊಂಥರಾ ಹೇಗಿದೆ ಅಂದರೆ ಪುಟ್ಟ ಬಾಯಲ್ಲಿ ಬ್ರಹ್ಮಾಂಡ ತೋರಿಸಿದಂತೆ! ಬದುಕಿನ ಅಷ್ಟೂ ಅನುಭಗಳನ್ನು 161 ಪುಟಗಳ ಪುಟ್ಟ ಪುಸ್ತಕದಲ್ಲಿ ಹಿಡಿದು ಕೊಟ್ಟಿದ್ದಾರೆ. ಅದೂ ಹೇಗಂತೀರಾ? ಕಚಗುಳಿ ಇಡುವ ನಾಲ್ಕೈದು ಸಾಲುಗಳ ಚುಟುಕುಗಳಲ್ಲಿ. ಸಮಾಜ, ರಾಜಕಾರಣ, ಪುರಾಣ, ಅದರ ಪಾತ್ರಗಳು, ಪುರುಷರ ಖಯಾಲಿಗಳು, ಮದಿರೆ, ಮಾನಿನಿ,ಹೆಂಡತಿ, ಹೊರಸಂಬಂಧ, ಗರ್ಲ್ ಫ್ರೆಂಡ್, ಸಾಹಿತಿ,ಮದುವೆ, ಸಂಸಾರ ಹೀಗೆ ಎಲ್ಲೆಯಿಲ್ಲದೆ, ಎಗ್ಗಿಲ್ಲದೆ, ಸಿಗ್ಗೂ ಇಲ್ಲದೆ ಸಾಗುತ್ತದೆ ರಾಜು ಅಡಕಳ್ಳಿಯವರ ಪೆನ್ನಿನ ಓಘ.

ಲೇಖಕರು ಗಂಡ ಹೆಂಡತಿಯ ಟಾಂ ಆಂಡ್ ಜೆರ್ರಿ ಸಂಬಂಧವನ್ನು ಆಗಾಗ ಹೇಳುತ್ತ ಹೋಗಿದ್ದಾರೆ. ಹೆಚ್ಚಿನ ಸಾಲುಗಳಲ್ಲಿ ಹೆಂಡತಿಯ ಕೈಲಿ ಸಿಕ್ಕಿ ನರಳಾಡುವ ಗಂಡನ ಪಾಡನ್ನೇ ಹೇಳಿದಂತಿದೆ. ಪುಸ್ತಕ ಓದುತ್ತಾ ಹೋದಂತೆ ಒಂದಷ್ಟು ಸಂತ್ರಸ್ತ ಗಂಡಂದಿರಿಗೆ 'ಆಹಾ' ಎನಿಸಿದರೆ, ಮಹಿಳಾವಾದಿ ಹೆಂಡತಿಯರು ರೊಚ್ಚಿಗೇಳುವ ಸಾಧ್ಯತೆಯೂ ಇದೆ. ಉದಾ:

ಅದೃಷ್ಟ
ದುರಾದೃಷ್ಟ
ಇವೆರಡಕ್ಕೂ ಬಳಸಬಹುದಾದ
ಒಂದೇ ಪದವೆಂದರೆ
ಹೆಂಡತಿ.

ಇಡೀ ಪುಸ್ತಕದಲ್ಲಿ ವಿಶ್ವವನ್ನೇ ತೆರೆದಿಟ್ಟಿದ್ದಾರಾದರೂ ಹೆಂಡತಿಯ ಪಾತ್ರಕ್ಕೆ ವಿಶೇಷ ಪ್ರಾಮುಖ್ಯತೆ ಇದೆ. ಏನಾದರೂ ಇರಲಿ, ವಿಷಯವನ್ನು ತಂದು ಹೆಂಡತಿಗೆ ಕನೆಕ್ಟ್ ಮಾಡುವ ಕಲೆಯನ್ನು ಇಲ್ಲಿನ ಚುಟುಕಗಳಲ್ಲಿ ಕಾಣಬಹುದು.

ರಸಗುಲ್ಲಾ ಬರೀ ಸಿಹಿಪಾಕವಾದರೆ ಮಜ ಬರುತ್ತದೆಯೆ? ಆಗಾಗ ಸ್ವಲ್ಪ ಕಿಕ್ ಕೊಡುತ್ತಲೂ ಇರಬೇಕು. ಹೀಗಾಗಿ ಪುರುಷರ ರಿಯಲ್ ಸಂಗಾತಿಯಾದ ಮದಿರೆಗೂ ಹೆಂಡತಿಯಷ್ಟೇ ವಿಶೇಷ ಸ್ಥಾನಮಾನ ನೀಡಲಾಗಿದೆ. ಕೆಲವು ಸ್ವಾರಸ್ಯಕರ ವಿಚಾರಗಳನ್ನು ಚುಟುಕುಗಳನ್ನು ಮೀರಿದ, ಪುಟ್ಟ ಗದ್ಯದ ರೂಪದಲ್ಲೂ ಪ್ರಸ್ತುತ ಪಡಿಸಿದ್ದಾರೆ.

ಒಟ್ಟಾರೆಯಾಗಿ ರಸಗುಲ್ಲಾ ಸಿಹಿ ಪಾಕವಷ್ಟೇ ಅಲ್ಲ, ಲೈಟಾಗಿ ಅಮಲೇರಿಸುವ ಕಾಕ್ಟೇಲ್ ಕೂಡ. ಇನ್ನು ಈ ಪುಸ್ತಕದಲ್ಲಿರುವ ಆಕರ್ಷಕ, ಮನತಣಿಸುವ ಚಿತ್ರಗಳ ಬಗ್ಗೆ ಹೇಳಲೇಬೇಕು. ಕಲಾವಿದ ನೀರ್ನಳ್ಳಿ ಗಣಪತಿ ಅವರು ರಸಗುಲ್ಲಾದೊಳಗೆ ಕೈಯಾಡಿಸಿ ಒಂದಕಿಂತ ಒಂದು ಚಂದದ ಚಿತ್ರ ಬಿಡಿಸಿದ್ದಾರೆ.

ಭೈರಪ್ಪನವರಿಗೆ ಭಾವನಮನ

ಅಪಾರ ಸಂಖ್ಯೆಯ ಓದುಗರನ್ನು ಪಡೆದಿದ್ದ ಲೇಖಕರಾದ ಭೈರಪ್ಪನವರಿಗೆ ನಾಡಿನ ಹಿರಿಕಿರಿಯರು ಅರ್ಪಿಸಿದ ನುಡಿ ತರ್ಪಣ ಈ ಕೃತಿಯಲ್ಲಿ ಮಡುಗಟ್ಟಿದೆ.

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಡಾ. ಎಸ್.ಎಲ್.ಭೈರಪ್ಪ ಅವರು ನಮ್ಮ ಭಾವ ಕೋಶದಲ್ಲಿ ಸೇರಿ ಹೋದ ಧೀಮಂತ ಸಾಧಕ. ತಮ್ಮ ಮಾತು ಕೃತಿಗಳ ಮೂಲಕ ನಮ್ಮ ನಾಡು ನುಡಿ ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯನ್ನು ಹೆಚ್ಚಿಸಿ ಇತ್ತೀಚಿಗೆ ಮರೆಯಾದ

ಈ ಮಹಾನ್ ಚೇತನಕ್ಕೆ ಅರ್ಪಿಸಿದ ನುಡಿ ತರ್ಪಣ 'ಭೈರಪ್ಪನವರಡೆಗೆ ಭಾವತಂತು' ಕೃತಿ. ಡಾ.ಎಸ್.ಎಲ್.ಭೈರಪ್ಪ ಅವರದು ಭಾರತೀಯ ಸಾಹಿತ್ಯ ಪ್ರಪಂಚದಲ್ಲಿಯೇ ಒಂದು ಅಪರೂಪದ ವ್ಯಕ್ತಿತ್ವ. ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಅವರೂ ಒಬ್ಬರು. ಪಟ್ಟ ಪಾಡನ್ನು ಹಾಡನ್ನಾಗಿಸಿ ಕನ್ನಡ ಜನಮನದಲ್ಲಿ ಮೋಡಿ ಮಾಡಿದ ಧೀಮಂತ ಚೇತನ. ಅವರು ಬದುಕಿನಲ್ಲಿ ಅನೇಕ ಅಗ್ನಿದಿವ್ಯಗಳನ್ನು ಹಾದು ಬಂದವರು. ಸಾವನ್ನು ಅರಿಯುವ ತನಕ ಜೀವನ ಅರ್ಥವಾಗುವುದಿಲ್ಲ. ಬರೀ ಹುಟ್ಟಿದರೆ ಸಾಲದು, ಸತ್ತು ಹುಟ್ಟಬೇಕು. ಆಗ ಜೀವನದ ಬೆಲೆ ಗೊತ್ತಾಗುತ್ತದೆ. ಇದನ್ನೇ ಅವರು ತಮ್ಮ ಕೃತಿಗಳಲ್ಲಿ ಎರಕ ಹೊಯ್ದು ಲೋಕಮಾನ್ಯರಾದುದು ಈಗ ಇತಿಹಾಸ. ಭೈರಪ್ಪ ಅವರ ಜೀವನಯಾನ, ವ್ಯಕ್ತಿಮತ್ತೆ, ಅವರ ಸಾಹಿತ್ಯ ಸಾಧನೆಯ ಅವಲೋಕನ, ವಿಶ್ಲೇಷಣೆಯನ್ನು ಇಲ್ಲಿ ಆಪ್ತನೆಲೆಯಲ್ಲಿ ಕಂಡರಿಸಲಾಗಿದೆ. ಪ್ರೊ.ಬರಗೂರು ರಾಮಚಂದ್ರಪ್ಪ, ಡಾ. ಬಿ.ಆರ್. ಲಕ್ಷ್ಮಣರಾವ್, ಡಾ. ಬಿ. ಜನಾರ್ದನ ಭಟ್, ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರೊ ಜಿ. ಎನ್. ಉಪಾಧ್ಯ ಮತ್ತು ಇತರ ಹಲವು ಬರಹಗಾರರ ಲೇಖನಗಳು ಈ ನುಡಿನಮನದ ಕೃತಿಯಲ್ಲಿದೆ. ಕೆಲವು ಲೇಖಕರು ಭೈರಪ್ಪನವರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡರೆ, ಇನ್ನು ಕೆಲವರು ಭೈರಪ್ಪನವರ ಕಾದಂಬರಿಗಳ, ಭೈರಪ್ಪನವರು ಸೃಷ್ಟಿಸಿದ ಪಾತ್ರಗಳಗಳನ್ನು ಸ್ಮರಿಸುವ ಮೂಲಕ ಅಕ್ಷರ ನಮನವನ್ನು ಸಲ್ಲಿಸಿದ್ದಾರೆ.

'ಮನುಷ್ಯನ, ಮನುಷ್ಯಜೀವನದ ಸತ್ಯವನ್ನು ಮೂರ್ತರೂಪದಲ್ಲಿ ಅನ್ವೇಷಿಸುವುದು ಸಾಹಿತ್ಯವೊಂದೇ' ಎಂದು ಮನಗಂಡಿದ್ದ, 'ಸತ್ಯಾನ್ವೇಷಣೆಯೇ ಬರವಣಿಗೆಯ



ಭೈರಪ್ಪನವರೆಡೆಗೆ ಭಾವತಂತು
ಸಂ: ಆಶಾ ರಘು
ಪ್ರ: ಉಪಾಸನ ಬುಕ್ಸ್ ಬೆಂಗಳೂರು, 9731978057
ಬೆಲೆ ರು.210/-

ಗುರಿಯಾಗಬೇಕು' ಎಂಬ ನಿಲುವನ್ನು ಹೊಂದಿದ್ದ ಡಾ. ಎಸ್.ಎಲ್. ಭೈರಪ್ಪನವರು ತಮ್ಮ ಸಾಹಿತ್ಯ ಕೃಷಿಯ ಮೂಲಕ ಕನ್ನಡಕ್ಕೆ ಮಾತ್ರ ಸೀಮಿತವಾಗದೆ, ಅನುವಾದಗಳ ಮೂಲಕ ಇಡೀ ಭಾರತಕ್ಕೇ ತಮ್ಮ ಸಾಹಿತ್ಯದ ಔತಣವನ್ನು ನೀಡಿ ಭಾರತೀಯ ಸಾಹಿತಿ ಎನಿಸಿಕೊಂಡವರು. ಇಂಗ್ಲಿಷ್, ರಷ್ಯಾ ಮತ್ತು ಚೀನಿ ಭಾಷೆಗಳಿಗೂ ಇವರ ಸಾಹಿತ್ಯ ತಲುಪಿ, ವಿಶ್ವದ ಮಟ್ಟಿಗೆ ಗುರುತಿಸಿಕೊಂಡಿದ್ದ ಕಾದಂಬರಿಕಾರರು ಭೈರಪ್ಪ. ಅವರು ಕಾದಂಬರಿಗಳನ್ನು ರಚಿಸುತ್ತಿದ್ದ ಕ್ರಮ, ಪ್ರಜ್ಞಾಪ್ರವಾಹ ತಂತ್ರದ ಪ್ರಯೋಗ, ಬಳಸುತ್ತಿದ್ದ ಭಾಷೆ, ಮಾಡುತ್ತಿದ್ದ ಅಧ್ಯಯನ, ಪೂರಕವಾಗಿ ಮಾಡುತ್ತಿದ್ದ ಪ್ರವಾಸ, ಅವರ ಅಪಾರವಾದ ಧಾರಣಾ ಶಕ್ತಿ...ನಾನಾ ಪಾತ್ರಗಳ ಜಗತ್ತಿನಲ್ಲಿ ಬದುಕುತ್ತಾ, ಬಹಳ ತೀಕ್ಷ್ಣವಾಗಿ ತಮ್ಮ ವಿಚಾರಗಳನ್ನು ಮಂಡಿಸುತ್ತಾ, ಅಧ್ಯಯನ ಮಾಡುತ್ತಾ, ಪ್ರವಾಸ ಕೈಗೊಳ್ಳುತ್ತಾ ಸದಾ ಚಟುವಟಿಕೆಯಿಂದ ಇರುತ್ತಿದ್ದವರು, ವಯೋಸಹಜವಾಗಿಯೇ ಆದರೂ, ಅನಾರೋಗ್ಯಕ್ಕೆ ಒಳಗಾದರೆ... ನೆನಪಿನ ಸಾಮರ್ಥ್ಯ ಕಳೆದುಕೊಂಡು ತಡವರಿಸಿದರೆ... ಹೀಗೆ ಕಡೆಗೆ ಮಿಸುಕಾಡದಂತೆ ಚಲನೆ ಕಳೆದುಕೊಂಡು ಅಂಗಾತ ಮಲಗಿಬಿಟ್ಟರೆ... ಅದನ್ನು ಅರಗಿಸಿಕೊಳ್ಳುವುದು ಬಹಳ ಕಷ್ಟದ ಕೆಲಸ! ಎಂಬುದಾಗಿ ಭೈರಪ್ಪನವರ ಒಡನಾಟವನ್ನು, ಕೊನೆಯ ದಿನಗಳನ್ನು ಆಶಾ ರಘು ಅವರು ವಿದಾಯ ಗೀತೆಯಂತೆ ಕಟ್ಟಿ ಕೊಟ್ಟಿದ್ದಾರೆ.

ತಾತ್ವಿಕ ಭಿನ್ನಾಭಿಪ್ರಾಯಗಳು ವೈಯಕ್ತಿಕ ವಿರೋಧವಾಗಬಾರದೆಂಬ ವಿವೇಕ ಮುಖ್ಯ ಎಂದು ನಾನು ನಂಬಿದ್ದೇನೆ. ಈ ಹಿನ್ನೆಲೆಯಲ್ಲಿ ಭೈರಪ್ಪನವರು ಕಾದಂಬರಿ ಪ್ರಕಾರದಲ್ಲಿ ಜನಪ್ರಿಯತೆ ಮತ್ತು ಗಂಭೀರತೆಗಳನ್ನು ಬೆಸೆದ ಬಗೆಯನ್ನು ಸಾಹಿತ್ಯ ವಿವೇಕದಿಂದ ಗೌರವಿಸುತ್ತೇನೆ. ಅವರ ಸಾಹಿತ್ಯ ಸ್ಮರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸುತ್ತೇನೆ ಎಂದಿದ್ದಾರೆ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ. ತಪಸ್ವಿಯೊಬ್ಬ ಸಕಲ ಲೌಕಿಕ ಸುಖ ಸಂತೋಷಗಳನ್ನೂ ತ್ಯಜಿಸಿ ಕಗ್ಗಾಡಿನ ಕಟ್ಟೆಕಾಂತದಲ್ಲಿ ಕಠೋರ ತಪಸ್ಸಿನಲ್ಲಿ ನಿರತನಾದಂತೆ, ತಮ್ಮ ಪಾಡಿಗೆ ತಾವು ನಿರಂತರ ಸಾಹಿತ್ಯ ರಚನೆಯಲ್ಲಿ ತೊಡಗಿ, ಮಹತ್ವದ ಸಿದ್ಧಿ, ಪ್ರಸಿದ್ಧಿ ಗಳಿಸಿದ 'ಸಾಹಿತ್ಯ ತಪಸ್ವಿ' ಎಸ್.ಎಲ್. ಭೈರಪ್ಪನವರು ಎಂದರೆ ಅತಿಶಯೋಕ್ತಿಯಲ್ಲ.

ಭೈರಪ್ಪನವರ ಮಹತ್ವದ ಕೃತಿಗಳ ವಿಮರ್ಶಾ ಲೇಖನಗಳೂ ಈ ಪುಸ್ತಕದಲ್ಲಿವೆ. ಭೈರಪ್ಪನವರ ಸಮಗ್ರ ವ್ಯಕ್ತಿತ್ವವನ್ನು, ಅವರ ಸಾಹಿತ್ಯ ಸಾಧನೆಯನ್ನು ಅರ್ಥ ಮಾಡಿಕೊಳ್ಳಲು ಈ ಕೃತಿ ನೆರವಿಗೆ ಬರುತ್ತದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಅಲ್ಲಮ ಕಥನ
(ಅಲ್ಲಮನ ಆಧ್ಯಾತ್ಮಿಕ ಯಾನಕ್ಕೆ ಪುಸ್ತಕ ರೂಪ ಕೊಟ್ಟಿದ್ದಾರೆ ಮಲ್ಲೇಪುರಂ ಅವರು)
ಲೇ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: 595/-

2

ಬುಕರ್ ಬಾನು
(ಕನ್ನಡಕ್ಕೆ ಬುಕರ್ ಪ್ರಶಸ್ತಿಯನ್ನು ತಂದುಕೊಟ್ಟ ಲೇಖಕಿ ಬಾನು ಮುಷ್ತಾಕ್ ಅವರ ಬದುಕು-ಬರೆಹ ಕುರಿತ ಕೃತಿ ಇದು)
ಲೇ: ಬಿ. ಶಿವಾನಂದ
ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಬೆಲೆ: 340/-

3



ಸಂತೆಯಲ್ಲಿ ನಿಂತ ಮುದುಕಿ
(ವೈದೇಹಿ ಅವರ ಬರಹಗಳ ಸಂಕಲನ. ಬಹಳ ದಿನಗಳ ನಂತರ ವೈದೇಹಿ ಅವರ ಪುಸ್ತಕವೊಂದು ಪ್ರಕಟವಾಗುತ್ತಿದೆ)
ಲೇ: ವೈದೇಹಿ
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
ಬೆಲೆ: 370/-

4



ಬದುಕುಳಿದವರು ಕಂಡಂತೆ
(2023ರ ಅಕ್ಟೋಬರ್ 7 ರಂದು ಇಸ್ರೇಲ್ ಮೇಲೆ ನಡೆದ ಭಯಾನಕ ಹತ್ಯಾಕಾಂಡದಲ್ಲಿ ಬದುಕುಳಿದವರು ಹೇಳಿದ ಮನ ಮಿಡಿಯುವ ಕಥನ)
ಮೂಲ: ಯೇರ್ ಆಗಮೋನ್, ಓರಿಯಾ ಮೇವೊರೊಚ್
ಅನು: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: 500/-

5



ಗಿರ್‌ಮಿಟ್
(ಪ್ರಬಂಧ ರಚನೆಯಲ್ಲಿ ಪಳಗಿದ ಪ್ರಶಾಂತ ಅವರ ಐದನೆಯ ಕೃತಿ ಇದು)
ಲೇ: ಪ್ರಶಾಂತ ಆಡೂರ
ಪ್ರ: ಮನೋಹರ ಗ್ರಂಥಮಾಲೆ, ಧಾರವಾಡ
ಬೆಲೆ: 250/-

6



ಜಮಲಾಪುರದ ಜಡೆಮುನಿ ಕೇಸು
(ಪತ್ತೇದಾರಿ ಕಾದಂಬರಿಗಳಿಂದ ಹೊಸ ಓದುಗರನ್ನು ಹುಟ್ಟುಹಾಕಿದವರು ಕೌಶಿಕ್ ಕೂಡುರಸ್ತೆ; ಅವರ ಹೊಸ ಸಸ್ಪೆನ್ಸ್ ಕಾದಂಬ ಇದು.)
ಲೇ: ಕೌಶಿಕ್ ಕೂಡುರಸ್ತೆ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: 275/-

7



ಇಂತಿ, ಪೂರ್ವಿ
(ಸಾಫ್ಟ್‌ವೇರ್ ಇಂಜಿನಿಯರೊಬ್ಬರು ಬರೆದ ಸಾಮಾಜಿಕ ಕಾದಂಬರಿ)
ಲೇ: ಮಧು ವೈ.ಎನ್
ಪ್ರ: ನೆಲಮುಗಿಲು ಪ್ರಕಾಶನ, ಬೆಂಗಳೂರು
ಬೆಲೆ: 300/-

8



ವಾತಾಪಿ
(ಕ್ರಿ.ಶ. 605-645 ರ ವರೆಗೆ ಚಾಲುಕ್ಯ ಸಾಮ್ರಾಜ್ಯವನ್ನು ಆಳಿದ ದಕ್ಷಿಣಾಪಥೇಶ್ವರ ಇಮ್ಮಡಿ ಪುಲಿಕೇಶಿಯ ಚರಿತ್ರೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: 449/-

9



ಚಾರ್ವಾಕ
(ವೈಚಾರಿಕತೆಯನ್ನು ಪ್ರತಿಪಾದಿಸುವ ಚಾರ್ವಾಕ ಪಂಥವು ಪುರಾತನ ಕಾಲದಿಂದಲೂ ಗೌರವಕ್ಕೆ ಪಾತ್ರವಾಗಿತ್ತು. ಅದರ ಪರಿಚಯ ಇಲ್ಲಿದೆ)
ಮೂಲ ಮರಾಠಿ: ಸುರೇಶ ದ್ವಾದಶೀವಾರ
ಕನ್ನಡಕ್ಕೆ: ಚಂದ್ರಕಾಂತ ಪೋಕಳೆ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: 190/-

10



ಲೈಟ್ ಹೌಸ್
(ವರ್ಜೀನಿಯಾ ವೂಲ್ಫ್ ಇಂಗ್ಲಿಷ್‌ನ ಮಹತ್ವದ ಲೇಖಕಿ. ಅವರ ಕೃತಿ, 'ಟು ದಿ ಲೈಟ್ ಹೌಸ್' ನ ಕನ್ನಡಾನುವಾದವಿದು)
ಲೇ: ವರ್ಜೀನಿಯಾ ವೂಲ್ಫ್
ಅನು: ಡಾ। ಬಸು ಬೇವಿನಗಿಡದ
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಬೆಲೆ: 250/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಬೆಸುಗೆ ಬೆಸುಗೆ ಮನೆಯಿಂದ ಆಚೆಗೆ

» ಎನ್. ಶೈಲಜಾ ಹಾಸನ

'ಬೆಸುಗೆ ಬೆಸುಗೆ ಬೆಸುಗೆ ಜೀವನವೆಲ್ಲ ಸುಂದರ ಬೆಸುಗೆ' ಅಂತ ಹಾಡು ಬರ್ತಾ ಇತ್ತು. ಲ್ಯಾಪ್ಟಾಪ್‌ನಲ್ಲಿ ಹುದುಗಿ, ಕೆಲಸ ಮಾಡ್ತಾ ಇದ್ದ ಮಗಳು 'ಬೆಸುಗೆ ಬೆಸುಗೆ ಮನೆಯಿಂದ ಆಚೆಗೆ 'ಅಂತ ಲ್ಯಾಪ್ಟಾಪಿನಿಂದ ತಲೆ ಎತ್ತಿ ನನ್ನನ್ನೆ ನೋಡ್ತಾ ಕಿಚಾಯಿಸಿದಳು! ಏಕಿರಬಹುದು ಹೇಳಿ?

ಆಗ ನಾನು ಪಿಯುಸಿಯಲ್ಲಿದ್ದೆ . ಕಾಲೇಜಿನ ಸಮೀಪದಲ್ಲಿ ಸಿನಿಮಾ ಥಿಯೇಟರುಗಳಿದ್ದವು. ಗೆಳತಿಯರೆಲ್ಲ ಸೇರಿಕೊಂಡು ಆಗೊಮ್ಮೆ ಈಗೊಮ್ಮೆ ಕ್ಲಾಸ್ ಬಂಕ್ ಮಾಡಿ ಸಿನಿಮಾ ಥಿಯೇಟರಿಗೆ ನುಗ್ತಾ ಇದ್ವಿ. ಮನೆಯಲ್ಲಿ ಈ ವಿಷಯವನ್ನು ಹೇಳ್ತಾ ಇರಲಿಲ್ಲ. ಈ ಕಾಲಕ್ಕೆ ಅದು ಅಂತ ದೊಡ್ಡ ವಿಷಯವೇನು ಅಲ್ಲ. ಆದರೆ ಆ ಕಾಲಕ್ಕೆ ಹೆಣ್ಣು ಮಕ್ಕಳು ಒಂದು ಚೌಕಟ್ಟಿನೊಳಗೆ ಇರಬೇಕಿತ್ತು. ಅಪ್ಪ ಅಮ್ಮನ ಮಾತು ಮೀರುವಂತಿರಲಿಲ್ಲ. ಮೀರಿದರೆ ಬಿಸಿ ಬಿಸಿ ಕಜ್ಜಾಯ ತಿನ್ನಲೆ ಬೇಕಿತ್ತು. ಮಕ್ಕಳನ್ನು ತುಂಬಾ ಕಟ್ಟುನಿಟ್ಟಾಗಿ ಬೆಳೆಸುತ್ತಿದ್ದರು. ಅಂತಹ ವಾತಾವರಣದಲ್ಲಿ ಬೆಳೆಯುತ್ತಿದ್ದ ನಮಗೆ ಕಾಲೇಜು ವಿದ್ಯಾಭ್ಯಾಸ ಸಿಕ್ಕಿದ್ದೆ ಪುಣ್ಯ.

ನಮಗೆ ಬೆಳಗ್ಗೆ 8:00 ಗಂಟೆಯಿಂದ ಒಂದು ಗಂಟೆವರೆಗೂ ಕ್ಲಾಸ್. 10 ಗಂಟೆಗೆ ಮಾರ್ನಿಂಗ್ ಶೋಗೆ ಹೋಗಿ ಒಂದು ಗಂಟೆಗೆ ಸರಿಯಾಗಿ ಮನೆಗೆ ಹೋಗ್ತಾ ಇದ್ವಿ. ಆದರೆ ನಾನು ಮಾತ್ರ ನಮ್ಮಪ್ಪಂಗೆ ಹೇಳಿಯೆ ಹೋಗುತ್ತಿದ್ದೆ. ಸಿನಿಮಾಗೆ ಹೋಗಲು ಕಾಸು ಬೇಕಿತ್ತಲ್ಲ. ಕ್ಲಾಸ್ ಬಂಕ್ ಮಾಡಿ ಹೋಗ್ತಿನಿ ಅಂದರೆ ಬಯ್ಯುತ್ತಾರೆ ಅಂತ ಇವತ್ತು ಕ್ಲಾಸಿಲ್ಲ ಅಂತ ಸುಳ್ಳು ಹೇಳುತ್ತಿದ್ದೆ. ನನ್ನ ಮಗಳು ಯಾವತ್ತೂ ಸುಳ್ಳು ಹೇಳೋಲ್ಲ ಸತ್ಯಹರಿಶ್ಚಂದ್ರನ ಮುಂದಿನ ಜನರೇಷನ್ ಅಂತ ಅಪ್ಪ ಚೆನ್ನಾಗಿ ನಂಬಿ ಬಿಟ್ಟಿದ್ದರು. ಸಿನಿಮಾಕೆ ಹೋಗ್ಬೇಕು ಅಂದಾಗ ಕಾಲೇಜಿಗೆ ಹತ್ರಾನೆ ಇದ್ದ ಅಪ್ಪನ ಆಫೀಸಿಗೆ ಹೋಗಿ ಬಿಡುತ್ತಿದ್ದೆ. ನನ್ನ ನೋಡಿದ ಕೂಡಲೇ ಆಫೀಸಿನ ಅಪ್ಪನ ಸಹೋದ್ಯೋಗಿಗಳು 'ರಾಜಕುಮಾರಿ ಬಂದಳು ನೋಡಿ, ದಂಡ ಕೊಡಿ' ಅಂತ ರೇಗಿಸ್ತಾ ಇದ್ರು. ಅಪ್ಪ ನನ್ನನ್ನು ಕಂಡವರೇ, 'ಎಷ್ಟು ಬೇಕಮ್ಮ' ಅಂತ ಕೇಳಿ ನಾನು ಕೇಳಿದಷ್ಟು ದುಡ್ಡು ಕೊಡ್ತಾ ಇದ್ರು.

ಹಾಗೆ ಒಂದಿನ ಬೆಸುಗೆ ಸಿನಿಮಾಕ್ಕೆ ಹೋಗಿದ್ವಿ. ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಆ ಕಾದಂಬರಿಯನ್ನು ಓದಿದ್ದೆ. ತುಂಬಾ ಇಷ್ಟವಾಗಿತ್ತು. ಸಿನಿಮಾ ನೋಡಲು ಟಿಕೆಟ್ ತೆಗೆದುಕೊಳ್ಳುತ್ತಾ ಇರುವಾಗಲೇ ನಮ್ಮಣ್ಣನ ಗೆಳೆಯ ನಾವು ಟಿಕೆಟ್ ತಗೊಳ್ತಾ ಇರೋದನ್ನ ನೋಡಿಬಿಟ್ಟ. ಕೊಂಚ ಭಯವಾಯಿತು. ಹಾಳಾದವನು ನಾವು ಹೋಗಿದ್ದ ದಿನನೇ ಇವನು ಬರಬೇಕಿತ್ತೆ? ಅವನು ಹೋಗಿ ನಮ್ಮಣ್ಣನ ಹತ್ರ ಹೇಳಿಯೇ ಹೇಳ್ತಾನೆ. ಅಣ್ಣಂಗೆ ಗೊತ್ತಾದ್ರೆ ಸುಮ್ಮನೆ ಬಿಡ್ತಾನ. ಮೊದಲೆ ನನ್ನ ಕಂಡ್ರೆ ಅವನಿಗೆ ಒಂದಷ್ಟು ಕೋಪ. ಯಾಕೆಂದರೆ ಮುದ್ದಿನ ಮಗಳಿಗಾದ್ರೆ ಅಪ್ಪ ಯಾವಾಗ ಬೇಕಾದರೂ ದುಡ್ಡು ಕೊಡ್ತಿರ್ತಾರೆ, ತನಗೆ ಮಾತ್ರ ಕೊಡಲ್ಲ ಎಂಬ ಕೋಪ. ಕೇಳಿದಾಗಲೆಲ್ಲ ಹಣ ಪಡೆದುಕೊಳ್ಳುವ ಅದೃಷ್ಟ ಹೊಂದಿದ್ದ ನನ್ನ ಮೇಲೆ ಅವನಿಗೆ ಸದಾ ಹೊಟ್ಟೆಕಿಚ್ಚು! ಅಣ್ಣನ ಗೆಳೆಯ ಏನಾದ್ರೂ ಅವನ ಬಳಿ ನಾನು ಕಾಲೇಜ್ ಬಂಕ್ ಮಾಡಿ ಸಿನಿಮಾ ಹೋಗಿದ್ದೆ ಅಂತ ಹೇಳಿ ಬಿಟ್ಟಿದ್ರೆ, ಏನು ಮಾಡುವುದು ಅಂತ ಚಿಂತೆ ಆರಂಭವಾಯಿತು!

ಹೊರಗೆ ಭಯ ಇದ್ದರೂ, ಟಿಕೆಟ್ ತಗೊಂಡು ಒಳಗೆ ಹೋಗಿ ಕುತ್ಕೊಂಡೆ. ಒಳಗೆ ಹೋದ ನಂತರ ಭಯ ಇಲ್ಲ! ಸಿನಿಮಾ ಶುರುವಾಯಿತು ನೋಡಿ, ನನಗೆ ಎಲ್ಲ ಮರೆತು ಹೋಯಿತು. ಮನೋಜ್ಞ ನಟನೆ, ಕಿವಿಗೆ ಇಂಪಾದ ಹಾಡು, ಮೊದಲೇ ಓದಿಕೊಂಡಿದ್ದ ಕಥೆ ಸಿನಿಮಾದಲ್ಲಿ ಅದ್ಭುತವಾಗಿ ಮೂಡಿದ್ದು, ಸಿನಿಮಾ ನೋಡುತ್ತಾ ನೋಡುತ್ತಾ ಕಳೆದೇ ಹೋಗಿದ್ದೆ. ಸಿನಿಮಾ ಮುಗಿದ ಮೇಲು ಅದೇ ಗುಂಗಿನಲ್ಲಿ ಹೊರಬಂದು ಗೆಳತಿಯರೊಂದಿಗೆ ಮನೆಯ ದಾರಿ ಹಿಡಿದೆ.

ಬಾಗಿಲಲ್ಲೇ ನಿಂತಿದ್ದ ಅಮ್ಮ!

ನಾನು ನನ್ನ ಗೆಳತಿ ಒಂದೇ ವಠಾರದಲ್ಲಿದ್ದು ಇಬ್ಬರೂ ಸಿನಿಮಾ ಬಗ್ಗೆ ಮಾತನಾಡುತ್ತಾ ಮನೆಗೆ ಬಂದೆವು. ಅಮ್ಮ ಬಾಗಿಲಲ್ಲೇ ನನಗಾಗಿ ಕಾಯುತ್ತಾ ನಿಂತಿದ್ದರು. ಕೆಂಗಣ್ಣು ಬೀರುತ್ತಾ, 'ಕಾಲೇಜು ಮುಗಿತಾ?' ಅಂದ್ರು. ಅವರ ಧ್ವನಿ ಕಂಡೇ ನನಗೆ ಗೊತ್ತಾಗಿ ಹೋಯ್ತು, ಹಾಳಾದ ರಮೇಶ ಅಣ್ಣನಿಗೆ ವಿಷಯ ತಿಳಿಸಿದ್ದಾನೆ. ಇದಕ್ಕಾಗಿ ಕಾದು ಕುಳಿತಿದ್ದ ಅಣ್ಣ , ಅಮ್ಮನಿಗೆ ವಿಷಯ ಮುಟ್ಟಿಸಿದ್ದಾನೆ. ಅಯ್ಯೋ ಏನಪ್ಪಾ ಕಾದಿದೆ ನನಗೆ ಅಂತ ಹೆದರಿಕೊಂಡು ಮೆಲ್ಲಗೆ 'ಮುಗಿತಮ್ಮ' ಅಂದೆ.

'ಕಾಲೇಜಿಗೆ ಓದಕೋಹೋಗ್ತಿಯೋ, ಕದ್ದು ಸಿನಿಮಾ ನೋಡಿ ಹಾಳಾಗೋಗ್ತಿಯೊ, ಮನೆಗೆ ಬರಬೇಡ ನೀನು, ನಿಮ್ಮಪ್ಪ ಬಂದ್ಮೇಲೆ ಅವರ ಜೊತೇನೆ ಬಾ, ಮಾಡ್ತೀನಿ ನಿಂಗೆ' ಅಂತ ಬೈದು ನನ್ನ ಮನೆಯೊಳಗೆ ಸೇರಿಸದೆ ಬಾಗಿಲು ಹಾಕಿಕೊಂಡು ಬಿಟ್ಟರು. ಸಿನಿಮಾ ನೋಡಿದ ಖುಷಿಯಲ್ಲಾ ಜರ್‍ರಂತ ಇಳಿದು ಹೋಯಿತು. ಏನಪ್ಪ ಮಾಡ್ಲಿ? ಅಪ್ಪ ಬರುವುದು ಸಂಜೆಗೆ. ಈಗಿನ್ನೂ ಮಧ್ಯಾಹ್ನದ ಎರಡು ಗಂಟೆ, ಹೊಟ್ಟೆ ಬೇರೆ ಹಸಿತಾ ಇದೆ. ಈ ಅಮ್ಮನಿಗೆ ಸ್ವಲ್ಪವೂ ಕರುಣೆ ಇಲ್ವಾ? 'ಬೆಳಗ್ಗೆ ಹೋಗಿದ್ದ ಮಗಳು ಈಗ ಬಂದಿದ್ದಾಳೆ, ಏನೂ ತಿಂದಿಲ್ಲ, ಮೊದಲು ಊಟ ಕೊಟ್ಟು ನಂತರ ಶಿಕ್ಷೆ ಅನ್ನಬಾರದೆ, ನನ್ನ ಕರ್ಮ' ಅಂದುಕೊಂಡು ಪಕ್ಕದ ಮನೆಯಲ್ಲಿದ್ದ ಗೆಳತಿಯ ಮನೆಗೆ ಹೋದೆ. ಪುಣ್ಯಕ್ಕೆ ಅವರ ಮನೆಯಲ್ಲಿ ಅವತ್ತು ಯಾರೂ ಇರಲಿಲ್ಲ. ಗೆಳತಿ ಒಬ್ಬಳೇ ಊಟ ಮಾಡಲು ಸಿದ್ಧವಾಗುತ್ತಿದ್ದವಳು ನನ್ನನ್ನು ಕಂಡು 'ಬಾ ಬಾ ನನಗೆ ಗೊತ್ತಿತ್ತು, ನಿಮ್ಮಮ್ಮ ನಿನ್ನ ಆಚೆ ಹಾಕ್ತಾರೆ, ನೀನು ಇಲ್ಲಿಗೆ ಬರ್ತೀಯಾ ಅಂತ ಗೊತ್ತಿತ್ತು, ಬಾ ನಿನಗೂ ಸೇರ್ಸಿ ಎರಡು ತಟ್ಟೆ ಇಟ್ಕೊಂಡಿದೀನಿ. ಇಬ್ರೂ ಊಟ ಮಾಡೋಣ. ಇವತ್ತು ನಮ್ಮನೇಲಿ ಯಾರು ಇಲ್ಲ, ನಿಮ್ಮ ಅಪ್ಪ ಬಂದು ಕರೆದ ಮೇಲೆ ಮನೆಗೆ ಹೋಗುವಿಯಂತೆ' ಅಂತ ಕರೆದಳು. ಹೊಟ್ಟೆ ಹಸಿದಿತ್ತು; ಊಟ ಕಂಡ ಕೂಡಲೇ ಊಟ ಮಾಡಿ ಅಲ್ಲೇ ಚಾಪೆ ಮೇಲೆ ಉರುಳಿಕೊಂಡೆ. ಮಲಗಿದ್ದೇ ತಡ ನಿದ್ದೆ ಬಂದುಬಿಟ್ಟಿತು!

ಲಹರಿ

ಯಾವಾಗ ನಿದ್ದೆ ಬಂತು, ಎಷ್ಟು ಹೊತ್ತಾಯಿತು ಗೊತ್ತೇ ಆಗಲಿಲ್ಲ! ಗೆಳತಿ 'ಎದ್ದೇಳೆ ಎಷ್ಟು ಹೊತ್ತು ಮಲಗ್ತೀಯಾ? ನಿಮ್ಮಪ್ಪ ಬರೋ ಸಮಯ ಆಯಿತು, ಹೋಗಿ ಹೊರಗಡೆ ನಿಂತ್ಕೋ. ನಮ್ಮನೆ ಮುಂದೆ ತಾನೇ ಹೋಗಬೇಕು ನಿಮ್ಮಪ್ಪ . ಬಂದ ಕೂಡಲೇ ಅವರ ಜೊತೆ ಮನೆಗೆ ಹೋಗ್ಬಿಡು' ಅಂತ ಎಬ್ಬಿಸಿದಳು. ಎದ್ದು ಮುಖ ತೊಳ್ಕೊಂಡು ಬರುವಷ್ಟರಲ್ಲಿ ಬಿಸಿ ಬಿಸಿ ಕಾಫಿ ಕೊಟ್ಟಳು. ಕಾಫಿ ಕುಡ್ಕೊಂಡು ಹೊರಗೆ ಬಂದು ನಿಂತ್ಕೊಂಡೆ.

ಸ್ವಲ್ಪ ಹೊತ್ತಾದ್ಮೇಲೆ ಅಪ್ಪ ಬಂದ್ರು. ಅವರ ಹಿಂದೇನೇ ಕಳ್ಳ ಬೆಕ್ಕಿನಂತೆ ಹೆಜ್ಜೆ ಹಾಕಿದೆ. ಮನೆ ಬಾಗಿಲು ತೆಗ್ದಿತ್ತು. ಅಮ್ಮ ನಮ್ಮನ್ನೇ ಕಾಯ್ಕೊಂಡು ನಿಂತಿದ್ಲು. ಅಪ್ಪ ಚಪ್ಪಲಿ ಬಿಡೋಕು ಮುಂಚೇನೆ 'ಇವತ್ತು ನಿಮ್ಮ ಮಗಳು ಏನು ಮಾಡಿದ್ದಾಳೆ ಗೊತ್ತಾ? ಕಾಲೇಜಿಗೆ ಚಕ್ಕರ್ ಹೊಡೆದು ಸಿನಿಮಾಕ್ಕೆ ಹೋಗಿದ್ದಾಳೆ. ದಿನಾ ಹೀಗೆ ಮಾಡ್ತಾಳೆ ಇವಳು. ನಿಮ್ಮ ಮಗಳು ಓದಿ ಉದ್ದಾರ ಆಗ್ತಾಳೆ ಅಂತ ಕಾಲೇಜಿಗೆ ಕಳಿಸ್ತೀರಾ? ನಾಳೆಯಿಂದ ಅವಳು ಕಾಲೇಜಿಗೆ ಹೋಗೋದು ಬ್ಯಾಡ, ಮನೆಯಲ್ಲಿ ಕೆಲಸ ಮಾಡಿ ಕೊಂಡಿರಲಿ. ನನಗೆ ಎಲ್ಲಾ ಕೆಲಸ ಮಾಡೋಕಾಗಲ್ಲ!' ಅಂತ ಜೋರು ಮಾಡಿದರು.

ಲಂಗದ ಮೇಲೆ ಏಟು!

ಅಪ್ಪ ಏನೂ ಗೊತ್ತಿಲ್ಲದಂಗೆ 'ಹೌದಾ ಮಗಳೇ, ಕಾಲೇಜಿಗೆ ಹೋಗು ಅಂದ್ರೆ, ಸಿನಿಮಾಗೆ ಹೋಗ್ತೀಯಾ ತಾಳು ನಿನಗೆ ಮಾಡ್ತೀನಿ, ನೀನು ತುಂಬಾ ಹೆಚ್ಚಿಕೊಂಡು ಬಿಟ್ಟಿದ್ದೀಯ' ಅಂತ ಅಲ್ಲೇ ಬಿದ್ದಿದ್ದ ಕೋಲು ತೆಗೆದುಕೊಂಡು ಹೊಡೆಯುವಂತೆ ಬಡ್ ಬೆಡ್ ಅಂತ ಕಾಲಿನ ಭಾಗಕ್ಕೆ ಬಡಿದರು. ಆಗೆಲ್ಲಾ ಉದ್ದ ಲಂಗ ಬ್ಲೌಸ್ ಹಾಕ್ತಾ ಇದ್ದೆ ತಾನೆ! ಅಪ್ಪ ಲಂಗದ ಮೇಲೆ ಹೊಡೆಯುವಾಗ ಡಬ್ ಡಬ್ ಅಂತ ಶಬ್ದ ಕೇಳಿಸುತ್ತಿತ್ತು. ನನಗೆ ಒಂಚೂರು ಏಟು ಬೀಳುತ್ತಿರಲ್ಲ. ಆದರೂ ಏಟು ಬಿದ್ದಂತೆ ನಟಿಸುತ್ತಾ 'ಇನ್ನೊಂದು ಸಲ ಹೋಗಲ್ಲ, ಕಾಲೇಜಿಗೆ ಬಂಕ್ ಮಾಡಲ್ಲ, ಹೊಡಿಬೇಡಿ' ಎಂದು ಕೂಗಿ ಕೊಳ್ಳುತ್ತಾ ಇದ್ದೆ. ಆ ಶಬ್ದ ತುಂಬಾ ಜೋರಾಗಿ ಹೊಡೆಯುವಂತೆ ಕೇಳಿಸಿ ಅಮ್ಮನಿಗೆ ಮಗಳನ್ನು ಶಿಕ್ಷಿಸುವ ಅಪ್ಪನನ್ನ ಕಂಡು ತೃಪ್ತಿ ಆಯಿತು. ನನಗೆ ಏಟು ಬಿದ್ದ ನಂತರ ಒಳಗೆ ಹೋದಳು.

ಅಮ್ಮ ಒಳಹೋದ ಮೇಲೆ 'ನಿಮ್ಮ ಅಮ್ಮನಿಗೆ ಹೇಗೆ ಗೊತ್ತಾಯಿತು, ಗೊತ್ತಾಗದಂತೆ ಎಚ್ಚರಿಕೆಯಿಂದ ಇರಬೇಕು ತಾನೆ?' ಅಂತ ಅಪ್ಪ ಮೆಲ್ಲನೆ ಕೇಳಿದಾಗ, ಅಣ್ಣನ ಫ್ರೆಂಡ್ ನನ್ನನ್ನು ಸಿನಿಮಾದ ಹತ್ತಿರ ನೋಡಿದ್ದು, ಅವನುಬಂದು ಅಣ್ಣನಿಗೆ ಹೇಳಿದ್ದು, ಅಣ್ಣನು ಅಮ್ಮನಿಗೆ ಹೇಳಿದ್ದು, ಅದಕ್ಕೇ ನಾನು ಬಂದ ಮೇಲೆ ಅಮ್ಮ ನನ್ನನ್ನ ಮನೆಗೆ ಸೇರಿಸದೇ ಇದ್ದದ್ದು ಎಲ್ಲವನ್ನೂ ಹೇಳಿದೆ. 'ಪಕ್ಕದ ಮನೆಯಲ್ಲಿ ಇದ್ದೆ, ಈಗ ನೀವು ಬಂದಮೇಲೆ ನಿಮ್ಮ ಜೊತೆ ಒಳಗೆ ಬಂದೆ' ಅಂದೆ.

'ಹೋಗ್ಲಿ ಬಿಡು, ನೀನು ನಿನ್ನ ಫ್ರೆಂಡ್ ಮನೇಲಿ ಇರ್ತೀಯಾ ಅಂತ ನಿಮ್ಮಮ್ಮಂಗೆ ಚೆನ್ನಾಗ್ ಗೊತ್ತು. ಅದಕ್ಕೆ ಹಂಗೆ ಮಾಡಿದ್ದಾಳೆ. ಏಟು ಬಿತ್ತಾ?' ಅಂತ ಪ್ರೀತಿಯಿಂದ ಕೇಳಿದರು. 'ಅಯ್ಯೋ ಇಲ್ಲ ಬಿಡಪ್ಪ. ನೀವು ಹೊಡೆದಿದ್ದು ಒಂದು ಏಟು ನನಗೆ ಬಿದ್ದಿಲ್ಲ, ಅಮ್ಮಂಗೆ ಡೌಟ್ ಬರಬಾರದು ಅಂತ ಕೂಗಿ ಕೊಂಡೆ' ಅಂತ ಹೇಳಿದ ಮೇಲೆ ಅಪ್ಪನಿಗೆ ಸಮಾಧಾನವಾಗಿತ್ತು.

ಆಗಿನಿಂದ, ನಮ್ಮ ಮನೆಯ ಕೋತಿಗಳು 'ಬೆಸುಗೆ ಬೆಸುಗೆ ಮನೆಯಿಂದ ಆಚೆಗೆ' ಅಂತ ನನ್ನ ಕಿಚಾಯಿಸುತ್ತಾ ಇರುತ್ತವೆ. ಈ ಘಟನೆಯನ್ನು ಅದ್ಯಾವಗಲೋ ಒಂದು ಸಲ ನನ್ನ ಮಗಳಿಗೆ ಹೇಳಿ, ನಕ್ಕಿದ್ದೆ. ಆಮೇಲೆ ನೋಡಿ, ಅವಳು ಕೂಡ ಆ ಹಾಡು ಕೇಳಿದ ಕೂಡಲೇ 'ಬೆಸುಗೆ ಬೆಸುಗೆ ಮನೆಯಿಂದ ಆಚೆಗೆ' ಅಂತ ಕಿಚಾಯಿಸ್ತಾನೆ ಇರ್ತಾಳೆ! ಈ ರೀತಿ ಇನ್ನು ಮುಂದೆ ಕಿಚಾಯಿಸಬೇಡ ಅಂತ ನನ್ನ ಮಗಳಿಗೆ ಎರಡು ಏಟು ಹಾಕಲೇ?

ಮನೆಬಿಟ್ಟ ಮಾಲಿಂಗ!

» ಕೆ.ಶ್ರೀನಿವಾಸರಾವ್ ಹರಪನಹಳ್ಳಿ

ಮಾಲಿಂಗನಿಗೆ ಆ ದಿನ ತುಂಬಾ ಕೋಪ ಬಂದಿದ್ದಂತೂ ನಿಜ. ಬೆಳಿಗ್ಗೆ ಎದ್ದ ಗಳಿಗೆಯೇ ಸರಿಯಿಲ್ಲ. ಬರೀ ಎಡವಟ್ಟುಗಳೇ! ಮದುವೆಯಾಗಿ ಇನ್ನೂ ಸರಿಯಾಗಿ 8 ತಿಂಗಳೂ ಆಗಿಲ್ಲ. ಇತ್ತೀಚೆಗೆ ಪತ್ನಿ ಮಾದೇವಿಗೆ ನನ್ನ ಮೇಲೆ ಪ್ರೀತಿಯಿದ್ದಂತಿಲ್ಲ. ಬರೀ ಕೋಪ, ಸಿಟ್ಟು, ಸೆಡವು. ಏನೇ ಹೇಳಿದರೂ ವಾದ, ಪ್ರತಿವಾದ. ಏತಿ ಅಂದ್ರೆ ಪ್ರೇತಿ ! ನಾನೇನೇ ಮಾಡಿದರೂ ಅದಕ್ಕೊಂದು ಕೊಂಕು. ನಿಂತ್ರೆ ತಪ್ಪು, ಕುಂತ್ರೆ ತಪ್ಪು. ಇವಳು ಮಾದೇವಿ ಅಲ್ಲ, ಮೂದೇವಿ!

ಅಷ್ಟಕ್ಕೂ ಇಂದು ಬೆಳಿಗ್ಗೆ ಅವಳು ಅಷ್ಟೊಂದು ಉಗಿದು ಉಪ್ಪಿನಕಾಯಿ ಹಾಕಲು ನಾನು ಮಾಡಿದ ತಪ್ಪಾದರೂ ಏನು ? ನಿನ್ನೆ ಸಂಜೆ ಒಂದು ಮದುವೆ ಆರತಕ್ಷತೆಗೆ ಹೋಗಿದ್ದೆವು. ಅಲ್ಲಿ ಬರೀ ಲಲನಾಮಣಿಯರೇ ! ಕೆಲವು ಪರಿಚಯದ ಮಹಿಳೆಯರು ಮಾತನಾಡಿಸಿದರು. ಕೆಲವರನ್ನು ನಾನೇ ಬಳಿಹೋಗಿ ಮಾತನಾಡಿಸಿದ್ದು ನಿಜ. ಅದೇನು ಮಹಾಪರಾಧವೇ? ಅವರ ಬಳಿ ನಾನು ಲಲ್ಲೆ ಹೊಡೆದೆನಂತೆ ಎಂದು ಬೆಳಿಗ್ಗೆ ಬಾಯಿಗೆ ಬಂದಂತೆ ಉಗಿದಿದ್ದಾಳೆ. ನನಗೂ ಕೋಪ ನೆತ್ತಿಗೇರಿತ್ತು. 'ನಿನ್ನ ಸಹವಾಸವೇ ಬೇಡ, ಮನೆಬಿಟ್ಟು ಹೋಗುತ್ತೇನೆ' ಎಂದು ಮಾಲಿಂಗ ನೇರ ಬಸ್ ನಿಲ್ದಾಣಕ್ಕೆ ಬಂದಿದ್ದ.

ತನ್ನ ಊರಿಗೆ ಹೋಗುವ ಬಸ್ ಬರಲು ಇನ್ನೂ ಒಂದು ಗಂಟೆ ಬೇಕೆಂದು ತಿಳಿದ ಮಾಲಿಂಗ ಅಲ್ಲೇ ಗೋಡೆಗೊರಗಿ ನಿಂತು ಅತ್ತಿತ್ತ ನೋಡುತ್ತಿದ್ದ. ಅದೇಕೋ ಅಡ್ಡಾಡುವವರು ತನ್ನನ್ನೇ ಅಚ್ಚರಿಯಿಂದ ಮೇಲೊಮ್ಮೆ, ಕೆಳಗೊಮ್ಮೆ ನೋಡುತ್ತಾ ಹೋಗುತ್ತಿರುವುದನ್ನು ಗಮನಿಸಿದ. ಏಕಪ್ಪಾ ಎಲ್ಲರೂ ನನ್ನನ್ನು ಹೀಗೆ ನೋಡುತ್ತಿದ್ದಾರೆಂದು ತಿರುಗಿ ಮೇಲೆ ನೋಡಿದ.

ಅಲ್ಲಿತ್ತು ದೊಡ್ಡದೊಂದು ಬೋರ್ಡ್. 'ಜೇಬುಗಳ್ಳರಿದ್ದಾರೆ ಎಚ್ಚರಿಕೆ!' ತಕ್ಷಣ ಅಲ್ಲಿಂದ ತುಸು ದೂರ ನಡೆದು, ಒಂದು ಕಲ್ಲುಬೆಂಚಿನ ಮೇಲೆ ಹೋಗಿ ಕುಳಿತ. ಮತ್ತದೇ ಅಳುಕು! ಜನರು ನನ್ನನ್ನೇ ಗಮನಿಸುತ್ತಿದ್ದಾರೆ? ನಿಧಾನವಾಗಿ ಪಕ್ಕದಲ್ಲಿ ಕಣ್ಣು ಹಾಯಿಸಿದ. ಅಲ್ಲಿ ಕಂಬಕ್ಕೆ ದೊಡ್ಡಕ್ಷರಗಳಲ್ಲಿ ಬರೆದಿದ್ದರು. 'ಇಲ್ಲಿ ಉಗುಳಬೇಡಿ'.

ಮಾಲಿಂಗನಿಗೆ ಈ ಸ್ಥಳವೂ ಸೂಕ್ತವಲ್ಲ ಎನಿಸಿ ಹೋಗಿ ನಿಲ್ದಾಣದ ಕೊನೆಯ ಕಲ್ಲು ಬೆಂಚಿನ ಮೇಲೆ ಆಸೀನನಾದ. ಈ ಬಾರಿ ಖಂಡಿತ ಅಭಾಸವಾಗದು ಎಂದು ಭಾವಿಸಿದ. ಆದರೆ ನಿಲ್ದಾಣಕ್ಕೆ ಒಳಬರುವ, ಹೊರಹೋಗುವ ಪ್ರಯಾಣಿಕರು ತನ್ನನ್ನೇ ಮತ್ತೆ ವಿಚಿತ್ರವಾಗಿ ನೋಡುತ್ತಿರುವುದು ಗಮನಕ್ಕೆ ಬಂದಿತು. ಇದೇನು ಕರ್ಮ ಎಂದು ಹಿಂದೆ ಮುಂದೆ ನೋಡಿದ. ಅಲ್ಲಿ ಮತ್ತೊಂದು ಫಲಕ! 'ಉಗುಳುವುದಿದ್ದರೆ ಇಲ್ಲಿಯೇ ಉಗುಳಿರಿ.'

ಮಾಲಿಂಗನಿಗೆ ಪೇಚಿಗಿಟ್ಟುಕೊಂಡಿತು. ಮೂತ್ರ ವಿಸರ್ಜನೆಗೆ ಹೋಗಿ ಬರೋಣವೆಂದು ಶೌಚಾಲಯದ ಬಾಗಿಲಿಗೆ ಬರುವಷ್ಟರಲ್ಲಿ ಮೊಬೈಲ್ ರಿಂಗಾಯಿತು. ಅಲ್ಲೇ ಗೋಡೆಗೊರಗಿ ನಿಂತು, ಮೊಬೈಲಲ್ಲಿ ಗೆಳೆಯನೊಂದಿಗೆ ಮಾತನಾಡಲಾರಂಭಿಸಿದ. ಅತ್ತಿತ್ತ ಹೋಗಿಬರುವ ಮಹಿಳೆಯರು ವಿಚಿತ್ರವಾಗಿ ನೋಡುತ್ತಾ ಹೋಗುತ್ತಿದ್ದರು. ಒಬ್ಬ ಮಹಿಳೆಯಂತೂ 'ಅಪ್ಪಾ ಮಹಾನುಭಾವ ಇಲ್ಲಿ ಯಾಕೆ ನಿಂತಿದ್ದೀಯ? ನಾಚಿಕೆ ಆಗೋಲ್ವಾ?' ಎಂದು ಕಿಚಾಯಿಸಿದಳು. ಮತ್ತೆ ಅನುಮಾನ ಶುರುವಾಯಿತು.

ಹಹ್ಹಾಸ್ಯ!

ತಿರುಗಿ ನೋಡಿದ. ಅಲ್ಲೊಂದು ಬೋರ್ಡ್. 'ಮಹಿಳೆಯರ ಶೌಚಾಲಯ'.

ಮಾಲಿಂಗನಿಗೆ ಮುಜುಗರ ಆರಂಭವಾಯಿತು. ಸುಮ್ಮನೆ ಹೋಗಿ ಮೂಲೆಯ ಬೆಂಚ್ ಮೇಲೆ ಕುಳಿತ. ಪಕ್ಕದಲ್ಲಿ ಏಳೆಂಟು ದೊಡ್ಡ ದೊಡ್ಡ ಬ್ಯಾಗುಗಳಿದ್ದವು. ಮಾಲೀಕರು ಬಸ್ ಹುಡುಕಲು ಹೋಗಿದ್ದರೆಂದು ತೋರುತ್ತದೆ. ಒಬ್ಬ ಅಜ್ಜಿ ಇವನತ್ತ ಬಂದು ತನ್ನ ಕೈಯಲ್ಲಿನ ಗಂಟನ್ನು ಮುಂದಿರಿಸಿ 'ತಮ್ಮಾ...ವಸಿ ಈ ಗಂಟು ನೋಡ್ಕತೀಯಾ. ಒಂದಕ್ಕೆ ಹೋಗಿ ಬಿರ್ರನೆ ಬರ್ತೀನಿ?' ಎಂದು ಅವನ ಪಕ್ಕದಲ್ಲಿಟ್ಟಿದ್ದ ಲಗೇಜುಗಳೆಡೆಗೆ ನೋಡಿದಳು.

'ಅಜ್ಜಿ , ನಾನು ಬ್ಯಾಗ್ ಕಾಯೋನಲ್ಲ. ಈ ಲಗೇಜುಗಳು ನನ್ನವಲ್ಲ!' ಎಂದು ಎದ್ದು ಮೊದಲು ಬಸ್ ನಿಲ್ದಾಣದಿಂದ ಹೊರಬಂದ ಮಾಲಿಂಗ. ಹೊರಬದಿಯ ಗೋಡೆ ನೋಡಿದ. ಅಲ್ಲಿತ್ತು ಬರಹ. 'ಇಲ್ಲಿ ಮೂತ್ರವಿಸರ್ಜನೆ ಮಾಡಕೂಡದು.'

ಯಾರಿಗೆ ಬೇಕು ಈ ಫಲಕಗಳ ಸಹವಾಸ? ಮಾಲಿಂಗನಿಗೆ ಪತ್ನಿಯ ನೆನಪಾಗತೊಡಗಿತು. ನಿಜ ! ಎಷ್ಟೇ ಬಯ್ದರೂ ನನ್ನನ್ನೇ ನಂಬಿ ತನ್ನವರನ್ನೆಲ್ಲ ಬಿಟ್ಟು ನನ್ನ ಮನೆ ತುಂಬಿದವಳಲ್ಲವೇ? ಅವಳಿಗೆ ಯಾರು ದಿಕ್ಕು? ತಾನು ತಪ್ಪು ಮಾಡುತ್ತಿದ್ದೇನೆ.

ಮರುಕ್ಷಣ ಮಾಲಿಂಗ ಒಂದು ಮೊಳ ಮಲ್ಲಿಗೆ ಹೂವು ಖರೀದಿಸಿ, ಅಲ್ಲೇ ಇದ್ದ ಹೋಟೆಲಿನಿಂದ ಮೈಸೂರುಪಾಕ್ ಹಾಗೂ ಮಸಾಲೆದೋಸೆ ಪ್ಯಾಕ್ ಮಾಡಿಸಿಕೊಂಡು, ಮನೆಯತ್ತ ಸಾಗಿದ.

ಕಲ್ಲು ಬಾಳೆ ಕಂಡಿರಾ?

» ರಮಣ್ ಶೆಟ್ಟಿ ರೆಂಜಾಳ, ಮುಂಬೈ

ಅಪ್ಪ-ಅಮ್ಮನ ಜೊತೆ ಮೂಡಬಿದ್ರೆಯ ಅಪ್ಪನೂರು ದರೆಗುಡ್ಡೆಯಿಂದ ಏಳೆಂಟು ಕಿಲೋಮೀಟರ್ ದೂರದ ಅಮ್ಮನೂರು ಕಾರ್ಕಳದ ರೆಂಜಾಳಕ್ಕೆ ಹಿಂದೆಲ್ಲಾ ನಡೆದೇ ಹೋಗುತ್ತಿದ್ದೆವು. ಹಾಗೆ ಕಾಡುದಾರಿಯಲ್ಲಿ ಸಾಗುವಾಗ ನಡುದಾರಿಯ ದಟ್ಟಡವಿಯಲ್ಲಿ ಪವಡಿಸಿರುವ



ಪಾದೆಕಲ್ಲುಗಳ ಮಧ್ಯದ ಬಿರುಕುಗಳಲ್ಲಿ ಬೆಳೆದು ನಿಂತ ದಪ್ಪ ಬಾಳೆಯ ಮರಗಳು ಹಾಗೂ ಅವುಗಳಲ್ಲಿ ಗೊನೆಬಿಟ್ಟು ಕಳಿತ ಬಣ್ಣದ ಕದಳಿ ಹಣ್ಣುಗಳು ಮನಸೂರೆಗೊಳ್ಳುತ್ತಿದ್ದವು. ಅವುಗಳನ್ನು ಆಸೆ ಕಂಗಳಿಂದ ಕಂಡು ಕಿತ್ತುಕೊಡುವಂತೆ ಅಪ್ಪನನ್ನು ಕೇಳಿಕೊಳ್ಳುತ್ತಿದ್ದೆ. ಆಗವರು, 'ಅದು ಕಲ್ಲು ಬಾಳೆ ಕಣೋ, ನೋಡಲಷ್ಟೇ, ತಿನ್ನೋಕೆ ಆಗೊಲ್ಲ. ಹಣ್ಣಿನೊಳಗೆ ಕಪ್ಪು ಕಲ್ಲಿನಂತಹ ಬೀಜಗಳಿವೆ' ಎಂದರುಹಿದಾಗ ನಿರಾಸೆಯಾಗುತ್ತಿತ್ತು. ಆದರೂ ಅವುಗಳನ್ನು ಕೊಯ್ದು ಒಳರಚನೆ ಹೇಗಿರುತ್ತದೆಯೆಂದು ನೋಡಬೇಕೆಂಬ ಆಸಕ್ತಿ ಹುಟ್ಟುತ್ತಿದ್ದರೂ ಪಾಚಿ ಕಟ್ಟಿ ನೀರು ತೊಟ್ಟಿಕ್ಕುತ್ತಿದ್ದ ಹಾಸಿದಂತಹ ಇಳಿಜಾರು ಬಂಡೆಗಳು ಜಾರುವ ಭಯದಿಂದಾಗಿ ಆ ಬಯಕೆಯನ್ನೂ ಹತ್ತಿಕ್ಕುತ್ತಿದ್ದೆ!

ಇತ್ತೀಚೆಗೆ ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ಸಂದರ್ಶಿಸಿದ ಸಂದರ್ಭದಲ್ಲಿ ಕಲ್ಲು ಬಾಳೆ ಗಿಡಗಳನ್ನು ವೀಕ್ಷಿಸುವ ಅವಕಾಶ ದೊರೆಯಿತು. ಅಲ್ಲಿನ ಮುಖ್ಯ ದ್ವಾರದಿಂದ 'ಗುತ್ತಿನಮನೆ'ಯ ಮ್ಯೂಸಿಯಂಗೆ ಸಾಗುವ ಕಾಡುದಾರಿಯಲ್ಲಿವುಗಳನ್ನು ಗಮನಿಸಿ ಥಟ್ಟನೆ ಫೋಟೋ ಕ್ಲಿಕ್ಕಿಸಿದೆ...ಅದೂ ಗೊನೆ ಸಹಿತ! ಕಲ್ಲುಬಾಳೆ ಅಥವಾ ಕಾಡುಬಾಳೆ ಎಂದು ಕರೆಯಲ್ಪಡುವ ಈ ಸಸ್ಯಗಳು ಸಾಮಾನ್ಯವಾಗಿ ಪಶ್ಚಿಮ ಘಟ್ಟಗಳ ಕಾನನಗಳಲ್ಲಿ ಕಾಣಸಿಗುತ್ತವೆ. ಗಿಡಗಳು ಗರಿಷ್ಟ 12 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲವು ಹಾಗೂ ಕಾಂಡದ ಬುಡವು ಎರಡಡಿ ವ್ಯಾಸದಷ್ಟು ದಪ್ಪಗಿರಬಲ್ಲವು. ಕಾಂಡವು ಒರಟಾಗಿ ದಪ್ಪಗಿರುತ್ತದೆ. ಎಲೆಗಳು ಹತ್ತಡಿಗಿಂತಲೂ ಹೆಚ್ಚು ಉದ್ದ ಬೆಳೆಯುತ್ತವೆ. ಹೂವುಗಳೂ ಸಾಮಾನ್ಯ ಬಾಳೆಗಿಂತ ದೊಡ್ಡ ಗಾತ್ರದಲ್ಲಿದ್ದು ಹಣ್ಣುಗಳೊಳಗೆ ಕಪ್ಪು ಬಣ್ಣದ ಬೀಜಗಳಿರುತ್ತವೆ. ಕೆಲವು ಪ್ರಭೇಧಗಳಲ್ಲಿ ಗೊನೆಯ ಕೊನೆಯಲ್ಲಿ ಹೂವುಗಳ ಗುಚ್ಚವೇ ಕಾಣಸಿಗುತ್ತದೆ! ಹಣ್ಣುಗಳು ರುಚಿಯಲ್ಲಿ ಸಿಹಿಯೊಂದಿಗೆ ಸ್ವಲ್ಪ ಒಗರು ಒಗರಾಗಿರುತ್ತವೆ. ಕಲ್ಲುಬಾಳೆಯು ಔಷಧೀಯ ಗುಣಗಳನ್ನು ಹೊಂದಿರುವ ಸಸ್ಯ. ಈ ಬಾಳೆಗಳು ಹಾಸಿದಂತಿರುವ ಕಲ್ಲು (ಪಾದೆ ಕಲ್ಲು)ಗಳ ನಡುವೆ, ಬೆಟ್ಟಗಳ ಇಳೀಜಾರಿನಲ್ಲಿ ಬೆಳೆಯುತ್ತವೆ. ಅವುಗಳ ಔಷಧೀಯ ಗುಣಗಳಿಂದಾಗಿ ಮಾರುಕಟ್ಟೆಯಲ್ಲಿ ವಿಶೇಷ ಬೇಡಿಕೆಯಿದೆ. ಹಣ್ಣುಗಳನ್ನು ನೀರಿನಲ್ಲಿ ನೆನೆಸಿ ಅವುಗಳಿಂದ ಕಲ್ಲುಗಳಂತಹ ಬೀಜಗಳನ್ನು ಬೇರ್ಪಡಿಸಿ, ಆ ಬೀಜಗಳನ್ನು ಜಜ್ಜಿ ರಸ ತೆಗೆದು ಕಷಾಯ ತಯಾರಿಸುತ್ತಾರೆ. ಈ ಸಸ್ಯದ ಬೇರುಗಳನ್ನು ಹಲ್ಲುನೋವಿನ ಉಪಶಮನಕ್ಕಾಗಿ ಉಪಯೋಗಿಸುತ್ತಾರೆ. ಸಾಮಾನ್ಯ ಬಾಳೆಯೆಲೆಯಂತೆ ಇದರ ಎಲೆಗಳನ್ನು ಉಪಯೋಗಿಸಬಹುದು.

ಪುಸ್ತಕ ಪ್ರಕಾಶಕ ಸಂಗೀತ ಪರಿಚಾರಕ

» ಡಾ. ಬಿ. ಗುರುನಾಥ್

ಅಬ್ದುಲ್ ಕಲಾಂ, ಎಸ್.ಎಂ.ಕೃಷ್ಣ ಮತ್ತು ಇತರ ಗಣ್ಯರ ಜತೆ ಕಮಲನಾಥ್

1960ರ ದಶಕದಲ್ಲಿ ಹಲವು ಕನ್ನಡ ಕಾದಂಬರಿಗಳನ್ನು ಪ್ರಕಟಿಸಿದ ಕಮಲನಾಥ್ ಅವರ ಜನ್ಮ ಶತಮಾನೋತ್ಸವ ಈಗ ನಡೆಯುತ್ತಿದೆ. ಅವರು ಸಂಗೀತ ಕ್ಷೇತ್ರಲ್ಲೂ ಸಾಕಷ್ಟು ಸಾಧನೆ ಮಾಡಿದ್ದಾರೆ.

ಕನ್ನಡ ಪುಸ್ತಕಗಳ ಪ್ರಕಾಶಕ, ಮುದ್ರಕ, ಸಣ್ಣ ಕೈಗಾರಿಕೋದ್ಯಮಿ, ಸಂಗೀತ ಪರಿಚಾರಕ ಎಚ್. ಕಮಲಾನಾಥ್ ಅವರ ಜನ್ಮಶತಮಾನೋತ್ಸವವನ್ನು ಈ ವರ್ಷ ಆಚರಿಸಲಾಗುತ್ತಿದೆ. ಬೆಂಗಳೂರಿನಲ್ಲಿ 1925 ರ ಆಗಸ್ಟ್ ಏಳರಂದು ಜನಿಸಿದ ಅವರು ಸೆಂಟ್ರಲ್ ಕಾಲೇಜಿನಿಂದ ವಿಜ್ಞಾನ ಪದವೀಧರರಾದರು. ತಮ್ಮ ತಂದೆ ಎಚ್. ಭೀಮರಾವ್ ಅವರು 1935ರಲ್ಲಿ ಆರಂಭಿಸಿದ್ದ ಸ್ಟ್ಯಾಂಡರ್ಡ್ ಬುಕ್ ಡಿಪೋನಲ್ಲಿ ವೃತ್ತಿಜೀವನವನ್ನ ಪ್ರಾರಂಭಿಸಿದರು. 1960ರ ದಶಕದಲ್ಲಿ ಕನ್ನಡ ಪುಸ್ತಗಳ ಪ್ರಕಾಶನ ವ್ಯಾವಹಾರಿಕವಾಗಿ ಲಾಭದಾಯಕವಾಗಿರಲಿಲ್ಲ. ಕನ್ನಡ ಪುಸ್ತಕಗಳಿಗೆ ಸೀಮಿತ ಮಾರುಕಟ್ಟೆ, ಮಾರಾಟಗಾರರ ನಿರುತ್ಸಾಹ, ಪುಸ್ತಕ ಕೊಳ್ಳುವವರ ಬೆಲೆ ಬಗ್ಗೆ ಕಾಳಜಿ, ಇಂತಹ ಸವಾಲುಗಳ ಮಧ್ಯೆ, ಕಮಲಾನಾಥ್ ಅವರು ಕನ್ನಡ ಪುಸ್ತಕಗಳ ಪ್ರಕಾಶನವನ್ನ ಪ್ರಾರಂಭಿಸಿದರು. ಅವರ ಮುಖ್ಯ ಉದ್ದೇಶ – ಓದುಗರಿಗೆ ಕಡಿಮೆ ಬೆಲೆಯಲ್ಲಿ ಪುಸ್ತಕಗಳು ದೊರಕಬೇಕು ಎಂಬುದು.

ಈ ಸಮಯದಲ್ಲಿ ಪ್ರಕಟವಾದ ಪುಸ್ತಕಗಳಲ್ಲಿ ಅ.ನ. ಕೃ ಅವರ ಕಾದಂಬರಿಗಳಾದ ಸಂಧ್ಯಾರಾಗ, ಸ್ವಪ್ನ ಸುಂದರಿ, ಅಣ್ಣ-ತಂಗಿ, ಪಾಪ-ಪುಣ್ಯ, ಕಣ್ಣಾಮುಚ್ಚಾಲೆ, ಹುಲಿಯುಗುರು, ತಪೋಬಲ, ತ. ಸು. ಶಾಮರಾಯರ ವಚನ ರಾಮಾಯಣ, ತರಾಸು ಅವರ ಅಪರಾಧಿ, ಜಿ.ಪಿ. ರಾಜರತ್ನಂ ಅವರ ಬೋಧಿಸತ್ವನ ಕಥೆಗಳು ಮತ್ತು ನಮ್ಮ ಒಡೆಯರ ಕಥೆಗಳು, ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಶಿವಾಜಿ ಕೈವಲ್ಯ, ಛತ್ರಪತಿ ಶಿವಾಜಿ ಮುಂತಾದವು ಸೇರಿವೆ. ಕೆ.ಎಸ್. ನರಸಿಂಹಸ್ವಾಮಿಯ ವರ 'ಮೈಸೂರ ಮಲ್ಲಿಗೆ' ಕನ್ನಡ ಕವನ ಸಂಗ್ರಹಗಳಲ್ಲೇ ದಾಖಲೆ ಮರುಮುದ್ರಣ ಕಂಡ ಪುಸ್ತಕ. ಸ್ಟ್ಯಾಂಡರ್ಡ್ ಬುಕ್ ಡಿಪೋ ಮೂಲಕ ಅವರು ಪ್ರಕಟಿಸಿದ ಪುಸ್ತಕಗಳ ಸಂಖ್ಯೆ 500 ಕ್ಕೂ ಹೆಚ್ಚು. ಇದು ಕನ್ನಡ ಪುಸ್ತಕೋದ್ಯಮದಲ್ಲಿ ದಾಖಲಾಗಬೇಕಾದ ಸಂಗತಿ.

ಕಮಲಾನಾಥ್‌ರವರು ಮುದ್ರಣ ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾರೆ. 1963 ರಲ್ಲಿ ಪ್ಯಾಕ್ ಪ್ರಿಂಟ್ ಪ್ರೈವೇಟ್ ಲಿಮಿಟೆಡ್ ಎಂಬ ಮುದ್ರಣಾಲಯವನ್ನು ತೆರೆದರು. ಮುದ್ರಣ ತಂತ್ರಜ್ಞಾನದಲ್ಲಿ ಸತತ ಸುಧಾರಣೆ ಅವರ ಹಂಬಲವಾಗಿತ್ತು. ಇದಕ್ಕಾಗಿ 1969 ರಲ್ಲೇ ಅವರು ಅತ್ಯಾಧುನಿಕ ರೋಲ್ಯಾಂಡ್ ಆಫ್ಸೆಟ್ ಮುದ್ರಣಯಂತ್ರಗಳನ್ನು ಜರ್ಮನಿಯಿಂದ ತರಿಸಿಕೊಂಡಿದ್ದರು. 1991 ರಲ್ಲಿ ಆಧುನಿಕ ಮುದ್ರಣಾಲಯ ಸ್ಟ್ಯಾಂಡರ್ಡ್ ಪ್ರೆಸ್ ಸ್ಥಾಪಿಸಿದರು. 1980 ರಲ್ಲಿ ಸರಕಾರ ಕಾಗದದ ಆಮದಿಗೆ ನಿರ್ಬಂಧ ವಿಧಿಸಿದ್ದರಿಂದ, ಮುಕ್ತ ಮಾರುಕಟ್ಟೆಯಲ್ಲಿ ಕಾಗದದ ಬೆಲೆ ಜಾಸ್ತಿಯಾಗಿ ಇಡೀ ಪುಸ್ತಕೋದ್ಯಮ ಸಂಕಷ್ಟಕ್ಕೆ ಒಳಗಾಯಿತು. ಆಗ ಕರ್ನಾಟಕ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘದ ಅಧ್ಯಕ್ಷರಾಗಿದ್ದ ಕಮಲಾನಾಥ್ ಅವರು ಪ್ರಕಾಶಕರ ಮತ್ತು ಮುದ್ರಕರ ಸಂಕಷ್ಟಗಳನ್ನ ಸರಕಾರಕ್ಕೆ ಅತ್ಯಂತ ಪರಿಣಾಮಕಾರಿಯಾಗಿ ಮನದಟ್ಟು ಮಾಡಿಕೊಟ್ಟರು. ಸರಕಾರ ಕೂಡಲೇ 1000 ಟನ್ ಮುದ್ರಣ ಕಾಗದವನ್ನ ಇದಕ್ಕಾಗಿ ರಿಯಾಯಿತಿ ದರದಲ್ಲಿ ಬಿಡುಗಡೆ ಮಾಡಿತು.

ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಪುಸ್ತಕ ಪ್ರದರ್ಶನಗಳು ನಡೆಯುತ್ತಿದ್ದುದರ ಹಿಂದೆಯೂ ಕಮಲನಾಥ್ ಅವರ ಪಾತ್ರವಿದೆ. ನ್ಯಾಷನಲ್ ಬುಕ್ ಟ್ರಸ್ಟ್ ನವರು (ಎನ್. ಬಿ.ಟಿ) ದೆಹಲಿಯಲ್ಲಿ ಮಾತ್ರ ಪುಸ್ತಕ ಪ್ರದರ್ಶನವನ್ನ ಏರ್ಪಡಿಸುತ್ತಿದ್ದರು. ಆಗ ಎನ್. ಬಿ.ಟಿ. ಸಲಹಾ ಸಮಿತಿಯ ಸದಸ್ಯರಾಗಿದ್ದ ಕಮಲಾನಾಥ್ ಅವರ ಪ್ರಯತ್ನದಿಂದ ಮೊದಲಬಾರಿಗೆ ಎನ್.ಬಿ.ಟಿ ದೆಹಲಿಯ ಹೊರಗೆ ಬೆಂಗಳೂರಿನಲ್ಲಿ ಪುಸ್ತಕ ಪ್ರದರ್ಶನವನ್ನ ಏರ್ಪಡಿಸಿದ್ದರಿಂದ ಕರ್ನಾಟಕದ ಪ್ರಕಾಶಕರಿಗೆ ಹಾಗು ಪುಸ್ತಕ ಮಾರಾಟಗಾರರಿಗೆ ಹೊಸ ಮಾರುಕಟ್ಟೆ ದೊರೆಯುವಂತಾಯಿತು.

ಸಂಗೀತ ಕ್ಷೇತ್ರದಲ್ಲಿ

ಪುಸ್ತಕ ಪ್ರಕಟಣೆ, ಮುದ್ರಣ, ಸಣ್ಣ ಕೈಗಾರಿಕೆ ಮೊದಲಾದ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದ ಕಮಲಾನಾಥ್ ಅವರು ತಮ್ಮ ಪ್ರಿಯವಾದ ಸಂಗೀತ ಕ್ಷೇತ್ರದಲ್ಲೂ ಛಾಪು ಮೂಡಿಸಿದ್ದಾರೆ. ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷರಾಗಿ 22 ವರ್ಷಗಳ ಧೀರ್ಘಕಾಲ ಕಾರ್ಯನಿರ್ವಹಿಸಿದ್ದರು. ನಮ್ಮ ಸಂಗೀತ ಪರಂಪರೆ ಮುಂದಿನ ತಲೆಮಾರಿಗೂ ಹೋಗಬೇಕೆನ್ನುವ ಹಂಬಲ ಅವರಿಗಿತ್ತು, ಅದಕ್ಕಾಗಿ ಸ್ಥಳೀಯ ವಿದ್ಯಾರ್ಥಿಗಳಿಗೆ ಮತ್ತು ಯುವ ಕಲಾವಿದರಿಗೆ ವಿಶೇಷವಾಗಿ ಪ್ರೋತ್ಸಾಹಿಸಿ ಸೂಕ್ತ ವೇದಿಕೆಯನ್ನ ಒದಗಿಸುತ್ತಿದ್ದರು. ಪ್ರತಿವರ್ಷ ಸಂಗೀತ ಸ್ಪರ್ದೆಗಳನ್ನೂ, ಪ್ರತಿಭಾ ಪ್ರೋತ್ಸಾಹ ಕಚೇರಿಗಳನ್ನೂ ಮೂವತ್ತು ವಿಭಾಗಗಳಲ್ಲಿ ನಡೆಸುತ್ತಿದ್ದರು. ಸಂಗೀತ ಎಂದರೆ ಚೆನ್ನೈ ಕಡೆ ನೋಡುತ್ತಿದ್ದ ದಿನಗಳಲ್ಲಿ ಹಿರಿಯ ಕಲಾವಿದರೂ ಬೆಂಗಳೂರು ಗಾಯನ ಸಮಾಜದಲ್ಲಿ ಕಚೇರಿ ನೀಡಲು ಕಾತುರರಾಗಿ ಮುಂದೆಬರುವಂತಾಗಿದ್ದು ಕಮಲಾನಾಥ್ ಅವರ ಕೊಡುಗೆಗಳಲ್ಲಿ ಪ್ರಮುಖವಾದದ್ದು. 2005 ರಲ್ಲಿ ಗಾಯನ ಸಮಾಜದ ಶತಮಾನೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ವಿಶೇಷರೀತಿಯಲ್ಲಿ ಆಚರಿಸಲಾ ಯಿತು. ಕಮಲಾನಾಥ್ ಅವರು ಗಾಯನ ಸಮಾಜದ ಶತಮಾನೋತ್ಸವದ ಕಾರ್ಯಕ್ರಮಗಳನ್ನು ವರ್ಷ ಪೂರ್ತಿ ಆಯೋಜಿಸಿದರು. ಬೆಂಗಳೂರಿನಲ್ಲಿ ಆಯೋ ಜಿಸಿದ್ದ ಸಮಾರೋಪ ಸಮಾರಂಭಕ್ಕೆ ಆಗಿನ ರಾಷ್ಟ್ರಪತಿಗ ಳಾದ ಡಾ. ಅಬ್ದುಲ್ ಕಲಾಂ ಅವರು ಆಗಮಿಸಿದ್ದು ಸಾಂಸ್ಕೃತಿಕ ಲೋಕದಲ್ಲಿ ಗಾಯನ ಸಮಾಜದ ಪ್ರಾಮು ಖ್ಯತೆಯನ್ನ ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾಯಿತು.

ಕಮಲಾನಾಥ್ ಅವರು ಇಪ್ಪತ್ತೆರಡು ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಬೆಂಗಳೂರು ಗಾಯನ ಸಮಾಜದ 55 ನೇ ಸಂಗೀತ ಸಮ್ಮೇಳನವನ್ನ ಸುಪ್ರಸಿದ್ಧ ವಾಗ್ಗೇಯಕಾರ ಮುತ್ತುಸ್ವಾಮಿ ದೀಕ್ಷಿತರ್ ಹಾಗೂ ಕಮಲಾನಾಥ್ ಅವರಿಗೆ ಸಮರ್ಪಿಸಲಾಗಿದೆ. ನವೆಂಬರ್ 16 ರಿಂದ 23 ರರ ವರೆಗೆ ಈ ಸಮ್ಮೇಳನ ಬೆಂಗಳೂರು ಗಾಯನ ಸಮಾಜದ ಸಭಾಂಗಣದಲ್ಲಿ ನಡೆಯಿತು.

ಕನ್ನಡ ಪುಸ್ತಕಗಳ ಪ್ರಕಾಶಕ, ಮುದ್ರಕ, ಸಣ್ಣ ಕೈಗಾರಿಕೋದ್ಯಮಿ, ಸಂಗೀತ ಪರಿಚಾರಕ, ಕಲಾ ಪೋಷಕ ಮೇಲಾಗಿ ಸುಸಂಸ್ಕೃತ, ಸಹೃದಯಿಯಾಗಿದ್ದ ಕಮಲಾನಾಥ್ ಅವರು ತಮ್ಮ 86 ನೇ ವಯಸ್ಸಿನಲ್ಲಿ ಸೆಪ್ಟೆಂಬರ್ 29, 2011 ರಂದು ನಿಧನರಾದರು.

ಖಾಸಗಿ ಗ್ರಂಥಾಲಯದ ಅನುಪಮ ಸೇವೆ

ಗ್ರಂಥಾಲಯಗಳು ಜ್ಞಾನವನ್ನು ಹರಡುವ ಕೇಂದ್ರಗಳು; ಹೆಚ್ಚು ಹೆಚ್ಚು ಜನ ಗ್ರಂಥಾಲಯಗಳನ್ನು ಬಳಸಿ, ಸದುಪಯೋಗಪಡಿಸಿಕೊಂಡರೆ, ಆ ದೇಶ ಅಭಿವೃದ್ಧಿಹೊಂದುವುದು.

» ಸುರೇಶ ಗುದಗನವರ

ಸಾರ್ವಜನಿಕ ಗ್ರಂಥಾಲಯವನ್ನು ಜನಸಾಮಾನ್ಯರ ವಿಶ್ವವಿದ್ಯಾಲಯ ಎಂದು ಕರೆಯುವುದುಂಟು. ಸುಸಜ್ಜಿತ ಗ್ರಂಥಾಲಯವು, ಒಂದು ಜನಸಮೂಹದ ಜೀವನಮಟ್ಟವನ್ನು ಉನ್ನತಕ್ಕೆ ಎತ್ತರಿಸಬಲ್ಲದು. ನಮ್ಮ ದೇಶದಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಸರಕಾರವು ಆರಂಭಿಸಿದ್ದರೂ, ಈಗಿನ ಆಧುನಕ ಯುಗಕ್ಕೆ ತಕ್ಕಂತೆ ಅವು ಉನ್ನತೀಕರಣಗೊಂಡಿಲ್ಲ ಎಂಬ ಭಾವನೆಯಿದೆ. ಸರಕಾರ ನಡೆಸುವ ಗ್ರಂಥಾಲ ಯಗಳ ಜತೆಯಲ್ಲೇ, ನಮ್ಮ ನಾಡಿನಲ್ಲಿ ಅಲ್ಲಲ್ಲಿ ಖಾಸಗಿ ಗ್ರಂಥಾಲಯಗಳು ತಮ್ಮ ಕೈಲಾದ ಸೇವೆಯನ್ನು ನೀಡುತ್ತಿವೆ. ಧಾರವಾಡದ ಮಾಳಮಡ್ಡಿಯ ಕಬ್ಬೂರ ರಸ್ತೆಯಲ್ಲಿರುವ ಡಾ.ಕಬ್ಬೂರ ಕಟ್ಟಡದ ಆವರಣದಲ್ಲಿರುವ 'ಅವನಿ ರಸಿಕರ ರಂಗ'ದ ಗ್ರಂಥಾಲಯ ಹಲವು ವೈಶಿಷ್ಟ್ಯಗಳಿಂದ ಕೂಡಿದೆ.

ಆದಾಯ ತೆರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ನಾರಾಯಣ ಪರಮೇಶ್ವರ ಭಟ್ಟ ಮತ್ತು ಜ್ಞಾನಪೀಠ ಪುರಸ್ಕೃತ ಡಾ.ವಿ.ಕೃ.ಗೋಕಾಕರ ಮಗಳು ಡಾ.ಯಶೋಧಾ ಭಟ್ಟ ಅವರು ನಿವೃತ್ತಿಯ ನಂತರ 1999ರಲ್ಲಿ ಧಾರವಾಡಕ್ಕೆ ಬಂದು ನೆಲೆಸಿದರು. 2000 ರಲ್ಲಿ 'ಅವನಿ ರಸಿಕರ ರಂಗ' ಸಂಸ್ಥೆಯನ್ನು ಹುಟ್ಟು ಹಾಕಿ, ಅದರ ಮೂಲಕ ಸಾಹಿತ್ಯ, ಸಂಗೀತ ರಂಗಕಲೆಗಳ ಬಗ್ಗೆ ಚಟುವಟಿಕೆಗಳನ್ನು ನಡೆಸತೊಡಗಿದರು. ಈ ದಂಪತಿ ಒಂದು ಗ್ರಂಥಾಲಯವನ್ನು ಸ್ಥಾಪಿಸುವ ಮಹಾದಾಸೆಯನ್ನು ಹೊಂದಿದ್ದರು. ಮಾಳವಡ್ಡಿಯ ಶಶಿಕಾಂತ ಕುಲಕರ್ಣಿ ಅವರ ನೆರಳು ಕಟ್ಟಡದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಲು ಸಿದ್ಧತೆ ನಡೆಸಿದರು. ಅವರ ಆಸಕ್ತಿ, ಬದ್ಧತೆಯಿಂದಾಗಿ, 2007, ಅಕ್ಟೋಬರ್ 19ರಂದು 'ಶ್ರೀನಿವಾಸರಾವ್ ಮಂಗಳವೇಡೆ' ಗ್ರಂಥಾಲಯ ಎಂದು ಪ್ರಾರಂಭಗೊಂಡಿತು.

ಪುಸ್ತಕಗಳನ್ನು ಎರವಲು ನೀಡುವುದರ ಜತೆಯಲ್ಲೇ, ಗ್ರಂಥಾಲಯದ ಆವರಣದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಪ್ರೊ.ಎಂ.ಎನ್.ಜೋಶಿ ಅವರಿಂದ ಭಗವದ್ಗೀತೆ ಕುರಿತು ಪ್ರವಚನ, ಪ್ರೊ.ಮಾಲತಿ ಆದವಾನಿ ಅವರಿಂದ ಉಪನ್ಯಾಸ ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಗ್ರಂಥಾಲಯದ ಏಳ್ಗೆಗಾಗಿ ಮಾಳಮಡ್ಡಿಯ ಜನರು ಮತ್ತು ಇತರರು ಸಾಕಷ್ಟು ಶ್ರಮಿಸಿದರು. ಕಾರಣಾಂತರಗಳಿಂದ ಗ್ರಂಥಾಲಯವು ಮಾಳಮಡ್ಡಿಯ ಕಬ್ಬೂರ ರಸ್ತೆಯ ಡಾ.ಕಬ್ಬೂರ ಮನೆಯ ಆವರಣಕ್ಕೆ ಸ್ಥಳಾಂತರಗೊಂಡಿತು.

ಈಗ ಗ್ರಂಥಾಲಯವು 5,000ಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿದೆ. ಪುಸ್ತಕಗಳನ್ನು ಚರಿತ್ರೆ, ಕಾದಂಬರಿ, ಕಥೆ, ಕವನ, ಮಕ್ಕಳ ಕಥೆ ಭಾಗಗಳಾಗಿ ವಿಂಗಡಣೆ ಮಾಡಲಾಗಿದ್ದು, ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಈ ಗ್ರಂಥಾಲಯಕ್ಕೆ ಸಾಹಿತ್ಯಾಸಕ್ತರು, ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಭೇಟಿ ನೀಡುತ್ತಾರೆ. ಕೆಲವು ಸದಸ್ಯರು ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದುವ ಹವ್ಯಾಸವನ್ನು ಹೊಂದಿದ್ದಾರೆ. ಹರಿದ ಪುಸ್ತಕಗಳನ್ನು ಸದಸ್ಯರೆ ಅಂಟು ಹಚ್ಚಿ ದುರಸ್ತಿ ಮಾಡುತ್ತಾರೆ. ಮರೆಯಾಗುತ್ತಿರುವ ಓದುವ ಸಂಸ್ಕೃತಿಯನ್ನು ಮರು ಸ್ಥಾಪಿಸುವ ಕೆಲಸ ಇಲ್ಲಿ ನಡೆಯುತ್ತಿದೆ. ಹೆಚ್ಚಾಗಿ ಗೃಹಿಣಿಯರು ಗ್ರಂಥಾಲಯದ ಲಾಭವನ್ನು ಪಡೆಯುತ್ತಿದ್ದಾರೆ.

2015, ಎಪ್ರಿಲ್ 30ರಂದು ಲೇಖಕಿ ವೈದೇಹಿ ಅವರು ಧಾರವಾಡಕ್ಕೆ ಬೇಟಿ ನೀಡಿದಾಗ, 'ಅವನಿ ರಸಿಕರ ರಂಗ' ಗ್ರಂಥಾಲಯಕ್ಕೆ ಬಂದು ಓದುಗರೊಡನೆ ಸಂವಾದ ನಡೆಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಗ್ರಂಥಾಲಯದಿಂದಾಗಿ ಬಡಾವಣೆಯ ನಾಗರಿಕರಲ್ಲಿ ಓದುವ ಹವ್ಯಾಸ ಹೆಚ್ಚಾಗಿದೆ. ವಯಸ್ಸಾದವರು, ಮನೆಯಲ್ಲಿರುವ ಗೃಹಿಣಿಯರು, ಶಾಲೆಗೆ ಹೋಗುವ ಮಕ್ಕಳು ತಮಗೆ ಬೇಕಾದ ಪುಸ್ತಕವನ್ನು ತೆಗೆದುಕೊಂಡು ಹೋಗಿ ಓದಿ, ವ್ಯವಸ್ಥಿತವಾಗಿ ಹಿಂದಿರುಗಿಸುತ್ತಾರೆ ಎಂದು ಸಹಾಯಕಿ ವೀಣಾ ಉಪಾಧ್ಯಾಯ ಹೇಳುತ್ತಾರೆ.

ಜ್ಞಾನಕ್ಕೆ ಮಿಗಿಲಾದುದು ಯಾವುದೂ ಇಲ್ಲ. ಜ್ಞಾನ ಪ್ರಸಾರ ಮಾಡುವುದು ಪವಿತ್ರ ಕಾರ್ಯ. ಶಿಕ್ಷಣದಲ್ಲಿ ಸಂಶೋಧನೆ, ವ್ಯಕ್ತಿತ್ವ ವಿಕಸನ, ನೈತಿಕತೆ, ಮತ್ತು ಗುಣಮಟ್ಟವನ್ನು ಉತ್ತೇಜಿಸುವಲ್ಲಿ ಗ್ರಂಥಾಲಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಗ್ರಂಥಾಲಯಗಳು ಓದುವ ಸಾಮಗ್ರಿಗಳನ್ನು ಸಂಘಟಿಸಿ, ಸಂರಕ್ಷಿಸಿ ಮತ್ತು ಬಳಕೆದಾರರಿಗೆ ಮಾಹಿತಿಯನ್ನು ಪ್ರಸಾರ ಮಾಡುವ ಮೂಲಕ ಸಮಾಜದ ಅಭಿವೃದ್ಧಿ ಕಾರ್ಯಗೈಯುತ್ತಿವೆ. ಈ ನಿಟ್ಟಿನಲ್ಲಿ ಗ್ರಂಥಾಲಯ ಸೇವೆ ಮಾಡುತ್ತಿರುವ 94ರ ವಯೋಮಾನದ ಡಾ.ಯಶೋಧಾ ಭಟ್ಟ ಮತ್ತು ವಿನೋದಿನಿ ಕಬ್ಬೂರ ಅವರ ಕಾರ್ಯ ಶ್ಲಾಘನೀಯವಾದುದು. (ಪ್ರಾತಿನಿಧಿಕ ಚಿತ್ರ)

ಬೇಹುಗಾರನ ವೀರಗಾಥೆ

» ರಾಸುಮ ಭಟ್

ವೈರಿ ರಾಷ್ಟ್ರಗಳಿಗೆ ಹೋಗಿ ತಮ್ಮ ಹಂಗು ತೊರೆದು ಅಲ್ಲಿನ ರಹಸ್ಯ ಮಾಹಿತಿಗಳನ್ನು ನಮ್ಮ ಸೇನೆಗೆ ರವಾನಿಸುವುದು ಬಹುದೊಡ್ಡ ಸಾಹಸ. ಹಲವು ದೇಶಗಳು ಇಂತಹ ಬೇಹುಗಾರರನ್ನು ಸಾಕಿವೆ, ಕಳಿಸಿವೆ; ಕೆಲವು ಬೇಹುಗಾರರು ಮೈನವಿರೇಳಿಸುವಂತಹ ಸಾಹಸಗಳನ್ನೂ ಮಾಡಿದ್ದಾರೆ. ನಮ್ಮ ದೇಶದ ಒಬ್ಬ ಬೇಹುಗಾರನು ನಡೆಸಿದ ಇಂತಹ ಸಾಹಸದ ಕಥಾಹಂದರ ಹೊಂದಿರುವ ಹಿಂದಿ ಚಿತ್ರ 'ಧುರಂಧರ್' ಇತ್ತೀಚೆಗೆ ತೆರೆಕಂಡಿದೆ. ಈ ಚಲನಚಿತ್ರವನ್ನು ಕಾಲ್ಪನಿಕ ಎಂದು ಅಧಿಕೃತವಾಗಿ ಹೇಳಲಾಗಿದ್ದು, ಸೆನ್ಸಾರ್ ಬೋರ್ಡ್ ಸಹ ಇದನ್ನು ಕಾಲ್ಪನಿಕ ಎಂದೇ ವರ್ಗೀಕರಿಸಿದೆ. ಆದರೆ, ನಮ್ಮ ದೇಶವು ನಡೆಸಿದ ಹಲವು ಬೇಹುಗಾರಿಕೆಗಳು ಮತ್ತು ಕೆಲವು ಐತಿಹಾಸಿಕ ವಿದ್ಯಮಾನಗಳ ಹಂದರವನ್ನು ಹೊಂದಿರುವ ಈ ಚಲನಚಿತ್ರವು, ನಿಜದ ಇನ್ನೊಂದು ಮಗ್ಗುಲನ್ನು ಹೇಳುತ್ತಿದೆ ಎಂದು ಹಲವು ಚಿತ್ರವೀಕ್ಷಕರು ನಂಬಿದ್ದಾರೆ. ಡಿಸೆಂಬರ್ 5 ರಂದು ಬಿಡುಗಡೆಗೊಂಡ 'ಧುರಂಧರ್', ಬಾಕ್ಸ್ ಆಫೀಸಿನಲ್ಲಿ ದಾಖಲೆಯನ್ನು ಬರೆಯಲು ಆರಂಭಿಸಿದ್ದು, ಅದಕ್ಕಿಂತ ಮಿಗಿಲಾಗಿ, ಬಾಲಿವುಡ್ ಕ್ಷೇತ್ರವು ಇಷ್ಟು ವರ್ಷ ಹೇಳದೇ ಇದ್ದ ಒಂದು ಕಥಾನಕವನ್ನು (ಕಾಲ್ಪನಿಕವೇ ಆಗಿರಲಿ) ಹೇಳಲು ಪ್ರಯತ್ನಿಸಿದೆ ಎನ್ನಬಹುದು.

ಈ ಹಿಂದಿ ಚಲನಚಿತ್ರವು ಬಹುತಾರ ಗಣದಿಂದ ಕೂಡಿದೆ. ರಣಬೀರ್ ಸಿಂಗ್, ಸಂಜಯ್ ದತ್, ಅಕ್ಷಯ್ ಖನ್ನಾ, ಸರಾ ಅರ್ಜುನ್ , ತಮಿಳು ನಟ ಮಾಧವನ್, ರಾಕೇಶ್ ಬೇಡಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 1999 ರಲ್ಲಿ ನಡೆದ ಕಂಧಹಾರ ವಿಮಾನ ಅಪಹರಣದ ವಿದ್ಯಮಾನದಿಂದ ಚಿತ್ರ ಪ್ರಾರಂಭವಾಗುತ್ತದೆ. 176 ಭಾರತೀಯ ಪ್ರಯಾಣಿಕರನ್ನು ಒಳಗೊಂಡಿದ್ದ ವಿಮಾನವನ್ನು ಭಯೋತ್ಪಾದಕರು ಅಪಹರಿಸಿ ಅಫಘಾನಿಸ್ತಾನದ ಕಂಧಹಾರ್‌ಗೆ ಕೊಂಡೊಯ್ಯುವರು; ಪ್ರಯಾಣಿಕರನ್ನು ಒತ್ತೆಯಾಳಾಗಿ ಇರಿಸಿಕೊಂಡು, ಅವರನ್ನು ಬಿಡಬೇಕಾದರೆ, ಭಾರತದ ಜೈಲಿನಲ್ಲಿದ್ದ ಕೆಲವು ಭಯೋತ್ಪಾದಕರನ್ನು ಬಿಡುಗಡೆಗೊಳಿಸ ಬೇಕು ಎಂಬ ಷರತ್ತು ಹಾಕುವರು; ಜತೆಗೆ ದೊಡ್ಡ ಮೊತ್ತದ ಹಣಕ್ಕೆ ಬೇಡಿಕೆ ಸಲ್ಲಿಸುತ್ತಾರೆ.

ಇವರ ಬೇಡಿಕೆಯನ್ನು ನಮ್ಮ ದೇಶವು ಅಂದು ಅನಿವಾರ್ಯವಾಗಿ ಪರಿಗಣಿಸಬೇಕಾಯಿತು; ನಮ್ಮ ದೇಶದ ವಿರುದ್ಧ ಹಲವು ಕುಕೃತ್ಯಗಳನ್ನು ನಡೆಸಿದ್ದ ಭಯೋತ್ಪಾದಕರನ್ನು ಬಿಡುಗಡೆಗೊಳಿಸುವರು. ಇಂತಹ ಘಟನೆಗಳು ಮುಂದೆ ಮರುಕಳಿಸದಂತೆ ನೋಡಿಕೊಳ್ಳಲು ಭಾರತೀಯ ಜೈಲಿನಲ್ಲಿರುವ ಜಸ್ಪ್ರೀತ್ ಸಿಂಗ್ ರಂಗಿ ಎಂಬಾತನನ್ನು ಬಳಸಿಕೊಳ್ಳುವುದು ಚಿತ್ರದ ಮುಖ್ಯ ಕಥೆ. ಹಮ್ಜಾ ಅಲಿ ಮಜಾರಿ (ಜಸ್ಮೀತ್ ಸಿಂಗ್ ರಂಗಿ) ಪಾತ್ರದಲ್ಲಿ ಚಿತ್ರದ ನಾಯಕ ರಣಬೀರ್‌ಸಿಂಗ್ ಅವರ ಅಭಿನಯ ಮನೋಜ್ಞವಾಗಿದೆ. ಉದ್ದನೆ ತಲೆ ಕೂದಲಿನಲ್ಲಿ ರಣಬೀರ್ ಸಿಂಗ್ ಅವರು ಖಡಕ್ ಆಗಿ ಕಾಣಿಸಿದ್ದಾರೆ. ಶತ್ರು ದೇಶಕ್ಕೆ ಹೋಗಿ ಮಾಹಿತಿ ಕಲೆಹಾಕುವ ಬೇಹುಗಾರಿಕೆ ಮತ್ತು ಸಾಹಸದ ಸನ್ನಿವೇಶದಲ್ಲಿ ಅವರ ಅಭಿನಯ ಗಮನ ಸೆಳೆಯುತ್ತದೆ. ಇಂತಹದೊಂದು ವಿಭಿನ್ನ ಪಾತ್ರವನ್ನು ಕೈಗೆತ್ತಿಕೊಳ್ಳುವುದರ ಮೂಲಕ, ಅವರು ಹೊಸ ಹಾದಿಯನ್ನು ತುಳಿಯಲು ಪ್ರಯತ್ನಿಸಿದ್ದಾರೆ ಎಂದೇ ಚಿತ್ರಪಂಡಿತರ ಅಂಬೋಣ.

ಅಕ್ಷಯ್ ಖನ್ನಾ ಪಾಕಿಸ್ತಾನದ ಕರಾಚಿಯ ಭೂಗತ ದೊರೆಯ ಪಾತ್ರದಲ್ಲಿ ಅಭಿನಯಸಿದ್ದಾರೆ. ಇಲ್ಲಿನ ಹಲವು ಸನ್ನಿವೇಶಗಳು ಪ್ರೇಕ್ಷಕರನ್ನು ಬೆಚ್ಚಿಬೀಳಿಸುವುದರ ಜತೆಯಲ್ಲೇ, ಕೆಲವು ಕಡೆ ಹಿಂಸೆಯ ವೈಭವೀಕರಣವಾಗಿದೆ ಎಂಬ ಮಾತೂ ಕೇಳಿಬಂದಿದೆ. ಕಾಲ್ಪನಿಕ ಚಲನಚಿತ್ರವೇ ಆಗಿದ್ದರೂ, ಚಿತ್ರದುದ್ದಕ್ಕೂ ವಾಸ್ತವವಾಗಿ ನಡೆದ ಅನೇಕ ಸನ್ನಿವೇಶಗಳನ್ನು ನೆನಪಿಸುವ ದೃಶ್ಯಗಳು ಪ್ರೇಕ್ಷಕರ ಮೈ ಜುಂ ಎನ್ನಿಸಿದರೆ ಅಚ್ಚರಿಯಿಲ್ಲ.

ದೇಶ ಪ್ರೇಮವನ್ನು ಸಾರುವ ಮತ್ತು ನಮ್ಮ ದೇಶದ ಬೇಹುಗಾರರು ವೈರಿ ದೇಶದಲ್ಲಿ ಹೇಗೆ ರಹಸ್ಯ ಕಾರ್ಯಾಚರಣೆ ನಡೆಸಬಹುದು ಎಂದು ಬಿಂಬಿಸಿವು ಈ ಚಲನಚಿತ್ರವನ್ನು ಆದಿತ್ಯ ಧರ್ ನಿರ್ದೇಶಿಸಿದ್ದಾರೆ.

ನಮ್ಮ ವೈರಿದೇಶವನ್ನು ಬಾಲಿವುಡ್ ಇದುವರೆಗೆ ಬಿಂಬಿಸಿದ್ದು ಮೃದುವಾಗಿ: ವೈರಿದೇಶವು ಭಾರತದ ವಿರುದ್ಧ ನಿರಂತರವಾಗಿ ಕಾರ್ಯಾಚರಣೆಯನ್ನು ನಡೆಸುತ್ತಾ, ಸಾವಿರಾರು ಜನರ ಪ್ರಾಣವನ್ನು ತೆಗೆದರೂ, ಚಲನಚಿತ್ರಗಳು ಆ ವೈರಿದೇಶವನ್ನು ಸ್ನೇಹಿತನಂತೆ ನೋಡುತ್ತಿದ್ದವು. 'ಧುರಂಧರ್' ಚಲನಚಿತ್ರವು ವೈರಿಯನ್ನು 'ವೈರಿ' ಎಂದೇ ಹೆಸರಿಸಿ, ಅದರ ವಿರುದ್ಧ ಬೇಹುಗಾರರು ಹೇಗೆ ಕಾರ್ಯಾಚರಣೆ ನಡೆಸಬಲ್ಲರು ಎಂಬ 'ಕಾಲ್ಪನಿಕ ಕಥೆ'ಯನ್ನು ಹೇಳುತ್ತದೆ. ಆದರೆ, ಆ 'ಕಾಲ್ಪನಿಕ ಕಥೆಯು' ವಾಸ್ತವದ ತಳಹದಿಯನ್ನು ಹೊಂದಿರುವುದು ವಿಶೇಷ!

ನೈಸರ್ಗಿಕ ಪ್ಲೇಟ್ಲೆಟ್ ಸ್ನೇಹಿ

» ಡಾ.ಸುಧಾಕರ.ಜಿ.ಲಕ್ಕವಳ್ಳಿ

ಜ್ವರ ಬಂದಾಗ ಅದರಲ್ಲೂ ಡೆಂಗ್ಯೂ, ವೈರಲ್ ಜ್ವರ ಬಂದಾಗನಮ್ಮಲ್ಲಿನ ಪ್ಲೇಟ್‌ಲೆಟ್ ಕಡಿಮೆಯಾಗುವುದು ಕಂಡುಬರುತ್ತದೆ. ಪ್ಲೇಟ್ಲೆಟ್‌ಗಳ ಪ್ರಮಾಣ ಇಳಿದರೆ ರಕ್ತಸ್ರಾವ, ದೌರ್ಬಲ್ಯ ಮತ್ತು ಅಪಾಯದ ಸ್ಥಿತಿಗಳು ಉಂಟಾಗಬಹುದು. ಇಂತಹ ಸಂದರ್ಭಗಳಲ್ಲಿ ಪಪ್ಪಾಯ ಎಲೆ ಹಾಗೂ ಹಣ್ಣು ನೈಸರ್ಗಿಕ ನೆರವಿನಂತೆ ಕೆಲಸಮಾಡುತ್ತವೆ ಎಂಬುದಕ್ಕೆ ಈಗ ವೈಜ್ಞಾನಿಕ ದೃಢತೆ ದೊರೆತಿದೆ.

ಪಪ್ಪಾಯ ಎಲೆಗಳಲ್ಲಿ ಪಪೈನ್, ಕಾರ್ಪೈನ್, ಫ್ಲೇವನಾಯ್ಡ್ ಮತ್ತು ಫೆನಾಲಿಕ್ ಸಂಯುಕ್ತಗಳಂತಹ ಔಷಧೀಯ ಅಂಶಗಳು ಇವೆ. ಇವು ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುತ್ತವೆ ಹಾಗೂ ಅಸ್ಥಿಮಜ್ಜೆಯ ಚಟುವಟಿಕೆಯನ್ನು ಉತ್ತೇಜಿಸುತ್ತವೆ ಮತ್ತು ಹೊಸ ಪ್ಲೇಟ್ಲೆಟ್‌ಗಳ ಉತ್ಪಾದನೆ ಹೆಚ್ಚಿಸುತ್ತವೆ. ಪಕ್ವವಾದ ಪಪ್ಪಾಯ ವಿಟಮಿನ್ ಎ, ಸಿ ಹಾಗೂ ಖನಿಜಾಂಶಗಳಿಂದ ಸಮೃದ್ಧವಾಗಿದ್ದು, ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ.

- ಪಪಾಯ ಎಲೆಗಳನ್ನು ತೊಳೆದು ಮಿಕ್ಸರ್‌ನಲ್ಲಿ ರಸ ಮಾಡಿ, ದಿನಕ್ಕೆ ಎರಡು ಬಾರಿ ಎರಡು ಚಮಚದಷ್ಟು ಸೇವಿಸಬಹುದು.
- ಎಲೆಗಳನ್ನು ನೀರಿನಲ್ಲಿ ಬೇಯಿಸಿ, ಚಹಾದಂತೆ ಕುಡಿಯಬಹುದು.
- ಹಣ್ಣನ್ನು ಆಹಾರ ರೂಪದಲ್ಲಿ ಸೇವಿಸಬಹುದು. ಗರ್ಭಿಣಿಯರು, ಹೃದಯ ಸಂಬಂಧಿ ರೋಗಿಗಳು ಮತ್ತು ಸಣ್ಣ ಮಕ್ಕಳು ವೈದ್ಯರ ಸಲಹೆ ಇಲ್ಲದೆ ಪಪ್ಪಾಯ ಎಲೆರಸ ಸೇವಿಸಬಾರದು. ಪಪ್ಪಾಯ ಎಲೆ ಮತ್ತು ಹಣ್ಣು ನೈಸರ್ಗಿಕವಾಗಿ ಲಭ್ಯವಿರುವ ಪೌಷ್ಟಿಕ ಹಾಗೂ ಔಷಧೀಯ ಸಂಪತ್ತು.

ಪಕ್ಕದಮನೆಯವನು ವೈ ಫೈ ನೆಟ್‌ವರ್ಕ್‌ಗೆ ಗೂಬೆ ಅಂತ ಹೆಸರಿಟ್ಟಿದ್ದಾನೆ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ರಾಘವೇಂದ್ರ ನಾಯಕ, ಶಿವಮೊಗ್ಗ

- **ಭಟ್ರೇ, ನನ್ನ ಪಕ್ಕದಮನೆಯವನಿಗೂ, ನನಗೂ ಅಷ್ಟಕ್ಕಷ್ಟೇ. ಆತ ತನ್ನ ವೈ-ಫೈ ನೆಟ್ ವರ್ಕ್‌ಗೆ ಪಕ್ಕದಮನೆಯವನು ಗೂಬೆ ಅಂತ ಹೆಸರಿಟ್ಟದ್ದಾನೆ. ನಾನು ಮೊಬೈಲ್ ನೋಡಿದಾಗಲೆಲ್ಲ ಅವನ ವೈ-ಫೈ ಪಾಪ್ ಅಪ್ ಆಗುತ್ತದೆ. ಇದು ನನಗೆ ಅತೀವ ಕಿರಿಕಿರಿಯನ್ನುಂಟು ಮಾಡುತ್ತಿದೆ. ಇದಕ್ಕೆ ನಾನೇನು ಮಾಡಬೇಕು? ನಾನೂ ಅವನನ್ನುದ್ದೇಶಿಸಿ ನನ್ನ ವೈ-ಫೈ ನೆಟ್ ವರ್ಕ್‌ಗೆ ಅಂಥದೇ ಹೆಸರನ್ನು ಇಡಲಾ? ನೀವೇ ಸೂಚಿಸಿ.**

– ರಾಘವೇಂದ್ರ ಅವರೇ, ಇದು ನಿಜಕ್ಕೂ ಕಿರಿಕಿರಿ ಉಂಟುಮಾಡುವ ಸಂಗತಿಯೇ. ನಿಮ್ಮ ಸಿಟ್ಟು ಮತ್ತು ಅಸಹನೆ ಅರ್ಥವಾಗುವಂಥದ್ದು. ಯಾರಾದರೂ ನಮ್ಮನ್ನು ಕೆಣಕಿದಾಗ ತಕ್ಷಣ ಪ್ರತಿಕ್ರಿಯಿಸಬೇಕು ಎನಿಸುವುದು ಸಹಜ. ಆದರೆ, ನೀವು ಅದೇ ರೀತಿಯಲ್ಲಿ ಪ್ರತಿಕ್ರಿಯಿಸುವುದು (ಟಿಟ್ ಫಾರ್ ಟ್ಯಾಟ್) ಖಂಡಿತಾ ಒಳ್ಳೆಯದಲ್ಲ.

ನೀವು ಏಕೆ ಪ್ರತಿಕ್ರಿಯಿಸಬಾರದು? ನೀವು ಅವರನ್ನೇ ಗುರಿಯಾಗಿಸಿ ಹೆಸರಿಟ್ಟರೆ, ಅವರು ಮತ್ತೊಂದು ಕೆಟ್ಟ ಹೆಸರಿಡಬಹುದು. ಇದು 'ವೈ-ಫೈ ಯುದ್ಧ'ಕ್ಕೆ ಕಾರಣವಾಗಿ ನಿಮ್ಮ ನೆಮ್ಮದಿಯನ್ನು ಹಾಳುಮಾಡುತ್ತದೆ. ಅವರು 'ಗೂಬೆ' ಎಂದು ಕರೆದ ತಕ್ಷಣ ನೀವೇನೂ ಹಾಗಾಗುವುದಿಲ್ಲ. ಆದರೆ ನೀವು ಅವರಿಗೆ ಬೈಗುಳದ ರೀತಿಯಲ್ಲಿ ಪ್ರತಿಕ್ರಿಯಿಸಿದರೆ, ನೀವು ಕೂಡ ಅವರ ಮಟ್ಟಕ್ಕೆ ಇಳಿದಂತಾಗುತ್ತದೆ. ನಿಮ್ಮ ಘನತೆಯನ್ನು ಕಾಪಾಡಿಕೊಳ್ಳುವುದು ಮುಖ್ಯ. ಇಂಥ ವಿಷಯಗಳಲ್ಲಿ ಉದಾಸೀನವೇ ದೊಡ್ಡ ಶಿಕ್ಷೆ. ಅವರನ್ನು ನೀವು ಸಂಪೂರ್ಣವಾಗಿ ನಿರ್ಲಕ್ಷಿಸಿದರೆ, ಅವರ ತಂತ್ರ ಫಲಿಸಲಿಲ್ಲ ಎಂದು ಅವರಿಗೆ ಅನ್ನಿಸಿ, ಅವರೇ ಸುಮ್ಮನಾಗಬಹುದು.

ಹಾಗಾದರೆ ಈ ಸಮಸ್ಯೆಯನ್ನು ನಿಭಾಯಿಸುವುದು ಹೇಗೆ?

ಇದನ್ನು ತಮಾಷೆಯಾಗಿ ಸ್ವೀಕರಿಸಿ. ಕನ್ನಡದಲ್ಲಿ 'ಗೂಬೆ' ಅಂದ್ರೆ ಮೂರ್ಖ ಎಂದು ಬೈಗುಳವಾಗಿ ಬಳಸುತ್ತಾರೆ. ಆದರೆ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಗೂಬೆ 'ಜಾಣತನದ ಸಂಕೇತ' (Symbol of Wisdom). ಅಷ್ಟೇ ಅಲ್ಲ, ನಮ್ಮಲ್ಲಿ ಗೂಬೆ ಲಕ್ಷ್ಮಿ ದೇವಿಯ ವಾಹನ ಕೂಡ ಹೌದು! ಮುಂದಿನ ಬಾರಿ ಆ ಹೆಸರು ನೋಡಿದಾಗ, 'ಓಹ್, ಅವರು ನನ್ನನ್ನು ಬುದ್ಧಿವಂತ ಎಂದು ಕರೆಯುತ್ತಿದ್ದಾರೆ' ಎಂದು ನಗುತ್ತಾ ಸುಮ್ಮನಾಗಿ. ಕೋಪ ಮಾಡಿಕೊಳ್ಳುವುದಕ್ಕಿಂತ ಇದು ನಿಮ್ಮ ಮನಸ್ಸಿಗೆ ಹೆಚ್ಚು ಹಗುರ ಎನಿಸುತ್ತದೆ.

ನಿಮ್ಮ ಫೋನ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ನಿಮ್ಮ ವೈ-ಫೈ ನೆಟ್‌ವರ್ಕ್‌ಗೆ Auto-Connect ಆಯ್ಕೆಯನ್ನು ಎನೇಬಲ್ ಮಾಡಿ. ಇದರಿಂದ ನೀವು ವೈ-ಫೈ ಲಿಸ್ಟ್ ಅನ್ನು ಪದೇ ಪದೇ ನೋಡುವ ಅವಶ್ಯಕತೆ ಬರುವುದಿಲ್ಲ. ಕಣ್ಣಿಗೆ ಕಾಣದಿದ್ದರೆ ಮನಸ್ಸಿಗೆ ಕಿರಿಕಿರಿ ಇರುವುದಿಲ್ಲ. ಪಕ್ಕದಮನೆಯವನಿಗೆ ಬೈಯುವ ಬದಲು, ನಿಮ್ಮ ವೈ-ಫೈ ಹೆಸರನ್ನು ನಿಮ್ಮ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ಅಥವಾ ಪಾಸಿಟಿವ್ ಆದ ಹೆಸರನ್ನು ಇಡಿ. ಉದಾಹರಣೆಗೆ, Life is Beautiful, Be Happy, Good Vibes Only, Peace Zone, Live and Let Live, God Bless All ಅಥವಾ 'ಶಾಂತಿ ನಿವಾಸ' ಅಥವಾ ಸರಳವಾಗಿ ನಿಮ್ಮ ಮನೆಯ ಹೆಸರನ್ನು ಇಡಿ.

ಇನ್ನು ಅವನಿಗೆ ಪ್ರತಿಕ್ರಿಯಿಸದಿದ್ದರೆ ನಿಮಗೆ ಸಮಾಧಾನ ಆಗುವುದಿಲ್ಲ ಎಂದೆನಿಸಿದರೆ ನಿಮ್ಮ ಮಟ್ಟವನ್ನು ಕಾಪಾಡಿಕೊಳ್ಳಿ. ಆಗ Wise Owl (ಜಾಣ ಗೂಬೆ - ಪಾಶ್ಚಿಮಾತ್ಯರಲ್ಲಿ ಗೂಬೆ ಬುದ್ಧಿವಂತಿಕೆಯ ಸಂಕೇತ), 'ಲಕ್ಷ್ಮಿ ವಾಹನ' (ನಮ್ಮ ಸಂಸ್ಕೃತಿಯಲ್ಲಿ ಗೂಬೆ ಲಕ್ಷ್ಮಿಯ ವಾಹನ, ಅಂದರೆ ಸಂಪತ್ತಿನ ಸಂಕೇತ!) ಅಥವಾ 'ಜ್ಞಾನ ಭಂಡಾರ', Home Sweet Home, 'ನಗು ನಗುತ ನಲಿ' ಎಂದು ಹೆಸರಿಡಿ. ಇದು ನೀವು ಅವರ ಮಾತಿಗೆ ತಲೆಕೆಡಿಸಿಕೊಂಡಿಲ್ಲ, ನಿಮ್ಮ ಪಾಡಿಗೆ ನೀವು ಖುಷಿಯಾಗಿದ್ದೀರಿ ಎಂಬುದನ್ನು ಎತ್ತಿ ತೋರಿಸುತ್ತದೆ.

ದಯವಿಟ್ಟು ನೀವು ಪ್ರತಿಕ್ರಿಯಿಸಿ ನಿಮ್ಮ ವೈ-ಫೈ ಹೆಸರನ್ನು ಬದಲಾಯಿಸಬೇಡಿ. ಪಕ್ಕದ ಮನೆಯವರ ವರ್ತನೆ ಬಾಲಿಶವಾಗಿದೆ, ನೀವು ಪ್ರಬುದ್ಧರಾಗಿರಿ (Be mature). ಅವರ ಉದ್ದೇಶವೇ ನಿಮ್ಮನ್ನು ಕೆರಳಿಸುವುದು, ನೀವು ಕೆರಳದೇ ಇದ್ದರೆ ಅವರ ಸೋಲು ಮತ್ತು ನಿಮ್ಮ ಗೆಲುವು.

ನಿತ್ಯಾನಂದ ಶೆಣೈ, ಮಂಗಳೂರು

- **ಭಟ್ರೇ, ನಾನು ಕಳೆದ ಒಂದು ವರ್ಷದಿಂದ ಇನ್‌ಸ್ಟಾಗ್ರಾಮ್‌ನಲ್ಲಿ ಆಕ್ಟಿವ್ ಆಗಿದ್ದೇನೆ. ಆದರೆ ನನಗೆ ಲೈಕ್ಸ್ ಆಗಲಿ, ಕಾಮೆಂಟ್ ಆಗಲಿ ಬರುತ್ತಿಲ್ಲ. ಇದರಿಂದ ನನಗೆ ಅತೀವ ನಿರಾಸೆ ಆಗಿದೆ. ನಾಳೆಯಿಂದ ಲೈಕ್ಸ್ ಬರಬಹುದು ಎಂದು ಕಾಯುತ್ತಾ ಇದ್ದೇನೆ. ಆದರೆ ಸ್ವಲ್ಪವೂ ಪ್ರಗತಿ ಆಗಿಲ್ಲ. ಇದರಿಂದ ನನ್ನಲ್ಲಿ ಹತಾಶ ಭಾವನೆ ಹೆಚ್ಚುತ್ತಿದೆ. ಬೆಳಗ್ಗೆ ಎದ್ದ ತಕ್ಷಣ ನೋಡುತ್ತೇನೆ. ಕೆಲವೊಮ್ಮೆ ಒಬ್ಬರೂ ನೋಡಿರುವುದಿಲ್ಲ. ಇಡೀ ದಿನ ನಿರುತ್ಸಾಹ ಕವಿದಿರುತ್ತದೆ. ಈ ವಿಷಯದಲ್ಲಿ ನನಗೆ ನಿಮ್ಮ ಮಾರ್ಗದರ್ಶನ ಬೇಕು.**

– ನಿತ್ಯಾನಂದ ಅವರೇ, ನಿಮ್ಮ ನೋವು ಮತ್ತು ಹತಾಶೆ ನನಗೆ ಅರ್ಥವಾಗುತ್ತಿದೆ. ಇನ್‌ಸ್ಟಾಗ್ರಾಮ್ ಎನ್ನುವುದು ಒಂದು ವಿಚಿತ್ರ ಮಾಯಾಲೋಕ. ಅಲ್ಲಿ ಸಿಗುವ ಲೈಕ್ ಮತ್ತು ಕಾಮೆಂಟ್‌ಗಳು ನಮ್ಮ ಮಿದುಳಿಗೆ ಒಂದು ರೀತಿಯ ತಾತ್ಕಾಲಿಕ ಖುಷಿ (Dopamine hit) ನೀಡುತ್ತವೆ. ಅದು ಸಿಗದೇ ಹೋದಾಗ ಮನಸ್ಸಿಗೆ ತುಂಬಾ ಕಷ್ಟವಾಗುತ್ತದೆ. ಆದರೆ, ನಿಮ್ಮ ದಿನದ ನೆಮ್ಮದಿಯನ್ನು ಒಂದು ಆ್ಯಪ್‌ಗೆ ಒತ್ತೆ ಇಡುವುದು ಸರಿಯಲ್ಲ. ಈ ಸಮಸ್ಯೆಯಿಂದ ಹೊರಬರಲು ಮಾನಸಿಕವಾಗಿ ಮತ್ತು ತಾಂತ್ರಿಕವಾಗಿ ಏನು ಮಾಡಬಹುದು ಎಂಬುದನ್ನು ಹೇಳುತ್ತೇನೆ.

ನಿಮ್ಮ ಮನಸ್ಥಿತಿಯನ್ನು ನೀವು ಮೊದಲು ಬದಲಾಯಿಸಿಕೊಳ್ಳಬೇಕು. ಅಷ್ಟಕ್ಕೂ ಲೈಕ್ಸ್ ನಿಮ್ಮ ಮೌಲ್ಯವಲ್ಲ. ಇನ್‌ಸ್ಟಾಗ್ರಾಮ್‌ನಲ್ಲಿ ಲೈಕ್ಸ್ ಬರದೇ ಇರುವುದಕ್ಕೂ, ನಿಮ್ಮ ಪ್ರತಿಭೆಗೂ ಅಥವಾ ನಿಮ್ಮ ವ್ಯಕ್ತಿತ್ವಕ್ಕೂ ಸಂಬಂಧವಿಲ್ಲ. ಕೆಲವು ಬಾರಿ ಎಷ್ಟೋ ಕಸದಂತಹ ವಿಡಿಯೋಗಳಿಗೆ ಲಕ್ಷಾಂತರ ಲೈಕ್ಸ್ ಬರುತ್ತವೆ, ಅದ್ಭುತವಾದ ಕೆಲಸಗಳಿಗೆ ಬೆಲೆಯೇ ಸಿಗುವುದಿಲ್ಲ. ಇದೊಂದು ಅಲ್ಗಾರಿದಮ್ ಆಟವಷ್ಟೇ. ಬೆಳಗ್ಗೆ ಎದ್ದ ತಕ್ಷಣ ಫೋನ್ ನೋಡಿ ಲೈಕ್ಸ್ ಚೆಕ್ ಮಾಡುವ ಅಭ್ಯಾಸವನ್ನು ಇಂದೇ ಬಿಟ್ಟುಬಿಡಿ. ಇದು ನಿಮ್ಮ ಇಡೀ ದಿನದ ಮೂಡ್ ಹಾಳು ಮಾಡುತ್ತದೆ. ಎದ್ದು ಮುಖ ತೊಳೆದು, ಕಾಫಿ ಕುಡಿದು, ಸ್ವಲ್ಪ ಹೊತ್ತಾದ ಮೇಲೆ ಫೋನ್ ಮುಟ್ಟಿ. ಬೇರೆಯವರಿಗಾಗಿ ಪೋಸ್ಟ್ ಮಾಡುವುದನ್ನು ನಿಲ್ಲಿಸಿ. ನಿಮಗೆ ಖುಷಿ ಕೊಡುವ ವಿಷಯವನ್ನು, ನಿಮ್ಮ ಸಂತೋಷಕ್ಕಾಗಿ ಹಾಕಿ. 'ಯಾರೂ ನೋಡದಿದ್ದರೂ ಪರವಾಗಿಲ್ಲ, ಇದು ನನ್ನ ದಾಖಲೆಗೆ ಇರಲಿ ಎಂಬ ಭಾವ' ಎಂದುಕೊಳ್ಳಿ.

ಒಂದು ವರ್ಷದಿಂದ ಪ್ರಯತ್ನಿಸುತ್ತಿದ್ದರೂ ಫಲಿತಾಂಶ ಸಿಗುತ್ತಿಲ್ಲ ಎಂದರೆ, ಬಹುಶಃ ನಿಮ್ಮ ಹಾದಿಯನ್ನು (Strategy) ಬದಲಿಸುವ ಸಮಯ ಬಂದಿದೆ ಎಂದರ್ಥ. ಈಗ ಇನ್‌ಸ್ಟಾಗ್ರಾಮ್‌ನಲ್ಲಿ ಫೋಟೋಗಳಿಗಿಂತ ವಿಡಿಯೋ ರೀಲ್ಸ್‌ಗೆ ಹೆಚ್ಚು ಬೆಲೆ. ನೀವು ಕೇವಲ ಫೋಟೋ ಹಾಕುತ್ತಿದ್ದರೆ ರೀಚ್ ಕಡಿಮೆ ಇರುತ್ತದೆ. ಟ್ರೆಂಡಿಂಗ್ ಹಾಡುಗಳನ್ನು ಬಳಸಿ ರೀಲ್ಸ್ ಮಾಡಿ. ನಿಮ್ಮ ವಿಷಯ ಯಾವುದು? ನೀವು ಎಲ್ಲದರ ಬಗ್ಗೆಯೂ ಹಾಕುತ್ತಿದ್ದೀರಾ? ಅಥವಾ ಒಂದು ನಿರ್ದಿಷ್ಟ ವಿಷಯದ ಬಗ್ಗೆ (ಉದಾ: ಅಡುಗೆ, ಪ್ರವಾಸ, ಸಾಹಿತ್ಯ, ಹಾಸ್ಯ) ಹಾಕುತ್ತಿದ್ದೀರಾ? ಒಂದೇ ವಿಷಯದ ಮೇಲೆ ಗಮನಹರಿಸಿದರೆ ಆಸಕ್ತರು ನಿಮ್ಮನ್ನು ಫಾಲೋ ಮಾಡುತ್ತಾರೆ. ವಿಡಿಯೋ ಅಥವಾ ಫೋಟೋ ಕ್ಲಿಯರ್ ಆಗಿದೆಯೇ? ನೋಡಲು ಆಕರ್ಷಕವಾಗಿದೆಯೇ? ಎಂದು ಪರಿಶೀಲಿಸಿ. ಕತ್ತಲಲ್ಲಿ ತೆಗೆದ ಅಥವಾ ಶೇಕ್ ಆಗಿರುವ ವಿಡಿಯೋಗಳನ್ನು ಜನ ಇಷ್ಟಪಡುವುದಿಲ್ಲ. ನೀವು ಬೇರೆಯವರ ಪೋಸ್ಟ್‌ಗಳಿಗೆ ಕಮೆಂಟ್ ಮಾಡುತ್ತೀರಾ? ನೀವು ಬೇರೆಯವರನ್ನು ಮಾತನಾಡಿಸಿದರೆ ಮಾತ್ರ ಅವರು ನಿಮ್ಮ ಪೇಜ್‌ಗೆ ಬರುತ್ತಾರೆ. ಇದು ಕೊಡು-ಕೊಳ್ಳುವ ವ್ಯವಹಾರ.

ಇನ್‌ಸ್ಟಾಗ್ರಾಮ್ ಅಲ್ಗಾರಿದಮ್ ತುಂಬಾ ವಿಚಿತ್ರ. ಕೆಲವೊಮ್ಮೆ ತುಂಬಾ ಚೆನ್ನಾಗಿರುವ ಪೋಸ್ಟ್‌ಗಳನ್ನೂ ಅದು ಜನರಿಗೆ ತಲುಪಿಸುವುದಿಲ್ಲ. ಇದಕ್ಕೆ ನೀವು ಕಾರಣಕರ್ತರಲ್ಲ. ಆದ್ದರಿಂದ ನಿಮ್ಮನ್ನು ನೀವು ದೂಷಿಸಿಕೊಳ್ಳುವುದನ್ನು ನಿಲ್ಲಿಸಿ. ದಯವಿಟ್ಟು ಇನ್‌ಸ್ಟಾಗ್ರಾಮ್ ಅನ್ನು ನಿಮ್ಮ ಜೀವನದ ಕೇಂದ್ರಬಿಂದು ಮಾಡಿಕೊಳ್ಳಬೇಡಿ. ಅದು ಜೀವನದ ಒಂದು ಸಣ್ಣ ಭಾಗವಷ್ಟೇ. ನಾಳೆ ಲೈಕ್ಸ್ ಬರಲಿ, ಬಾರದಿರಲಿ, ನಿಮ್ಮ ದಿನ ಚೆನ್ನಾಗಿರಲೇಬೇಕು.

ಸಿ. ಪ್ರಭು, (ಇಮೇಲ್ ಮೂಲಕ)

- **ಭಟ್ರೇ, ನನ್ನ ಪೋಸ್ಟಿಗೆ ಯಾರಾದರೂ ನೆಗೆಟಿವ್ ಕಾಮೆಂಟ್ ಮಾಡಿದರೆ ನನಗೆ ಸಹಿಸಿಕೊಳ್ಳಲು ಆಗುವುದಿಲ್ಲ. ಇಡೀ ದಿನ ಮೂಡ್ ಹಾಳಾಗುತ್ತದೆ. ಆ ರೀತಿ ಕಾಮೆಂಟ್ ಮಾಡಿದವರ ಕಪಾಳಕ್ಕೆ ಹೊಡೆಯಬೇಕು ಎನಿಸುತ್ತದೆ. ಇದು ಸರಿಯಾದ ಮನಸ್ಥಿತಿ ಅಲ್ಲ ಎಂದೂ ಅನಿಸುತ್ತದೆ. ಆದರೆ ಆ ಕ್ಷಣದಲ್ಲಿ ನನಗೆ ಸಹಿಸಿಕೊಳ್ಳಲು ಆಗುವುದಿಲ್ಲ. ನನಗೆ ನಿಮ್ಮ ಸಲಹೆ ಬೇಕು.**

– ಪ್ರಭು ಅವರೇ, ನಿಜ ಹೇಳಬೇಕೆಂದರೆ, 'ಸ್ಕ್ರೀನ್ ಒಳಗಿಂದ ಕೈ ತೂರಿಸಿ ಕಪಾಳಕ್ಕೆ ಬಾರಿಸುವ ತಂತ್ರಜ್ಞಾನ' (Digital Slap Technology) ಇನ್ನೂ ಕಂಡುಹಿಡಿದಿಲ್ಲ ಎಂದು ಮಾರ್ಕ್ ಜುಕರ್‌ಬರ್ಗ್ ಮೇಲೆ ನನಗೂ ಸಿಕ್ಕಾಪಟ್ಟೆ ಕೋಪವಿದೆ! ಅದು ಬಂದಿದ್ದರೆ ಇನ್‌ಸ್ಟಾಗ್ರಾಮ್‌ನಲ್ಲಿ ಅರ್ಧದಷ್ಟು ಜನ ಕೆನ್ನೆಗೆ ಐಸ್‌ಪ್ಯಾಕ್ ಇಟ್ಟುಕೊಂಡೇ ಅಡ್ಡಾಡಬೇಕಿತ್ತು!

ನೆಗೆಟಿವ್ ಕಾಮೆಂಟ್ ಮಾಡುವವರನ್ನು ನಿಮ್ಮ ಸೀಕ್ರೆಟ್ ಫ್ಯಾನ್ಸ್ ಎಂದುಕೊಳ್ಳಿ. ಅವರಿಗೆ ನಿಮ್ಮ ಮೇಲೆ ಎಷ್ಟು ಪ್ರೀತಿ ಅಂದರೆ, ನಿಮ್ಮ ಪೋಸ್ಟ್ ನೋಡುತ್ತಾರೆ, ಓದುತ್ತಾರೆ, ಟೈಪ್ ಮಾಡಲು ಕಷ್ಟಪಡುತ್ತಾರೆ ಮತ್ತು 'ಪೋಸ್ಟ್' ಬಟನ್ ಒತ್ತುತ್ತಾರೆ! ಅಲ್ಗಾರಿದಮ್‌ಗೆ ಕಾಮೆಂಟ್ ಒಳ್ಳೆಯದೋ ಕೆಟ್ಟದ್ದೋ ಗೊತ್ತಿಲ್ಲ. ಅದಕ್ಕೆ ಗೊತ್ತಿರುವುದು ಇಷ್ಟೇ – 'ಓಹ್! ಈ ಪೋಸ್ಟ್‌ಗೆ ಜನ ಕಾಮೆಂಟ್ ಮಾಡುತ್ತಿದ್ದಾರೆ, ಹಾಗಾದರೆ ಇದು ಫೇಮಸ್!' ಎಂದು. ಅಂದರೆ, ಅವರು ನಿಮ್ಮ ಪೋಸ್ಟ್ ಅನ್ನು ವೈರಲ್ ಮಾಡಲು ಶ್ರಮಿಸುತ್ತಿದ್ದಾರೆ. ಅವರಿಗೆ ಥ್ಯಾಂಕ್ಸ್ ಹೇಳಿ (ಮನಸ್ಸಲ್ಲೇ)!

ಒಂದು ಗಾದೆ ಇದೆಯಲ್ಲ, 'ಆನೆ ಹೋಗ್ತಾ ಇದ್ರೆ, ನಾಯಿ ಬೊಗಳತ್ತೆ' ಅಂತ. ಆನೆ ತಿರುಗಿ ನಿಂತು ನಾಯಿಗೆ ವಿವರಿಸುತ್ತಾ ಕೂರುತ್ತಾ? ಅಥವಾ ನಾಯಿಗೆ ಹೊಡೆಯಲು ಹೋಗುತ್ತಾ? ಇಲ್ಲ! ಆನೆ ತನ್ನ ಪಾಡಿಗೆ ತಾನು ಹೋಗುತ್ತಿರುತ್ತದೆ. ನೀವು ಆನೆ ಆಗಿರಿ. ಬೊಗಳುವವರು ಬೊಗಳಲಿ, ಅವರ ಕೆಲಸವೇ ಅದು. ಅವರ ಬೊಗಳಿಕೆಯಿಂದ ನಿಮ್ಮ 'ಆನೆ ನಡಿಗೆ' ನಿಲ್ಲಬಾರದು. ಯಾರು ಜೀವನದಲ್ಲಿ ಏನನ್ನೂ ಸಾಧಿಸಿಲ್ಲವೋ ಅಥವಾ ಯಾರಿಗೆ ಸ್ವಂತ ಕೆಲಸ ಇಲ್ಲವೋ ಅವರೇ ಬಂದು ಬೇರೆಯವರ ಪೋಸ್ಟ್‌ಗೆ ಕೆಟ್ಟ ಕಾಮೆಂಟ್ ಹಾಕೋದು. 'ನನ್ನ ಲೈಫ್ ಬೋರ್ ಆಗಿದೆ, ಇವನ ಲೈಫ್ ಆದ್ರೂ ಹಾಳು ಮಾಡೋಣ' ಅಂತ ಬರುವವರು ಅವರು.

ಅವರು ನಿಮ್ಮ ಪೋಸ್ಟ್‌ಗೆ ಬಂದು ಕಸ ಹಾಕುತ್ತಿದ್ದಾರೆ ಅಂದರೆ, ಅವರ ಮಿದುಳಿನಲ್ಲೂ ಕಸವೇ ತುಂಬಿದೆ ಎಂದರ್ಥ. ಪಾಪ, ಅವರ ಬಗ್ಗೆ ಕರುಣೆ ತೋರಿಸಿ! ಇನ್ನು ಡಿಜಿಟಲ್ ಕಪಾಳಮೋಕ್ಷ ಮಾಡುವುದು ಹೇಗೆ? ಕೈಯಾರೆ ಹೊಡೆಯೋಕೆ ಆಗಲ್ಲ ನಿಜ, ಆದರೆ ಅದಕ್ಕಿಂತ ಜೋರಾಗಿ ಹೊಡೆಯುವ ಮೂರು ಅಸ್ತ್ರಗಳು ನಿಮ್ಮ ಬಳಿ ಇವೆ. ಆ ಕಾಮೆಂಟ್ ಅನ್ನು ಡಿಲೀಟ್ ಮಾಡಿ. (ಆಗ, ಅವರು ಕಷ್ಟಪಟ್ಟು ಟೈಪ್ ಮಾಡಿದ್ದು ವೇಸ್ಟ್ ಆಯ್ತಲ್ಲ ಅಂತ ಅವರಿಗೆ ಉರಿಯುತ್ತದೆ!)

ಬ್ಲಾಕ್ ಮಾಡೋದು ಅಂತಿಮ ಅಸ್ತ್ರ. ಅವರನ್ನು ನಿಮ್ಮ ಪ್ರಪಂಚದಿಂದಲೇ ಹೊರಹಾಕಿ. ಇದು ಮಜವಾದ ಆಪ್ಷನ್. ನೀವು ಅವರನ್ನು Restrict ಮಾಡಿದರೆ, ಅವರು ಹಾಕುವ ಕಾಮೆಂಟ್ ಅವರಿಗೆ ಮಾತ್ರ ಕಾಣುತ್ತದೆ, ಬೇರೆ ಯಾರಿಗೂ ಕಾಣಲ್ಲ. ಅವರು 'ನಾನು ಬೈದೆ' ಅಂತ ಖುಷಿ ಪಡ್ತಾರೆ, ಆದರೆ ಅದು ಗೋಡೆಗೆ ಹೇಳಿದ ಹಾಗೆ!

ಜ್ಯೋತಿ, (ಇಮೇಲ್ ಮೂಲಕ)

- **ಸಂಪಾದಕರೇ, ಪ್ರತಿದಿನ 'ಗುಡ್ ಮಾರ್ನಿಂಗ್' ಕಳಿಸುತ್ತಾನೆ. ವಾಪಸ್ ಫೋನ್ ಮಾಡಿದರೆ ಫೋನ್ ರಿಸೀವ್ ಮಾಡುವುದಿಲ್ಲ. ನಾನು ಮೆಸೇಜ್ ಹಾಕಿದರೂ ಪ್ರತಿಕ್ರಿಯೆ ನೀಡುವುದಿಲ್ಲ. ಡಿಪಿ ನೋಡಿ ಹುಡುಗನೇ ಇದ್ದಿರಬಹುದು ಅಂದುಕೊಂಡಿದ್ದೇನೆ. ಇದು ಕಳೆದ ಒಂದು ವರ್ಷದಿಂದ ನಡೆಯುತ್ತಿದೆ. ಅವನ ಉದ್ದೇಶ ಏನಿರಬಹುದು?**

– ಜ್ಯೋತಿ ಅವರೇ, ನಿಮ್ಮ ಈ ನಿಗೂಢ ಗೆಳೆಯನ ವರ್ತನೆ ಕೇಳಿದರೆ, ಇದೊಂದು 'ಒನ್ ವೇ ಟ್ರಾಫಿಕ್' ಪ್ರೇಮಕಥೆಯ ಹಾಗಿದೆ! ಅಥವಾ ಇದೊಂದು ಜಗತ್ತಿನ ಅತಿ ದೊಡ್ಡ ರಹಸ್ಯವಾಗಿರಬಹುದು. ಅವನು ಫೋನ್ ಎತ್ತಲ್ಲ, ಮೆಸೇಜ್‌ಗೆ ರಿಪ್ಲೈ ಮಾಡಲ್ಲ, ಬರೀ 'ಗುಡ್ ಮಾರ್ನಿಂಗ್' ಕಳಿಸ್ತಾನೆ ಅಂದ್ರೆ, ಅವನ ಉದ್ದೇಶ ಏನಾಗಿರಬಹುದು?

ಆತ 'ಫಾರ್ವರ್ಡ್' ಕಾಯಿಲೆಯ ರೋಗಿಯಾ? ಇವರು ವಾಟ್ಸಾಪ್ ಪ್ರಪಂಚದ ಅತಿ ದೊಡ್ಡ 'ದಾನಿಗಳು'. ಇವರಿಗೆ ಬೆಳಗ್ಗೆ ಎದ್ದ ತಕ್ಷಣ ಗ್ಯಾಲರಿಯಲ್ಲಿರುವ ಒಂದು ಹೂವಿನ ಫೋಟೋವನ್ನು ಕನಿಷ್ಠ ಐವತ್ತು ಜನರಿಗಾದರೂ ಕಳಿಸಲಿಲ್ಲವೆಂದರೆ ಕಾಫಿ ಕುಡಿದ ಹಾಗೆಯೇ ಅನ್ನಿಸುವುದಿಲ್ಲ. ಅವರಿಗೆ ನೀವು ನೀವಾಗೇ ಕಾಣುತ್ತಿಲ್ಲ, ಕೇವಲ ಒಂದು Contact Numbe ಆಗಿ ಕಾಣುತ್ತಿದ್ದೀರಿ. ಅವರು Select All ಆಯ್ಕೆ ಮಾಡಿ ಕಳಿಸುವಾಗ ನಿಮ್ಮ ನಂಬರ್ ಕೂಡ ಸೆಲೆಕ್ಟ್ ಆಗುತ್ತಿದೆ ಅಷ್ಟೇ. ಪಾಪ, ಅವರಿಗೆ ನಿಮ್ಮ ಮೆಸೇಜ್ ಓದುವಷ್ಟು ಪುರುಸೊತ್ತಿಲ್ಲ, ಬರೀ ಕಳಿಸುವುದರಲ್ಲೇ ಬ್ಯುಸಿ!

ಅವರು ಬಹುಶಃ ಕಳೆದ ಜನ್ಮದಲ್ಲಿ ಕೋಳಿ ಆಗಿದ್ದಿರಬಹುದು. ಬೆಳಗ್ಗೆ ಕೂಗುವುದು (ಮೆಸೇಜ್ ಮಾಡುವುದು) ಅವರ ಧರ್ಮ, ಆದರೆ ವಾಪಸ್ ಯಾರಾದರೂ ಮಾತನಾಡಿಸಿದರೆ ಅವರಿಗೆ ಅರ್ಥವಾಗಲ್ಲ. ಅವರ ಉದ್ದೇಶ – 'ನಾನು ಬದುಕಿದ್ದೀನಿ, ನೀನು ಬದುಕಿದ್ದೀಯಾ.. ಅಷ್ಟೇ ಸಾಕು, ಇದಕ್ಕಿಂತ ಹೆಚ್ಚು ಮಾತುಕತೆ ಬೇಡ' ಎಂಬುದು ಅವರ ತತ್ವ!

ನೀವು ವಾಪಸ್ ಫೋನ್ ಮಾಡಿದರೆ ಅಥವಾ ಮೆಸೇಜ್ ಮಾಡಿದರೆ, ಎಲ್ಲಿ ನೀವು 'ಒಂದು ಐನೂರು ರುಪಾಯಿ ಸಾಲ ಕೊಡಿ' ಅಂತ ಕೇಳಿಬಿಡ್ತೀರೋ ಎಂಬ ಭಯಂಕರ ಭಯ ಅವರಿಗೆ ಇರಬಹುದು. ಅವರ ಉದ್ದೇಶ – 'ದೂರವಿದ್ದರೆ ಬೆಟ್ಟ ನುಣ್ಣಗೆ'. ಕೇವಲ ಮೆಸೇಜ್ ಮಾಡಿದರೆ ಸಂಬಂಧ ಚೆನ್ನಾಗಿರುತ್ತೆ, ಮಾತಾಡಿದರೆ ದುಡ್ಡು ಕಳ್ಕೊಬೇಕಾಗುತ್ತೆ ಅಂತ ಹೆದರಿ ಓಡಿ ಹೋಗುವ ಆಸಾಮಿ ಇವರು!

ಅವರು ನಿಮ್ಮನ್ನು ಪ್ರೀತಿಸುತ್ತಿಲ್ಲ, ಅವರು ನಿಮ್ಮ ಹಾಜರಾತಿ ತಗೊಳ್ತಾ ಇದ್ದಿರಬಹುದು. ಅವರ ಉದ್ದೇಶ – ಪ್ರತಿದಿನ ಒಂದು ಮೆಸೇಜ್ ಹಾಕಿ, ಅದಕ್ಕೆ Single Tick ಬರುತ್ತಾ ಅಥವಾ Double Tick ಬರುತ್ತಾ ಎಂದು ನೋಡಿ, 'ಓಹ್! ಇವರು ಇನ್ನೂ ನನ್ನನ್ನು ಬ್ಲಾಕ್ ಮಾಡಿಲ್ಲ' ಎಂದು ಖಚಿತಪಡಿಸಿಕೊಳ್ಳುವುದು ಅವರ ದಿನನಿತ್ಯದ ಟಾಸ್ಕ್.

ನೀವು ಡಿಪಿ ನೋಡಿ ಹುಡುಗ ಅಂದ್ಕೊಂಡಿದ್ದೀರಿ. ಆದರೆ ಅದು ಫೇಕ್ ಅಕೌಂಟ್ ಆಗಿದ್ದು, ಆ ಕಡೆ ಇರುವುದು ನಿಮ್ಮ ಪಕ್ಕದ ಮನೆಯ ಫ್ರೆಂಡ್ ಕೂಡ ಆಗಿರಬಹುದು!

ಈಗ ನೀವೇನು ಮಾಡಬೇಕು? ಅವನಿಗೆ ತಲೆ ಕೆಟ್ಟು ಹೋಗುವಂತಹ ಒಂದು ಐಡಿಯಾ ಮಾಡಿ. ನಾಳೆಯಿಂದ ಅವನು 'ಗುಡ್ ಮಾರ್ನಿಂಗ್' ಕಳಿಸಿದ ತಕ್ಷಣ, ನೀವು 'ಗುಡ್ ನೈಟ್' ಅಂತ ರಿಪ್ಲೈ ಮಾಡಿ. ಬೆಳಗ್ಗೇನೇ ಯಾಕೆ 'ಗುಡ್ ನೈಟ್' ಅಂತೀರಾ ಅಂತ ಆಶ್ಚರ್ಯ ಆಗಿ ಅವನೇ ಫೋನ್ ಮಾಡಬಹುದು ಅಥವಾ, 'ಇವರಿಗೇನೋ ಹುಚ್ಚು ಹಿಡಿದಿದೆ' ಅಂತ ಹೆದರಿ ಮೆಸೇಜ್ ಮಾಡೋದನ್ನೇ ನಿಲ್ಲಿಸಬಹುದು.

ಏನೇ ಆದರೂ ನಿಮಗೆ ಲಾಭವೇ ಅಲ್ವಾ?

ಸಂತೋಷ ಶ್ರೀಧರ, (ಇಮೇಲ್ ಮೂಲಕ)

- **ಭಟ್ರೇ, ನನ್ನ ಪತ್ನಿಗೆ ಎಷ್ಟೇ ಸಲ ಫೋನ್ ಮಾಡಿದರೂ ರಿಸೀವ್ ಮಾಡುವುದಿಲ್ಲ. ಅವಳಿಗೆ ಮೊಬೈಲ್ ಶಿಷ್ಟಾಚಾರವನ್ನು ಕಲಿಸಿದರೂ ಅರ್ಥವಾಗುತ್ತಿಲ್ಲ. ನಾನು ತುರ್ತಾಗಿ ಫೋನ್ ಮಾಡಿದರೂ ರಿಸೀವ್ ಮಾಡೊಲ್ಲ. ಅವಳಿಗೆ ಇದನ್ನು ಹೇಗೆ ತಿಳಿಸುವುದು?**

– ಸಂತೋಷ ಶ್ರೀಧರ ಅವರೇ, ನಿಮ್ಮ ಸಮಸ್ಯೆಗೆ ಉತ್ತರ ತುಂಬಾ ಸರಳ. ಆ ತಂತ್ರಜ್ಞಾನಕ್ಕೆ 'ರೀ-ಬ್ರಾಂಡಿಂಗ್' ಎಂದು ಕರೆಯುತ್ತಾರೆ. ನಿಮ್ಮ ಪತ್ನಿಯ ಫೋನ್‌ನಲ್ಲಿ ನಿಮ್ಮ ಕಾಂಟ್ಯಾಕ್ಟ್ ಹೆಸರನ್ನು 'ಅಮೆಜಾನ್ ಡೆಲಿವರಿ', 'ಸ್ವಿಗ್ಗಿ ಡೆಲಿವರಿ ಬಾಯ್', 'ಮಲಬಾರ್ ಗೋಲ್ಡ್', 'ಸೀರೆ ಅಂಗಡಿ ಸೇಲ್ಸ್‌ಮನ್' ಎಂದು ಬದಲಾಯಿಸಿಬಿಡಿ.

ಆಮೇಲೆ ನೋಡಿ ಮ್ಯಾಜಿಕ್... ಒಂದೇ ರಿಂಗ್‌ಗೆ ಫೋನ್ ಎತ್ತದಿದ್ದರೆ ಕೇಳಿ!